
ಕರ್ನಾಟಕ

ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ

ಸಂಪುಟ : ೩೩ । ಸಂಚಿಕೆ : ೦೨ । ಜುಲೈ – ಡಿಸೆಂಬರ್ ೨೦೨೨



ಸಂಪಾದಕ
ಚಂದ್ರಶೇಖರ್ ನಾದೂರು

ಕರ್ನಾಟಕ
ಲೋಚನ
ಷಾಣ್ಮಾಸಿಕ ವಿದ್ವತ್ ಪತ್ರಿಕೆ

ಸಂಪುಟ : ೩೬ ಸಂಚಿಕೆ : ೦೨ । ಜುಲೈ – ಡಿಸೆಂಬರ್ ೨೦೨೨

ಸಂಪಾದಕ
ಚಂದ್ರಶೇಖರ್ ನಾದೂರು

ಬಿ.ಎಂ.ಶ್ರೀ. ಪ್ರತಿಷ್ಠಾನ
ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ. ಕಲಾಭವನ (ರಿ)
ಬಿ.ಎಂ.ಶ್ರೀ ಪ್ರತಿಷ್ಠಾನದ ರಸ್ತೆ, ೩ನೆಯ ಮುಖ್ಯರಸ್ತೆ, ನರಸಿಂಹರಾಜ ಕಾಲೋನಿ
ಬೆಂಗಳೂರು-೫೬೦೦೧೯, ದೂರವಾಣಿ : ೯೯೭೨೮ ೧೨೧೨೭
ವಿ–ಅಂಚೆ : bmsritrust@gmail.com, bmsrilochana@gmail.com

KARNATAKA LOCHANA : Half yearly Research Journal

Edited by
Chandrasekhar Nadur

Published by
B.M.Sri. Prathistana
M.V.Si. P.G. Research Centre, BM Sri Prathistana Road
B.M.Sri. Kalabhavana, 3rd Main Road
Narasimharaja Colony, Bengaluru-560 019
Mob: 9972812127
e-mail: bmsritrust@gmail.com, bmsrilochana@gmail.com

July - December 2022 (Vol. 36, No. 2)

Pages: 152

Subscription Details :
Five Years : Rs.450/-
Life : Rs.1500/-

ಚಂದಾ ವಿವರ:

ಪಂಚ ವಾರ್ಷಿಕ : ರೂ. ೪೫೦/-

ಆಜೀವ : ರೂ. ೧೫೦೦/-

ಸ್ವಾನ್ ಪ್ರಿಂಟರ್ಸ್
svanprint@gmail.com
☎ 080 - 2674 2233

ಸಂಪಾದಕರ ನುಡಿ

೨೦೨೨ನೇ ಸಾಲಿನ ಎರಡನೆ ಸಂಚಿಕೆ ತಮ್ಮ ಕೈ ಸೇರಿದೆ. ಈ ಸಂಚಿಕೆಯ ಲೇಖನಗಳಲ್ಲಿ ವೈವಿಧ್ಯತೆಯಿದೆ. ಸಂಶೋಧನಾ ಬರಹಗಳಲ್ಲದೆ ವಿಮರ್ಶಾಬರಹಗಳನ್ನೂ ಒಳಗೊಂಡಿದೆ.

ಸುಜಾತ ಲಕ್ಷ್ಮೀಪುರ ಅವರ 'ಕುವೆಂಪು ಬಹುರಾಷ್ಟ್ರೀಯತೆಯ ಪರಿಕಲ್ಪನೆ' ಲೇಖನದಲ್ಲಿ' ಪ್ರಾದೇಶಿಕತೆಯನ್ನು ಒಗ್ಗೂಡಿಸಿಕೊಂಡೇ ರಾಷ್ಟ್ರೀಯತೆಯೆಂಬುದು ಬೆಳೆಯಬೇಕೆಂಬ ಕುವೆಂಪುರವರ ಚಿಂತನಾಕ್ರಮವನ್ನು ಎಳೆ ಎಳೆಯಾಗಿ ವಿಶ್ಲೇಷಿಸಿದ್ದಾರೆ.

'ಪುಲಿಗೆರೆಯ ಶಾಸನಗಳ ಸಾಹಿತ್ಯ ಗುಣ' ಲೇಖನದಲ್ಲಿ ಡಾ. ಕೆ.ಆರ್ ಗಣೇಶ್ ಅವರು ಪುಲಿಗೆರೆಯ ಶಾಸನ ಕವಿಗಳನ್ನು ಪರಿಚಯಿಸುತ್ತ ಅಲ್ಲಿನ ಸಾಹಿತ್ಯ ಗುಣವನ್ನು ಉದಾಹರಣೆ ಸಹಿತ ವಿಮರ್ಶಿಸಿದ್ದಾರೆ.

ಡಾ.ಚಿತ್ತಯ್ಯ ಪೂಜಾರ್ ಅವರು ನಿಘಂಟು ತಜ್ಞ ಪ್ರೊ.ಜಿ.ವೆಂಕಟಸುಬ್ಬಯ್ಯ ಅವರು ಸಂಪಾದಿಸಿದ ಕೃತಿಗಳನ್ನು ಪರಿಚಯಿಸುವುದಲ್ಲದೆ..ಸಂಪಾದನೆಯ ಸಂದರ್ಭದಲ್ಲಿ ಜಿ.ವಿ. ಅವರು ತುಳಿದ ಮಾರ್ಗವನ್ನು ವಿವರವಾಗಿ ತಿಳಿಸಿಕೊಟ್ಟಿದ್ದಾರೆ.

ಡಾ.ಹಂಪ ನಾಗರಾಜಯ್ಯ ಅವರು ಆಂಗ್ಲ ಭಾಷೆಯಲ್ಲಿ ಬರೆದಿರುವ "Spectrum of classical literature in Karnataka "five volumes- ಕೃತಿಯ ವಿಶ್ಲೇಷಣೆಯನ್ನು ಮಾಡಿರುವ ಡಾ.ಪುರುಷೋತ್ತಮ ಬಿಳಿಮಲೆ ಅವರು ಹಂಪನಾ ಅವರು ಬರೆದ ಕೃತಿಯನ್ನು ವಿಮರ್ಶಿಸುತ್ತ ಇಂಥ ಕೃತಿಗಳು ಕನ್ನಡದಲ್ಲೂ ಬರಬೇಕಾದ ಅನಿವಾರ್ಯತೆ ಇದೆ ಎಂದು ಹೇಳಿದ್ದಾರೆ.

ಬೆಂಗಳೂರು ಜಿಲ್ಲೆಯ ಕೃಷಿ ಸಂಸ್ಕೃತಿಯನ್ನು, ಅದಕ್ಕೆ ಆಧಾರವಾಗಿದ್ದ ಕೆರೆಗಳ ಇತಿಹಾಸವನ್ನು ಶಾಸನಾಧಾರಗಳಿಂದ ವಿವರಿಸುವ ಪ್ರಯತ್ನವನ್ನು ಎಸ್ ಕಾರ್ತಿಕ್ ಅವರು ಮಾಡಿದ್ದಾರೆ.

ಪ್ರೊ. ಎಸ್. ಬಿಳಿಗಿರಿ ವಾಸನ್ ಅವರು 'ದುರ್ಯೋಧನನ ಧ್ವಜ ಲಾಂಛನ' ಲೇಖನದಲ್ಲಿ ದುರ್ಯೋಧನನನ್ನು ಸರ್ಪಧ್ವಜ, ನಾಗಧ್ವಜ ಎಂದು ಕವಿಗಳು ಕರೆಯಲು ಕಾರಣವೇನು ಎಂಬುದನ್ನು ವಿವಿಧ ಆಧಾರಗಳಿಂದ ಚರ್ಚಿಸಿದ್ದಾರೆ.

ಡಾ. ಜೆ. ಸದಾನಂದ ಶಾಸ್ತ್ರಿ ಅವರ ಲೇಖನ 'ಅಸದೃಶ ಸಾಹಿತ್ಯ ಸನಾಥ ಸೋಮನಾಥ' ಹಿಂದಿನ ಸಂಚಿಕೆಯ ಮುಂದುವರೆದ ಭಾಗವಾಗಿದ್ದು ಪಾಲ್ಕುರಿಕೆ ಸೋಮನಾಥನ ಸಮಗ್ರ ಚಿತ್ರಣವನ್ನು ಕಟ್ಟಿಕೊಟ್ಟಿದೆ.

ಡಾ. ಶಿವರಾಜ ಬ್ಯಾಡರಹಳ್ಳಿ ಅವರ 'ಸಂಗೀತ ಪರಂಪರೆಯ ವಿದ್ವತ್ ಕೃತಿ-ಉಲಿವ ನಾದದ ಚರಣ' ಲೇಖನದಲ್ಲಿ ಡಾ ಜಯದೇವಿ ಜಂಗಮಶೆಟ್ಟಿಯವರ 'ಉಲಿವ ನಾದದ ಚರಣ' ಕೃತಿಯ ವಿಶ್ಲೇಷಣೆ ಮಾಡಿದ್ದಾರೆ.

ಡಾ. ಪ್ರಸನ್ನ ನಂಜಾಪುರ ಅವರ ಲೇಖನವು ಉರಿಲಿಂಗ ಪೆದ್ದಿಯ ಜೀವನ ಮತ್ತು ಕಾವ್ಯವನ್ನು 'ಅಜ್ಞಾತ ಕವಿ ರಚಿತ ಉರಿಲಿಂಗ ಪೆದ್ದಯ್ಯನ ಕಥೆ' ಕಾವ್ಯ ಹಾಗೂ ನಾಟಕ,ವಚನಗಳ ಮೂಲಕ ಕಟ್ಟಿಕೊಟ್ಟಿದ್ದಾರೆ.

ಡಾ. ಕೆ.ವಿ. ಶ್ರೀನಿವಾಸಮೂರ್ತಿ ಅವರು ವ್ಯಾಸಭಾರತ ಹಾಗು ಕುಮಾರವ್ಯಾಸ ಭಾರತಗಳಲ್ಲಿ ಬಂದಿರುವ ದ್ಯೂತ ಪ್ರಸಂಗದ ವಿವರವಾದ ತೌಲನಿಕ ಅಧ್ಯಯನ ಮಾಡಿದ್ದಾರೆ.

ಈ ಬಾರಿಯ ಲೇಖನಗಳು ವೈವಿಧ್ಯಮಯವಾಗಿದ್ದು ಅಧ್ಯಯನಾಸಕ್ತರಿಗೆ ಹೊಸ ವಿಚಾರಗಳನ್ನು ಒದಗಿಸುತ್ತವೆ ಎಂಬ ನಂಬಿಕೆಯಿದೆ.

ಈ ಸಂಚಿಕೆ ಹೊರಬರಲು ಸೂಕ್ತ ಸಲಹೆ ನೀಡುತ್ತ ಬಂದ ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಬೈರಮಂಗಲ ರಾಮೇಗೌಡ ಅವರಿಗೆ, ಕಾರ್ಯದರ್ಶಿಗಳಾದ ಡಾ. ಶಾಂತರಾಜು ಅವರಿಗೆ, ಕೋಶಾಧಿಕಾರಿಗಳಾದ ಡಾ. ಪ್ರಭಾಕರ ಬೆಳವಾಡಿ ಅವರಿಗೆ ಪ್ರತಿಷ್ಠಾನದ ಹಸ್ತಪ್ರತಿ ವಿಭಾಗದ ಸಂಯೋಜಕರಾದ ಬಿ.ಎಸ್. ಗುರುಪ್ರಸಾದ್ ಅವರಿಗೆ, ಲೇಖನಗಳನ್ನು ಕಳುಹಿಸಿ ಸಹಕರಿಸಿದ ವಿದ್ವಾಂಸರಿಗೆ, ಡಿಟಿಪಿ ಮಾಡಿ ಮುದ್ರಣಕ್ಕೆ ಸಿದ್ಧತೆ ಮಾಡಿಕೊಟ್ಟ ಕಚೇರಿ ಸಿಬ್ಬಂದಿಯವರಿಗೆ, ಸುಂದರವಾಗಿ ಮುದ್ರಿಸಿಕೊಟ್ಟ 'ಸ್ವಾನ್ ಪ್ರಿಂಟರ್' ಅವರಿಗೆ ಗೌರವಪೂರ್ವಕ ವಂದನೆಗಳು.

ಚಂದ್ರಶೇಖರ ನಾದೂರ್
ಸಂಪಾದಕರು

ಈ ಸಂಚಿಕೆಯಲ್ಲಿ....

ಲೇಖಕರಿಗೆ ಸೂಚನೆಗಳು...

೧. ಸಾಹಿತ್ಯ-ಸಂಸ್ಕೃತಿಗಳಿಗೆ ಸಂಬಂಧಿಸಿದ ಸಂಶೋಧನೆ ವಿಮರ್ಶೆಗಳ ಅಪ್ರಕಟಿತ ಬರಹಗಳನ್ನು 'ಕರ್ನಾಟಕ ಲೋಚನ' ಪತ್ರಿಕೆಯಲ್ಲಿ ಪ್ರಕಟಣೆಗಾಗಿ ಸ್ವೀಕರಿಸಲಾಗುವುದು.

೨. ಲೇಖನಗಳು ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಬೆರಳಚ್ಚು ಮಾಡಿದವಾಗಿರಬೇಕು ಅಥವಾ ಸ್ಫುಟವಾದ ಕೈಬರಹದಲ್ಲಿರಬೇಕು.

೩. ಲೇಖನಗಳು ಒಪ್ಪಿತವಾದ ಮಾದರಿಯಲ್ಲಿ ಸೂಕ್ತ ಉಲ್ಲೇಖಗಳು ಮತ್ತು ಟಿಪ್ಪಣಿಗಳಿಂದ ಕೂಡಿರಬೇಕು.

೪. ಚಿತ್ರಗಳು, ನಕ್ಷೆಗಳು ಮೊದಲಾದುವನ್ನು ಸ್ಕ್ಯಾನ್ ಮಾಡಿದ ತಂತ್ರಾಂಶದಲ್ಲಿ ನೀಡಬೇಕು.

೫. ಲೇಖಕರು ತಮ್ಮ ವಿಳಾಸ, ದೂರವಾಣಿ ಸಂಖ್ಯೆ ಮತ್ತು ಇ-ಅಂಚೆಗಳನ್ನು ತಪ್ಪದೆ ನೀಡಬೇಕು.

೬. ಅಸ್ವೀಕೃತ ಬರಹಗಳನ್ನು ಹಿಂದಿರುಗಿಸಲಾಗುವುದಿಲ್ಲ ಮತ್ತು ಈ ಬಗೆಗೆ ಪತ್ರವ್ಯವಹಾರಕ್ಕೆ ಅವಕಾಶವಿರುವುದಿಲ್ಲ.

೭. ಲೇಖನಗಳನ್ನು ಪ್ರತಿಷ್ಠಾನದ ವಿಳಾಸಕ್ಕೆ ಅಥವಾ bmsrilochana@gmail.com ಈ ಇ-ಅಂಚೆಗೆ ಕಳುಹಿಸಬಹುದು.

೮. ಪ್ರಕಟವಾದ ಬರಹಗಳಿಗೆ ಪ್ರತಿಷ್ಠಾನವುಸಾಂಕೇತಿಕ ಗೌರವಸಂಭಾವನೆಯನ್ನು ನೀಡುತ್ತದೆ.

೯. ಲೇಖನದಲ್ಲಿನ ಅಭಿಪ್ರಾಯಗಳು ಲೇಖಕರದೇ ಅಗಿದ್ದು ಪ್ರತಿಷ್ಠಾನದ ನಿಲುವುಗಳನ್ನು ಪ್ರತಿನಿಧಿಸುವುದಿಲ್ಲ.

೧೦. ಲೇಖನಗಳು ೧೫ ಪುಟಗಳ ಮಿತಿಯಲ್ಲಿರಬೇಕು.

ಕರ್ನಾಟಕ

ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ

ಕುವೆಂಪುರವರ ಬಹುರಾಷ್ಟ್ರೀಯತೆಯ ಪರಿಕಲ್ಪನೆ:

ಡಾ. ಸುಜಾತ ಲಕ್ಷ್ಮೀಪುರ.

❖

ಜಾಗತೀಕರಣ, ಉದಾರೀಕರಣ ಮತ್ತು ಮುಕ್ತ ಮಾರುಕಟ್ಟೆಯ ವ್ಯವಸ್ಥೆ ಉಂಟುಮಾಡುತ್ತಿರುವ ಜಾಗತಿಕ ಪರಿವರ್ತನೆಗಳ ಹಿನ್ನಲೆಯಲ್ಲಿ ರಾಷ್ಟ್ರೀಯತೆ ಎಂಬುದು ಇಂದು ಪಡೆದುಕೊಳ್ಳುತ್ತಿರುವ ಬಹುಮುಖಿ ಆಯಾಮಗಳನ್ನು ಕುರಿತು ಚಿಂತಿಸುವ ಅವಶ್ಯಕತೆಯಿದೆ.

ರಾಷ್ಟ್ರೀಯತೆ ಎಂಬುದು ಬಂಡವಾಳಶಾಹಿ ವ್ಯವಸ್ಥೆಯ ಚಾರಿತ್ರಿಕ ಘಟ್ಟದ ಸೃಷ್ಟಿ ಅಥವಾ ಆಧುನಿಕ ಯುಗ ಕಟ್ಟಿಕೊಂಡ ರಚನೆ ಎಂದು ಕನ್ನಡದ ಪ್ರಮುಖ ವಿಮರ್ಶಕರಾದ ಡಾ. ಡಿ.ಆರ್ ನಾಗರಾಜ್ ಹೇಳಿದ್ದಾರೆ. ರಾಷ್ಟ್ರೀಯತೆ ಎಂಬುದು ಒಂದು ಜನಾಂಗದ ಸಂವೇದನೆ, ಒಂದು ರಾಷ್ಟ್ರತ್ವವೆನ್ನುವುದು ಸಾಮಾನ್ಯವಾಗಿ ಒಂದು ನಿರ್ದಿಷ್ಟ ಭೌಗೋಳಿಕ ಪ್ರದೇಶದಲ್ಲಿ ಒಂದು ಏಕೀಕೃತ ಸಾಮಾನ್ಯ ಆರ್ಥಿಕ ವಹಿವಾಟಿನಲ್ಲಿ ತಾವೆಲ್ಲ ಪರಸ್ಪರ ಸಂಬಂಧಪಟ್ಟವರೆಂಬ ಸಾಮಾನ್ಯ ಮನೋಭೂಮಿಕೆಯಲ್ಲಿ ಅಸ್ತಿತ್ವಕ್ಕೆ ಬಂದಂತಹ ಸಾಮಾನ್ಯ ಸಂಸ್ಕೃತಿಯೊಂದರ ಭಾಗವಾಗಿರುವ, ಹೆಚ್ಚಿನ ಸಲ ಸಾಮಾನ್ಯ ಭಾಷೆಯನ್ನು ಹೊಂದಿರುವ ಚಾರಿತ್ರಿಕ ಜನ ಸಮುದಾಯ ಎಂದು ಬಂಜಗೆರೆ ಜಯಪ್ರಕಾಶ್ ಹೇಳಿದ್ದಾರೆ. ಆದರೆ, ಇದು ರಾಷ್ಟ್ರೀಯತೆ ಕುರಿತ ಯುರೋಪಿನ ಮಾದರಿ. ಇದನ್ನು ಸೆಮೆಟಿಕ್ ಮಾದರಿ ಎನ್ನಲಾಗುತ್ತದೆ. ಭಾರತದ ರಾಷ್ಟ್ರೀಯತೆಯನ್ನು ಯುರೋಪಿನ ಮಾದರಿಯ ರಾಷ್ಟ್ರೀಯತೆಯಿಂದ ನಿರ್ವಹಿಸಲಾಗುವುದಿಲ್ಲ. ಏಕೆಂದರೆ, ಭಾರತ ಫೆಡರಲ್ ಸ್ಟೇಟ್ಸ್ ಮಾದರಿಯದು. ಭಾರತದ ರಾಷ್ಟ್ರೀಯ ಕಲ್ಪನೆ ಹಲವು ಭಾಷೆಗಳು, ಹಲವು ಧರ್ಮಗಳು, ಹಲವು ಸಾಂಸ್ಕೃತಿಕ ವಿಶಿಷ್ಟತೆಗಳಿಂದ ಕೂಡಿದ್ದು ಒಕ್ಕೂಟದ ಕಲ್ಪನೆಯಾಗಿದೆ. ಹಾಗಾಗಿ ಇದು ಬ್ರಿಟಿಷ್ ಕಲ್ಪಿತ ರಾಷ್ಟ್ರೀಯತೆಗಿಂತ ಭಿನ್ನವಾದದ್ದು. ಆದರೆ ಬ್ರಿಟಿಷರು ಆಳುವ ಕಾಲಕ್ಕೆ ಅವರ ರಾಷ್ಟ್ರೀಯತೆಯನ್ನೇ ರಾಷ್ಟ್ರೀಯತೆ ಎಂದು ವ್ಯಾಖ್ಯಾನಿಸಿ, ಭಾರತ

ರಾಷ್ಟ್ರೀಯತೆ ಪರಿಕಲ್ಪನೆಯನ್ನು ರೂಪಿಸುವಲ್ಲಿ ಪರೋಕ್ಷವಾಗಿ ಅವರೂ ನೆರವಾದರು.

ಭಾರತ ರಾಷ್ಟ್ರೀಯತೆ ಎನ್ನುವುದು ಬಂಡವಾಳಶಾಹಿ ವ್ಯವಸ್ಥೆ ಕಲ್ಪಿಸಿದ್ದು. ವಸಾಹತುಶಾಹಿ ಪ್ರಭುತ್ವದ ವಿರುದ್ಧ, ಸಾಮ್ರಾಜ್ಯಶಾಹಿ ಮನೋಭಾವದ ವಿರುದ್ಧ ಪ್ರಕ್ರಿಯೆಗೊಂಡ ಭಾರತದ ಬಹುಮುಖ್ಯ ಹೋರಾಟದ ಸಂಕೇತ ರಾಷ್ಟ್ರೀಯ ಚಳುವಳಿ. ಇದು ಹಲವಾರು ಪ್ರಾಂತ್ಯಗಳನ್ನೂ ಒಳಗೊಂಡು ರಾಷ್ಟ್ರಮಟ್ಟದಲ್ಲಿ ನಡೆದ ಹೋರಾಟವಾದ್ದರಿಂದ ರಾಷ್ಟ್ರೀಯ ಚಳವಳಿಯೇ ಹೊರತು ಭಾರತ ರಾಷ್ಟ್ರೀಯತೆಯಿಂದಲೇ ಮೂಡಿದ ಹೋರಾಟವಲ್ಲ. ಆದರೆ, ಕನ್ನಡ ರಾಷ್ಟ್ರೀಯತೆ ಎಂಬುದು ಶತಶತಮಾನಗಳಿಂದಲೂ ಚಾರಿತ್ರಿಕವಾಗಿ ತಾನು ಮುಖಾಮುಖಿ ಯಾಗಲೇಬೇಕಾದ ಎಲ್ಲ ಬಗೆಯ ಪ್ರಭುತ್ವಗಳ ಜೊತೆ ಗುದ್ದಾಡಿಯೇ ತನ್ನ ರಾಷ್ಟ್ರೀಯತೆಯನ್ನು, ಕನ್ನಡತನವನ್ನು ಉಳಿಸಿಕೊಂಡು ಬೆಳೆಸಿಕೊಂಡು ಬಂದಿದೆ. ಭಾರತದ ರಾಷ್ಟ್ರೀಯತೆ, ಭಾರತೀಯತೆ, ಭಾರತ ಸಂಸ್ಕೃತಿ, ಇವೆಲ್ಲ ವಸಾಹತು ಕಾಲಘಟ್ಟದಲ್ಲಿ ಹುಟ್ಟಿಕೊಂಡ ಪರಿಕಲ್ಪನೆಗಳು.ಭಾರತದ ರಾಷ್ಟ್ರೀಯತೆಗೆ ಸಾವಿರಾರು ವರ್ಷಗಳ ಚಾರಿತ್ರಿಕ ಹಿನ್ನೆಲೆ ಇಲ್ಲ .ಆದರೆ, ಕನ್ನಡ, ತಮಿಳು, ತೆಲುಗು ಮೊದಲಾದ ಭಾರತದಲ್ಲಿನ ಭಾಷಾವಾರು ಪ್ರಾಂತ್ಯಗಳಿಗೆ ಅವುಗಳ ಭಾಷೆ, ಸಂಸ್ಕೃತಿಗಳಿಂದ ಮೂಡಿದ ಚಾರಿತ್ರಿಕ ಇತಿಹಾಸವಿದೆ. ಆದ್ದರಿಂದ ಕನ್ನಡ ರಾಷ್ಟ್ರೀಯತೆ, ತಮಿಳು ರಾಷ್ಟ್ರೀಯತೆ ಅನ್ನುವುದು ವಾಸ್ತವ ಮತ್ತು ಅದು ವಸಾಹತು ಪೂರ್ವದಿಂದಲೇ ಸಾವಿರಾರು ವರ್ಷಗಳಿಂದ ನಿರಂತರವಾಗಿ ಕಟ್ಟಿಕೊಳ್ಳುತ್ತಲೇ ಬಂದ ಪ್ರಕ್ರಿಯೆ. ಆದರೆ ಭಾರತ ರಾಷ್ಟ್ರೀಯತೆ ಆಧುನಿಕ ಕಾಲಘಟ್ಟದ ಸೃಷ್ಟಿ. ಭಾರತ ರಾಷ್ಟ್ರೀಯತೆ ಪರಿಕಲ್ಪನೆಯನ್ನು ರೂಪಿಸುವಲ್ಲಿ ಬ್ರಿಟಿಷರು ಏರ್ಪಡಿಸಿದ್ದ ಏಕರೂಪದ ಆಡಳಿತ ಪದ್ಧತಿ, ವಸಾಹತುಶಾಹಿ ಶಿಕ್ಷಣ ಪದ್ಧತಿ, ಸಾರಿಗೆ ಸಂಪರ್ಕ ಮಾಧ್ಯಮಗಳು ಮತ್ತು ಮುದ್ರಣಾಲಯದಂತಹ ತಂತ್ರಜ್ಞಾನ –ಪ್ರಬಲವಾಗಿ ಕಾರ್ಯ ನಿರ್ವಹಿಸಿವೆ.

ರಾಷ್ಟ್ರೀಯತೆಯ ಮುಖ್ಯಗುಣ ಅದು ಅನ್ಯಾಕ್ರಮಣ ವಿರೋಧಿಯಾದದ್ದು. ಇದರ ಜೊತೆಗೆ ರಾಷ್ಟ್ರಿಯತೆ ಎನ್ನುವುದು ಸ್ವದೇಶಿ ಚಳವಳಿಗೆ ಕಾರಣವಾಗಿ, ಅಂದರೆ ತನ್ನ ಜನಾಂಗದ ರಾಜಕೀಯ, ಆರ್ಥಿಕ ಹಕ್ಕುಗಳನ್ನು ಉಳಿಸಿಕೊಳ್ಳುವ ಸಲುವಾಗಿ, ಅನ್ಯ ಸಾಂಸ್ಕೃತಿಕ ಹೆಜಮನಿಗಳನ್ನೂ ವಿರೋಧಿಸಲು ಪ್ರೇರಕವಾಗುತ್ತದೆ. ಇದಕ್ಕಾಗಿ ಅದು ಪ್ರಗತಿಪರವಾದದ್ದು. ಆದರೆ, ಭಾರತದಂತಹ ಒಕ್ಕೂಟ ಪ್ರಾಂತ್ಯಗಳ ದೇಶದಲ್ಲಿ ರಾಷ್ಟ್ರೀಯತೆ ಇಷ್ಟನ್ನು ಮಾತ್ರ ಮಾಡುವುದಿಲ್ಲ. ಭಾರತ ರಾಷ್ಟ್ರೀಯತೆ ಎಂದರೆ ಬ್ರಿಟಿಷ್ ವಸಾಹತು ಆಕ್ರಮಣದ ವಿರುದ್ಧ ಪ್ರತಿಭಟನೆ ಹೇಗೋ ಹಾಗೆಯೇ ವಿವಿಧ ದೇಸಿ ಸಂಸ್ಕೃತಿಗಳ ಅಥವಾ ಕನ್ನಡ ರಾಷ್ಟ್ರೀಯತೆ, ಮರಾಠಿ ರಾಷ್ಟ್ರೀಯತೆ, ತಮಿಳು ರಾಷ್ಟ್ರೀಯತೆ ಇತ್ಯಾದಿ

ಭಾರತದೊಳಗಿನ ರಾಷ್ಟ್ರೀಯತೆಗಳನ್ನು ದಮನ ಮಾಡುವ ಅಥವಾ ಹತೋಟಿಯಲ್ಲಿಟ್ಟುಕೊಳ್ಳುವ ಪ್ರಕ್ರಿಯೆಯ ಮೂಲಕ ಏಕರೀತಿಯ ಸಾಂಸ್ಕೃತಿಕ ಯಜಮಾನ್ಯವನ್ನು ಸ್ಥಾಪಿಸಲು ಪ್ರಯತ್ನಿಸುತ್ತದೆ. ಇದು ರಾಷ್ಟ್ರೀಯತೆಯ ಪ್ರತಿಕೂಲ ಸ್ವಭಾವ. ರಾಷ್ಟ್ರೀಯಯತೆ ಈ ಬಗೆಯ ಪ್ರತಿಕೂಲ ಸ್ವಭಾವ ಇಂದು ಹೆಚ್ಚುತ್ತಿರುವುದು ಅಪಾಯಕಾರಿ ಆಗಿದೆ.

ಭಾರತದಲ್ಲಿ ವಿಶಿಷ್ಟವಾದ ಸಾಂಸ್ಕೃತಿಕ ರಾಷ್ಟ್ರೀಯತೆ ಎನ್ನುವುದು ಇದೆ ಮತ್ತು ಆ ಮೂಲಕ ಭಾರತ ರಾಷ್ಟ್ರೀಯತೆ, ಭಾರತೀಯರು ಎಂಬ ಪರಿಕಲ್ಪನೆಗಳು ಬಂದಿವೆ ಎಂಬ ವಾದವೂ ಇದೆ.. ಇಂತಹ ಸಾಂಸ್ಕೃತಿಕ ರಾಷ್ಟ್ರೀಯತೆ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ರೂಪಿತವಾಗುತ್ತಿದ್ದ ರಾಷ್ಟ್ರ ಕಲ್ಪನೆಯನ್ನು ಮತ್ತು ರಾಷ್ಟ್ರೀಯ ಮಟ್ಟದ ಸಂಸ್ಕೃತಿಯನ್ನು ದೇಶದಾದ್ಯಂತ ಹೇರುವ ಪ್ರಯತ್ನವಾಗಿ ಮೂಡಿದ ಈ ವಾಗ್ವಾದಕ್ಕೆ ಅತ್ಯಂತ ಪರಿಣಾಮಕಾರಿ ಕ್ರಿಯಾಶೀಲತೆಯಿದೆ.ಇದು ಕನ್ನಡ ನವೋದಯ ಕಾಲದ ಚಿಂತಕರಲ್ಲಿ ಅವರ ವೈಚಾರಿಕತೆಯನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದು, ಅಂದಿನ ಸಾಹಿತ್ಯ, ಸಂಸ್ಕೃತಿ ಚರ್ಚೆಯ ಹಿಂದೆ ಗಾಢವಾಗಿ ಪರಿಣಾಮಕಾರಿಯಾಗಿ ಕಾರ್ಯವೆಸಗಿದೆ.

ಬ್ರಿಟಿಷ್ ವಸಾಹತುಶಾಹಿ ಧೋರಣೆ ಮತ್ತು ಅವರ ಆಧುನಿಕ ನಾಗರಿಕತೆಯ ವಿರುದ್ಧ ಸೆಟೆದು ನಿಂತ ಗಾಂಧೀಜಿಯವರು ತಮ್ಮ ಹಿಂದ್ ಸ್ವರಾಜ್ ಕೃತಿಯಲ್ಲಿ ರಾಷ್ಟ್ರೀಯತೆ ಬಗ್ಗೆ ಚರ್ಚಿಸುತ್ತಾರೆ. ಬ್ರಿಟಿಷರು ಬರುವುದಕ್ಕೆ ಮೊದಲೇ ನಾವು ಒಂದು ರಾಷ್ಟ್ರವಾಗಿದ್ದೆವು. ವಿಚಾರಧಾರೆ ಒಂದೇ. ನಮ್ಮ ಬಾಳು ಬದುಕು ಒಂದೇ ಬಗೆ ಎನ್ನುತ್ತಾ ಭಾರತದ ಬೇರೆ ಬೇರೆ ಭಾಗಗಳಲ್ಲಿ ಯಾತ್ರಾ ಸ್ಥಳಗಳನ್ನು ವಿಧಿಸಿ, ಜಗತ್ತಿನಲ್ಲಿ ಬೇರೆಲ್ಲಿಯೂ ಕಾಣದಂಥ ಒಂದು ವಿಶಿಷ್ಟ ರಾಷ್ಟ್ರೀಯತೆಯನ್ನು ಮೊಳಯಿಸಿದರು. ಭಾರತೀಯರು, ಪ್ರಕೃತಿಯ ಕೃಪೆಯಿಂದ ಭಾರತವು ಅವಿಭಕ್ತ ಅಖಂಡ ದೇಶ ಎಂಬುದನ್ನು ಅವರು ಮನಗಂಡರು. ಭಾರತದಲ್ಲಿಲ್ಲಾ ಬ್ರಿಟಿಷ್ ವಸಾಹತು ಪೂರ್ವದಲ್ಲೇ ನಾವು ಭಾರತೀಯರು, ನಾವೆಲ್ಲಾ ಒಂದೇ ಎಂಬ ಅಖಂಡಪ್ರಜ್ಞೆ ಇತ್ತು ಎಂದು ಗಾಂಧೀಜಿ ಪ್ರಸ್ತಾಪಿಸುತ್ತಾರೆ. ವಸಾಹತು ಶಾಹಿ ಪ್ರಭುತ್ವದ ವಿರುದ್ಧ ಹೋರಾಡಬೇಕಾದಂತಹ ಸಂದರ್ಭದಲ್ಲಿ, ಹೋರಾಟವನ್ನು ರಾಷ್ಟ್ರೀಯ ಮಟ್ಟದಲ್ಲಿ ದೇಶದಾದ್ಯಂತ ಒಂದು ಚಳವಳಿಯಾಗಿ ರೂಪಗೊಳಿಸಬೇಕಾದ ಹಿನ್ನೆಲೆಯಲ್ಲಿ ಭಾರತದಲ್ಲಿದ್ದ ಜನರೆಲ್ಲಾ ಒಂದಾಗಿ ಶತ್ರುವಿನ ವಿರುದ್ಧ ಹೋರಾಡುವ ಮಟ್ಟಿಗೆ ಭಾರತವು ಅವಿಭಕ್ತ ಅಖಂಡ ದೇಶ ಎಂಬ ಭಾವನೆಯ ಮಿತಿಯಿದೆ. ಏಕೆಂದರೆ, ಭಾರತದಲ್ಲಿ ಅನೇಕ ಭಾಷೆ, ಸಂಸ್ಕೃತಿ, ಜಾತಿ ಇರುವ ವಾಸ್ತವದಲ್ಲಿ ಏಕತೆಗಿಂತ ವೈಶಿಷ್ಟ್ಯಗಳೇ, ವಿವಿಧತೆಗಳೇ ಸಾಮಾನ್ಯ ಗುಣ.

ಕನ್ನಡ ನಾಡಿನಲ್ಲಿರುವ ಜನಪದರಿಗೆ, ಕನ್ನಡ ಸಂಸ್ಕೃತಿಯ ಜನಾಂಗಕ್ಕೆ ಕನ್ನಡ ನಾಡು, ನುಡಿ, ಜನಪದ– ಮೂರು ಆಗಿ ಭಾವಕೋಶದಲ್ಲಿ ಇದೆ.ಹಾಗೆಯೇ ತಮಿಳು, ಮರಾಠಿ, ಗುಜರಾತಿ. ಆದರೆ ಇವುಗಳಂತೆ ಭಾರತ ಒಂದು ಪ್ರತ್ಯೇಕ ನಿರ್ದಿಷ್ಟ ಪ್ರದೇಶ, ಒಂದು ಸಾಮಾನ್ಯ ಭಾಷೆ ಮತ್ತು ಒಂದು ಜನಾಂಗವಿದ್ದು ಅದನ್ನು ಜನಪದ ಎಂದು ಕರೆಯಲು ಸಾಧ್ಯವಿದ್ದಿದ್ದರೆ, ಆಗ ಅವರ ಭಾವಭೂಮಿಯಲ್ಲಿ ರೂಪುಗೊಳ್ಳುತ್ತಿದ್ದ ರಾಷ್ಟ್ರೀಯತೆಯನ್ನು ಗುರುತಿಸಲು ಸಾಧ್ಯವಾಗುತ್ತಿತ್ತು. ಆದರೆ, ಭಾರತ ಒಂದು ಒಕ್ಕೂಟ. ಅನೇಕ ರಾಷ್ಟ್ರೀಯತೆಗಳ ಒಂದು ಒಕ್ಕೂಟ ಅಗಿರುವುದರಿಂದ, ಆ ಅನೇಕ ರಾಷ್ಟ್ರೀಯತೆಗಳೆಲ್ಲಾ ಒಟ್ಟು ಸೇರಿ ಭಾರತ ರಾಷ್ಟ್ರವನ್ನು ರೂಪಿಸಿ ಒಪ್ಪಿಕೊಂಡಿರುವುದರಿಂದ ಇಲ್ಲಿಯ ರಾಷ್ಟ್ರೀಯತೆ ಕುರಿತ ಚಿಂತನೆಗೆ ಏಕಮುಖಿ ನೆಲೆಯಿಲ್ಲ.ಅಥವಾ ಯೂರೋಪಿನ ಮಾದರಿಯ ರಾಷ್ಟ್ರೀಯತೆ ನಮ್ಮದಲ್ಲ.

ಭಾರತೀಯ ಭಾಷೆಗಳಲ್ಲಿ ಬರೆಯುತ್ತಿರುವ ನಮ್ಮಲ್ಲಿ ಅನೇಕರು ಹುಟ್ಟಿ ಬೆಳೆದದ್ದು ಹಳ್ಳಿಗಳಲ್ಲಿ. ನಮ್ಮ ರಾಷ್ಟ್ರ ಮತ್ತು ಜಗತ್ತಿನ ಪ್ರಜ್ಞೆ ನಮಗೆ ಮೂಡಿದ್ದು ಪುರಾಣಗಳ ಮೂಲಕ ಎಂದು ಕನ್ನಡದ ಪ್ರಮುಖ ಲೇಖಕರಾದ ಡಾ.ಯು ಆರ್ ಅನಂತಮೂರ್ತಿ ಹೇಳಿದ್ದಾರೆ. ಅಂದರೆ ಮಹಾಭಾರತ ರಾಮಾಯಣದಂತಹ ದೇಶ ವ್ಯಾಪಿ ಹರಡಿರುವ ಮಹಾಕಾವ್ಯಗಳಿಂದ, ಪುರಾಣಗಳಿಂದ ನಮಲ್ಲಿ ರಾಷ್ಟ್ರ ಕಲ್ಪನೆ ಮೂಡಿದೆ ಎಂಬ ವಿಚಾರವಿದೆ. ಆದರೆ, ರಾಮಾಯಣ ಮಹಾಭಾರತದಂತಹ ಕಾವ್ಯಗಳಿಂದ ಧಾರ್ಮಿಕ, ಸಾಂಸ್ಕೃತಿಕ ಏಕತೆ ಉಂಟಾಗುತ್ತದೆ ಎನ್ನುವ ಮಾತುಗಳನ್ನು ಕುರಿತು ಚರ್ಚಿಸಬೇಕಾಗುತ್ತದೆ. ಏಕೆಂದರೆ, ಭಾರತದಂತ ದೇಶದಲ್ಲಿ ನೂರಾರು ಜಾತಿ, ಧರ್ಮ, ಸಂಸ್ಕೃತಿ,ಭಾಷೆ ಇರುವಾಗ ರಾಷ್ಟ್ರೀಯ ಮಟ್ಟದ ಸಾಂಸ್ಕೃತಿಕ ಧಾರ್ಮಿಕ ಕೃತಿಗಳು ಅಗಾಧ ರೀತಿಯಲ್ಲಿ ಪರಿವರ್ತನೆಗೊಂಡು ನಿರ್ದಿಷ್ಟ ಜಾತಿ ಜನಾಂಗ ಸಂಸ್ಕೃತಿಯ ಮಣ್ಣಿನ ವಾಸನೆಯೊಂದಿಗೆ ಮೂಡುತ್ತಿರುತ್ತದೆ. ಆದ್ದರಿಂದ ರಾಷ್ಟ್ರೀಯ ಮಟ್ಟದ ಧಾರ್ಮಿಕ ಸಾಂಸ್ಕೃತಿಕ ಕೃತಿಗಳು ಏಕರೂಪತೆಗೆ ಬದಲಾಗಿ ವೈವಿಧ್ಯಮಯ ರೂಪಗಳು ಮೂಡುವ ಭಾರತದ ಪರಿಸರದಲ್ಲಿ ಅವು ಏಕತೆಗಿಂತ ವೈವಿಧ್ಯತೆಯನ್ನು ತಂದದ್ದೇ ಹೆಚ್ಚು. ಈ ನಿಟ್ಟಿನಲ್ಲಿ ಕನ್ನಡ ರಾಷ್ಟ್ರೀಯತೆಯನ್ನು ಕುರಿತು, ಕರ್ನಾಟಕ ಏಕೀಕರಣಕ್ಕಾಗಿ ಶ್ರಮಿಸಿ, ನಾಡು ನುಡಿ ಕಟ್ಟುವುದರ ಮೂಲಕ ಸಾಹಿತ್ಯದ ಜೊತೆಗೆ ಸಾಂಸ್ಕೃತಿಕ ವ್ಯಕ್ತಿತ್ವವನ್ನೂ ಪಡೆದ ನಮ್ಮ ರಾಷ್ಟ್ರಕವಿ ಕುವೆಂಪುರವರು ನಾಡು ನುಡಿಗಳ ಬಗೆಗೆ ತಾಳಿದ ವಿಚಾರಗಳು ಇಂದಿಗೂ ಪ್ರಸ್ತುತವಾಗಿವೆ.

ಆಧುನಿಕ ಕನ್ನಡ ಸಾಹಿತ್ಯ ಸಂದರ್ಭವು ಸಾಹಿತ್ಯಿಕ, ಸಾಂಸ್ಕೃತಿಕ ಸಂಕ್ರಮಣದ ಪುನರ್ಜೀವನದ ಕಾಲ. ಕನ್ನಡ ಬದುಕೂ ಸೇರಿದಂತೆ ಕಲೆ,ಸಾಹಿತ್ಯ, ಆರ್ಥಿಕತೆ, ರಾಜಕೀಯ, ಸಾಂಸ್ಕೃತಿಕ ಸಂಗತಿಗಳೆಲ್ಲವೂ ವಸಾಹತುಶಾಹಿ ವ್ಯವಸ್ಥೆಯೊಡನೆ ಮುಖಾಮುಖಿ

ಯಾಗುತ್ತಲೇ ಹೊಸದಾಗಿ ಹುಟ್ಟನ್ನು ಪಡೆಯುತ್ತಿದ್ದ ಸನ್ನಿವೇಶವದು. ಅಂತಹ ಸಂದರ್ಭದಲ್ಲಿ ಒಂದೆಡೆ ರಾಷ್ಟ್ರದ ರಕ್ಷಣೆಗಾಗಿ ಬ್ರಿಟಿಷರೊಡನೆ ಹೋರಾಟ.ಮತ್ತೊಂದಡೆ ಕರ್ನಾಟಕದ ಒಗ್ಗೂಡುವಿಕೆಗಾಗಿ ಕರ್ನಾಟಕ ಏಕೀಕರಣ ಹೋರಾಟ ನಡೆಸಬೇಕಾದ ಅನಿವಾರ್ಯ ಸಂದರ್ಭ ಉಂಟಾಯಿತು. ಆ ಮೂಲಕ ಹರಿದು ಹಂಚಿಹೋದ ನೆಲ ಜಲವನ್ನು ಒಂದುಗೂಡಿಸಿಕೊಂಡು ಅಖಂಡ ಸಾಂಸ್ಕೃತಿಕ ನಾಡನ್ನು ಕಟ್ಟಿಕೊಳ್ಳುವ ಅಗತ್ಯವಾಗಿ ಅಂದು ಕನ್ನಡ ಕವಿಗಳು ನಾಡನ್ನು ಕಟ್ಟುವ ರೂವಾರಿಗಳಾಗಿ ಕರ್ತವ್ಯ ನಿರ್ವಹಿಸಿದ್ದಾರೆ.ರಾಷ್ಟ್ರಕವಿ ಎಂದು ಹೆಸರು ಪಡೆದು, ವಿಶ್ವಕವಿಯಾಗಿ ಪ್ರಸಿದ್ಧರಾದ ಕುವೆಂಪುರವರು ಮಲೆನಾಡಿನ ಸೌಂದರ್ಯದ ವರ್ಣನೆಯಲ್ಲೇ ಮುಳುಗದೆ ವಾಸ್ತವ ಸಮಾಜದ ಆಗು ಹೋಗುಗಳಿಗೆ ಅರಿವು ಮೂಡಿಸುವ, ಎಚ್ಚರಿಕೆ ನೀಡುವ ಕವನಗಳನ್ನು ಬರೆಯುತ್ತಾ , ಭಾಷಣ ಮಾಡುತ್ತ ಯುವ ಜನತೆಯಲ್ಲಿ ದೇಶಾಭಿಮಾನವನ್ನು ಬಿತ್ತುವ ಮೂಲಕ ನಾಡಿನ ಸೇವೆ ಮಾಡಿದ್ದಾರೆ.

ಭಾರತದಾದ್ಯಂತ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಹೋರಾಟ ನಡೆಯುತ್ತಿದ್ದ ಸಂದರ್ಭದಲ್ಲಿ ಕುವೆಂಪುರವರು ಅದರೊಟ್ಟಿಗೆ ಪ್ರಾದೇಶಿಕ ವೈಶಿಷ್ಟ್ಯದ ರಕ್ಷಣೆಗೆ ಗಮನ ಹರಿಸುತ್ತಾರೆ "ಪ್ರಾದೇಶಿಕ ವೈಶಿಷ್ಟ್ಯದ ರಕ್ಷಣೆ" ಎಂಬ ಲೇಖನ ಬರೆದು.ಅವರಲ್ಲಿ ಅಖಿಲ ಭಾರತದ ಸಮಗ್ರತೆ ಮತ್ತು ಭಾವೈಕ್ಯದ ಸಾಧನೆಗಾಗಿ ಪ್ರಾದೇಶಿಕ ವಿಶಿಷ್ಟತೆ , ಸಂಸ್ಕೃತಿ ಅಗತ್ಯವನ್ನು ಕಡೆಗಣಿಸಬೇಕಾಗಿಲ್ಲ. ಈ ಪ್ರಾದೇಶಿಕ ವಿಶಿಷ್ಟತೆಯ ರಕ್ಷಣೆಯಿಂದ ಅಖಿ ಭಾರತದ ಸಮಗ್ರತೆಗೂ ಐಕ್ಯತೆಗೂ ಹಾನಿ ಉಂಟಾಗುವುದಿಲ್ಲ. ಆದುದರಿಂದ ಪ್ರಾದೇಶಿ ಭಾಷೆ ಶಿಕ್ಷಣ ಮಾಧ್ಯಮವಾಗಬೇಕು. ವಿಶ್ವವಿದ್ಯಾನಿಲಯದ ಉನ್ನತ ಕ್ಷೇತ್ರದಲ್ಲಿ ಸಂಗ್ರಹಗೊಂಡ ಜ್ಞಾನವಿಜ್ಞಾನಗಳು ಪ್ರಸಾರ ರೂಪದಲ್ಲಿ ಕೆಳಗೆ ಇಳಿದು ಸಂಚರಿಸಿ, ಜನಸಾಮಾನ್ಯರ ಜೀವನ ಪ್ರವೇಶ ಮಾಡಿ, ಮತ ಮೌಢ್ಯ, ಅಜ್ಞಾನವನ್ನು ಕಳೆದು, ವೈಜ್ಞಾನಿಕ ದೃಷ್ಟಿ ಮತ್ತು ವಿಚಾರ ಬುದ್ಧಿಗಳನ್ನು ಸ್ಥಾಪಿಸಬೇಕು ಎಂದೆನ್ನುತ್ತ, ಪ್ರಾದೇಶಿಕ ಬೆಳವಣಿಗೆಯಿಂದ ಮಾತ್ರ ದೇಶದ ಬೆಳವಣಿಗೆ ಸಾಧ್ಯ ಎನ್ನುತ್ತಾರೆ. ಆ ಮೂಲಕ ಕನ್ನಡ ನಾಡಿನ ಅಸ್ಮಿತೆಯನ್ನು ಎತ್ತಿ ಹಿಡಿದಿದ್ದಾರೆ. ಯಾವ ಸಂದರ್ಭದಲ್ಲಿಯೂ ಅವರು ಕನ್ನಡ ನಾಡಿನ ಹಿತವನ್ನು ಬಲಿಕೊಡಲು ಸಿದ್ದರಿರಲಿಲ್ಲ.

೧೯೪೪ರಲ್ಲಿ ಒಮ್ಮೆ ಕುವೆಂಪು ಮಹಾರಾಜ ಕಾಲೇಜಿನಲ್ಲಿ ನಡೆದ ಸಮಾರಂಭ ಒಂದರಲ್ಲಿ ಏಕೀಕರಣದ ಪರವಾಗಿ ಮಾತನಾಡಿದಾಗ ಅವರಿಗೆ ಅಂದಿನ ಆಳುವವರಿಂದ ಎಚ್ಚರಿಕೆಯ ನೋಟಿಸ್ ಕೊಡಲಾಗುತ್ತದೆ. ಅದಕ್ಕೆ ಪ್ರತ್ಯುತ್ತರವಾಗಿ ಕುವೆಂಪು "ಅಖಂಡ ಕರ್ನಾಟಕ" ಎಂಬ ರೋಮಾಂಚನಗೊಳಿಸುವ ಕವಿತೆಯನ್ನು ಬರೆಯುತ್ತಾರೆ. ಕರ್ನಾಟಕದ ಬಗೆಗಿನ ಅತ್ಯಂತ ಮಹತ್ವದ ಕವಿತೆ ಇದು. ಇದರಲ್ಲಿ ಕುವೆಂಪು ಕರ್ನಾಟಕವೆಂಬುದು ಭೌಗೋಳಿಕ ಮಾತ್ರವಲ್ಲ, ಅದು ಸಾಂಸ್ಕೃತಿಕ ಕರ್ನಾಟಕವೆನ್ನುತ್ತಾರೆ.

"ಅಖಂಡ ಕರ್ನಾಟಕ
ಆಯ್ತು ನಮ್ಮ ಬೂಟಾಟದ ರಾಜಕೀಯ ನಾಟಕ
ಇಂದು ಬಂದು ನಾಳೆ ಸಂದು
ಹೋಹ ಸಚಿವ ಮಂಡಲ
ರಚಿಸುವುದೊಂದು ಕೃತಕವಲ್ತೊ
ಸಿರಿಗನ್ನಡ ಸರಸ್ವತಿಯ
ವಜ್ರ ಕರ್ಣ ಕುಂಡಲ !
ಅಖಂಡ ಕರ್ನಾಟಕ,
ಆಯ್ತೋ ನಮ್ಮ ನಾಲ್ಕು ದಿನದ ರಾಜಕೀಯ ನಾಟಕ
ನೃಪತುಂಗನೆ ಚಕ್ರವರ್ತಿ !
ಪಂಪನಲ್ಲಿ ಮುಖ್ಯಮಂತ್ರಿ
ರನ್ನ, ಜನ್ನ, ನಾಗವರ್ಮ, ರಾಘವಾಂಕ, ಹರಿಹರ
ಬಸವೇಶ್ವರ ನಾರಾಯಣಪ್ಪ ಸರ್ವಜ್ಞ ಷಡಕ್ಷರಿ
ಸರಸ್ವತಿಯೆ ರಚಿಸಿದೊಂದು ನಿತ್ಯ ಸಚಿವ ಮಂಡಲ
ತನಗೆ ತಾನೆ ರುಚಿರ ಕುಂಡಲ. (ಅಖಂಡ ಕರ್ನಾಟಕ)

ಕರ್ನಾಟಕ ಹೆಸರೇ ಬರಿಯ ಮಣ್ಣಿಗೆ ? ಅದು ಮಂತ್ರ, ಶಕ್ತಿ, ದೇವಿ, ಛಲದ ಚಂಡಿ ಕಣಾ.. ಎಂದೆನ್ನುತ್ತಾರೆ. ಹೀಗೆ ಕರ್ನಾಟಕವನ್ನು ಅಖಂಡವಾಗಿ ಪ್ರಾದೇಶಿಕ, ರಾಜಕೀಯವಾಗಿ ಮಾತ್ರವಲ್ಲದೆ ಸಾಂಸ್ಕೃತಿಕವಾಗಿ ಗ್ರಹಿಸಬೇಕಾದ ಅವಶ್ಯಕತೆಗಳನ್ನು ಮನಗಾಣಿಸಿದ್ದಾರೆ. ಪ್ರಾದೇಶಿಕತೆಯ ಮೇಲಿನ ಈ ಬಗೆಯ ಅಭಿಮಾನ ರಾಷ್ಟ್ರಾಭಿಮಾನಕ್ಕೆ ಕುತ್ತು ತರಬಾರದೆಂದೇ ಕುವೆಂಪುರವರು,

"ಜೈ ಭಾರತ ಜನನಿಯ ತನುಜಾತೆ
ಜಯ ಹೇ ಕರ್ನಾಟಕ ಮಾತೆ "

ಎಂದು ಗೀತೆ ಬರೆದು ಕರ್ನಾಟಕವು ಭಾರತ ಜನನಿಯ ತನುಜಾತೆಯೆಂದು, ತಾಯಿ ಮಕ್ಕಳ ಸಂಬಂಧವನ್ನು ಬೆಸೆದು, ಪ್ರಾದೇಶಿಕ ಅಭಿಮಾನ ರಾಷ್ಟ್ರಾಭಿಮಾನಕ್ಕೆ ವಿರುದ್ಧವಲ್ಲ ಪೂರಕವಾದದ್ದೆಂದು ಸಮರ್ಥವಾಗಿ ಕಟ್ಟುತ್ತಾರೆ. ಕುವೆಂಪುರವರು ಕರ್ನಾಟಕವನ್ನು ಭರತ ಖಂಡದ ಒಂದು ಅವಿಭಾಜ್ಯ ಅಂಗವಾಗಿ ಪರಿಕಲ್ಪಿಸಿಕೊಳ್ಳುತ್ತಾರೆಯೇ ಹೊರತು ಪ್ರತ್ಯೇಕತೆಯಿಂದ ನೋಡಿವುದಿಲ್ಲ. ಆದ್ದರಿಂದಲೇ" ಜೈ ಭಾರತ ಜನನಿಯ ತನುಜಾತೆ, ಜಯಹೇ ಕರ್ನಾಟಕ ಮಾತೆ" ಎನ್ನುತ್ತಾರೆ. ಕರ್ನಾಟಕ ಮಾತೆಗೆ ಸಲ್ಲುವ ಜಯಕಾರ ಆಕೆ ಭಾರತ ಜನನಿಯ ತನುಜಾತೆ ಆಗಿರುವುದರಿಂದಲೇ. ಭಾರತದ ಅಂಗವೇ ಆಗಿರುವ ಕರ್ನಾಟಕಕ್ಕೆ ಬೇರೆಯ ಅಸ್ತಿತ್ವವೆಲ್ಲಿ ? ಎಂದು ಕೇಳುತ್ತಾ, ನಾನು

ರಾಜ್ಯದೃಷ್ಟಿಯಿಂದ ಕರ್ನಾಟಕದವನು. ಭಾಷಾದೃಷ್ಟಿಯಿಂದ ಕನ್ನಡಿಗನು. ಆದರೆ ರಾಷ್ಟ್ರದ ದೃಷ್ಟಿಯಿಂದ ಭಾರತೀಯನು. ನನ್ನ ಕರ್ನಾಟಕತ್ವ ಭಾರತೀಯತ್ವಕ್ಕೆ ಎಂದಿಗೂ ಎದುರು ನಿಲ್ಲುವುದಿಲ್ಲವೆಂದು ಅಖಂಡತ್ವವನ್ನು ಮೆರೆಯುತ್ತಾರೆ.

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಕುವೆಂಪುರವರು ತಳೆದ ಈ ಬಗೆಯ ದೃಷ್ಟಿಯು ತುಂಬಾ ಮಹತ್ವಪೂರ್ಣವಾದದ್ದು. ಭಾರತೀಯರೆಲ್ಲ ಒಗ್ಗೂಡಿ ಬ್ರಿಟಿಷರ ವಿರುದ್ಧ ಹೋರಾಡಿ ಅವರನ್ನು ಮಣಿಸಲು ದೇಶಭಕ್ತಿ, ಅದರೊಟ್ಟಿಗೆ ಕರ್ನಾಟಕದ ಒಳಗೇ ಏಕೀಕರಣ ಚಳುವಳಿಯೂ ನಡೆಯುತ್ತಿದ್ದು ಭಾಷೆ ನೆಲ ಕಟ್ಟಿಕೊಳ್ಳುವ ತುರ್ತು- ಈ ಸಾಂದರ್ಭಿಕ ಗಂಭೀರತೆಯನ್ನು ಅರಿತು ಕುವೆಂಪುರವರು ಪ್ರಾದೇಶಿಕ ವೈಶಿಷ್ಟ್ಯದ ರಕ್ಷಣೆಯ ಜೊತೆಗೆ ದೇಶದ ರಕ್ಷಣೆಯೂ ಆಗಬೇಕೆಂದು, ಹೊರಗಿನ ಶತ್ರುಗಳ ವಿರುದ್ಧ ಹೋರಾಡಲು ನಾವೆಲ್ಲಾ ಒಂದಾಗಿ ಸಾಗಬೇಕೆಂದು ಕರೆ ನೀಡುತ್ತಾರೆ. ಹಾಗೆ ಕನ್ನಡ ಪ್ರದೇಶ, ಕನ್ನಡಿಗರನ್ನು ಒಂದೆಡೆ ಬೆಸೆಯುವ ಕಾರ್ಯವನ್ನು ಮಾಡುತ್ತಾರೆ.

ನಾಡಿನ ಬಗೆಗಿನ ಕುವೆಂಪುರವರ ವಿಚಾರಗಳು ಪ್ರಾದೇಶಿಕ ಮತ್ತು ರಾಷ್ಟ್ರದ ಮಟ್ಟಿಗೆ ನಿಲ್ಲುವುದಿಲ್ಲ. ಪ್ರಾದೇಶಿಕ, ಭಾರತೀಯ, ವಿಶ್ವರಾಷ್ಟ್ರಮಟ್ಟಕ್ಕೂ ಹಬ್ಬುತ್ತದೆ.ಹೀಗೆ ಬೆಳೆಯುತ್ತ ವಿಕಾಸಗೊಳ್ಳುತ್ತಾ ನಾವು ವಿಶ್ವಮಾನವರಾಗಬೇಕೆಂದು ಕುವೆಂಪು ಸಂದೇಶ ನೀಡುತ್ತಾರೆ. ಯಾವ ಬಂಧನಗಳಿಲ್ಲದೆ, ಗಡಿಗಳಿಲ್ಲದೆ, ನಿರಂಕುಶಮತಿಗಳಾಗಿ "ಓ ನನ ಚೇತನ, ಆಗು ನೀ ಅನಿಕೇತನ" ವಿಶ್ವಮಾನವ ಗೀತೆ ಹಾಡಿ, "ಮನುಜ ಮತ ವಿಶ್ವಪ ದೆಡೆಗೆ ಸಾಗಬೇಕೆಂದು ಕರೆ ನೀಡಿದ್ದಾರೆ. ಹಾಗಾಗಿ ಕುವೆಂಪು ಅವರು ಪ ರಾಷ್ಟ್ರೀಯತೆಯನ್ನಲ್ಲ ಬಹು ರಾಷ್ಟ್ರೀಯತೆಯನ್ನು ಎತ್ತಿ ಹಿಡಿದವರು. ಇದನ್ನು ಕನ್ನಡದ ಜೀವಕೇಂದ್ರಿಯ ನೆಲೆಯ ವಿಮರ್ಶಕರಾದ ಚಂದ್ರಶೇಖರ್ ನಂಗಲಿಯವರು "ತ್ರಿಕೋನ" ಮಾದರಿಯ ರಾಷ್ಟ್ರೀಯತೆ ಎನ್ನುತ್ತಾರೆ.

ಸ್ವಾತಂತ್ರ್ಯ ಸಂಗ್ರಾಮವು ಆಕ್ರಮಿಸಿದ್ದ ವಿದೇಶಿಯರನ್ನು ಹೊರಗಟ್ಟುವ ರಾಜಕೀಯ ಉದ್ಯಮದಲ್ಲಿ ಮಾತ್ರವೇ ಪರ್ಯವಸಾನ ಹೊಂದದೆ, ಧಾರ್ಮಿಕ, ಸಾಮಾಜಿಕ, ಆರ್ಥಿಕ ಭೂಮಿಕೆಗಳಲ್ಲಿಯೂ ಯತ್ನಶೀಲವಾಗಬೇಕು. ಅಂದರೆ, ಪರಕೀಯರಿಂದ ನಮ್ಮ ನಾಡನ್ನು ಬಿಡಿಸಿಕೊಳ್ಳಬೇಕೆಂಬುದರ ಜೊತೆ ಜೊತೆಗೆ ಪರಮತಾಕ್ರಮಣದಿಂದ ಸ್ವಧರ್ಮವನ್ನು ತಳ್ಳಿದ ಮೂಢಭಾವನೆ, ಕ್ಷಂದಾಚಾರಗಳಿಂದ ಅದನ್ನು ಶುಚಿಗೊಳಿಸಿ ಉದ್ಧರಿಸಿ. ಸುಧಾರಣಾ ಕಾರ್ಯ ಕೈಗೊಳ್ಳಬೇಕೆಂದು ಹೇಳುತ್ತಾ, ಕುವೆಂಪುರವರು ರಾಷ್ಟ್ರೀಯತೆ, ರಾಷ್ಟ್ರೀಯ ಹೋರಾಟಕ್ಕೆ ಬಹುಮುಖಿ ವ್ಯಾಪ್ತಿಯನ್ನು ತಂದು ಕೊಡುತ್ತಾರೆ.

ಇಂದು ಜಾಗತೀಕರಣದ ಹಿನ್ನೆಲೆಯಲ್ಲಿ ವಿಶ್ವವೇ ಮಾರುಕಟ್ಟೆಯಾಗುವ ಧಾವಂತದಲ್ಲಿ ಏಕತೆಯ ಕಡೆಗೆ ಚಲಿಸುತ್ತಿದೆ. ಕುವೆಂಪು ಅವರು "ಮುಂದಿನ ಸಾಹಿತ್ಯದಲ್ಲಿ ಸಮನ್ವಯ,

ಸರ್ವೋದಯ ಮತ್ತು ಪೂರ್ಣದೃಷ್ಟಿ" ಎಂಬ ಲೇಖನದ ಮೂಲಕ ಪ್ರಪಂಚವು ಅನೇಕತೆಯಿಂದ ಏಕತೆಗೆ ಚಲಿಸಬೇಕು ಆದರೆ, ಅನೇಕತೆಗಳನ್ನು ಇಲ್ಲಗೈಯುವ ಏಕತೆಯ ಕಡೆಗಲ್ಲ.ಅನೇಕತೆಯನ್ನು ಸಮನ್ವಯಗೊಳಿಸುವ ಏಕತೆಗೆ. ಅದರಿಂದ ಒಂದು ಪೂರ್ಣದೃಷ್ಟಿ ಸಿದ್ಧವಾಗುತ್ತದೆ. ಈ ಪೂರ್ಣದೃಷ್ಟಿ ಸಮನ್ವಯ ಬುದ್ಧಿಯ ಪರಿಣಾಮವಾಗಿ ಸರ್ವಸಮಾನತೆಯ ಸಮತಾ ಭಾವ ತಲೆದೋರುತ್ತದೆ. ಮತ, ಧರ್ಮ, ದೇವರು ಕುರಿತ ವಿಚಾರಗಳು ಸಂಕುಚಿತ ಭಾವ ಅಳಿದು ವಿಶಾಲವಾಗಬೇಕು. ಉಗ್ರರಾಷ್ಟ್ರೀಯತೆ, ಸ್ವಾರ್ಥತೆ, ಸ್ವಪ್ರತಿಷ್ಠೆಗಳು ಎಂದಿಗೂ ಶಾಂತಿ ಕ್ಷೇಮವನ್ನು ತರುವುದಿಲ್ಲ. ಹಾಗಾಗಿ ಸಮನ್ವಯ, ಸರ್ವೋದಯ, ಪೂರ್ಣದೃಷ್ಟಿ ಈ ಮೂರು ಮಹಾತತ್ವಗಳು ಜಗತ್ತಿನ ಮುಂದಿನ ಬಾಳಿನ ಮೂಲ ಮಂತ್ರಗಳಾಗಬೇಕೆಂದು ವಿಶ್ವ ರಾಷ್ಟ್ರೀಯ ಪ್ರಜ್ಞೆ ಮೂಡಿಸಲು ಪ್ರಯತ್ನಿಸಿದ್ದಾರೆ.

ಕುವೆಂಪುರವರು "ಶ್ರೀ ವಿನೋಬಾ ಅವರು ಸಮಗ್ರ ಭರತ ಖಂಡಕ್ಕಾದರೂ ಏಕಲಿಪಿಯನ್ನು ಸಾಧಿಸುವುದರಿಂದ ಭಾವೈಕ್ಯತೆಯನ್ನು ಸಾಧಿಸಲು ಸುಲಭವಾಗುವುದು" ಎಂದು ಹಾರೈಸುವರು. ಆದರೆ ಏಕಲಿಪಿ, ಏಕಭಾಷೆ ಮತ್ತು ಏಕಮತ ಇವು ಯಾವುವು ಭಾವೈಕ್ಯವನ್ನು ಸಾಧಿಸಲಾರದೆ ಸೋತಿರುವುದಕ್ಕೆ ಇತಿಹಾಸದ ಉದ್ದಕ್ಕೂ ಸಾಕ್ಷ್ಯಗಳು ಚೆಲ್ಲಿಬಿದ್ದಿವೆಯಲ್ಲಾ! ಯುರೋಪಿನ ಏಕಮತ- ಕ್ರೈಸ್ತ ಮತವು ಅದರ ಐಕ್ಯಮತ್ಯ ಸಾಧಿಸಲಾರದೆ ಯುದ್ಧಗಳ ಪರಂಪರೆಯನ್ನೆ ಹೊತ್ತಿಸಿತು. ಹಾಗೆಯೇ ಪಾಕಿಸ್ತಾನದ ಏಕ ಮತವು ! ಬಂಗಾಳದ ಏಕಭಾಷೆ ಭಾರತದ ವಿಭಜನೆಯ ಕಾಲದಲ್ಲಿ ಅದು ಒಡೆಯುವುದನ್ನು ತಡೆಯಲಿಲ್ಲ. ಏಕಲಿಪಿ ರೋಮನ್ ಲಿಪಿ, ಅರಬ್ಬಿ ಲಿಪಿ ಮತ್ತು ಸಂಸ್ಕೃತದ ದೇವನಾಗರಿ ಲಿಪಿಗಳೆಲ್ಲ ಒಂದೇ ಕಥೆ ಹೇಳುತ್ತಿವೆ. ಈಗ ನಡೆಯುತ್ತಿರುವ ಆಂಧ್ರ-ತೆಲಂಗಾಣದ ಘರ್ಷಣೆ ಮತ್ತೊಂದು ಸದ್ಯೋಜಾತ ನಿಷ್ಠುರ ನಿದರ್ಶನವಾಗುತ್ತದೆ. ನನಗನ್ನಿಸುತ್ತದೆ ; ಭಾಷೆಯು ಅಲ್ಲ, ಲಿಪಿಯು ಅಲ್ಲ, ಮತವೂ ಅಲ್ಲ, ಸರ್ವೋದಯಕ್ಕೆ ಭದ್ರವಾದ ಆಧಾರ ಮತ್ತು ಬಲಿಷ್ಠ ಅಸ್ತಿಭಾರವಿರುವುದು "ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು" ಎಂಬ ಆರ್ಥಿಕ ಸಮತೆಯಲ್ಲಿ. ಆರ್ಥಿಕ ಸಮತೆಯ ಅನಂತರ ಮತ, ಲಿಪಿ ಮತ್ತು ಭಾಷೆಗಳು ಭಾವೈಕ್ಯಕ್ಕೆ ಸಹಾಯಕ ಕಾರಣಗಳಾಗುತ್ತವೆ" ಎನ್ನುತ್ತ. ಏಕಭಾಷೆ, ಸಂಸ್ಕೃತಿ ಎಂದು ಹೇರುವುದರ ಬದಲಾಗಿ ಸರ್ವರಿಗೂ ಸಮಪಾಲು. ಸಮಬಾಳು ತತ್ವವನ್ನು ಕಾರ್ಯರೂಪಕ್ಕೆ ತಂದು, ಜನರ ಬದುಕು ಸುಧಾರಿಸಿದರೆ ಏಕತೆ ತಾನಾಗಿ ಬರುತ್ತದೆ ಎನ್ನುತ್ತಾರೆ. ರಾಷ್ಟ್ರೀಯತೆ ಬಗ್ಗೆ ಕುವೆಂಪುರವರು ತಮ್ಮ ಕವಿತೆಗಳಲ್ಲಿ ಭಾವನಾತ್ಮಕ ವಾಗಿ ಮಾತನಾಡಿದರೆ, ಲೇಖನ ಮತ್ತು ಭಾಷಣಗಳಲ್ಲಿ ಸಮಾಜೋ ಆರ್ಥಿಕ ವಾಸ್ತವ ನೆಲೆಯಲ್ಲಿ ಚಿಂತಿಸುತ್ತಾರೆ. ಈ ವಿಚಾರಗಳು ಎಂದೆಂದಿಗೂ ಪ್ರಸ್ತುತತೆಯನ್ನು ಪಡೆದುಕೊಳ್ಳುತ್ತವೆ.

ಕುವೆಂಪುರವರ "ಕನ್ನಡ" ಭಾಷಾಭಿಮಾನ ಅಪೂರ್ವವಾದದ್ದು . ಅವರು ಕನ್ನಡಿಗರಿಗೆ "ಕರ್ನಾಟಕ ಮಂತ್ರದೀಕ್ಷೆ" ನೀಡುತ್ತಾರೆ.

"ದೀಕ್ಷೆಯ ತೊಡು ಇಂದೇ
ಕಂಕಣ ಕಟ್ಟಿಂದೇ
ಕನ್ನಡ ನಾಡೊಂದೇ
ಇನ್ನೆಂದೂ ತಾನೊಂದೆ !"

ಇದಕ್ಕೆ ನೃಪತುಂಗನ ದೊರೆಮುಡಿ, ಪಂಪನ ಪದ ಧೂಳಿನ ಸಾಕ್ಷಿ, ಸಹ್ಯಾದ್ರಿಯ ಮೇಲಾಣೆ, ಕಾವೇರಿಯ ಮೇಲಾಣೆ–ದೀಕ್ಷೆಯ ತೊಡು ಅಷ್ಟೇ ಅಲ್ಲ, "ಪಂಪ ರನ್ನರ್ ಕುಮಾರವ್ಯಾಸ ಲಕ್ಷ್ಮೀಶ ಹರಿಹರಾದಿಗಳುಸಿರ್ ನಮ್ಮೊಳಿರ್ಪನ್ನೆಗಂ ಅಳುಕದೀ ಕನ್ನಡಂ" ಎಂದು ಆತ್ಮವಿಶ್ವಾಸದ ಮಾತುಗಳನ್ನಾಡುತ್ತಾರೆ. ಏಕೈಕ ಕರ್ನಾಟಕವೇ ಕನ್ನಡಿಗರ ಧ್ಯೇಯವೆನ್ನುತ್ತಾರೆ.ಬಾರಿಸು ಕನ್ನಡ ಡಿಂಡಿಮವಾ ಎಂದೆನ್ನುತ್ತ,ಕರ್ನಾಟಕ ಮಂತ್ರ ದೀಕ್ಷೆ ನೀಡಿ, ಎಲ್ಲಾದರೂ ಇರು ಎಂತಾದರು ಇರು, ಎಂದೆಂದಿಗೂ ನೀ ಕನ್ನಡವಾಗಿರು, ಕನ್ನಡವೇ ಸತ್ಯ, ಕನ್ನಡವೇ ನಿತ್ಯವೆಂದು ಹಾಡಿ ಕನ್ನಡಿಗರ ಧಮನಿ ಧಮನಿಗಳಲ್ಲಿ ಕನ್ನಡವನ್ನು ಕುಣಿಸಿದವರು ಕುವೆಂಪು. ಕನ್ನಡ ಭಾಷೆ ಮಾತ್ರವಲ್ಲ, ಅದು ದೇವಿ, ಶಕ್ತಿ, ಕಾಯುವ ಬಲ ಎಂದೆನ್ನುತ್ತಾ ಅಖಂಡ ಸಾಂಸ್ಕೃತಿಕ ಕರ್ನಾಟಕ ಪರಿಕಲ್ಪನೆಯನ್ನು ಕಟ್ಟಿಕೊಟ್ಟವರು ಕುವೆಂಪು. ಹೀಗೆ "ಭಾಷೆ"ಯ ಬಗೆಗೆ ಭಾಷಾಭಿಮಾನವನ್ನು ಬಿತ್ತಿ, ಭಾಷೆ ಬೆಳೆಯಬೇಕು ಉಳಿಯಬೇಕು, ಬದುಕು ಹಸನಾದರೆ ಮಾತ್ರ, ಭಾಷೆ, ಸಾಹಿತ್ಯ, ಸಂಸ್ಕೃತಿಯೂ ಬೆಳೆಯುತ್ತದೆಂದು, ಬದುಕು ಹಸನಾಗಲು ವೈಚಾರಿಕ ಮನೋಭಾವ ಬೆಳೆಸಿಕೊಂಡು, ದುಡಿದು ಬದುಕಬೇಕೆಂದು ಕುವೆಂಪು ಕರೆ ನೀಡಿದ್ದಾರೆ.

ಕುವೆಂಪು ಅವರ ಭಾಷೆ ಚಿಂತನೆಯಲ್ಲಿ ಪ್ರಾಂತ್ಯ ಭಾಷೆಯದ ಕನ್ನಡಕ್ಕೆ ಅಗ್ರಸ್ಥಾನ.ಕರ್ನಾಟಕದ ಮಟ್ಟಿಗೆ ಕನ್ನಡವೇ ಪ್ರಥಮ, ಪ್ರಧಾನ. ಶಿಕ್ಷಣ, ಆಡಳಿತ, ಮಾಧ್ಯಮ ಎಲ್ಲಾ ಕ್ಷೇತ್ರಗಳಲ್ಲಿಯೂ ಕನ್ನಡವೇ ಮಾಧ್ಯಮವಾಗಿರಬೇಕೆಂದು ಅವರು ಆಶಿಸಿದ್ದರು. ಇಂಗ್ಲಿಷ್ ಹಿಂದಿ ಕಲಿಯುವುದರ ಬಗ್ಗೆ ಅವರಿಗೆ ವಿರೋಧ ಇರಲಿಲ್ಲ.ಆದರೆ, ಬಲಾತ್ಕಾರವಾಗಿ ಹೇರುವ ಬಗ್ಗೆ ವಿರೋಧವಿತ್ತು. "ಭಾಷಾ ತ್ರಿಶೂಲವೀ ತ್ರಿಭಾಷಾ ಸೂತ್ರ, ಬಾಲಕರ ರಕ್ಷಿಸೈ ಹೇ ತ್ರಿಣೇತ್ರ! ಚೂರು ತಿಂಡಿಗೆ ಸಿಕ್ಕಿಸಿಹರೋ. ಈ ಮೂರು ಗಾಳ ನುಂಗದಿದ್ದರೆ ಹಸಿವೆ; ನುಂಗಿದರೆ ಪ್ರಾಣಶೂಲ" ಎಂದು ಕವನ ಬರೆಯುತ್ತಾರೆ. ಯಾವ ಭಾಷೆಯ ಕಲಿಕೆಯನ್ನೂ ಬಲಾತ್ಕಾರದಿಂದ ಹೇರಬಾರದು.ಎಲ್ಲರೂ ಹಿಂದಿ ಇಂಗ್ಲಿಷ್ ಕಲಿಯಬೇಕೆನ್ನುವುದು ದಬ್ಬಾಳಿಕೆಯ ಸೂಚಕವಲ್ಲದೆ ಮತ್ತೇನು ? ಪ್ರಜಾಪ್ರಭುತ್ವದಲ್ಲಿ ಬಲಾತ್ಕಾರಕ್ಕೆ ಸ್ಥಾನವಿರಕೂಡದೆಂದಿದ್ದಾರೆ ಕುವೆಂಪು.

ನಮಗೆ ಬೇಕಾದುದು ತ್ರಿಭಾಷಾ ಸೂತ್ರವಲ್ಲ. ದ್ವಿಭಾಷಾ ಸೂತ್ರ, ಅಂದರೆ " ಬಹು ಭಾಷೆಗಳಲ್ಲಿ ದ್ವಿಭಾಷೆ ' ನಮಗಿಂದು ಅತ್ಯಂತ ಕ್ಷೇಮಕರವೂ, ಲಾಭದಾಯಕವೂ ಆದ ಸೂತ್ರವಿದು. ನಮ್ಮ ವಿದ್ಯಾರ್ಥಿಗಳ ಮುಂದೆ ಅನೇಕ ಭಾಷೆಗಳನ್ನು ಇರಿಸಿ ಯಾವುದಾದರೂ ಎರಡು ಭಾಷೆಗಳನ್ನು ಆರಿಸಿಕೊಳ್ಳಲು ಸ್ವಾತಂತ್ರ್ಯವನ್ನು ಅವರಿಗೆ ಕೊಡಬೇಕು. ಯಾವ ಭಾಷೆಯನ್ನು ಬಲತ್ಕಾರವಾಗಿ ಹೇರಬಾರದು. ಶೈಕ್ಷಣಿಕ ದೃಷ್ಟಿಯಿಂದ ಮಾತ್ರವಲ್ಲದೆ ರಾಜಕೀಯ ದೃಷ್ಟಿಯಿಂದಲೂ ಈ ಬಹುಭಾಷೆಗಳಲ್ಲಿ ದ್ವಿಭಾಷಾ ಸೂತ್ರವು ತ್ರಿಭಾಷಾ ಸೂತ್ರಕ್ಕಿಂತ ಪರಿಣಾಮಕಾರಿಯಾಗಿ, ಎಲ್ಲ ಪ್ರದೇಶಗಳಿಗೂ ಸಮಾಧಾನವೊದಗಿಸಿ, ಸ್ವಭಾಷಾಭಿಮಾನ ಜನ್ಯವಾದ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುತ್ತದೆಂದು ಸಮರ್ಥವಾಗಿ ಮಂಡಿಸುತ್ತಾರೆ.

ಒಂದು ಮಾತೃಭಾಷೆ ಮತ್ತೊಂದು ಸಂಪರ್ಕ ಭಾಷೆಯಾಗಿ ಇಂಗ್ಲಿಷ್ ಅಥವಾ ಹಿಂದಿ.ಇದು ಭಾಷಾ ಸೂತ್ರ, ಹಿಂದಿ ಬೇಡ ಎನ್ನುವವರಿಗೆ, ಇಂಗ್ಲಿಷ್ ಬೇಡ ಎನ್ನುವವರಿಗೆ ಅವುಗಳನ್ನು ಬಲತ್ಕಾರವಾಗಿ ಹೇರದೆ, ಅವರವರ ಅಭಿರುಚಿಯ ಅವಶ್ಯಕತೆಗೆ ತಕ್ಕಂತೆ ಹಿಂದಿ,ಇಂಗ್ಲಿಷ್, ರಷ್ಯನ್, ಸಂಸ್ಕೃತ ಮೊದಲಾದ ಭಾಷೆಗಳಲ್ಲಿ ಯಾವುದನ್ನು ಕಲಿಯಬೇಕೆಂಬುದನ್ನು ಅವರೇ ಆಯ್ಕೆ ಮಾಡಿಕೊಳಲಿ. ಒಂದು ವೇಳೆ ಮೂರು ಭಾಷೆಗಳನ್ನು ಕಲಿಯಬೇಕು ಎಂದು ಹಠ ಹಿಡಿದರೂ ಬಹು ಭಾಷೆಗಳಲ್ಲಿ ಮೂರು ಭಾಷೆಗಳನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯ ವಿದ್ಯಾರ್ಥಿಗಳಿಗಿರಬೇಕು.ಬಹುಭಾಷೆಗಳಲ್ಲಿ ತ್ರಿಭಾಷೆ ಆಗಬೇಕೆ ಹೊರತು ಬರಿಯ ತ್ರಿಭಾಷೆಯಾಗಬಾರದು. ಭಾರತದಂತಹ ಅಸಂಖ್ಯ ಭಾಷೆಗಳಿರುವ ಪ್ರಜಾಸತ್ತಾತ್ಮಕ ನಾಡಿನಲ್ಲಿ ಏಕಭಾಷೆ, ಏಕಸಂಸ್ಕೃತಿ ಯಾವುದೂ ಹೇರಿಕೆಯಾಗುವುದು ಸರಿಯಲ್ಲವೆಂದು ಪ್ರಜಾಪ್ರಭುತ್ವವನ್ನು ಎತ್ತಿ ಹಿಡಿದಿದ್ದಾರೆ.

ಗಹನವಾದ ಯಾವುದೇ ವಿಷಯವನ್ನಾಗಲಿ ಸೂಕ್ಷ್ಮವಾದ ಭಾವವನ್ನಾಗಲಿ ಕನ್ನಡದಲ್ಲಿ ಸರಳವಾಗಿಯೂ ಸುಲಭವಾಗಿಯೂ ಶಕ್ತಿ ಪೂರ್ಣವಾಗಿಯೂ ವಿವರಿಸಲು ಸಾಧ್ಯ. ಕನ್ನಡಿಗರ ಸರ್ವತೋಮುಖವಾದ ಉದ್ಧಾರ ಕನ್ನಡದಿಂದಲೇ ಸಾಧ್ಯ. ಈ ನಿಟ್ಟಿನಲ್ಲಿ ಕನ್ನಡವನ್ನು ದುಡಿಸಿಕೊಳ್ಳಬೇಕೆನ್ನುತ್ತಾರೆ ಕುವೆಂಪು. ಅದಕ್ಕಾಗಿ ಕನ್ನಡವೇ ಶಿಕ್ಷಣ ಮಾಧ್ಯಮವಾಗಬೇಕು ಎಂದು ವಾದಿಸುತ್ತಾರೆ

ಇಂಗ್ಲಿಷ್ ಬಗೆಗೆ "ನಮ್ಮ ಮಕ್ಕಳ ತಲೆಯ ಮೇಲೆ ಇಂಗ್ಲಿಷ್ ಚಪ್ಪಡಿ ಭಾರವನ್ನು ಹೊರಿಸಿ, ಅವರನ್ನು ಕುಂಟಿತರನ್ನಾಗಿ ಮಾಡುವ ಅನುಚಿತ ಕಾರ್ಯವನ್ನು ನಿಲ್ಲಿಸಬೇಕು" ಎಂದಿದ್ದಾರೆ. ಇಂಗ್ಲಿಷ್ ಮಾಧ್ಯಮದ ಮೂಲಕ ಶಿಕ್ಷಣ ನೀಡುವುದರಿಂದಾಗುವ ದುಷ್ಪರಿಣಾಮಗಳನ್ನು ಕುರಿತು "ನಮಗೆ ಬೇಕಾಗಿರುವ ಇಂಗ್ಲಿಷ್" ಹಾಗೂ "ಭಾರತದಲ್ಲಿ ಇಂಗ್ಲಿಷ್ ಸ್ಥಾನ" ಎಂಬ ಲೇಖನಗಳಲ್ಲಿ ಕುವೆಂಪು ಸಮಗ್ರವಾಗಿ ಚರ್ಚಿಸಿದ್ದಾರೆ. ಕನ್ನಡ

ಭಾಷೆ, ಸಾಹಿತ್ಯ , ಸಂಸ್ಕೃತಿ ಬೆಳೆಯಬೇಕಾದದ್ದು ಕನ್ನಡದಿಂದಲೇ. ಒಂದು ಜನಾಂಗದ ಭಾಷೆಯ ಸ್ಥಾನದಲ್ಲಿ ಇನ್ನೊಂದು ಜನಾಂಗದ " ಭಾಷೆ " ಸಾಂಸ್ಕೃತಿಕ ಅಧಿಕಾರಿಯಾಗಿ ಮೆರೆದರೆ, ಮೊದಲಿನ ಭಾಷೆ ಉಳಿಯುವುದೇ ಕಷ್ಟವಾಗುತ್ತದೆ. ಒಂದು ಭಾಷೆಯಾಗಿ ಸಾಹಿತ್ಯ, ಜ್ಞಾನ, ಮಾಹಿತಿ ನೀಡಿದರೆ ಅದಕ್ಕೆ ಸಮ್ಮತಿಯಿದೆ. ಆದರೆ ಇಂಗ್ಲಿಷ್ ಕನ್ನಡಿಗರ ಮಾತೃಭಾಷೆಯಾದ ಕನ್ನಡದ ಸ್ಥಾನವನ್ನು ಕಬಳಿಸುವುದಾದರೆ ಅದಕ್ಕೆ ಪ್ರತಿರೋಧವಿದೆ ಎಂದು ಭಾಷಾತಜ್ಞರಂತೆ ಆಲೋಚಿಸಿ, ಪರಭಾಷೆ ಒಂದು ಭಾಷೆಯಾಗಿ ಕಲಿಯುವ ಅವಕಾಶವಿರಬೇಕೆಂದು ವಾದಿಸಿದ್ದಾರೆ.

ಕುವೆಂಪು ಅವರು ಕುಲಪತಿಗಳಾಗಿದ್ದ ಸಂದರ್ಭದಲ್ಲಿ, ಕನ್ನಡ ನಾಡಿನಲ್ಲಿ ಕನ್ನಡ ಪ್ರಥಮ ಭಾಷೆಯಾಗಬೇಕು, ಶಿಕ್ಷಣದಲ್ಲಿ ಎಲ್ಲ ಘಟ್ಟಗಳಲ್ಲಿಯೂ ಕನ್ನಡ ಶಿಕ್ಷಣ ಮಾಧ್ಯಮವಾಗಬೇಕು, ಕನ್ನಡ ಪಠ್ಯ ಪುಸ್ತಕಗಳು ಅದಕ್ಕೆ ಸಿದ್ಧವಾಗಿ ಕನ್ನಡ ಮಕ್ಕಳ ಸರ್ವತೋಮುಖ ವಿಕಾಸಕ್ಕೆ ಸಹಾಯಕವಾಗಬೇಕೆಂದು ಸಂಕಲ್ಪಿಸಿ ಕಾರ್ಯಗತಗೊಳಿಸಲು ಮೈಸೂರು ವಿಶ್ವವಿದ್ಯಾಲಯದ ಅಕೆಡೆಮಿಕ್ ಕೌನ್ಸಿಲ್ ಸಭೆಯಲ್ಲಿ ಪ್ರಸ್ತಾಪಿಸಿದರಂತೆ. ಸದಸ್ಯರಲ್ಲಿ ಬಹುಪಾಲು ವಿಜ್ಞಾನ ಮೊದಲಾದ ಶಾಸ್ತ್ರಗಳ ಅಧ್ಯಾಪಕರೇ ಇದ್ದ ಸಭೆಯಲ್ಲಿ ವಿಜ್ಞಾನದಂಥ ವಿಷಯಗಳನ್ನು ಕನ್ನಡದಲ್ಲಿ ಬೋಧಿಸಲು ಸಾಧ್ಯವೇ ಎಂದು ಕುಹಕ ನಗೆ ಉದ್ಗಾರಗಳನ್ನು ತೆಗೆದರಂತೆ. ಆಗ ಕುವೆಂಪು ಅವರು "ಭರತ ಖಂಡಕ್ಕೆ ಸ್ವಾತಂತ್ರ್ಯ ಬಂದು ಆರೇಳು ವರ್ಷಗಳಾದರೂ ದಾಸ್ಯ ಬುದ್ದಿ ತೊಲಗಿಲ್ಲ. ಮಾನ ಅವಮಾನಗಳ ಭೇದವೇ ನಮ್ಮವರಿಗೆ ತಿಳಿದಿಲ್ಲ, ಅಭಿಮಾನಿ ಶೂನ್ಯರಿಗೆ ಮಾನವೆಲ್ಲಿಯದು ? ನಾಲ್ಕಾರು ವರ್ಷಗಳ ಕಾಲ ಗೂಟಕ್ಕೆ ಬಿಗಿಸಿಕೊಂಡು ಅಷ್ಟರಿಂದಲೇ ಮೈ ಬೆಳಸಿಕೊಂಡ ನಾಯಿಯ ಸರಪಳಿಯನ್ನು ಕಡಿದು ಒದ್ದರೂ ಆಂಗ್ಲರ ಮಾನಸ ಪುತ್ರರಾದ ನಮ್ಮ ಜನ ಸ್ವಾತಂತ್ರ್ಯದ ಬೆಲೆಯರಿಯದೆ, ತಮ್ಮ ಭಾಷೆಯ ಮೌಲ್ಯವನ್ನರಿಯದೆ ಇನ್ನೂ ಕತ್ತಲಲ್ಲಿ ಮುಗ್ಗರಿಸುತ್ತಿದ್ದಾರೆ" ಎಂದು ದಿಟ್ಟವಾಗಿ ಉತ್ತರಿಸಿದರಂತೆ.

ಕರ್ನಾಟಕ ರಾಜ್ಯ ಸ್ಥಾಪನೆ, ಕರ್ನಾಟಕದಲ್ಲಿ ಸಂಪೂರ್ಣ ಆಡಳಿತ, ಕನ್ನಡ ಎಲ್ಲ ಹಂತಗಳಲ್ಲೂ ಶಿಕ್ಷಣ ಮಾಧ್ಯಮ, ಇಷ್ಟೂ ಆಗದೆ ಕನ್ನಡದಲ್ಲಿ ಒಳ್ಳೊಳ್ಳೆ ಕಥೆ ಕವನ ಬರೆದು ಅದನ್ನು ಉದ್ಧಾರ ಮಾಡುತ್ತೇವೆ ಎನ್ನುವುದು ಸುಳ್ಳು ಎಂದು ಸ್ಪಷ್ಟವಾಗಿ ಅನೇಕ ಬಾರಿ ಕುವೆಂಪು ಹೇಳಿದ್ದಾರೆಂದು ಅಣ್ಣನ ನೆನಪು ಕೃತಿಯಲ್ಲಿ ತೇಜಸ್ವಿಯವರು ಹೇಳುತ್ತಾರೆ.

ಕುವೆಂಪುರವರು ನಾಡು ನುಡಿಗಾಗಿ ಮೌಲ್ಯಯುತವಾದ ವೈಚಾರಿಕ ಚಿಂತನೆಗಳನ್ನು ನೀಡಿದ್ದಾರೆ.ಆ ವಿಚಾರಗಳನ್ನು ನಾವು ಕಾರ್ಯಾಚರಣೆಯಲ್ಲಿ ತರದೆ ಇರುವುದು ದುರಂತ. ಇಷ್ಟು ವರ್ಷಗಳಾದರೂ ಕನ್ನಡವು ಶಿಕ್ಷಣ ಮಾಧ್ಯಮವಾಗದೇ ಇರುವುದು ನಮ್ಮ

ಇಚ್ಛಾಶಕ್ತಿಯ ಕೊರತೆಯನ್ನು, ಕನ್ನಡಿಗರಿಗೆ ಬದ್ಧತೆ ಇಲ್ಲದಿರುವುದನ್ನು ತೋರಿಸುತ್ತದೆ. ಕನ್ನಡ ರಾಜ್ಯೋತ್ಸವದ ಸಂದರ್ಭದಲ್ಲಿ ಕನ್ನಡ ನಾಡು ನುಡಿ ಜನತೆಯ ಪ್ರಗತಿಯ ಮಾರ್ಗಗಳನ್ನು ಕುರಿತು ಚಿಂತಿಸಬೇಕಾಗಿದೆ.ಈ ಹಿನ್ನಲೆಯಲ್ಲಿ ಕುವೆಂಪು ಅವರ ಚಿಂತನೆಗಳು ನಮ್ಮನ್ನು ನಾಡಿನ ಅಭಿವೃದ್ಧಿಗೆ ಶ್ರಮಿಸಲು ದೂಡುತ್ತವೆ.

ಪರಾಮರ್ಶನ ಗ್ರಂಥಗಳು

೧. ಕುವೆಂಪು ಸಮಗ್ರ ಗದ್ಯ ಸಂಪುಟ– ೨. ಸಂ:ಕೆ ಶಿ ಶಿವಾರೆಡ್ಡಿ. ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯ. ಹಂಪಿ. ೨೦೦೪.

೨. ಕುವೆಂಪು ಸಮಗ್ರ ಕಾವ್ಯ ಸಂಪುಟ–೨.ಸಂ:ಕೆ ಶಿ ಶಿವಾರೆಡ್ಡಿ. ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯ. ಹಂಪಿ. ೨೦೦೦.

೩. ಯುಗದ ಕವಿ. ಲೇಖಕರು: ಕೆ.ಶಿ.ಶಿವಾರೆಡ್ಡಿ.ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯ. ಹಂಪಿ. ೨೦೦೨.

೪. ಅಣ್ಣನ ನೆನಪುಗಳು. ಲೇಖಕರು: ಪೂರ್ಣಚಂದ್ರ ತೇಜಸ್ವಿ.ಪುಸ್ತಕ ಪ್ರಕಾಶನ. ಮೈಸೂರು.೨೦೧೭.

೫. ಸಾಹಿತ್ಯ ಕಥನ.ಲೇಖಕರು: ಡಾ.ಡಿ ಆರ್ ನಾಗರಾಜ್.ಅಕ್ಷರ ಪ್ರಕಾಶನ. ಹೆಗ್ಗೋಡು. ಸಾಗರ. ೧೯೯೬.

೬. ಕನ್ನಡ ರಾಷ್ಟ್ರೀಯತೆ.ಲೇಖಕರು: ಬಂಜಗೆರೆ ಜಯಪ್ರಕಾಶ್.ಕ್ರಾಂತಿಸಿರಿ ಪ್ರಕಾಶನ. ಬೆಂಗಳೂರು.೨೦೦೦.

೭. ಕವಿರಾಜಮಾರ್ಗ ಮತ್ತು ಕನ್ನಡ ಜಗತ್ತು.ಲೇಖಕರು: ಕೆ.ವಿ.ಸುಬ್ಬಣ್ಣ.ಅಕ್ಷರ ಪ್ರಕಾಶನ. ಹೆಗ್ಗೋಡು.೨೦೦೦.

೮. ಪೂರ್ವಾಪರ. ಲೇಖಕರು: ಯು ಆರ್ ಅನಂತಮೂರ್ತಿ. ಅಕ್ಷರ ಪ್ರಕಾಶನ. ಹೆಗ್ಗೋಡು. ಸಾಗರ. ೧೯೯೬.

ಪುಲಿಗೆರೆಯ ಶಾಸನಗಳ ಸಾಹಿತ್ಯ ಗುಣ

ಡಾ. ಕೆ.ಆರ್. ಗಣೇಶ

'ಶಾಸನಸಾಹಿತ್ಯ ಸಂಚಯ' ಕೃತಿಯಲ್ಲಿ ಅದರ ಸಂಪಾದಕರಾದ ಶ್ರೀ ಎ.ಎಂ. ಅಣ್ಣಿಗೇರಿ ಮತ್ತು ಶ್ರೀ ಮೇವುಂಡಿ ಮಲ್ಲಾರಿ ಅವರು ತಮ್ಮ 'ಸಂಚಯದ ಸಮಾಲೋಚನ' ಎಂಬ ಮುನ್ನುಡಿಯಲ್ಲಿ ಹೀಗೆ ಹೇಳಿದ್ದಾರೆ:

"ನಮ್ಮ ನಾಡಿನ ಶಾಸನಗಳು ಬಹುಮಟ್ಟಿಗೆ ದೇವಾಲಯಗಳ ನಿರ್ಮಾಣ ಮತ್ತು ಅವುಗಳಿಗೆ ಕೊಟ್ಟ ದತ್ತಿ-ದಾನಗಳನ್ನು ಉಲ್ಲೇಖಿಸುವುದಾಗಿವೆ. ಅವನ್ನು ಉಲ್ಲೇಖಿಸುವ ನೆವದಿಂದ ಪೂರ್ವಭಾವಿಯಾದ ಅನೇಕ ವಿಷಯಗಳನ್ನು ಈ ಶಾಸನ ಕವಿಗಳು ಬಣ್ಣಿಸಿದ್ದಾರೆ. ಊರು ಊರುಗಳಲ್ಲಿಯೂ ಕಂಗೊಳಿಸುತ್ತಿರುವ ದೇವಾಲಯಗಳ ನಿರ್ಮಿತಿಗೆ ಹಿನ್ನೆಲೆಯಾಗಿ ಎಂತಹ ದಿವ್ಯೋದಾತ್ತ ಸಂಸ್ಕೃತಿಯ ಇತಿಹಾಸವಿದೆ ಎಂಬುದನ್ನು ಅಲ್ಲಲ್ಲಿಯ ಬರೆಹದ ಕಲ್ಲುಗಳು ಹೇಳುತ್ತಿವೆ"

ಈ ಮಾತು ಲಕ್ಷ್ಮೇಶ್ವರಕ್ಕೆ ನಿಜವಾಗಿ ಅನ್ವಯಿಸಿದರೂ, ಸೋಮೇಶ್ವರ ದೇವಾಲಯ, ಲಕ್ಷ್ಮೀಲಿಂಗದೇವಾಲಯ, ಶಂಖಬಸದಿ, ಮಹಂತಿನ ಮಠಗಳನ್ನು ಬಿಟ್ಟರೆ. ಉಳಿದ ಬಹುಪಾಲು ಕಟ್ಟಡಗಳು ಅಸ್ತಿತ್ವವನ್ನು ಉಳಿಸಿಕೊಂಡಿಲ್ಲ ಎಂಬುದು ವಿಷಾದದ ಸಂಗತಿಯಾಗಿದೆ. ಧಾರ್ಮಿಕ ಸಂಘರ್ಷಗಳು, ಒಂದು ಧರ್ಮದ ಬಗ್ಗೆ ಅತಿನಿಷ್ಠೆ, ಧಾರ್ಮಿಕವಾದ ಒಪ್ಪಂದಗಳು, ಜನಪರವಾದ ಬಾವಿ ತೊಡಿಸುವುದು, ಧರ್ಮೇತವನ್ನು ಏರ್ಪಡಿಸುವುದು, ಆಗಿನ ಕಾಲಕ್ಕೆ ತಕ್ಕಂತೆ ಬ್ರಹ್ಮಪುರಿ, ಸೂಳೆಗೇರಿಗಳ ನಿರ್ಮಾಣಗಳನ್ನು ಕುರಿತು ಶಾಸನ ರಚನಕಾರರು ಮನತುಂಬಿ ವರ್ಣಿಸಿದ್ದಾರೆ. ಅನೇಕ ಶಿಷ್ಟಕವಿಗಳ ರಚನೆಗಳಿಗಿಂತ ಉತ್ತಮ ಪದ್ಯಗಳನ್ನು ರಚಿಸಿದ್ದಾರೆ. ಉತ್ತಮವಾದ ಗದ್ಯ- ಪದ್ಯ ರಚನೆಗಳನ್ನು ಮಾಡಿರುವ ಬಹಳಮಂದಿ ಕವಿಗಳು ಅವ್ಯಕ್ತರಾಗಿದ್ದಾರೆ.

೧. ಪುಲಿಗೆರೆಯ ಶಾಸನಗಳ ರಚನೆಯಲ್ಲಿ ಹೆಸರು ತಿಳಿದಿರುವ ಕವಿಗಳು ಮೂರು ಜನ. ಅದರಲ್ಲಿ ಮೊದಲನೆಯವನು ಪೊಂಬೊಳಲ ಕರ್ತೃ ವಾದಿಚೂಡಾಮಣಿ ಕನ್ದೆಯದೇವರ ಪುತ್ರ ಚಟ್ಟಪಾರ್ಯ; ಕಲ್ಯಾಣದ ಚಾಲುಕ್ಯರ ಆರನೆಯ ವಿಕ್ರಮಾದಿತ್ಯ (ತ್ರಿಭುವನಮಲ್ಲ) ನ ಕ್ರಿ.ಶ. ೧೧೧೨ರ ಶಾಸನವನ್ನು ಇವನು ರಚಿಸಿದ್ದಾನೆ. ಸೋಮೇಶ್ವರ ದೇವಾಲಯದ ಶಾಸನಗಳ ಸಾಲಿನಲ್ಲಿರುವ ಇದರಲ್ಲಿ ೫ ಸಂಸ್ಕೃತ ಶ್ಲೋಕಗಳು, ೫ ಕಂದಪದ್ಯಗಳು, ೮ ವೃತ್ತಗಳು ಇವೆ. ಅನಂತಮಯ್ಯ ದಂಡನಾಯಕನು ಪುಲಿಗೆರೆಯ ಸ್ವಯಂಭೂ ಸೋಮೇಶ್ವರ ದೇವರಿಗೆ ಸೂಳೆಗೇರಿಯನ್ನು ಮಾಡಿಸಿ, ಅಲ್ಲಿಯ ಪಾತ್ರಪಾವುಳಕ್ಕೆ ಬಂದ ಸೂಳೆಯರಿಗೆ ದತ್ತಿಯನ್ನು ನೀಡಿದುದನ್ನು ಇದು ದಾಖಲಿಸುತ್ತದೆ. ಕವಿಯ ಊರು 'ಪೊಂಬೊಳಲ್' ಯಾವುದೋ ತಿಳಿಯುತ್ತಿಲ್ಲ.

ತ್ರಿಭುವನಮಲ್ಲನ ದಂಡನಾಥ ಶ್ರೀಪತಿಯನ್ನು ಹೊಗಳುವ ಪದ್ಯ ಹೀಗಿದೆ:

"ಶ್ರೀಪತಿ ನಿರ್ಮಳಕೀರ್ತಿ
ಶ್ರೀಪತಿ ಪರಸೈನ್ಯ ಜಲಧಿ ಸಂಜಾತ ಜಯ
ಶ್ರೀಪತಿ ಪತಿಹಿತ ಚರಿತಂ
ಶ್ರೀಪತಿ ದಂಡಾಧಿನಾಥಂ. . . ."

"ಪರಭೂಪಂಗೆ ಅರ್ತಿಗೆ ಒಳ್ ಅಳ್ಕಿದ ರಿಪುಗೆ, ಅಸುರಧ್ವಂಸಿ ಇರ್ಪಂತೆ, ವಿದ್ಯಾಧರನ್ ಇರ್ಪಂತೆ. ಅಬ್ಧಿ ಇರ್ಪಂತೆ ಎಸೆದು ಮಹಿಮೆಯಿಂದ ಇರ್ದಪಂ.- ಬಂದು ಮಾರ್ಕೊಳ್ಗೆ ಅರಿಭೂಪರ್ ಬೇರ್ಪ ಬಿಟ್ಟೆಡೆಗೆ ಅಭಯ ಚಕಿತರ್ಗೆ ಅಳ್ಗಿ ಬೆನ್ನಟ್ಟಿ ಕೊಲ್ಗುಂ. ಕರೆದು ಈಗುಂ ಪೂಣ್ದು ತಾಗುಂ ಶಶಿವಿಶದಯಿಶಂ ಶ್ರೀಪತಿ ಚಮೂಪಂ"

ಚಟ್ಟಪಾರ್ಯನು ಪುರಾಣ ಪ್ರತಿಮೆಗಳನ್ನು ಚೆನ್ನಾಗಿ ಬಳಸಿಕೊಳ್ಳುತ್ತಾನೆ.

'ಬಹದರನ್ ಅಟ್ಟ ಕೊಟ್ಟ ಜವನ್,
ಅಂಜಿದಕಂ ನಿಜಬಾಹುವಜ್ರ ಪಂಜರದೊಳಗಿಟ್ಟು ಕಾವ ಹರಿನಂದನನ್
ಆಶ್ರಿತರಾದ ಶಿಷ್ಯರಂ ಪೊರೆವ ಪೊಗರ್ತೆವೆತ್ತ ಬಲಿ' – ಚಮೂಪತಿ ಸೋಮದೇವ
ಅನಂತದಂಡಾಧಿಪನನ್ನು ಹೊಗಳುವ ಪದ್ಯ ಹೀಗಿದೆ:
"ಆನತ ಅರಾತಿ ಬಳಕ್ಕೆ ದಂಡಧರನ್ ಇರ್ಪಂತೆ ಇರ್ದಪಂ
ಕಾಮಿನೀಜನ ಕೇಳೀವಿಭವಕ್ಕೆ ಚಿತ್ತಭವನ್ ಇರ್ಪಂತೆ ಇರ್ದಪಂ
ಶಿಷ್ಯ ಸಜ್ಜನ ಬಂಧು ಪ್ರಕರಕ್ಕೆ ಕಲ್ಪತರುವಿರ್ಪಂತೆ ಇರ್ದಪಂ"

"ಅದಟರನ್ ಆಂತು ಕೊಟ್ಟ ಅದಟನ್
ಅಣ್ಮಿದರಂ ಬರಿಕೆಯ್ವ ಮಿಳ್ತು
ಮೀರಿದರಂ ಅಡುರ್ತು ಪೊಯ್ವ ಸಿಡಿಲ್
ಉದ್ದತರಂ ನೊಣೆವ ಉಗ್ರರಾಹು"

(ಪೊಂಬೊಳಲಿನ ಇನ್ನೊಬ್ಬ ಕವಿ ನಾಗದೇವ (ಕ್ರಿ.ಶ. ೧೦೮೨-೮೮) ಕುರ್ತುಕೋಟಿಯ ಮೂರು ಶಾಸನಗಳನ್ನು ರಚಿಸಿದ್ದಾನೆ.)

೨. ಪುಲಿಗೆರೆಯ ಎರಡನೆಯ ಶಾಸನೋಕ್ತ ಕವಿ ಮುಖ್ಯಪಂಡಿತ. ಕ್ರಿ.ಶ. ೧೧೪೭ರಲ್ಲಿಕಲ್ಯಾಣದ ಚಾಲುಕ್ಯ ಚಕ್ರವರ್ತಿ ಇಮ್ಮಡಿ ಜಗದೇಕಮಲ್ಲನ ೬೪ ಸಾಲಿನ ಶಾಸನವನ್ನು ಇವನು ರಚಿಸಿದ್ದಾನೆ. ಸೋಮೇಶ್ವರ ದೇವಾಲಯದ ಶಾಸನಗಳ ಸಾಲಿನಲ್ಲಿರುವ ಈ ಶಾಸನದಲ್ಲಿ ಎರಡು ಸಂಸ್ಕೃತ ಶ್ಲೋಕಗಳು, ೨೨ ಕಂದಪದ್ಯಗಳು, ೯ ವೃತ್ತಗಳೂ ಇವೆ. 'ಕರ್ಣಾಟ ಸುಕವಿ' ಎಂದು ತನ್ನನ್ನು ಕರೆದುಕೊಂಡಿರುವ ಮುಖ್ಯಪಂಡಿತನ ನಿಜವಾದ ಹೆಸರು ಬೇರೆ ಇರಬೇಕೆನ್ನುತ್ತಾರೆ ವಿದ್ವಾಂಸರು. ನಾಡ ಹೆಗ್ಗಡೆಯಾಗಿದ್ದ ಮೇಚರಸ ಎಂಬುವವನು ಸೋಮನಾಥದೇವರ ಸ್ಥಾನಾಚಾರ್ಯನಾಗಿದ್ದ ಜ್ಞಾನ ಸೋಮಪಂಡಿತ ದೇವರಿಗೆ ಕೊಟ್ಟ ದತ್ತಿಯನ್ನು ಈ ಶಾಸನ ದಾಖಲಿಸುತ್ತದೆ.

ಜಗದೇಕಮಲ್ಲನು ರಾಜ್ಯಭಾರವನ್ನು ಮಾಡುತ್ತಿದ್ದುದರಿಂದ

"ಕಮಠ ಕಠೋರ ಕರ್ಪರದ ತಾಪಂ ಅಡಂಗಿತು, ನಾಗರಾಜನ ಉತ್ತಮ ಮಣಿಮಸ್ತಕಕ್ಕೆ ಹೊಜೆ ಹಿಂಗಿದುದು ಆ ದಿಗಿಭಕ್ಕೆ ಕಂಠಭಾರಂ ಅದು ಉಡುಗಿತ್ತು" ಎಂಬ ವರ್ಣನೆ ಚೆನ್ನಾಗಿದೆ.

ಮೇಚರಸನ ಗುಣವನ್ನು "ಧವಳಾಪಾಂಗ ನಿರೀಕ್ಷಣ ಉಲ್ಲಸಿತ ವೇಶ್ಯಾಸೋದರಂ ಸತ್ಕವೀಂದ್ರ ವಿಪಶ್ಚಿಜ್ಜನತಾದರಂ, ಶಿವಕುಮಾರಂ, ಮನ್ಮಥಾಕಾರಂ, ಅನ್ಯವಧೂಪುತ್ರಕನ್ ಆತ್ಮಗೋತ್ರ ನಳಿನೀಮಿತ್ರಂ ಎಂದಂದುಂ ಪೋಲ್ವನ್ ಆವಂ ಶಿವಧರ್ಮ ಹರ್ಮ್ಯತಳ ಪೂರ್ವಪ್ರಾಚಿಯಂ" ಎಂದು ಕವಿ ಹೊಗಳಿದ್ದಾನೆ.

ಮಂತ್ರಿ ಕೇಶವನನ್ನು ಧರೆ ಆಗ ಹೊಗಳುತ್ತಿತ್ತಂತೆ-

"ಪರವಧುಗೆ ಎಳಸದ ಪುಸಿಯೊಳ್ ಪೊರೆಯದ ಧರ್ಮಾವತಾರನ್ ಎನಿಸಿದ
ಗುಣಮಂ ಧರಿಯಿಸಿದಂ ಸಲೆ ಸೋಮೇಶ್ವರ ದೇವರ ಮಂತ್ರಿ ಕೇಶವಂ"

ಜ್ಞಾನಸೋಮಪಂಡಿತದೇವನು ಹೀಗೆ ಶೋಭಿಸುತ್ತಿದ್ದ-

"ಮದನಂ ತಾಳ್ದಿರ್ದನೊ ರಾಜತ ವಿಪುಲ ಜಟಾಜಾಲಮಂ ಕಲ್ಪಭೂಜಂ ಪದೆಪಿಂದಂ ತಾಪಸಾಕಾರದೆ ಪುರಿಕರ ಸೋಮೇಶ್ವರ ಸ್ಥಾನದೊಳ್
ಸಂಪದದಿಂದ ಸ್ಥಾಯಿಯಾಗಿರ್ದುದೋ ಜಲನಿಧಿ ಗಂಭೀರಮಂ ಯೋಗಿ ರೂಪಿಂದಿದೆ ತಾಳ್ದಿರ್ದಪುದೋ"

'ಚಂಪಕಮಾಲೆ'ಯಲ್ಲಿರುವ ಒಂದು ವೃತ್ತ ಅಡಕವಾಗಿ ೧೨ ಮತ್ತರು ಭೂಮಿಯ ದಾನ ವಿಂಗಡಣೆಯನ್ನು ತಿಳಿಸುತ್ತದೆ. ನಂದಿಯ ಬಾವಿಗೆ ಆರು ಮತ್ತರು ಹಾಗೂ ಗೌರಲೆಯ ಬಾವಿಗೆ ಆರು ಮತ್ತರು ಭೂಮಿಯನ್ನು ದೇವರಿಗೆ ನೀಡಿದ ೧೦೦ ಮತ್ತರು ದತ್ತಿಯ ಭೂಮಿಯಿಂದ ತೆಗೆದು ದತ್ತಿಯಾಗಿ ನೀಡಲಾಯಿತು.

೩. ಪುಲಿಗೆರೆಯ ಮೂರನೆಯ ಶಾಸನದಕವಿ ನಾಗಾರ್ಜುನ. ಲಕ್ಷ್ಮೇಶ್ವರದ ಹಳೆಯ ತಾಲೂಕ್ ಕಛೇರಿಯ ಆವರಣದಲ್ಲಿದ್ದ ಈ ಶಾಸನದಲ್ಲಿ ೧೦ ಕಂದಪದ್ಯಗಳು ೬ ವೃತ್ತಗಳು, ಒಂದು ಶ್ಲೋಕ ಇದೆ. ಅನೇಕ ಕಡೆ ಶಾಸನ ತ್ರುಟಿತವಾಗಿರುವುದದರಿಂದ ಅರ್ಥ ಸ್ಪಷ್ಟವಾಗುವುದಿಲ್ಲ. ಕವಿಯ ಶಬ್ದಶಕ್ತಿಗೆ ಒಂದು ಉದಾಹರಣೆ ಕೊಡಬಹುದು.

"ಆರ್ಯರ್ ಕಾಳಾಮುಖಮುನಿವರ್ಯರ್ ತ್ರಿಭುವನ ವಿನೂತ ಶೈವಾಗಮ ತಾತ್ಪರ್ಯರ್ ಭೋಗೇಶ್ವರದ ಆಚಾರ್ಯರ್, ನೆಗಳ್ದಿರ್ದರ್ ಅಮೃತರಾಶಿ ಮುನೀಂದ್ರರ್"

೪. ಸೋಮೇಶ್ವರ ದೇವಾಲಯದಲ್ಲಿದ್ದ ಕ್ರಿ.ಶ. ೧೧೦೭, ೧೧೫೨, ೧೧೫೩ ಎಂಬ ಮೂರು ಕಾಲಗಳನ್ನು ಉಲ್ಲೇಖಿಸುವ ಶಾಸನದಲ್ಲಿ ೧೬ ಕಂದಪದ್ಯಗಳು, ೭ ವೃತ್ತಗಳು, ೪ ಸಂಸ್ಕೃತ ಶ್ಲೋಕಗಳಿವೆ.

ಹಾನುಗಲ್ ೫೦೦ ಅನ್ನು ಆಳುತ್ತಿದ್ದ ಮಹಾಮಂಡಳೇಶ್ವರ ತೈಲಪದೇವನ ಕಾಲದ ಶಾಸನದಲ್ಲಿ ಪುಲಿಗೆರೆಯನ್ನು ಹೊಗಳಿದ ರೀತಿ ಅಪೂರ್ವವಾಗಿದೆ.

"ತವರೆಲ್ಲುಂ ದೇವತಾ ಮಂದಿರ ನಿವಹಮ್, ನಿಮ್ನಸ್ಥಳೀ ರಾಜಿಮಲ್ಲುಂ ಸುವಿರಾಜ ದೀರ್ಘಿಕಾ ಸಂಕುಳ ಭರಿತ ಪಯಃಪೂರ ನೀರೇಜಕಾಸಾರವ ಮತ್ತಂ ತತ್ಸಮಾಳಂಕೃತ ವಸುಧೆಯದೆಲ್ಲಂ ಲಸತ್ ಚಂದನೋದ್ಯಾನವೆನಲ್ ರಮ್ಯಂದಲ್ ಎಂದುಂ ಪುರಿಕರನಗರೀ ಲೀಲೆ"

ಸೋಮೇಶ್ವರನ ಪೂಜಾಫಲ ಅತಿಶಯವಾಗಿತ್ತು–

'ಒಂದೊಂದಕ್ಷತೆಯಂ ಸಾನಂದದಿಂ ಅಭ್ಯರ್ಚಿಸಲ್ಕೆ ಕೊಳಗಂ ತೀವಿತ್ತು" ಎಂದಿದ್ದಾನೆ ಶಾಸನಕವಿ.

ಕದಂಬ ಕುಲದ ಮಂಡಳೇಶ್ವರ ಮಾವುಲಿ ತೈಲಹದೇವನು ಸೋಮನಾಥದೇವರ ದರ್ಶನ ಪ್ರಭಾವದಿಂದಿರಲು, ಮಹಾಮಂಡಳೇಶ್ವರ ವೀರಪಾಂಡ್ಯ ಭೂಪಾಲನ ಶೌರ್ಯ – ಸಾಹಿತ್ಯಗುಣ ಹೀಗಿತ್ತು :

"ಅಸಿಧಾರಾವ್ರತಮಮಂ ಸಾಧಿಸಿ ಜಯವಧು, ಭುಜದೊಳ್ ಬಾಣ ಮುಖಮಂ ಸಲೆ ಸಾಧಿಸಿ ಬಂದು ವಾಣಿ, ಆಸ್ಯದೊಳ್ ಎಸೆದಿರ್ಪಳ್

– ಜಯಲಕ್ಷ್ಮಿ, ಸರಸ್ವತಿ ಇಬ್ಬರಿಗೂ ವೀರಪಾಂಡ್ಯ ಆಶ್ರಯ ನೀಡಿದ್ದ

ಈ ವೀರಪಾಂಡ್ಯನ ದಂಡನಾಥ ಬಿದ್ದರಸ. ಪುಲಿಗೆರೆ ನಾಡನ್ನು ಆಳುತ್ತಿದ್ದವನು ಇವನು.

'ಎರಡಂ ನುಡಿಯದ, ಸಂಗರಧರೆಯೊಳ್ ಬೆಂಗುಡದ ಪರವಧೂ ಕೇಳಿಯನಾಚರಿಸದ' ವ್ಯಕ್ತಿ .. .. ..

– ಬೇರೆ ಬೇರೆ ಕಾಲದಲ್ಲಿ ತಾಮ್ರಪಟಗಳಲ್ಲಿದ್ದ ವಿಚಾರವನ್ನು ಒಂದೇ ಕಲ್ಲಿನ ಮೇಲೆ ಕೆತ್ತಿದ್ದಾರೆ. ಮೂರು ಭಾಗಗಳಲ್ಲೂ ಕವಿಗಳ ಹೆಸರನ್ನು ಉಲ್ಲೇಖಿಸಿಲ್ಲ.

೫. ಸೋಮೇಶ್ವರ ದೇವಾಲಯದ ಶಾಸನಗಳ ಸಾಲಿನಲ್ಲಿರುವ ಮತ್ತೊಂದು ಶಾಸನ ಕ್ರಿ.ಶ. ೧೦೮೧ರದ್ದು. ತ್ರಿಭುವನಮಲ್ಲ, ಆರನೆಯ ವಿಕ್ರಮಾದಿತ್ಯನ ಈ ಶಾಸನ ೪೬ ಸಾಲಿನವರೆಗೆ ಇದ್ದು ಅಪೂರ್ಣವಾಗಿದೆ. ಫಲಶ್ರುತಿ, ಕೃತಿಕಾರ, ಕಂಡರಣೆಕಾರರ ಭಾಗ ಕಾಣುತ್ತಿಲ್ಲ. ೧೫ ಕಂದಪದ್ಯಗಳು, ೧೮ ವೃತ್ತಗಳು ಒಂದು ಸಂಸ್ಕೃತ (ಶ್ರೀಮತ್ಪರಮ ಗಂಭೀರ) ಶ್ಲೋಕದಿಂದ ಕೂಡಿದ ಈ ಶಾಸನದ ಭಾಷೆ ಮನೋಹರವಾಗಿದೆ.

ತ್ರಿಭುವನಮಲ್ಲನ ತಮ್ಮ ವೀರನೊಳಂಬ ಪಲ್ಲವ ಪೆರ್ಮಾನಡಿ ಜಯಸಿಂಹನು– "ಪರಚಕ್ರ ಆಕಾಶಚಕ್ರಂ ನಳ ನಹುಷ ನೃಗಾದ್ಯಾದಿ ಭೂಪಾಳಕಾಳೀ ಚರಿತಂ ನತಾರಾತಿ ಭೂಮೀಶ್ವರ ಸಂಘಾತ ಉತ್ತಮಾಂಗ ಆಚರಣ ಮಣಿಗಣ ಜ್ಯೋತಿರ್ ಉತ್ತಂ ಸಭಾಸ್ವತ್ ಚರಣಂ' – ಆಗಿದ್ದ.

ಈ ಜಯಸಿಂಹನು ಮನೆವೆರ್ಗಡೆ ದಂಡನಾಯಕ ಎರೆಯಮಯ್ಯ. ಅವನು 'ರಿಪುಮಸ್ತಕನ್ಯಸ್ತಕಸಾಯಕಂ' ಸಾಹಿತ್ಯ ವಿದ್ಯಾಂಗನಾ ಭುಜಂಗಂ, ಸರಸ್ವತಿ ಮುಖಕಮಲ ಭೃಂಗಂ. . . ಸರಸ್ವತೀ ಕಂಠಾಭರಣಂ' ಆಗಿದ್ದ.

ಈ ಎರೆಗನ ತಮ್ಮ ದೋಣ

'ಕಲಿತನದೊಳ್ ಕುರುಕುಲ ಸಂಕುಲ ಮಥನನ ತಮ್ಮಂ ಅನುಪಮಾನಾಕೃತಿಯೊಳ್ ಬಲದೇವನ ತಮ್ಮಂ ಭುಜಬಲದೊಳ್ ಯಮಸುತನ ತಮ್ಮಂ" ಆಗಿದ್ದ. ಇವರ ಕಾಲದಲ್ಲಿದ್ದ ಜೈನಯತಿ ನರೇಂದ್ರಸೇನ ತ್ರೈವಿದ್ಯದೇವ. ಇವನಿಗೆ ಚಾಂದ್ರಂ, ಕಾತಂತ್ರಂ, ಜೈನೇಂದ್ರಂ, ಶಬ್ದಾನುಶಾಸನಂ, ಪಾಣಿನಿ, ಐಂದ್ರ – ಮೊದಲಾದ ವ್ಯಾಕರಣಗಳು 'ಏಕಾಕ್ಷರ' ಗಳಷ್ಟು ಕರಗತವಾಗಿದ್ದವು.

ಆತನ ಶಿಷ್ಯ	– ಪಂಡಿತನಾಗಿದ್ದ ನಯಸೇನ ಪಂಡಿತ
ಶಬ್ದಾನುಶಾಸನದಲ್ಲಿ	ಶಾಕಟಾಯನನಂತಿದ್ದ,
ಪಾಣಿನೀಯದಲ್ಲಿ	ಪಾಣಿನಿಯಂತಿದ್ದ
ಚಾಂದ್ರದಲ್ಲಿ	ಚಾಂದ್ರನಂತಿದ್ದ
ಜೈನೇಂದ್ರದಲ್ಲಿ	ಇಂದ್ರನಂತಿದ್ದ
ಕೌಮಾರದಲ್ಲಿ	ಕುಮಾರನಂತೆ ಪಂಡಿತನಾಗಿದ್ದ ಎಂಬುದನ್ನು ಕವಿ

ಚಮತ್ಕಾರದಿಂದ ಹೇಳಿದ್ದಾನೆ.

" 'ಸರಸತಿಯಂ ಮನೋ ಮುದದೆ ತಾಳ್ದಿದನ್, ಎನ್ನನ್ ಅವಜ್ಞೆಗೆಯ್ದನ್ ಆನ್ ಇರೆನ್ ಅವಳ್ ಇರ್ಕೆ ಚಿ: ಸವತಿಯೊಳ್ ಪುದುವಾಳ್ವುದು ಕಷ್ಟಂ' ಎಂದು ನಿಷ್ಠುರ ವಚನಂಗಳಂ ನುಡಿದು – ದಿಕ್ಕರಿಯಂ ಪರಿದೇರಿ ಕೀರ್ತಿ ತಾಂ ಮುರುಡಿಸಿ ದೂರಿಪಳ್ ವರ ತಪೋನಿಧಿಯಂ ನಯಸೇನಸೂರಿಯಂ"

ಮುಳುಗುಂದದ ಕ್ರಿ.ಶ. ೧೦೫೩ ರ ಶಾಸನದಲ್ಲಿ ಈ ನಯಸೇನ ಸೂರಿಯನ್ನು 'ಸಮಸ್ತ ಶಬ್ದಶಾಸ್ತ್ರ ಪಾರಗರ್' ಎಂದು ಹೊಗಳಿದೆ.

ಸಂಸ್ಕೃತ ಭಾಷೆಯಲ್ಲಿ "ಕರ್ಣಾಟಕ ಭಾಷಾಭೂಷಣ" ಎಂಬ ಕನ್ನಡ ವ್ಯಾಕರಣವನ್ನು ರಚಿಸಿರುವ ಎರಡನೆಯ ನಾಗವರ್ಮನೂ ಇದೇ ಕಾಲದವನೇ. 'ದೀರ್ಘೋಕ್ತಿರ್ ನಯಸೇನಸ್ಯ' ಎಂದು ಅವನು ಸೂಚಿಸಿರುವುದು ಈ ನಯಸೇನ ಸೂರಿಯನ್ನೇ ಇರಬೇಕು.

'ಧರ್ಮಾಮೃತ' ವನ್ನು ರಚಿಸಿದ ಮುಳುಗುಂದದ ನಯಸೇನ ಹಾಗು ನಯಸೇನ ಸೂರಿ – ಇಬ್ಬರೂ ಅಭಿನ್ನರು ಎಂದು ಹೇಳುವುದಕ್ಕೆ ಸಾಕ್ಷಿಗಳು ಸಾಕಾಗುವುದಿಲ್ಲ.

೬. ಸೋಮೇಶ್ವರ ದೇವಾಲಯದ ಶಾಸನಗಳ ಸಾಲಿನಲ್ಲಿರುವ ಇನ್ನೊಂದು ಕ್ರಿ.ಶ. ೧೧೮೨ರ ಶಾಸನದಲ್ಲಿ ೧೧ ಕಂದಪದ್ಯಗಳು, ೫ ವೃತ್ತಗಳು, ಒಂದು ಸಂಸ್ಕೃತ

ಪ್ರಾರ್ಥನಾ ಶ್ಲೋಕವಿದೆ. ಹೆಸರು ಹೇಳಿಕೊಳ್ಳದಿರುವ ಕವಿಯೊಬ್ಬನ ಸುಂದರ ರಚನೆಗಳು ಇಲ್ಲಿವೆ (ಸಂಸ್ಕೃತದಲ್ಲಿರುವ ಒಂದು ಶಾರ್ದೂಲ ವಿಕ್ರೀಡಿತವೂ ಇದೆ) (ಧರ್ಮ್ಮೇತದ ಶಾಸನ)

ವಾವಣ ನೃಪತಿ ಎಂಬ ದೊರೆಯನ್ನು ಹೊಗಳುವ ಪದ್ಯ ಇದು.

"ಶ್ರೀ ವಧುಗೆ ವಲ್ಲಭಂ ವಾಕ್‌ಶ್ರೀ ವಧು ನರ್ತನ ವಿಳಾಸ ಭವನಂ ಕೀರ್ತಿಶ್ರೀ ವಧು ಮನೋಭಿರಮಣಂ ವೈರಿಕುಲಯಮದಂಡಂ"

(ಕೋಡಿಮಠ ಶಾಸನದ 'ವದನಂ ವಾಣೀ ನರ್ತನ ಸದನಂ' ಎಂಬ ಮಾತನ್ನು ಇದು ನೆನಪಿಸುತ್ತದೆ)

ವಾವಣನ ತಳವಾರ ನಾಗವರ್ಮ. ಇವನನ್ನು ಶ್ಲೇಷೆಯಲ್ಲಿ ಹೊಗಳಿರುವ ರೀತಿ ಅಸಾಧ್ಯವಾಗಿದೆ.

"ಒಲ್ದು ಪತಿ ಪೇಳ್ದಡೆ ಹರಿಸುತ ನನ್ನನ್ ಆಗಂ ಪಿರಿದೀವ ದಾನದಿಂ ಹರಿಸುತ ನನ್ನನ್ ರಿಪುಸೇನೆಯನ್ ಅಳ್ಕುರೆ ತೂಳ್ದುವಲ್ಲಿಗಂ ಹರಿಸುತನನ್ನನ್ ಅಬ್ಜದಳನೇತ್ರೆಯರಂ ವಶವಾಗಿ ಮಾಡಲುಂ ಹರಿಸುತನನ್ನನ್" – ಎಂದು ಧಾರಿಣಿ ನಾಗವರ್ಮನಂ ಪೊಗಳ್ದಪುದು.

ಕಲಿವಿಟ್ಟ ಎಂಬುವವನನ್ನು ಕೀರ್ತಿಸುವ ಪದ್ಯ ರಚನೆ ಇದು.

"ಸುಜನಜನವನಜದಿನಕರ ಸುಜನಮನಃಪದ್ಮಿನೀ ಸರೋವರಹಂಸಂ
ಸುಜನಜನ ಚಿತ್ತನಿಳಯಂ, ಸುಜನಂ ಕಲಿವಿಟ್ಟ ಗೇತನ್"

೭ ಲಕ್ಷ್ಮೇಶ್ವರದ ಹಿರೇಬಣದ ಬೀರದೇವಾಲಯದ ಮುಂದೆ ಇದ್ದ ಕ್ರಿಶ. ೧೦೭೪ರ ಶಾಸನದಲ್ಲಿ ಸಂಸ್ಕೃತದ ೪ ಶ್ಲೋಕಗಳು, ೯ ಕಂದಪದ್ಯಗಳು, ೧ ವೃತ್ತ ಇದೆ.

ಜಯಕೇಶಿ ದೊರೆಯನ್ನು ಹೊಗಳುವ ಒಂದು ಕಂದಪದ್ಯ ಗಮನಾರ್ಹವಾಗಿದೆ.

"ಶ್ರೀ ರಮಣಿಗೆ ಸಮರಜಯ
ಶ್ರೀ ರಮಣಿಗೆ ತಾರಹಾರ ಶಶಿವಿಶದ ಯಶ
ಶ್ರೀ ರಮಣಿಗೆ ಸಕಳ ವಚ
ಶ್ರೀ ರಮಣಿಗೆ ರಮಣನಲ್ತೆ ಜಯಕೇಶಿ ನೃಪಂ"

೮. ಸೋಮೇಶ್ವರ ದೇವಾಲಯದ ಶಾಸನಗಳ ಸಾಲಿನಲ್ಲಿರುವ ಕ್ರಿಶ. ೧೧೦೨ ರ ಶಾಸನ ಕಲ್ಯಾಣದ ಚಾಲುಕ್ಯರ ಆರನೆಯ ವಿಕ್ರಮಾದಿತ್ಯನ ಕಾಲದ್ದು, ೪ ಸಂಸ್ಕೃತ ಶ್ಲೋಕಗಳು, ೩ ಕಂದಪದ್ಯಗಳು, ೩ ವೃತ್ತಗಳಿಂದ ಕೂಡಿದ ಈ ಶಾಸನದ

ಭಾಷೆ ಅಚ್ಚುಕಟ್ಟಾಗಿದೆ.

ಮಹಾಪ್ರಧಾನಿ ಮನೆವೆರ್ಗಡೆ ಭೀಮಣಯ್ಯನ ಕೈಕೆಳಗಿನ ಅಧಿಕಾರಿ ಮಾಧವ ದಂಡನಾಥ. ಅನೇಕ ಪ್ರಯೋಜನವಿಲ್ಲದ ಗುಣಹೀನರನ್ನು ಉತ್ತಮರಲ್ಲದವರನ್ನು ಸೃಷ್ಟಿಮಾಡಿದ ತಪ್ಪಿಗೆ, ಬ್ರಹ್ಮನು ಪ್ರಾಯಶ್ಚಿತ್ತ ರೂಪವಾಗಿ ಮನುಚರಿತನಾದ 'ಮಾಧವ' ನನ್ನು ಸೃಷ್ಟಿಮಾಡಿದನಂತೆ. ಇವನನ್ನು "ಕದನದೊಳ್ ಆಂತರಂ ತುಳಿದು ಕೊಲ್ವ ಎಡೆಯೊಳ್ ಲಯಕಾಲ ಕಾಲನ್ ಎಂಬುದು, ಬಡಪಟ್ಟು ಬೇಡಿದವರ್ಗೆ ಈವಡೆ ಜಂಗಮಕಲ್ಪವೃಕ್ಷಂ ಎಂಬುದು ಶರಣ್ ಎಂದು ಬಂದು ಎಳಸೆ ಕಾವ ಎಡೆಯೊಳ್ ದೃಢವಜ್ರಗೇಹಂ ಎಂಬುದು ಮನದಕ್ಕರಿಂ ವಿಬುಧಮಂಡಲಿ"

"ಬಹುಕಳಾವಿಜ್ಞಾನದೊಳ್ ಊರ್ಜಿತ ಯಶೋಲಕ್ಷ್ಮೀಧರಂ" ಆಗಿದ್ದ ಈ ಮಾಧವ.

೯. ಕ್ರಿ.ಶ. ೧೧೨೩ರ ಆರನೆಯ ತ್ರಿಭುವನಮಲ್ಲ ವಿಕ್ರಮಾದಿತ್ಯನ ಇನ್ನೊಂದು ಶಾಸನದಲ್ಲಿ (ಸೋಮೇಶ್ವರ ದೇವಾಲಯದ ಶಾಸನಗಳ ಸಾಲು) ೬ ಪದ್ಯಗಳಿವೆ.

೧೦. ಕ್ರಿ.ಶ. ೧೧೪೫ ರ ಶ್ರೀಮತಿ ಹನುಮಾಕ್ಷಿ ಗೋಗಿ ಅವರು ಪ್ರಕಟಿಸಿದ ಶಾಸನದಲ್ಲಿ (ಶಾಸನಗಳ ಸಾಲಿನಲ್ಲಿ ೬ ಪದ್ಯಗಳಿವೆ).

೧೧. ಹರಿಜನ ಕೇರಿಯಲ್ಲಿ ಬಿದ್ದಿರುವ ಕ್ರಿ.ಶ. ೧೧೬೬ರ ಶಾಸನದಲ್ಲಿ ೨೩ ಪದ್ಯಗಳಿವೆ (೩ ಸಂಸ್ಕೃತ ಶ್ಲೋಕಗಳು, ೧೦ ಕಂದ ಪದ್ಯಗಳು, ೧೦ ವೃತ್ತಗಳು).

ಶ್ರೀಧರ ದಂಡಾದಿಪನನ್ನು ಹೊಗಳುವ ಒಂದು ಪದ್ಯ. ಪುರಾಣ ಪ್ರತಿಮೆಗಳನ್ನು ಚೆನ್ನಾಗಿ ಬಳಸಿಕೊಂಡಿದೆ.

"ಚರಿತಂ ಗಾಂಗೇಯನೊಳ್ ಪಾಸಟಿ ಚತುರತೆ ವಾಕ್‌ಕಾಮಿನೀನಾಥನೊಳ್ ತಾಂ ಸರಿ ಗಾಂಭೀರ್ಯಂ ಪಯೋರಾಶಿಯೊಳ್ ಎಣೆ ನಿಜ ವಿಶ್ರಾಂತಂ ಇಂದ್ರಾರಿಯೊಳ್ ಪೋ ದೊರೆ ತನ್ನ ಒಂದು ಆರ್ಪು ವಿದ್ಯಾಧರ ಪತಿಯೊಳ್ ಅಣಂ ಪಾಸಟಿ – ಎಂದು ವಿಶ್ವಂಭರಯೆಲ್ಲಂ ಬಣ್ಣಿಕುಂ ಶ್ರೀಧರನನ್ ಅನುದಿನಂ ನಿರ್ಭರಾನಂದದಿಂದಂ"

೧೨. ಸೋಮೇಶ್ವರ ದೇವಾಲಯದ ಶಾಸನಗಳ ಸಾಲಿನಲ್ಲಿರುವ ಯಾದವ ದೊರೆ ಸಿಂಘಣನ ಶಾಸನದಲ್ಲಿ ೫ ಕಂದ ಪದ್ಯಗಳು, ೪ ಸುಂದರವಾದ ವೃತ್ತಗಳು ಇವೆ.

ಏಚಿದೇವ ಎಂಬುವನನ್ನು ಒಂದು ವೃತ್ತದಲ್ಲಿ ಹೀಗೆ ಹೊಗಳಿವೆ

"ಸಮಯಾಚಾರಕ್ಕೆ ಕೈಗನ್ನಡಿ ಸಕಳಕಳಾ ಪ್ರೌಢಿಗೆ ಆಯುಷ್ಯಂ ಇನ್ನು ಅನ್ಯ ಮತಕ್ಕೆ ಔರ್ವಾನಳಂ

ಭೌಕ್ತಿಕ ವನಕ್ಕೆ ವಸಂತಾಗಮಂ ಶಿಷ್ಟವರ್ಗಕ್ಕೆ ಅಮೃತಾಂಭೋವರ್ಷಣಂ ಮನ್ಮಥಪ್ರಭುವಿಭವಕ್ಕೆ ಅಂತಕಂ ಸೋಮನಾಥಕ್ರಮ ಪಂಕೇಜಕ್ಕೆ ಮತ್ತಂ ಭ್ರಮರಂ ಎನಿಸಿದಂ ಭಾವಿಪಂದು ಏಚಿದೇವಂ"

೧೩. ಲಕ್ಷ್ಮೇಶ್ವರದ ವೀರಭದ್ರದೇವಾಲಯದಲ್ಲಿರುವ ಕ್ರಿ.ಶ. ೧೫೧೩ರ ಶಾಸನ ತುಂಬಾ ತ್ರುಟಿತವಾಗಿದೆ. ಉಳಿದಿರುವ ಭಾಗದಲ್ಲಿ ರೇವಣಸಿದ್ಧನ ವಿಚಾರವನ್ನು ನಿರೂಪಿಸುವ ಮೂರು ವೃತ್ತಗಳು ಕಾಣುತ್ತವೆ. ಮರುಳಸಿದ್ಧನಾದ ಈ ರೇವಣಸಿದ್ಧನ ಶಿಷ್ಯರ ವಿಚಾರ ಹೇಳುವ ಪದ್ಯಗಳೆಲ್ಲಾ ಹಾಳಾಗಿವೆ.

೧೪. ಶ್ರೀಮತಿ ಹನುಮಾಕ್ಷಿ ಗೋಗಿ ಅವರು ಇತಿಹಾಸ ದರ್ಶನದಲ್ಲಿ ಪ್ರಕಟಪಡಿಸಿದ ಲಕ್ಷ್ಮೇಶ್ವರದ ಅಗಸ್ತ್ಯತೀರ್ಥದ ಶಾಸನ ಒಂದು ಪುಟ್ಟ ಚಂಪೂಕಾವ್ಯದಂತಿದೆ. ४೫ನೇ ಸಾಲಿನಿಂದ ತ್ರುಟಿತವಾಗಿ, ಶಾಸನರಚನಕಾರರ ಹೆಸರಿರಬಹುದಾದ ಭಾಗ ಹಾಳಾಗಿದೆ. ಉಳದಿರುವ ಭಾಗದಲ್ಲಿ ೩೯ ಪದ್ಯಗಳಿವೆ (೨ ಸಂಸ್ಕೃತ ಪ್ರಾರ್ಥನಾಶ್ಲೋಕ, ೨೦ ವೃತ್ತಗಳು, ೧೭ ಕಂದಪದ್ಯಗಳು)

ಕಲ್ಯಾಣದ ಚಾಲುಕ್ಯದೊರೆ ತ್ರಿಭುವನಮಲ್ಲ ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯ ಕಾಲದ ಈ ಶಾಸನ ದೊರೆಯ ಪ್ರಧಾನಿ, ಮನೆವೆರ್ಗಡೆ, ದಂಡನಾಥ ಈಶ್ವರದೇವನ ತಮ್ಮ ಸೋಮದೇವ ದಂಡಾಧಿಪನನ್ನು ಅತಿಶಯವಾಗಿ ಹೊಗಳುತ್ತದೆ.

"ಪ್ರಜೆಯಂ ಪಾಳಿಸಿ ಮಾನ್ಯರಂ ಮನದೆಗೊಂಡು ಆರ್ತ ಅರ್ಥಿಗಳ್ಗೆ ಇತ್ತು ಶಿ ಜನಕ್ಕೆ ಆಶ್ರಯಮಾಗಿ ನಿರ್ಮಳ ಯಶಶ್ರೀ ಲೀಲೆಯಂ ತಾಳ್ದು ಮಿಕ್ಕ ಜಯಶ್ರೀಯುಮನ ಆದಿ ರಾಜ ಚರಿತಕ್ಕಂ ಮಿಕ್ಕನ್ ಎಂದು ಅರ್ತಿಯಿಂದೆ ಜಗಂ ಬಣ್ಣಿಸೆ ಸೋವಿದೇವನೆಸೆದಂ ಗಂಭೀರ ನೀರಾಕರಂ"

ಪುಲಿಗೆರೆ ನಗರವನ್ನು ಅಲ್ಲಿನ ದೇವಾಲಯಗಳನ್ನು ಈ ಶಾಸನದಲ್ಲಿ ಹೊಗಳಿದೆ. ಪದ್ಯರಚನೆಯ ಶಿಸ್ತನ್ನು ಗಮನಿಸಿದರೆ, ಶಾಸನದ ಉಳಿದ ಭಾಗದಲ್ಲಿ ಕಳೆದುಹೋದವುಗಳ ಬಗ್ಗೆ ಬೇಸರವಾಗುತ್ತದೆ.

೧೫. ಸೋಮೇಶ್ವರ ದೇವಾಲಯದ, ಡಾ. ಪರಮಶಿವಮೂರ್ತಿಯವರು ಬೆಳಕಿಗೆ ತಂದ ಗೌರಲೆಯ ಭಾವಿಯ ಶಾಸನದಲ್ಲಿ ಗದ್ಯಭಾಗವೇ ಇಲ್ಲ. ४ ಕಂದ ಪದ್ಯಗಳು, ೩ ವೃತ್ತಗಳಿರುವ ಈ ಶಾಸನದ ಭಾಷೆ ಪ್ರೌಢವಾಗಿದೆ. ವಾರಾಂಗನೆಯೊಬ್ಬಳ ಪಾದಕಮಲಗಳನ್ನು ಸ್ಮರಿಸಿದರೆ 'ಆಗಳುಂ ಸೊಬಂ ಅಕ್ಕುಂ' – ಸದಾ ಶುಭವಾಗುತ್ತದೆ ಎಂಬ ರಚನೆ ಅಪೂರ್ವವಾಗಿದೆ.

'ಗಿರಿಜೆಯನ್ ಅರ್ಚಿಪ ಆದರಿಪ ಪೂಜಿಪ ದಂದುಗವೇಕ ನಾಡಪೆಂಡಿರಿಗೆ ಉಪದೇಶಮಂ ಕುಡುವೆನ್ ಒಂದನೆ ನಂಬುವುದು ಅಂಗನಾ ಮನೋಹರಿ ಎನಿಸಿರ್ದ ವಾರವಧೂಮಂಡನೆ ಗೌರಿಯ ಪಾದ ಪದ್ಮಮಂ ಕರಂ ಅನುರಾಗ, ಸಂಪದದೆ ನೋಡಲ್ ವಡಂ ಸೊಬಂ ಅಕ್ಕುಂ ಆಗಳುಂ"

ಗೌರಲೆಯನ್ನು ಹೊಗಳುವಾಗ ಶಾಸನದ ಕವಿ ಕೆಲವರನ್ನು ಉಲ್ಲೇಖಿಸುತ್ತಾನೆ-

"ಚಾರು ವಿಚಿತ್ರ ನರ್ತನಕೆ ಗೌರಿಯೊಳ್ ಆರ್ ಎಣೆ ರೂಢಿವೆತ್ತ ಮೈಳಾರದ ಬಾಚನುಂ ನೆಗರ್ದ ಚಕ್ರದ ಕಾಮನುಂ ಊರ್ವಸಿ ನಿಭಾಕಾರೆಯೆನಿಪ್ಪ ಕನ್ದರದ ಮಲ್ಲವೆಯುಂ ತ್ರಿಪುರಾಂತಕ ಅಂಘ್ರಿ ಪಂಕೇರುಹ ಸೇವನಾ ಚತುರೆ ಚಟ್ಟವೆಯುಂ ದೊರೆಯಲ್ಲ ಈಕೆಯೊಳ್"

೧೬. ಸೋಮೇಶ್ವರ ದೇವಾಲಯದ ಶಾಸನಗಳ ಸಾಲಿನಲ್ಲಿರುವ ಕ್ರಿ.ಶ. ೧೦೭೭-೭೮ ರ ಶಾಸನದ ಸಂಸ್ಕೃತ ಪದ್ಯಗಳ ಸೊಗಸನ್ನು ಇನ್ನೂ ಗಮನಿಸಬೇಕಾದ ಕೆಲಸ ಉಳಿದಿದೆ.

೧೭. ಸೋಮೇಶ್ವರ ದೇವಾಲಯದ ಶಾಸನಗಳ ಸಾಲಿನಲ್ಲಿರುವ ಕ್ರಿ.ಶ. ೧೨೪೭ರ ಯಾದವ ಸಿಂಘಣನ ಶಾಸನದ ಪದ್ಯಗಳೆಲ್ಲಾ ತ್ರುಟಿತವಾಗಿ ಹೋಗಿವೆ.

೧೮. ಸೋಮೇಶ್ವರ ದೇವಾಲಯದ ಶಾಸನಗಳ ಸಾಲಿನಲ್ಲಿರುವ ಕಲಚುರಿ ಬಿಜ್ಜಳನ ಶಾಸನವೊಂದರ ೧೨ ಸಾಲುಗಳಲ್ಲಿರುವ ಪದ್ಯಗಳನ್ನು ಬಿಟ್ಟು ಉಳಿದ ಪದ್ಯಗಳೆಲ್ಲಾ ತ್ರುಟಿತವಾಗಿವೆ.

೧೯. ಸೋಮೇಶ್ವರ ದೇವಾಲಯದ ಶಾಸನಗಳ ಸಾಲಿನಲ್ಲಿರುವ ಕಲ್ಯಾಣದ ಚಾಲುಕ್ಯರ ದೊರೆ ಭೂಲೋಕಮಲ್ಲ ಸೋಮೇಶ್ವರ (III) ನ ಕ್ರಿ.ಶ. ೧೧೩೮ರ ಶಾಸನದಲ್ಲಿ ೯ ಸಾಲಿನ ನಂತರದ ಪದ್ಯಗಳೆಲ್ಲಾ ತ್ರುಟಿತವಾಗಿವೆ.

೨೦. ಲಕ್ಷ್ಮೇಶ್ವರದ ಕ್ರಿ.ಶ. ೧೨ನೆಯ ಶತಮಾನದ ವೀರಗಲ್ಲೊಂದರಲ್ಲಿ ೪ ಸಾಲುಗಳಿವೆ. ಅದರಲ್ಲಿ ಮೊದಲೆರಡು ಪಾದಗಳಲ್ಲಿ ಹೊಂದಾಣಿಕೆಯಿಲ್ಲದ ಉತ್ಪಲಮಾಲಾ ವೃತ್ತ ಕಾಣುತ್ತದೆ.

೨೧. ಲಕ್ಷ್ಮೇಶ್ವರದ ಶಂಖ ಬಸದಿಯಲ್ಲಿರುವ ಗಂಗದೊರೆ ಮಾರಸಿಂಹನ ಕ್ರಿ.ಶ. ೯೬೮-೬೯ರ ಸಂಸ್ಕೃತ ಶಾಸನದಲ್ಲಿ ಅನೇಕ ಸಂಸ್ಕೃತ ವೃತ್ತಗಳಿವೆ. ಅವುಗಳ ಸಾಹಿತ್ಯಗುಣವನ್ನು ಗಮನಿಸಬೇಕಾಗಿದೆ.

೨೨. ಪುಲಿಗೆರೆಯ ಸಾಹಿತ್ಯ ಪರಿಸರ ಅಪಾರವಾಗಿತ್ತು: ಪುಲಿಗೆರೆಯ ಸಾಜದ ತಿರುಳ್ಗನ್ನಡದಲ್ಲಿ ಬರೆದ ಪಂಪ, ಎರಡಱುನೂರರ ಕನ್ನಡದಲ್ಲಿ ಬರೆದ ರನ್ನ, ಪಂಚತಂತ್ರವನ್ನು ರಚಿಸಿದ ಸೈಯಡಿಯ ದುರ್ಗಸಿಂಹ, ಧರ್ಮಾಮೃತದ ಕವಿ ಮುಳುಗುಂದದ ನಯಸೇನ, ಸೋಮೇಶ್ವರ ಶತಕವನ್ನು ರಚಿಸಿದ ಪುಲಿಗೆರೆಯ ಸೋಮ – ಇವರು ಇದ್ದ ನಾಡು ಪುಲಿಗೆರೆ ೩೦೦, ಬೆಳ್ವೊಲ ೩೦೦ ಮತ್ತು ಎರಡಱುನೂರು

೨೩. ಪುಲಿಗೆರೆಯ ಆದಯ್ಯ ವಚನಕಾರ. ಅವನ ಅಂಕಿತ– ಸೌರಾಷ್ಟ್ರ ಸೋಮೇಶ್ವರ ಪುಲಿಗೆರೆಯ ಸೋಮಣ್ಣ – ವಚನಕಾರ – ಅವನ ಅಂಕಿತ– ಹುಲಿಗೆರೆಯ ಸೋಮೇಶ್ವರ –ಅವನ ಸ್ವರ ವಚನಗಳಿವೆ:

೨೪. ಮಹಾಲಿಂಗದೇವ: ಕೃತಿಗಳು– ಏಕೋತ್ತರ ಶತಸ್ಥಳ, ಷಟ್‌ಸ್ಥಲ ಜ್ಞಾನ ಚಾರಿತ್ರ, ಅಭವ ಕಂದ– ೭೦೦ ಪದ್ಯಗಳು

೨೫. ಆಚಣ್ಣ ಕ್ರಿ.ಶ. ೧೧೯೫ – ವರ್ಧಮಾನ ಪುರಾಣ – ಚಂಪೂಕಾವ್ಯ ಶ್ರೀಪಾದಶೀತಿ – ಕಂದ ಪದ್ಯಗಳು

೨೬. ಸುರಂಗಕವಿ : ಕ್ರಿ.ಶ. ಸು ೧೫೦೦ ತ್ರಿಷಷ್ಠಿ ಪುರಾತನ ಚಾರಿತ್ರ್ಯ – ಚಂಪೂಕಾವ್ಯ

೨೭. ಸಿಂಹರಾಜ : ಕ್ರಿ.ಶ. ಸು ೧೬೫೦ ಹರದ ನೀತಿ

೨೮. ಅವ್ಯಕ್ತ ಕವಿ : ಶಂಖ ಜಿನೋದ್ಭವ ಕಾವ್ಯ

□□

ಗ್ರಂಥ ಸಂಪಾದನಾ ಕ್ಷೇತ್ರಕ್ಕೆ
ಜಿ. ವೆಂಕಟಸುಬ್ಬಯ್ಯ ನವರ ಕೊಡುಗೆ

ಡಾ. ಡಿ.ಕೆ. ಚಿತ್ತಯ್ಯ ಪೂಜಾರ್

❖

ಕನ್ನಡದಲ್ಲಿ ನಿಘಂಟುಶಾಸ್ತ್ರ ರಚನೆಗೆ ನಾಂದಿ ಹಾಡಿದ ಶ್ರೇಯಸ್ಸು ಕನ್ನಡದ ಹಿರಿಯ ವಿದ್ವಾಂಸರಾದ ಪ್ರೊ.ಜಿ.ವೆಂಕಟಸುಬ್ಬಯ್ಯನವರಿಗೆ ಸಲ್ಲುತ್ತದೆ. ತಮ್ಮ ಜೀವಿತಾವಧಿಯ ಗರಿಷ್ಠಸಮಯವನ್ನು ನಿಘಂಟು ಕ್ಷೇತ್ರಕ್ಕೆ ಮುಡಿಪಾಗಿಟ್ಟ ಈ ಹಿರಿಯ ಜೀವಿ ಆಧುನಿಕ ನಿಘಂಟು ಶಾಸ್ತ್ರಕ್ಕೆ ಆದ್ಯರು. ಹಾಗಾಗಿಯೇ ನಾಲ್ಕು ತಲೆಮಾರಿನ ಸರ್ವಶ್ರೇಷ್ಠ ವಿದ್ವಾಂಸರಲ್ಲಿ ಇವರೂ ಒಬ್ಬರೆಂದು ಹೇಳಬಹುದು. ಕನ್ನಡ, ಇಂಗ್ಲಿಷ್ ಮತ್ತು ಸಂಸ್ಕೃತಭಾಷೆ ಹಾಗೂ ಸಾಹಿತ್ಯಗಳಲ್ಲಿ ಅವರಿಗಿದ್ದ ನಿರ್ದಿಷ್ಟ ಮತ್ತು ಖಚಿತವಾದ ತಿಳಿವಳಿಕೆ ಹಾಗೂ ಪದಪದ್ಧತಿ ಎಂಬುದರಲ್ಲಿ ಎರಡು ಮಾತಿಲ್ಲ. ಅವರಿಗೆ ಪ್ರಾಚೀನ ಭಾಷಾಸಾಹಿತ್ಯದ ಅನುಸಂಧಾನ ಎಷ್ಟು ದೊಡ್ಡದೋ ಅರ್ವಾಚೀನ ಭಾಷಾಸಾಹಿತ್ಯದ ಅನುಸಂಧಾನವೂ ಅಷ್ಟೇ ದೊಡ್ಡದು ಎಂದು ಹೇಳಬಹುದು. ಅವರು ತಮ್ಮ ಜೀವಮಾನವಿಡೀ ಈ ಸಾಧನೆಗಾಗಿ ಪರಿಶ್ರಮಿಸಿದರೆಂಬುದುನ್ನು ಮರೆಯುವಂತಿಲ್ಲ. ಅವರಿಗಿದ್ದ ಅನ್ಯಭಾಷೆಯ ತಿಳಿವಳಿಕೆಯಿಂದ ಅಂದರೆ ಕನ್ನಡ, ಇಂಗ್ಲಿಷ್ ಮತ್ತು ಸಂಸ್ಕೃತ ಭಾಷಾ ಸಾಹಿತ್ಯದ ಓದು ಅವರ ನಿಘಂಟು ಕ್ಷೇತ್ರಕ್ಕೆ ಹೊಸತುಷ್ಟಿ ಮತ್ತು ಪುಷ್ಟಿಯನ್ನು ನೀಡಿದೆ. ಹಾಗೂ ದೇಶೀ ಭಾಷಿಕ ಅಧ್ಯಯನ ಮತ್ತು ಪದಕೋಶಗಳಿಗೆ ಹೊಸದಾರಿ ಮಾಡಿಕೊಟ್ಟಿವೆ.

೧. ನಿಘಂಟುಗಳು ಮತ್ತು ನಿಘಂಟು ಶಾಸ್ತ್ರಗ್ರಂಥಗಳು ಸೇರಿ ೧೯ ಕೃತಿಗಳು

೨. ಸಾಹಿತ್ಯ ವಿಮರ್ಶೆ, ಸಾಹಿತ್ಯ ಚರಿತ್ರೆಗೆ ಸಂಬಂಧಿಸಿದ ೨೭ ಕೃತಿಗಳು

೩. ಸಂಪಾದನೆ ಗ್ರಂಥಗಳು –೨೪, ಜೀವನಚರಿತ್ರೆ ಮತ್ತು ಸಾಧನೆ ಕೃತಿಗಳು ೭೮

೪. ಅನುವಾದ ಗ್ರಂಥಗಳು – ೮

೫. ಮಕ್ಕಳ ಪುಸ್ತಕ -೪

೬. ಗ್ರಂಥಸಂಪಾದನಾ ಕೃತಿಗಳು ೫... ಅವುಗಳೆಂದರೆ

೧. ಅಕ್ರೂರ ಚರಿತ್ರೆಯ ಸಂಗ್ರಹ

೨. ನಳಚಂಪು ಸಂಗ್ರಹ

೩. ಮುದ್ದಣ ಭಂಡಾರ. ಸಂಪುಟ-೧. ಸಂಪುಟ-೨

೪. ಮುದ್ದಣ್ಣ ಪದ ಪ್ರಯೋಗ ಕೋಶ

೫. ನಾಗರಸನ ಭಗವದ್ಗೀತೆ.

೧. ಅಕ್ರೂರ ಚರಿತ್ರೆಯ ಸಂಗ್ರಹ : ಸೋಮನಾಥ ಕವಿಯ 'ಅಕ್ರೂರಚರಿತ್ರೆ'ಯನ್ನು ಪ್ರೊ.ಜಿ.ವಿ. ಅವರು ೧೯೬೬ಕ್ಕೂ ಮೊದಲೇ ಸಂಗ್ರಹರೂಪದಲ್ಲಿ ಸಂಪಾದಿಸಿಕೊಟ್ಟಿದ್ದರು. ಅನಂತರ ಈ ಕೃತಿಯು ಬೆಂಗಳೂರು ವಿಶ್ವವಿದ್ಯಾಲಯದ ಪದವಿಪೂರ್ವ ತರಗತಿಗಳಿಗೆ ೧೯೬೬ರಲ್ಲಿ ಪಠ್ಯಪುಸ್ತಕವಾದುದರ ಫಲವಾಗಿ ೩ನೇ ಮುದ್ರಣವನ್ನು ಕಂಡಿತು. 'ಅಕ್ರೂರ ಚರಿತ್ರೆಯ' ಸಂಗ್ರಹದ ಸಂಪಾದನೆಗಾಗಿ ಜಿ.ವಿ.ಯವರು ಅಂದು ಮೈಸೂರು ವಿಶ್ವವಿದ್ಯಾಲಯದಲ್ಲಿದ್ದ 'ಪ್ರಾಚ್ಯ ವಿದ್ಯಾಕೋಶಾಗಾರದಲ್ಲಿದ್ದ' ಓಲೆಗರಿಯನ್ನು ಆಧಾರವಾಗಿ ಬಳಸಿಕೊಂಡಿದ್ದಾರೆ. ಈ ಗ್ರಂಥ ಮೂಲದಲ್ಲಿ ಸುಮಾರು ೫೦೦ ಭಾಮಿನಿ ಷಟ್ಪದಿಗಳ ಪದ್ಯಗಳಿಂದ ಕೂಡಿತ್ತು. ಜಿ.ವಿ.ಅವರು ಅದನ್ನು ೨೬೨ ಭಾಮಿನಿ ಷಟ್ಪದಿಗಳಲ್ಲಿ ಅಚ್ಚುಕಟ್ಟಾಗಿ ಸಂಗ್ರಹಿಸಿಕೊಟ್ಟಿದ್ದಾರೆ. ವಿಶೇಷವಾದ ಹಾಗೂ ಅತಿಯಾದ ವರ್ಣನೆಗಳನ್ನು ಬಿಟ್ಟು ಅದರ ಕಥಾಭಾಗವನ್ನು ಕೈಬಿಡದೆ ಹಾಗೂ ಅದಕ್ಕೆ ತೊಂದರೆಯಾಗದಂತೆ ಸಂಗ್ರಹಿಸಿ ಕೊಟ್ಟಿರುವುದು ಇದರ ವಿಶೇಷತೆ.

ಕವಿ ಸೋಮನಾಥನು ಭಕ್ತಿಪಂಥದ ಮೇಲ್ಮೆಯನ್ನು ಈ ಕಾವ್ಯದ ಮೂಲಕ ಪ್ರತಿಪಾದಿಸಿದ್ದಾನೆ. ಇದರಲ್ಲಿ ಅಕ್ರೂರ ಮತ್ತು ಕೃಷ್ಣರ ಸಮಾಗಮ, ಕಂಸವಧೆ, ಎರಡೂ ಪ್ರಸಂಗಗಳು ಕಾವ್ಯದ ವಸ್ತುಗಳು. ಇವು ಭಾಗವತಪುರಾಣದಲ್ಲಿ ಬರುತ್ತವೆ. ಆದರೆ ಜಿ.ವಿ.ಯವರು ವಿದ್ಯಾರ್ಥಿಗಳನ್ನು ಗಮನದಲ್ಲಿರಿಸಿಕೊಂಡು ಈ ಸಂಗ್ರಹದಲ್ಲಿ ಕವಿ,ಕಾವ್ಯ ಮತ್ತು ಹಲವಾರು ಆನುಷಂಗಿಕ ವಿಷಯಗಳನ್ನು ಸರಳವಾಗಿಯೂ, ತಿಳಿಯಾಗಿಯೂ, ವೈಚಾರಿಕವಾಗಿಯೂ ಮೂಲ ಆಶಯಕ್ಕೆ ಧಕ್ಕೆ ಬರದಂತೆ ವಿವರಿಸಿಕೊಟ್ಟಿದ್ದಾರೆ.

ಈ ಕವಿಯು ದೇಶಕಾಲಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ನೀಡಿಲ್ಲದ್ದರಿಂದ ಜಿ.ವಿ. ಅವರು ಆರ್.ನರಸಿಂಹಚಾರ್ಯರು ಗುರುತಿಸಿದ ಕ್ರಿ.ಶ.೧೬೦೦ರ್ನೇ ಒಪ್ಪಿ ಮುಂದೆ ಸಾಗುತ್ತಾರೆ. ಸೋಮನಾಥನು ಬ್ರಾಹ್ಮಣನಾಗಿದ್ದು ಭಾಗವತ ಅನುಯಾಯಿಯಾಗಿರುತ್ತಾನೆ

ಎಂಬುದುನ್ನು ಊಹಿಸುತ್ತಾರೆ. (ಭಾಗವತ ಮತದ ಬಗ್ಗೆ ಪೀಠಿಕೆಯಲ್ಲಿ ಸೋಮನಾಥನೇ ಹೇಳಿಕೊಂಡಿದ್ದಾನೆ.)

'ಅಕ್ರೂರ ಚರಿತ್ರೆಯು' ಪುರಾಣಾಧಾರಿತವಾದುದರಿಂದ ಜಿ.ವಿ.ಅವರು "ಭಾರತದ ಪುರಾಣಗಳು" ಅವುಗಳ ಮಹತ್ವ ಎಂಬ ಶೀರ್ಷಿಕೆಯಲ್ಲಿ ಸಂಕ್ಷಿಪ್ತವಾಗಿ ಅದರ ಮಹತ್ವ ತಿಳಿಸಿ ಕೊಟ್ಟಿದ್ದಾರೆ. ಹಾಗೆಯೇ ಪುರಾಣವನ್ನು ಕುರಿತಾದ ದೇಶೀಯ ಹಾಗೂ ವಿದೇಶೀಯ ವಿದ್ವಾಂಸರ ನಿಲುವುಗಳನ್ನು ಗುರ್ತಿಸಿ ತಿಳಿಸಿರುವುದರ ಮೂಲಕ 'ಅಕ್ರೂರ ಚರಿತ್ರೆ'ಯ ಮಹತ್ವವನ್ನು ಅದನ್ನು ಅರ್ಥ ಮಾಡಿಕೊಳ್ಳಲು ಸೂಚನೆಯನ್ನು ನೀಡಿ ಸಹಕರಿಸಿದ್ದಾರೆ. ಇದನ್ನು ಮಹಾಕಾವ್ಯವೆಂದು ಒಪ್ಪದ ಜಿ.ವಿ. ಅವರು ಸೋಮನಾಥನೊಬ್ಬ ಒಳ್ಳೆಯ ಪಂಡಿತನೆಂಬುದರಲ್ಲಿ ಅನುಮಾನವಿಲ್ಲ ಎನ್ನುತ್ತಾರೆ. ಈ ಕೃತಿಯ ಮೇಲೆ ಕುಮಾರವ್ಯಾಸನ ಪ್ರಭಾವ ದಟ್ಟವಾಗಿರುವುದನ್ನು ಗುರ್ತಿಸಿ ಅದರ ಜೊತೆಗೆ 'ನಿತ್ಯಾತ್ಮ ಶುಕಯೋಗಿ' ಕವಿಯ ಭಾಗವತದ ಪ್ರಭಾವವು ಇದ್ದು ಕವಿ ಅವನನ್ನು ನೆನೆಸಿಕೊಂಡಿಲ್ಲ ಏಕೆ ಎಂದು ಪ್ರಶ್ನೆ ಎತ್ತುತ್ತಾರೆ. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಕಾವ್ಯದ ಕಥಾನುಕ್ರಮಣಿಕೆ, ಕವಿಯ ಸಾಮಾನ್ಯ ಪಾತ್ರಗಳ ವ್ಯಕ್ತಿಚಿತ್ರ, ಪೂರ್ವಕತೆಗಳ ಬಗೆಗೆ ಟಿಪ್ಪಣಿಗಳನ್ನು ನೀಡಿ ಗ್ರಂಥಸಂಪಾದಕನ ಜವಾಬ್ದಾರಿಯನ್ನು ಇನ್ನಷ್ಟು ವಿಸ್ತರಿಸಿದ್ದಾರೆ.

ಇವೆಲ್ಲ ಸುಳ್ಳು ಕಥೆಗಳು ಅಥವಾ ಸತ್ಯಸಂಗತಿಗಳಲ್ಲದಿದ್ದರೂ ಪುರಾಣವನ್ನು ಹೇಗೆ ಗ್ರಹಿಸಬೇಕು ಎಂಬುದನ್ನು ವಿವರಿಸುತ್ತಾರೆ. 'ಅಕ್ರೂರ ಚರಿತ್ರೆ'ಯಲ್ಲಿ ಭಕ್ತರ ಮೇಲ್ಮೆಯನ್ನು ತಿಳಿಸುವುದು ಕವಿಯ ಆಶಯವಾಗಿರುವುದರಿಂದ ಇಲ್ಲಿನ ಪಾತ್ರಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಿಕೊಂಡು ಪರಿಶೀಲಿಸಬಹುದು. ಅಂದರೆ ಈ ಕಾವ್ಯದಲ್ಲಿ ಬರುವ ಅಕ್ರೂರ, ಕುಬ್ಜೆ, ಸುಧಾಮ, ಉಗ್ರಸೇನ, ಕೃಷ್ಣನ ಪ್ರೀತಿಗೆ ಪಾತ್ರರಾಗಿದ್ದಾರೆ. ಉಳಿದಂತೆ ರಜಕ, ಕಂಸಾದಿ ರಕ್ಕಸರು, ಕೃಷ್ಣನ ಕೋಪಕ್ಕೆ ಒಳಗಾಗುವ ಪಾಪಿಗಳಾಗಿ ಕಂಡುಬರುತ್ತಾರೆ. ಒಟ್ಟಾರೆ ಕೃಷ್ಣ ಭಕ್ತರ ಪರಾಧೀನ ಎಂಬುದು ಇಲ್ಲಿ ಮುಖ್ಯವಾಗಿ ಗಮನಿಸುವಂತದ್ದು. ಸೋಮನಾಥನ ಈ ಕಾವ್ಯಕ್ಕೆ ಸಿಗಬೇಕಾದಷ್ಟು ಮನ್ನಣೆ ಸಿಕ್ಕಿಲ್ಲ ಎಂದು ಜಿ.ವಿ. ಅವರು ಅಭಿಪ್ರಾಯ ಪಡುತ್ತಾರೆ. ಜಿ.ವಿ. ಅವರಿಗೆ ಈ ಕಾವ್ಯ ಬಹಳ ಇಷ್ಟವಾದುದಾಗಿದೆ. ಆದ್ದರಿಂದಲೇ ಚಿಕ್ಕ ಚಿಕ್ಕ ಅಧ್ಯಾಯಗಳನ್ನೊಳಗೊಂಡ ಸುಮಾರು ೧೧೫ ಪುಟಗಳಿರುವ ಈ ಕೃತಿಗೆ ಅವರು ೩೧ ಪುಟಗಳಷ್ಟು ಪ್ರಸ್ತಾವನೆಯನ್ನು ಬರೆದು ತೃಪ್ತಿಪಟ್ಟುಕೊಳ್ಳುತ್ತಾರೆ. ಕೊನೆಯ ಅಧ್ಯಾಯದಲ್ಲಿ ಕ್ಲಿಷ್ಟ ಪದಗಳಿಗೆ ಅರ್ಥಕೋಶ ನೀಡಿದ್ದಾರೆ. ಅಧ್ಯಾಯಗಳಿಗೆ ಶೀರ್ಷಿಕೆಯನ್ನು ಪದ್ಯಗಳ ತುಣುಕುಗಳಿಂದಲೇ ಆರಿಸಿಕೊಂಡು ನೀಡಿದ್ದಾರೆ.

೨. ಚೌಂಡರಾಜನ ನಳಚಂಪು ಸಂಗ್ರಹ: ಚೌಂಡರಾಜ ಅಥವಾ ಚೌಂಡರಸ ಕನ್ನಡದ ಚಂಪೂ ಪರಂಪರೆಯ ಕೊನೆಯ ಕವಿಗಳಲ್ಲಿ ಒಬ್ಬ. ಇವನು 'ಬಾಣಾಸುರ ವಿಜಯ' 'ನಳಚರಿತ್ರೆ' ಹಾಗೂ 'ದಶಕುಮಾರ ಚರಿತ್ರೆ' ಎಂಬ ಮೂರು ಕಾವ್ಯಗಳನ್ನು ಬರೆದಂತೆ ಅವನೇ ದಶಕುಮಾರ ಚರಿತ್ರೆಯಲ್ಲಿ ಹೇಳಿಕೊಂಡಿದ್ದಾನೆ. 'ಬಾಣಾಸುರ ವಿಜಯ' ಉಪಲಬ್ಧವಿಲ್ಲ. ಉಳಿದಂತೆ ನಳಚರಿತ್ರೆ (ನಳಚಂಪು) ಒಂದು ಪ್ರೇಮಕತೆಯನ್ನು ಒಳಗೊಂಡಿದ್ದರೆ, ದಶಕುಮಾರ ಚರಿತ್ರೆ ಒಂದು ಅದ್ಭುತ ರಮ್ಯ ಕಥಾನಕವಾಗಿದೆ. ಇವನಿಗೆ 'ಕರ್ನಾಟಕ ಶೃಂಗಾರರಸು' ಎನ್ನುವ ಬಿರುದು ಇದ್ದಂತೆ ಕಂಡುಬರುತ್ತದೆ.

ಜಿ.ವಿ.ಅವರಿಗಿಂತ ಮೊದಲೇ ಎಚ್.ಆರ್.ರಂಗಸ್ವಾಮಿ ಅಯ್ಯಂಗಾರ್ ಚೌಂಡರಾಜನ 'ನಳಚಂಪು'ವನ್ನು ಸಂಪಾದಿಸಿದ್ದು, ಅವರೇ ಮೊದಲಿಗರು. ತದನಂತರ ೧೯೬೬ರಲ್ಲಿ ಜಿ.ವಿ. ಮತ್ತು ಮ.ಸು.ಕೃಷ್ಣಮೂರ್ತಿಯವರು ಈ ಕಾವ್ಯವನ್ನು ಸಂಗ್ರಹಿಸಿ ಸಂಪಾದಿಸಿ ಕೊಟ್ಟಿದ್ದಾರೆ. ಇದೊಂದು ಉತ್ತಮ ಸಂಪಾದನಾ ಸಂಗ್ರಹ ಎನ್ನುವುದರಲ್ಲಿ ಎರಡು ಮಾತಿಲ್ಲ.ಒಂದು ಕಾವ್ಯವನ್ನು ಸಂಪಾದಿಸುವುದು ಸುಲಭದ ಕಾರ್ಯವಲ್ಲ ಅದರಲ್ಲೂ ಅದನ್ನು ಸಂಗ್ರಹಿಸುವುದು ಸಂಪಾದನೆಗಿಂತಲೂ ಕ್ಲಿಷ್ಟಕರವಾದ ಕಾರ್ಯ. 'ನಳಚಂಪು ಸಂಗ್ರಹ' ಒಟ್ಟು ಎಪ್ಪತ್ತು ಪುಟಗಳ ಕಿರುಕಾವ್ಯ ಮೂಲದಲ್ಲಿ ವಿಸ್ತಾರವಾದುದಾದರೂ ಸಂಗ್ರಹದಲ್ಲಿ ಕಥೆಯ ಸ್ವಾರಸ್ಯ ಕೆಡದ ರೀತಿಯಲ್ಲಿ ಸಂಪಾದನೆ ಮಾಡಿರುವುದು ಗಮನಾರ್ಹ ವಿಷಯ. ಕಥೆಯ ಹಂದರ, ಭಾವ, ರಸ ಮೊದಲಾದವುಗಳಿಗೆ ಧಕ್ಕೆ ಬಾರದ ರೀತಿಯಲ್ಲಿ ಸಂಗ್ರಹಿಸುವುದು ಸಾಹಸದ ಕೆಲಸವೇ ಸರಿ. ಈ ನಿಟ್ಟಿನಲ್ಲಿ ಈ ಕಾವ್ಯ ಸಂಗ್ರಹದ ಸಂಪಾದಕರು ಯಶಸ್ವಿಯಾಗಿದ್ದಾರೆ.

ಸುಮಾರು ೭೮ ಪುಟಗಳ ಈ ಸಂಗ್ರಹ ಕಾವ್ಯಕ್ಕೆ ೧೧೨ ಪುಟಗಳ ವಿಸ್ತೃತ ಹಾಗೂ ವಿವರವಾದ ಪೂರ್ವ ಪೀಠಿಕೆಯನ್ನು, ಕವಿ ಪರಿಚಯ ಹಾಗೂ ಕಾವ್ಯವಿಮರ್ಶೆಯನ್ನು ನೀಡಿರುವುದು ಈ ಕೃತಿಯ ಸಂಪಾದಕರ ವಿಶೇಷತೆ. ಇದೊಂದು ಪ್ರೇಮಕಾವ್ಯವಾಗಿರುವುದರಿಂದ ಇದಕ್ಕೆ ಪೂರಕವಾಗಿ ಭಾರತೀಯ ಭಾಷೆಗಳಲ್ಲಿ ರಚನೆಯಾದ ಪ್ರೇಮಾಖ್ಯಾನಗಳ ಇತಿಹಾಸ, ಅವುಗಳ ಮಹತ್ವ, ಕುರಿತ ವಿವರಣೆಗಳು ಭಾರತೀಯ ಭಾಷೆಗಳಲ್ಲಿರುವ ಪ್ರೇಮಾಖ್ಯಾನ ಪರಂಪರೆಯ ಹಿನ್ನೆಲೆಯಲ್ಲಿ ನಳಚರಿತ್ರೆಯನ್ನು ಪರಿಶೀಲಿಸಲು ಸಾಧ್ಯವಾಗುತ್ತದೆ. ಕನ್ನಡಕಾವ್ಯಸಂಪಾದನೆಯಲ್ಲಿ ಇದೊಂದು ಹೊಸ ಹಾಗೂ ಶ್ಲಾಘನೀಯ ಪ್ರಯತ್ನ. ಇದರಿಂದ ಬೇರೆಬೇರೆ ಪ್ರೇಮಕಾವ್ಯಗಳಲ್ಲಿಯ ಸಾದೃಶ್ಯ ಮತ್ತು ವೈದೃಶ್ಯಗಳನ್ನು ಅರಿತುಕೊಳ್ಳಲು ಸಾಧ್ಯವಾಗಿದೆ. ಈ ಗ್ರಂಥದಲ್ಲಿ ಕಾವ್ಯಕ್ಕಿಂತಲೂ ಪೂರ್ವಪೀಠಿಕೆಯೇ ದೀರ್ಘವಾಗಿದ್ದರೂ ಅಪೇಕ್ಷಣೀಯವಾದುದೇ ಆಗಿದೆ. ಕಾವ್ಯಾಧ್ಯಯನ ಹಾಗೂ ಕಾವ್ಯಾಸ್ವಾದನಕ್ಕೆ ಇದೊಂದು ಉತ್ತಮ ಮಾರ್ಗದರ್ಶಿಯಾಗಿದೆ. ಇದು

ಪ್ರೇಮಕಥೆಯಾಗಿರುವುದರಿಂದ ಇದರ ಆಸ್ವಾದನೆಗೆ ಇದು ಪೂರಕವಾಗಿಯೇ ಇದೆ ಎನ್ನಬಹುದು.

'ನಳಚಂಪು ಸಂಗ್ರಹ'ಕ್ಕೆ ಸಂಪಾದಕರು ನೀಡಿರುವ ಪೂರ್ವಪೀಠಿಕೆಯಿಂದ ಭಾರತೀಯ ಪರಂಪರೆಯಲ್ಲಿ ಪ್ರೇಮಾಖ್ಯಾನಗಳಿಗೆ ಸಂದ ಮಹತ್ವ ತಿಳಿದುಬರುತ್ತದೆ. ಭಾರತೀಯ ವಾಙ್ಮಯಗಳಾದ ವೇದ, ಉಪನಿಷತ್ತುಗಳಲ್ಲಿ ಉಲ್ಲೇಖ ಗೊಂಡಿರುವ ಪ್ರೇಮಾಖ್ಯಾನಗಳು ರಾಮಾಯಣ, ಮಹಾಭಾರತಗಳಲ್ಲಿ ಉಲ್ಲೇಖವಾಗಿರುವ ಪ್ರೇಮಾಖ್ಯಾನಗಳು ಮೊದಲಾದವುಗಳ ಸಂಕ್ಷಿಪ್ತ ಪರಿಚಯವನ್ನು ಇಲ್ಲಿ ತಿಳಿಸಿಕೊಡಲಾಗಿದೆ.

ಋಗ್ವೇದದಲ್ಲಿ ಮೊದಲಿಗೆ ಕಂಡುಬರುವ ಪ್ರೇಮಾಖ್ಯಾನಗಳು ತದನಂತರದಲ್ಲಿ ಬ್ರಾಹ್ಮಣ್ಯಗಳಲ್ಲಿ ಆನಂತರ ಉಪನಿಷತ್ತುಗಳಲ್ಲಿ ಅದಾದ ನಂತರ ಭಾಗವತ ಮತ್ತು ಮಹಾಭಾರತಗಳಲ್ಲಿ ನಿರಂತರವಾಗಿ ಬೆಳೆದುಕೊಂಡು ಬಂದಿರುವುದನ್ನು ಬಹಳ ದೀರ್ಘವಾಗಿ ಕಟ್ಟಿಕೊಡುತ್ತಾರೆ. ಈ ದೀರ್ಘವಾದ ವಿವರಗಳು ಮುಂದೆ ಮಹಾಭಾರತದಲ್ಲಿ ಬರುವ ನಳದಮಯಂತಿಯರ ಪ್ರೇಮಾಖ್ಯಾನಕ್ಕೆ ಪೂರ್ವ ಪೀಠಿಕೆಯನ್ನು ಒದಗಿಸುತ್ತದೆ.

ಪೂರ್ವಪೀಠಿಕೆಯ ವಿಶೇಷಗಳು : ೧. ಭಾರತೀಯ ಭಾಷೆಗಳಲ್ಲಿನ ವೈವಿಧ್ಯಮಯ ಪ್ರೇಮಾಖ್ಯಾನಗಳು, ಸಂಸ್ಕೃತ, ಪ್ರಾಕೃತ, ಅಪಭ್ರಂಶ ಮೊದಲಾದ ಭಾಷೆಗಳಲ್ಲಿನ ಪ್ರೇಮಕಥೆಗಳ ವೈವಿಧ್ಯ ಹಾಗೂ ಅವುಗಳ ಪ್ರಾಚೀನತೆ ತಿಳಿಯಲು ಅನುಕೂಲವಾಗುತ್ತದೆ. ಸಂಪಾದಕರು ಭಾರತೀಯ ಸಾಹಿತ್ಯ ಪರಂಪರೆಗಳಲ್ಲಿನ ೪೨ ಪ್ರೇಮಾಖ್ಯಾನಗಳನ್ನು ಇಲ್ಲಿ ಹೆಸರಿಸಿದ್ದಾರೆ. ಇವುಗಳಿಂದ ಪ್ರೇಮಕಥನಗಳ ವ್ಯಾಪ್ತಿ, ಮಹತ್ವ ಅರಿವಿಗೆ ಬರುತ್ತದೆ.

೨. ಹಿಂದೂ, ಜೈನ, ಬೌದ್ಧಧರ್ಮೀಯ ಆಖ್ಯಾನಗಳು : ಇಲ್ಲಿ ಧಾರ್ಮಿಕ ನಂಬಿಕೆ, ಸಂಪ್ರದಾಯ, ಸಂಸ್ಕೃತಿ, ಅವುಗಳಲ್ಲಿ ಕಂಡುಬರುವ ವೈವಿಧ್ಯತೆ, ಹೊಸತನ ಇತ್ಯಾದಿಗಳಿಗೆ ಪೂರ್ವಪೀಠಿಕೆ ನೆರವಾಗಿ ಮೂಡಿಬಂದಿದೆ. ೩. ಪಾಶ್ಚಾತ್ಯ ಯೂರೋಪ್, ಮೊದಲಾದ ದೇಶಗಳಲ್ಲಿನ (೧೧ನೇ ಶತಮಾನಗಳ ನಂತರ) ಪ್ರೇಮಕಥನಗಳನ್ನು ಕಾಣಬಹುದು. ೪. ಪ್ರೇಮಾಖ್ಯಾನಗಳ ಸ್ವರೂಪ, ಲಕ್ಷಣಗಳು, ಕಥಾವಸ್ತು ಸಂಕೇತಗಳು ಮೊದಲಾದವುಗಳ ಬಗ್ಗೆ ದೀರ್ಘವಾಗಿ ವಿವರಿಸಿದ್ದಾರೆ. ೫. ಕನ್ನಡ ಪ್ರೇಮಾಖ್ಯಾನಗಳ ಪರಿಚಯ, ಸಾಕಷ್ಟು ದೀರ್ಘವಾಗಿ ನೀಡಿದ್ದಾರೆ.

ಕನ್ನಡ ಕಾವ್ಯ ಪರಂಪರೆಯಲ್ಲಿ ಪ್ರೇಮಾಖ್ಯಾನಗಳ ಸ್ಥಾನಮಾನಗಳು. ಸಂಸ್ಕೃತ, ಪ್ರಾಕೃತ, ಭಾಷಾಸಾಹಿತ್ಯದ ಪ್ರಭಾವ, ಜನಪದ ಕಥಾನಕಗಳು ಕಾಲಕ್ರಮೇಣ ಶಿಷ್ಟರೂಪಗಳನ್ನು ಪಡೆದ ರೀತಿ, ಸ್ವತಂತ್ರ್ಯ ಹಾಗೂ ಪ್ರಾಸಂಗಿಕ ಆಖ್ಯಾನಗಳು, ವೈಶಿಷ್ಟ್ಯಪೂರ್ಣವಾಗಿ ಮೂಡಿಬಂದಿದ್ದು ಓದುಗರಿಗೆ ಕಾವ್ಯವನ್ನು ಅರ್ಥಮಾಡಿಕೊಳ್ಳಲು

ಅನುಕೂಲಕರವಾಗಿವೆ. ಹಾಗಾಗಿಯೇ ಈ ಕೃತಿಯಲ್ಲಿನ ಪೂರ್ವಪೀಠಿಕೆಯು ಸಂಶೋಧಕರಿಗೆ ಮುಖಿಜಭೂಮಿಯಂತೆ ಕಂಡುಬರುತ್ತದೆ. ಚೌಂಡರಸನ ನಂತರ ಕನಕದಾಸ ಪೂರ್ವಕವಿಗಳ ಪ್ರಭಾವ, ಪ್ರೇರಣೆ, ಆಕರಗಳು, ಕಥಾವಸ್ತುವಿನ ಬದಲಾವಣೆ ಕಾವ್ಯಸ್ವಾಧನೆಗೆ ರಸಾನುಭವಕ್ಕೆ ಧಕ್ಕೆಯಾಗದ ರೀತಿಯಲ್ಲಿ ನೀರಸವೆನಿಸುವ ಭಾಗವನ್ನು ಕಥೆಯ ಓಟಕ್ಕೆ ಧಕ್ಕೆಯಿಲ್ಲದಂತೆ ಕೊನೆಯಲ್ಲಿ ಪದ್ಯಗಳ ಆಕರಾದಿ ಹಾಗೂ ಕಠಿಣಪದಗಳ ಅರ್ಥ ಕೊಡುವುದನ್ನು ಕೈಬಿಟ್ಟಿದ್ದಾರೆ.

ಮುದ್ದಣ ಭಂಡಾರ – ಸಂಪುಟ–೧, ಸಂಪುಟ–೨ ಮುದ್ದಣ್ಣನು ೧೯ನೇ ಶತಮಾನದ ಕೊನೆಯಲ್ಲಿ ಹೊಸಗನ್ನಡದ ಮುಂಬೆಳಕಾಗಿ ಮೂಡಿಬಂದ ಕವಿ. ಈತ ಒಟ್ಟು ಐದು ಕೃತಿಗಳನ್ನು ಬರೆದಿದ್ದಾನೆ. ಅವುಗಳಲ್ಲಿ 'ರತ್ನಾವತಿ ಕಲ್ಯಾಣ', ಮತ್ತು 'ಕುಮಾರವಿಜಯ' ಇವೆರಡೂ ಯಕ್ಷಗಾನ ಕೃತಿಗಳು. ಶ್ರೀರಾಮಪಟ್ಟಾಭಿಷೇಕಂ ಷಟ್ಪದಿಕಾವ್ಯ ಹಾಗೂ ಉಳಿದ ಕೃತಿಗಳಾದ 'ರಾಮಾಶ್ವಮೇಧಂ' ಮತ್ತು 'ಅದ್ಭುತರಾಮಾಯಣಂ' ಇವೆರಡೂ ಗದ್ಯ ಕೃತಿಗಳು ಎಂದು ಕಂಡುಬಂದಿವೆ. ಜಿ.ವಿ.ಅವರು ಈ ೫ ಕೃತಿಗಳನ್ನು ಎರಡು ಭಾಗಗಳಾಗಿ ಮುದ್ದಣ ಭಂಡಾರ ಭಾಗ–೧, ಭಾಗ–೨ ಎಂಬ ಹೆಸರಿನಲ್ಲಿ ಸಂಪಾದಿಸಿ ಕೊಟ್ಟಿದ್ದಾರೆ. ಈ ಸಂಪುಟಗಳನ್ನು ೧೯೮೭ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಟಿಸಿದೆ. ಮುದ್ದಣನ ಕೃತಿಗಳು ಓದುಗರಿಗೆ ದೊರಕದೆಇದ್ದ ಕಾಲದಲ್ಲಿ ಜಿ.ವಿ.ಅವರ ಈ ಪ್ರಯತ್ನ ಶ್ಲಾಘನೀಯವಾದುದಾಗಿದೆ.

ಈ ಎರಡೂ ಸಂಪುಟಗಳಲ್ಲಿ ಸೂಕ್ತವಾದ ಪ್ರಸ್ತಾವನೆ, ಗದ್ಯಾನುವಾದ, ಕೊನೆಯಲ್ಲಿ ಕಠಿಣ ಪದಗಳ ಅರ್ಥಕೋಶ ಕೊಟ್ಟಿರುವುದು ತುಂಬಾ ಉಪಕಾರಿಯಾಗಿದೆ. ಸಂಪುಟ–೧ರಲ್ಲಿ, ಎರಡು ಯಕ್ಷಗಾನ ಕೃತಿಗಳಾದ ರತ್ನಾವತಿ ಕಲ್ಯಾಣ, ಕುಮಾರವಿಜಯ ಹಾಗೂ ಶ್ರೀರಾಮ ಪಟ್ಟಾಭಿಷೇಕಂ ಕಾವ್ಯ. ಸಂಪುಟ–೨ರಲ್ಲಿ ರಾಮಾಶ್ವಮೇಧಂ ಮತ್ತು ಅದ್ಭುತರಾಮಾಯಣ ಗದ್ಯಕಾವ್ಯ ಹಾಗೂ ಜೋಜೋ ಎನ್ನುವ ಲೇಖನಗಳನ್ನು ಸಂಪಾದಿಸಿ ಕೊಟ್ಟಿದ್ದಾರೆ. ಸಂಪುಟ ಒಂದರಲ್ಲಿ ಅಂದರೆ ರತ್ನಾವತೀ ಕಲ್ಯಾಣ ಮತ್ತು ಕುಮಾರವಿಜಯ ಎಂಬ ಯಕ್ಷಗಾನ ಕೃತಿಗಳನ್ನು ಸಂಪಾದನೆ ಮಾಡುವಾಗ ಜಿ.ವಿ.ಅವರ ಮುಂದೆ ಇದ್ದ ಸವ್ಾಲು ದೊಡ್ಡದು. ಕಾರಣ ಈ ಯಕ್ಷಗಾನ ಕೃತಿಗಳು ಕಾಲದಿಂದ ಕಾಲಕ್ಕೆ ಪ್ರದೇಶದಿಂದ ಪ್ರದೇಶಕ್ಕೆ, ವ್ಯಕ್ತಿಯಿಂದ ವ್ಯಕ್ತಿಗೆ ಅನೇಕ ಬದಲಾವಣೆಗಳಾಗುತ್ತವೆ. (ಸೇರ್ಪಡೆ ಅಥವಾ ಕೈಬಿಡುವುದು ಅನುಕೂಲಕ್ಕೆ ತಕ್ಕಂತೆ) ಅದಕ್ಕಾಗಿ ಜಿ.ವಿ. ಅವರು ಉಡುಪಿಯ ಕು.ಶಿ.ಹರಿದಾಸಭಟ್ಟರನ್ನು ಹಾಗೂ ಹೊನ್ನಾವರದ ವಿ.ಪಿ.ಹಾಸ್ಯಗಾರರನ್ನು ಸಂಪರ್ಕಿಸಿ ಚರ್ಚಿಸಿ ಮಾಹಿತಿ ಹಾಗೂ ಹಸ್ತಪ್ರತಿ ಪಡೆದುಕೊಂಡಿದ್ದಾರೆ ಹಾಗೂ

ಅಭ್ಯಾಸ ಮಾಡುವಾಗ ಟಿ. ಕೇಶವಭಟ್ಟ, ಅಮೃತಸೋಮೇಶ್ವರ, ಸೀತಾರಾಮ ಕೆದಿಲಾಯ ಅವರೊಡನೆ ಚರ್ಚೆ ನಡೆಸಿದ್ದಾರೆ.

ಹಾಸ್ಯಗಾರರ ಪ್ರತಿ ಮುದ್ದಣನ ಸಂಕ್ಷಿಪ್ತಪ್ರತಿ ಎಂಬುದನ್ನು ಪತ್ತೆಹಚ್ಚಿದ್ದಾರೆ. ಸಂಪೂರ್ಣ ಕೃತಿಗೂ ಸಂಕ್ಷಿಪ್ತ ಕೃತಿಗೂ ವ್ಯತ್ಯಾಸವಿದ್ದು ಸಂಕ್ಷಿಪ್ತ ಕೃತಿಯಲ್ಲಿ ಸುಮಾರು ೩೦ ರಿಂದ೪೦ ಹಾಡು ಕಡಿಮೆ ಇರುತ್ತದೆ ಎಂಬುದನ್ನು ಪತ್ತೆಹಚ್ಚಿದ್ದಾರೆ. ಹೀಗೆ ಅನೇಕ ಪ್ರತಿಗಳ ತುಲನೆಯಿಂದ ಮೂಲಪಾಠವನ್ನು ನಿಶ್ಚಯಿಸಿ ಪೂರ್ಣಪಾಠವನ್ನು ಸಂಗ್ರಹಿಸಿ ಮುದ್ರಿಸಿರುವುದು ಜಿ.ವಿ. ಅವರ ಸಂಶೋಧನಾ ಶ್ರಮ ಮತ್ತು ಕಳಕಳಿಯನ್ನು ತೋರುತ್ತದೆ. ಮುದ್ದಣನ ಜೀವಿತದ ಮಾಹಿತಿ, ವಿವಿಧ ಕೃತಿಗಳ ರಚನಾವರ್ಷ, ಕಥಾಸಾರವನ್ನು ಪಸ್ತಾವನೆಯಲ್ಲಿ ನೀಡಿದ್ದಾರೆ. 'ರತ್ನಾವತಿ ಕಲ್ಯಾಣ' ಪ್ರಸಂಗ ರಚನೆಗೆ ಸಂಸ್ಕೃತದ ಪ್ರಿಯದರ್ಶಿಕಾ ಮತ್ತು ರತ್ನಾವತಿ ನಾಟಕಗಳಿಂದ ಪಡೆದ ಪ್ರೇರಣೆ, ಹಾಡುಗಳ ಛಂದೊಬಂಧವೂ ಹಿಂದಿನ ಯಕ್ಷಗಾನ ಕೃತಿಗಳಿಂದಲೆ ಪಡೆದಿರುವುದನ್ನು ಗುರ್ತಿಸುತ್ತಾರೆ. ೧೯೩೦ರಲ್ಲಿ ಬೆಳ್ಳಾರೆಯವರು ಪ್ರದರ್ಶನ ಮಾಡಿದ 'ಕುಮಾರವಿಜಯ'ವನ್ನು ತಾತಾಚಾರ್ಯರು ನೋಡಿ ಪ್ರಶಂಸೆ ಮಾಡಿರುತ್ತಾರೆ ಹಾಗೂ ಕೆ.ಪಿ.ವೆಂಕಪ್ಪಶೆಟ್ಟರು ಸಹ ಮೆಚ್ಚಿಕೊಂಡಿರುತ್ತಾರೆ ಎಂಬ ಮಾತುಗಳನ್ನು ಇಲ್ಲಿ ಉಲ್ಲೇಖ ಮಾಡುತ್ತಾರೆ.

ಶ್ರೀರಾಮಪಟ್ಟಾಭಿಷೇಕಂ ಕಾವ್ಯದ ಪದ್ಯಗಳಿಗೆ ನೀಡಿರುವ ಹೊಸಗನ್ನಡ ತಾತ್ಪರ್ಯ ಅವುಗಳ ಅರ್ಥಾನುಸಂಧಾನಕ್ಕೆ ಸಹಕಾರಿಯಾಗಿದೆ. ಈ ಕಾವ್ಯ ಮುದ್ದಣನ ಪಾಂಡಿತ್ಯಕ್ಕೆ ದ್ಯೋತಕವಾದದ್ದು. ಸಂಪಾದಕರು ಇದಕ್ಕೆ ತಾತ್ಪರ್ಯವನ್ನು ನೀಡುವುದರ ಜೊತೆಗೆ ಸಂದೇಹಗಳನ್ನು ವ್ಯಕ್ತಪಡಿಸಿದ್ದಾರೆ. ಸಮುದ್ರವರ್ಣನೆಯ ಸಂದರ್ಭ –ಭಂಗಸಂಗ ಮಹಿರಾವಣ–ಐರಾವಣ (೩–೩೦), ಬಾಯ್ಯೊಗ್ಗಡು, ಸತ್ತಳಿದು ಮಣ್ಣೆ ಕೂಡಿದನಕಟ – ಮುಂತಾದವುಗಳ ಅರ್ಥ ಸಂದೇಹವನ್ನು ವ್ಯಕ್ತಪಡಿಸಿರುವುದನ್ನು ಕಾಣಬಹುದು.

ಸಂಪುಟ– ೨ : ಅದ್ಭುತ ರಾಮಾಯಣಂ ಮತ್ತು ಶ್ರೀರಾಮಾಶ್ವಮೇಧಂ : 'ಅದ್ಭುತ ರಾಮಾಯಣಂ' ಕಾವ್ಯವನ್ನು ಹಳಗನ್ನಡಕ್ಕೆ 'ಬಾಲಬೋಧೆ' ಎಂದು ಕರೆಯುವ ಸಂಸ್ಕೃತದಲ್ಲಿರುವ ಕಥೆಯನ್ನು ಕನ್ನಡಕ್ಕೆ ಅನುವಾದಿಸದೆ ಸ್ವಂತಿಕೆಯಿಂದ ರಚಿಸಿರುವುದು ಇದರ ಹಿರಿಮೆ. ೨೭ ಸರ್ಗಗಳಲ್ಲಿರುವ ಕಥಾಹಂದರವನ್ನು ಸಂಗ್ರಹವಾಗಿ ಹೇಳಿರುವುದೇ ಮುದ್ದಣನ ವಿಶೇಷ. 'ರಾಮಾಶ್ವಮೇಧಂ' ಇದು ಕೂಡ ಪದ್ಮಪುರಾಣದ ಪಾತಾಳಖಂಡದ ಸುದೀರ್ಘಕಥೆ ಇದನ್ನೂ ಸಹ ಮುದ್ದಣ ಸಂಗ್ರಹವಾಗಿ ಹೇಳುವ ಜಾಣ್ಮೆ ತೋರಿದ್ದಾನೆ. ಲಕ್ಷ್ಮೀಶನ ಕಾವ್ಯದ ಓದಿನ ಪ್ರಭಾವದಿಂದ ಅಲ್ಲಿರುವ ದೋಷವನ್ನು ಈ ಕೃತಿಯಲ್ಲಿ ಕೈಬಿಟ್ಟಿದ್ದಾನೆ. ಎರಡನೇ ಸಂಪುಟದ ಈ ಎರಡೂ ಕಾವ್ಯಗಳ ಅನೇಕ ವೈಶಿಷ್ಟ್ಯಗಳ ಬಗ್ಗೆ ಜಿ.ವಿ. ಪ್ರಸ್ತಾವನೆಯಲ್ಲಿ ಹೇಳಿದ್ದಾರೆ.

ಮುದ್ದಣ ಮನೋರಮೆಯರ ಸಂವಾದದ ಸ್ವಾರಸ್ಯವನ್ನು ತುಂಬಾ ಸೊಗಸಾಗಿ ಹೇಳಿದ್ದಾರೆ. ಕನ್ನಡ ಗ್ರಂಥ ಸಂಪಾದನೆಯ ಇತಿಹಾಸದಲ್ಲಿ ಮುದ್ದಣ ಬಂಡಾರದ ಈ ಎರಡನೇ ಸಂಪುಟಕ್ಕೆ ವಿಶೇಷ ಮನ್ನಣೆ ಇದೆ. ಕಾರಣ ಇಲ್ಲಿರುವ ಪಾಠವು ಮುದ್ದಣ ಕವಿಯ ಸ್ವಹಸ್ತಪ್ರತಿಯನ್ನೇ ಯಥಾವತ್ತಾಗಿ ಆಧರಿಸಿರುವುದು ವಿಶೇಷವಾಗಿದೆ. ಈ ಮುಂಚೆ ಎಸ್.ಜಿ.ನರಸಿಂಹಾಚಾರ್ಯ ಮತ್ತು ಎಂ.ಎ.ರಾಮಾನುಜಯ್ಯಂಗಾರ್ ಕರ್ನಾಟಕ ಕಾವ್ಯ ಕಲಾನಿಧಿಯ ಮಾಲೆಯಲ್ಲಿ ಈ ರಾಮಾಶ್ವಮೇಧಂ ಕಾವ್ಯವನ್ನು ಪ್ರಕಟಿಸಿದ್ದರು. ಆದರೆ ಅನೇಕ ತಿದ್ದುಪಡಿಗಳನ್ನು ಮಾಡಿದ್ದರು, ಕೆಲವೆಡೆ ಕೆಲವು ಭಾಗಗಳನ್ನು ಅಶ್ಲೀಲವೆಂದೂ ಅನಗತ್ಯವೆಂದೂ ಕೈಬಿಟ್ಟಿದ್ದರು. ಅದೃಷ್ಟವಶಾತ್ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿರುವ ಸ್ವಹಸ್ತಪ್ರತಿಯು ಜಿ.ವಿ.ಅವರಿಗೆ ಸಿಕ್ಕಿದ್ದರಿಂದ ಅದನ್ನು ಆಧಾರವಾಗಿಟ್ಟುಕೊಂಡೇ ಮೂಲಪಾಠವನ್ನು ಯಥಾವತ್ತಾಗಿ ನೀಡಿರುವುದು ಮೆಚ್ಚುವಂತಹದು. ಈ ಹಿಂದೆ ಎಸ್.ಜಿ.ನರಸಿಂಹಾಚಾರ್ಯ ಮತ್ತು ಎಂ.ಎ.ರಾಮಾನುಜಯ್ಯಂಗಾರ್ ಅವರು ಕೈ ಬಿಟ್ಟ ಭಾಗವನ್ನು ಜಿ.ವಿ.ಯವರು ಮತ್ತೆ ಸೇರಿಸಿದ್ದಾರೆ. ಅಲ್ಲದೆ ಕವಿಯು ಅಶುದ್ಧ ರೂಪಗಳನ್ನು ನೀಡಿರುವ ಕಡೆ ಸಂಪಾದಕರಾದ ಜಿ.ವಿ.ಅವರು ಸರಿಯಾದ ಶಬ್ದಸ್ವರೂಪ ನೀಡಿರುವುದು ಈ ಕೃತಿಯ ವಿಶೇಷ. ನಿಜವಾದ ಅರ್ಥದಲ್ಲಿ ಕಾವ್ಯ ಮತ್ತು ಶಾಸ್ತ್ರ ಎರಡೂ ಸಂಲಗ್ನಗೊಂಡ ಕನ್ನಡದ ಅನರ್ಘ್ಯ ಭಂಡಾರ ಎನಿಸಿದೆ. ಈ ಎರಡೂ ಕಾವ್ಯಗಳ ಹೊಸಗನ್ನಡ ಅನುವಾದದಿಂದ ಸಾಮಾನ್ಯ ಓದುಗನೂ ಮುದ್ದಣನ ಕಾವ್ಯ ಸೌಂದರ್ಯವನ್ನು ಅಸ್ವಾದಿಸಲು ಸಾಧ್ಯವಾಗಿದೆ.

ಇದೇ ಸಂಪುಟದ ಕೊನೆಯಲ್ಲಿ ಮುದ್ದಣ ಬರೆದಿರುವ 'ಜೋಗುಳಕ್ಕೆ' ಸಂಬಂಧಿಸಿದ 'ಜೋಜೋ' ಎನ್ನುವ ಲೇಖನವನ್ನು ಸೇರಿಸಿಕೊಟ್ಟಿರುವುದು ಕಂಡುಬರುತ್ತದೆ. ಇದರಿಂದ ಮುದ್ದಣನ ಸಮಗ್ರ ಬರಹಗಳು ಓದುಗರಿಗೆ ಒಂದೇ ಕಡೆ ಲಭ್ಯವಾದಂತಾಗಿದೆ.

ಮುದ್ದಣ ಪದಪ್ರಯೋಗ ಕೋಶ : ಇದು ಪ್ರಕಟವಾದದ್ದು ೧೯೯೬ರಲ್ಲಿ. ಜಿ.ವಿ. ಅವರೇ ಸಂಪಾದನೆ ಮಾಡಿರುವ ಮುದ್ದಣ ಬಂಡಾರದ ಸಂಪುಟಗಳಲ್ಲಿರುವ ಪ್ರಸ್ತಾವನೆಗಳು, ಮುದ್ದಣ ಮನೋರಮೆಯರ ಸಂವಾದದಲ್ಲಿ ಕಾಣುವ ಕಾವ್ಯ ವಿಮರ್ಶನಾ ಸಿದ್ಧಾಂತ, ಕಠಿಣ ಪದಗಳ ಅರ್ಥಕೋಶದ ಜೊತೆಗೆ ಮುದ್ದಣನ ಎಲ್ಲಾ ಕಾವ್ಯಗಳಲ್ಲಿ ಪ್ರಯೋಗವಾಗಿರುವ ಎಲ್ಲ ಶಬ್ದಗಳಿಗೂ ಅರ್ಥವನ್ನು ಕೊಡಲಾಗಿದೆ. ಮುದ್ದಣನ 'ಪದಪ್ರಯೋಗಕೋಶ'ವು ಕೇವಲ ಮುದ್ದಣನ ಕೃತಿಗಳ ನಿಘಂಟು ಮಾತ್ರವಾಗಿರದೆ ಬೇರೆ ಬೇರೆ ಕವಿಗಳ ಶಬ್ದಪ್ರಯೋಗದ ಬಗೆಗೆ ಆಡಿರುವ ಮಾತುಗಳು ಅಮೂಲ್ಯವಾಗಿದೆ. ಪಂಪ, ರನ್ನ, ನಾಗಚಂದ್ರ, ನಯಸೇನ, ಷಡಕ್ಷರಿ, ಲಕ್ಷ್ಮೀಶ, ಆಂಡಯ್ಯ, ಕುಮಾರವ್ಯಾಸರ

ಶಬ್ದಶೈಲಿಯ ಬಗೆಗೆ ಸಂಕ್ಷಿಪ್ತವಾಗಿ ತಿಳಿಸಿಕೊಟ್ಟಿದ್ದಾರೆ. ಈ ವಿಚಾರದಲ್ಲಿ ಮುದ್ದಣನಿಗೆ ಕುಮಾರವ್ಯಾಸನು ಗುರುವಾಗುತ್ತಾನೆ ಎನ್ನುತ್ತಾರೆ.

ಮುದ್ದಣ 'ಶಬ್ದಕಲ್ಪ'ದಲ್ಲಿ ಮುದ್ದಣನು ಪ್ರಯೋಗಿಸಿರುವ ಶಬ್ದಗಳನ್ನು ಪರಿಚಯಿಸಿದ್ದಾರೆ. ಶಬ್ದಗಳಿಗೆ ಪರ್ಯಾಯಗಳನ್ನು ಜೋಡಿಸಿರುವುದನ್ನು ಉದಾಹರಣೆ ಸಹಿತ ತಿಳಿಸಿದ್ದಾರೆ. ಅಪೂರ್ವವಾದ ಸಂಸ್ಕೃತ ಪದಗಳು, ತದ್ಭವ-ಸಂಸ್ಕೃತಗಳನ್ನು ಸೇರಿಸಿ ಮಾಡಿದ ಸಮಾಸಗಳು, ಸಂಸ್ಕೃತಕ್ಕೆ ಹೊಸ ಸಂಸ್ಕೃತವನ್ನು ಹೊಂದಿಸುವುದು, ಕನ್ನಡ ಪದಕ್ಕೆ ಸಂಸ್ಕೃತ ಶಬ್ದಗಳನ್ನು ಜೋಡಿಸುವುದು, ಪೂರ್ವಕವಿಗಳ ಅಪೂರ್ವ ಶಬ್ದವನ್ನು ಮತ್ತೆ ಚಲಾವಣೆಗೆ ತರುವುದು. ಸಂಸ್ಕೃತ ಶಬ್ದಗಳಿಗೆ ಹೊಸ ಬಗೆಯ ಶಬ್ದಗಳನ್ನು ಸೃಷ್ಟಿ ಮಾಡುವುದು ಇತ್ಯಾದಿ ಕವಿ ಪ್ರಯೋಗದ ನಾನಾವಿಧಗಳನ್ನು ಜಿ.ವಿ.ಅವರು ಗುರುತಿಸಿದ್ದಾರೆ.

ಒಟ್ಟಾರೆ ನಿಘಂಟು ತಜ್ಞರಾದ ಜಿ.ವಿ.ಯವರು ಕನ್ನಡದ ಶ್ರೇಷ್ಠವಿದ್ವಾಂಸರು. ನಿಘಂಟು ಕ್ಷೇತ್ರದಲ್ಲಿ ಹೆಚ್ಚು ಕೆಲಸ ಮಾಡಿದ ಶ್ರೀಯುತರು ಹಸ್ತಪ್ರತಿ ಸಂಪಾದನೆಯಲ್ಲಿ ಹೆಚ್ಚು ಕೆಲಸ ಮಾಡಿಲ್ಲವಾದರೂ ಮಾಡಿರುವ ಕೆಲಸದಲ್ಲಿ ಇರುವ ಅಚ್ಚುಕಟ್ಟುತನ ಮೆಚ್ಚುವಂತಹುದು.

□□

೨. Spectrum of Classical Literature in Karnataka - 5 Volumes

Hampa Nagarajaiah

Sapna Book House, Bangalore, 2022

❖

ನಾಡಿನ ಹಿರಿಯ ಚಿಂತಕರಾದ ಡಾ. ಹಂಪ ನಾಗರಾಜಯ್ಯ ಅವರು ಅಪಾರ ಶ್ರಮವಹಿಸಿ ತಮ್ಮ ಇಳಿವಯಸ್ಸಿನಲ್ಲಿ ಸಿದ್ಧಪಡಿಸಿದ Spectrum of Classical Literature in Karnataka ದ ಐದು ಸಂಪುಟಗಳು ಇದೀಗ ಪ್ರಕಟವಾಗಿದ್ದು ಕನ್ನಡ ಅಭಿಜಾತ ಸಾಹಿತ್ಯದ ಹಿರಿಮೆಯನ್ನು ಕನ್ನಡೇತರರಿಗೆ ಪರಿಚಯಿಸುವಲ್ಲಿ ಯಶಸ್ವಿಯಾಗಿದೆ. ಜಾಗತೀಕರಣದ ಇಂದಿನ ಸಂದರ್ಭದಲ್ಲಿ ಕನ್ನಡವನ್ನು ನಾವು ಹೀಗೆ ಪರಿಚಯಿಸದೇ ಹೋದರೆ ಕನ್ನಡಕ್ಕೆ ಉಳಿಗಾಲವಿಲ್ಲ. ಇವತ್ತು ಉನ್ನತ ಶಿಕ್ಷಣದ ಅಂತಾರಾಷ್ಟ್ರೀಕರಣವೂ (Internationalization of higher education) ಜೋರಾಗಿ ನಡೆಯುತ್ತಿದೆ. ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಅಂತಾರಾಷ್ಟ್ರೀಯ ವಿದ್ಯಾರ್ಥಿಗಳ ಹಾಜರಾತಿ, ದೇಶೀಯ ಮತ್ತು ವಿದೇಶೀಯ ವಿಶ್ವವಿದ್ಯಾಲಯಗಳು ಒಟ್ಟಿಗೆ ಕೆಲಸ ಮಾಡುವ ಅವಳಿ ಕಾರ್ಯಕ್ರಮಗಳು ಹಾಗೂ ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮಗಳು ಈಗಾಗಲೇ ಹಲವೆಡೆಗಳಲ್ಲಿ ಜಾರಿಗೆ ಬಂದಿವೆ. ಪಠ್ಯಕ್ರಮಗಳನ್ನು ಎರಡೂ ದೇಶಗಳ ಶಿಕ್ಷಣ ಸಂಸ್ಥೆಗಳು ಜಂಟಿಯಾಗಿ ರೂಪಿಸುತ್ತಿವೆ. ಎರಡು ದೇಶಗಳ ಅಧ್ಯಾಪಕರು ಈ ವಲಯಗಳಲ್ಲಿ ಒಟ್ಟಿಗೆ ಕುಳಿತು ಕೆಲಸ ಮಾಡುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ, ಅದರಲ್ಲೂ ಮುಖ್ಯವಾಗಿ ಭಾಷೆ ಮತ್ತು ಸಾಹಿತ್ಯಗಳ ಕ್ಷೇತ್ರದಲ್ಲಿ ಕೆಲಸ ಮಾಡುವ ಎಲ್ಲರೂ ತಮ್ಮ ತಮ್ಮ ಜವಾಬ್ದಾರಿಗಳ ಬಗ್ಗೆ ಹೊಸದಾಗಿ ಯೋಚಿಸಬೇಕಾಗಿದೆ. ಬಂಗಾಳೀ, ಮಲೆಯಾಳೀ

ಮತ್ತು ತಮಿಳು ಭಾಷೆಗಳು ಅನುವಾದಗಳ ಮೂಲಕ ಈಗಾಗಲೇ ಹೊಸ ಸವಾಲುಗಳನ್ನು ಸ್ವೀಕರಿಸಿ, ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ತಮ್ಮ ಸ್ಥಾನಗಳನ್ನು ಭದ್ರ ಪಡಿಸಿಕೊಂಡಿವೆ. ಆದರೆ ಕನ್ನಡಕ್ಕೆ ಮಾತ್ರ ಅಂತ ಭಾಗ್ಯ ಇನ್ನೂ ಬಂದಿಲ್ಲ. ಬೇರೆ ಭಾಷೆಗಳಿಂದ ಕನ್ನಡಕ್ಕೆ ಅನುವಾದಗೊಂಡು ಬರುತ್ತಿರುವ ಪುಸ್ತಕಗಳಿಗೆ ಹೋಲಿಸಿದರೆ, ಕನ್ನಡದಿಂದ ಬೇರೆ ಭಾಷೆಗಳಿಗೆ ಹೋಗುತ್ತಿರುವ ಪುಸ್ತಕಗಳ ಸಂಖ್ಯೆ ಇಲ್ಲವೆಂಬಷ್ಟು ಕಡಿಮೆ. ಇಂಥ ದಯನೀಯ ಸಂದರ್ಭದಲ್ಲಿ ಹಂಪನಾ ಅವರ ಅಭಿಜಾತ ಸಾಹಿತ್ಯ ಅನುವಾದದ Spectrum of Classical Literature in Karnataka ದ ಐದು ಸಂಪುಟಗಳಿಗೆ ಐತಿಹಾಸಿಕ ಮಹತ್ವವೂ ಇದೆ.

ಸಂಪುಟಗಳ ಪರಿಚಯ:

ಈ ಸಂಪುಟಗಳು ಕನ್ನಡ ಅಭಿಜಾತ ಸಾಹಿತ್ಯ ಪರಂಪರೆಗೆ ಸೇರಿದ ಮುಖ್ಯ ಕೃತಿಗಳನ್ನು ಮತ್ತು ಕವಿಗಳನ್ನು ಕನ್ನಡೇತರರಿಗೆ ಸೊಗಸಾಗಿ ಪರಿಚಯಿಸುವ ಉದ್ದೇಶವನ್ನು ಹೊಂದಿದೆ. ಜೊತೆಗೆ, ಹಾಗೆ ಓದುವವರಿಗೆ ಕನ್ನಡ ಸಾಹಿತ್ಯದಲ್ಲಿ ಆಸಕ್ತಿಯೂ ಹುಟ್ಟಬೇಕು. ಈ ನಿಟ್ಟಿನಲ್ಲಿ ಈ ಸಂಪುಟಗಳು ಅಭಿಜಾತ ಸಾಹಿತ್ಯವನ್ನು ಬಹಳ ವಿಮರ್ಶಾತ್ಮಕವಾಗಿಯೇನೂ ನೋಡುವುದಿಲ್ಲ. ಬದಲಾಗಿ ಅವುಗಳನ್ನು ಓದಿದವರು ಕನ್ನಡದ ಕಡೆಗೆ ಆಕರ್ಷಿತರಾಗಿ ಮತ್ತಷ್ಟು ಕನ್ನಡವನ್ನು ಓದಬೇಕು. ಹೀಗೆ ಮಾಡಬೇಕಾದ್ದು ಇಂದಿನ ಅಗತ್ಯವೂ ಹೌದು. ಈ ಧೋರಣೆಯಲ್ಲಿಯೇ ಐದೂ ಸಂಪುಟಗಳು ಸಿದ್ಧಗೊಂಡಿವೆ.

ಇದರ ಮೊದಲನೆಯ ಸಂಪುಟವು ಒಂಬತ್ತು ಮತ್ತು ಹತ್ತನೇ ಶತಮಾನದಲ್ಲಿದ್ದ ಪಂಪಪೂರ್ವ ಮತ್ತು ಪಂಪಯುಗದ ಕವಿಗಳನ್ನು ಪರಿಚಯಿಸುತ್ತದೆ. ಇದರಲ್ಲಿ ಶ್ರಾವಿಷ್ಟ, ಶ್ರೀವಿಜಯ, ನಾಗವರ್ಮ, ಪಂಪ ಮೊದಲಾದ ಅತ್ಯಂತ ಮಹತ್ವದ ಕವಿಗಳ ಜೊತೆಗೆ ಗುಣಗಾಂಕ, ಅಸಗ, ಗುಣನಂದಿ, ಮತ್ತು ಗಜಾಂಕುಶರನ್ನೂ ಒಳಗೊಳಿಸಲಾಗಿದೆ.

ಎರಡನೇ ಸಂಪುಟದಲ್ಲಿ ಪಂಪೋತ್ತರ ಯುಗದ ಒಟ್ಟು ೧೪ ಕವಿಗಳನ್ನು ಪರಿಚಯಿಸಲಾಗಿದೆ. ಕಾಲದ ದೃಷ್ಟಿಯಿಂದ ಇದು ಕ್ರಿಸ್ತ ಶಕ ೯೨೮ ರಿಂದ ೧೧೩೦ ನಡುವಣ ೨೦೦ ವರ್ಷಗಳ ಅವಧಿಯನ್ನು ಒಳಗೊಳ್ಳುತ್ತದೆ. ಈ ಭಾಗದಲ್ಲಿ ಒಳಗೊಂಡ ಮಹತ್ವದ ಕವಿಗಳೆಂದರೆ, ಪೊನ್ನ, ರನ್ನ, ಚಾವುಂಡರಾಯ, ದುರ್ಗಸಿಂಹ, ಎರಡನೇ ನಾಗವರ್ಮ, ಶಾಂತಿನಾಥ, ನಾಗಚಂದ್ರ, ನಯಸೇನ ಮತ್ತು ಬಂಧುವರ್ಮ. ಈ ಪಟ್ಟಿಯು ಬಹುಮಟ್ಟಿಗೆ ಸಮಗ್ರವಾಗಿದೆ. ಕೃತಿ ಸಂಪುಟಗಳ ರಚನೆಗೆ ಸಹಾಯಕವಾಗುವಂತೆ ಈ ಅವಧಿಯನ್ನು ? ಪಂಪೋತ್ತರ ಯುಗ? ಎಂದು ಕರೆಯಲಾಗಿದೆಯಾದರೂ ಪಂಪ ಯುಗದ ಅನೇಕ ಗುಣಗಳು ಈ ಕಾಲದಲ್ಲಿಯೂ ಮುಂದುವರೆದಿವೆ. ಮಾರ್ಗ

[illegible]

'Pampa's two epics had a widespread impact upon the subsequent development of Kannada literature as they are undoubtedly the greatest literary monuments. In grandeur of conception, in elegance of literary diction and in beauty of description of nature the epics remain unrivalled' (Volume 2, Page 233)

[illegible]

'ever since Pampa coined the famous literary statement 'reader can simultaneously understand 'Dharma and Kavyadharma', many poets echoed and emulated it' (Volume 2, Page 354)

[illegible]

[illegible]

[illegible]

ಶಾಸನ, ಐಹೊಳೆ ಶಾಸನ, ಪಂಪನ ತಮ್ಮನಾದ ಜಿನವಲ್ಲಭನ ಕುರ್ಕ್ಯಾಲ ಶಾಸನ, ಬೊಪ್ಪಣ ಪಂಡಿತನ ಗೊಮ್ಮಟ ಜಿನ ಸ್ತುತಿ ಇತ್ಯಾದಿಗಳು ಈ ಭಾಗದಲ್ಲಿವೆ. ಅಭಿಜಾತ ಸಾಹಿತ್ಯದ ಸಾಮಾನ್ಯ ಓದುಗರು ಇವನ್ನೆಲ್ಲಾ ಗಮನಿಸದೇ ಇರುವುದರಿಂದ ಇವುಗಳ ಸೇರ್ಪಡೆಗೆ ಮಹತ್ವ ಪ್ರಾಪ್ತಿಸಿದೆ.

ಸಂಪುಟಗಳ ಸ್ಥೂಲ ಸ್ವರೂಪ:

ಪ್ರಸ್ತುತ ಸಂಪುಟಗಳಲ್ಲಿ ಕವಿ ಮತ್ತು ಕೃತಿಗಳನ್ನು ಪರಿಚಯಿಸುವಾಗ ಹಂಪನಾ ಅವರು ಸಾಹಿತ್ಯ ಚರಿತ್ರೆಯ ಮಾದರಿಗಳನ್ನೇ ಬಹುಮಟ್ಟಿಗೆ ಅನುಸರಿಸಿದ್ದಾರೆ. ಇದು ಕನ್ನಡೇತರ ಓದುಗರಿಗೆ ಬಹಳ ಉಪಯುಕ್ತ. ಈ ಮಾದರಿಯು ಒಳಗೊಳ್ಳುವ ಮುಖ್ಯ ಅಂಶಗಳೆಂದರೆ–

೧. ಕವಿಯ ಹೆಸರು

೨. ಕವಿಯ ಕಾಲ

೩. ಕವಿಯ ಬಿರುದುಗಳು

೪. ಕವಿಯ ಆಶ್ರಯದಾತ/ರು

೫. ಕವಿಯ ಮುಖ್ಯ ಕೃತಿಗಳು

೬. ಕೃತಿಗಳ ಸಂಕ್ಷಿಪ್ತ ಪರಿಚಯ ಮತ್ತು ಅವುಗಳ ಮಹತ್ವ

೭. ಕಾವ್ಯಗಳ ಕೆಲವು ಮುಖ್ಯ ಪದ್ಯಗಳ ಇಂಗ್ಲಿಷ್ ಅನುವಾದ.

೮. ಮುಂದಿನ ಓದಿಗೆ ಅನುಕೂಲವಾಗುವಂತೆ ಪರಾಮರ್ಶನ ಗ್ರಂಥಗಳ ಪಟ್ಟಿ.

ಸಂಪುಟಗಳ ಮಹತ್ವ

ಸಂಪುಟಗಳು ಅಭಿಜಾತ ಸಾಹಿತ್ಯ ಪರಂಪರೆಯನ್ನು ಸಮರ್ಥವಾಗಿ ಪರಿಚಯಿಸುವುದರ ಜೊತೆಗೆ, ಈಗ ಈ ವಿಷಯಕವಾಗಿ ಉಳಿದಿರುವ ಕೆಲವು ಅನುಮಾನಗಳನ್ನು ಪರಿಹರಿಸುತ್ತವೆ, ತಪ್ಪುಮಾಹಿತಿಗಳನ್ನು ಸರಿಮಾಡುತ್ತವೆ ಮತ್ತು ಹೊಸ ಅಂಶಗಳನ್ನು ನಮ್ಮ ಗಮನಕ್ಕೆ ತರುತ್ತವೆ.

ಉದಾಹರಣೆಗೆ ಅವರು ಪೊನ್ನನ ಬಗೆಗೆ ಬರೆಯುವಾಗ ನಾರದನ ಕುರಿತು ನೀಡಿದ ಮಾಹಿತಿ ಬಹಳ ಮಹತ್ವದ್ದು. ಹಂಪನಾ ಅವರ ಪ್ರಕಾರ ನಾರದನನ್ನು ಕನ್ನಡಕ್ಕೆ ಪರಿಣಾಮಕಾರಿಯಾಗಿ ಪರಿಚಯಿಸಿದವನು ಪೊನ್ನ. ಅವರ ಮಾತುಗಳು–

` It is Ponna who more powerfully introduced the character of sage Narada as a tale bearer into Kannada literature though Narada figures as sage in the Vikramarjuna Vijaya of Pampa briefly. Narada was indirectly responsible for the eradication of wicked and sustenance of the virtuous' (volume 2, Page 240)

ಕನ್ನಡ ಸಾಹಿತ್ಯ ಚರಿತ್ರಕಾರರು ಉಪೇಕ್ಷಿಸಿದ್ದ ಪಂಪನ ತಮ್ಮ ಜಿನವಲ್ಲಭನಿಗೆ ಹಂಪನಾ ವಿಶೇಷ ಸ್ಥಾನ ಕಲ್ಪಿಸಿಕೊಟ್ಟಿದ್ದಾರೆ. ಹಾಗೆ ಸೇರಿಸಲು ಹಂಪನಾ ಕೊಡುವ ಕಾರಣವೆಂದರೆ ಜಿನವಲ್ಲಭನು ಭಾಷಾ ಬಳಕೆಯಲ್ಲಿ ತೋರಿದ ಹೊಸತನ. ಸಾಮಾನ್ಯವಾಗಿ ಶಾಸನಗಳನ್ನು ಮೂರು ಭಾಷೆಗಳಲ್ಲಿ (ಸಂಸ್ಕೃತ, ಪ್ರಾಕೃತ ಮತ್ತು ಅಪಭ್ರಂಶ) ಬರೆಯುತ್ತಿದ್ದ ಕಾಲಘಟ್ಟದಲ್ಲಿ ಜಿನವಲ್ಲಭನು ಮೂರು ಭಾಷೆಗಳ ಸೂತ್ರವನ್ನು ಇರಿಸಿಕೊಂಡು ಕೂಡಾ ಸಂಸ್ಕೃತ, ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಶಾಸನ ಬರೆದ. ಶಾಸನ ಬರೆಯುವಾಗ, ಸ್ಥಳೀಯ ಭಾಷೆಗಳ ಬಳಕೆಯಲ್ಲಿ ಆಗಿರುವ ಈ ಬದಲಾವಣೆಯನ್ನು ಹಂಪನಾ ಗುರುತಿಸಿದ ಬಗೆ ವಿಶಿಷ್ಟವಾದುದು ಮತ್ತು ಮುಂದಿನ ಸಂಶೋಧನೆಗಳಿಗೆ ಮಾರ್ಗದರ್ಶನ ಮಾಡುವಂಥದ್ದು. ಅವರ ಮಹತ್ವದ ಮಾತುಗಳು–

Jinavallabha, without rejecting the core of archetypal schem of three languages (Sanskrit, Prakrit or Apabhramsha) and langua of place (vernacular) extended or remodeled it by composing his unique inscription in Kannada-Sanskrit and Telugu. He has retained three language scheme, but altered the order with two vernacular and Sanskrit (Volume 2, Page: 325).

ಈ ಅಂಶವು ಜಿನವಲ್ಲಭನು ಕವಿ ಹೌದೋ ಅಲ್ಲವೋ ಅಥವಾ ಶಾಸನ ಕವಿಯೊಬ್ಬನಿಗೆ ಇಷ್ಟು ಮಹತ್ವ ನೀಡಬೇಕಿತ್ತೇ ಎಂಬ ಪ್ರಶ್ನೆಗಳನ್ನು ಗೌಣಗೊಳಿಸಿ ಸ್ಥಳೀಯ ಭಾಷೆಗಳನ್ನು ಬಳಸಿದ ಅವನ ಮಹತ್ವವನ್ನು ಮುಂದಿಡುತ್ತದೆ. ದಕ್ಷಿಣ ಏಷಿಯಾದ ಬಗ್ಗೆ ಹೆಚ್ಚು ಆಸಕ್ತಿ ತಳೆಯುತ್ತಿರುವ ಕನ್ನಡೇತರ ವಿದ್ವಾಂಸರುಗಳಿಗೆ ಇಂತ ಮಾಹಿತಿಗಳು ಮಹತ್ವದ್ದವು ಎಂಬುದನ್ನು ಹಂಪನಾ ತಿಳಿಸಿದ್ದಾರೆ. ಕನ್ನಡದ ಓದುಗರಿಗೆ ಅಷ್ಟೇನೂ ಪರಿಚಯವಿಲ್ಲದ ವಜ್ರಭಟ್ಟನ ಶ್ರೀವೀರಂ ಅಥವಾ ಶ್ರೀವೀರಾವಳಿ ಮತಂ ಬಗ್ಗೆ ಹಂಪನಾ ಸಾಕಷ್ಟು ಮಾಹಿತಿಗಳನ್ನು ನೀಡಿದ್ದಾರೆ. ಧರ್ಮಾಮೃತವನ್ನು ಬರೆದ ನಯಸೇನನು ಚಂಪೂ ರೂಪವನ್ನು ಉಳಿಸಿಕೊಂಡೂ ಕೂಡಾ ಭಾಷೆಯನ್ನು ಸರಳಗೊಳಿಸಿ

ಜನಪ್ರಿಯನಾದದ್ದರ ಬಗ್ಗೆ ಹಂಪನಾ ಬಹಳ ಒಳನೋಟಗಳುಳ್ಳ ಮಾತುಗಳನ್ನು ವಿಸ್ತಾರವಾಗಿಯೇ ಹೇಳಿದ್ದಾರೆ. ಬಂಧುವರ್ಮನ ಬಗ್ಗೆ ಬರೆಯುವಾಗ ಅವರು ಇವನು ರಾಜಾಶ್ರಯದ ಕವಿಯಲ್ಲ, ಬದಲು ಪ್ರಜಾಶ್ರಯದ ಕವಿ ಎಂದು ಹೇಳಿರುವುದು ಆಕರ್ಷಕವಾಗಿದೆ (ಪುಟ: ೪೫೮) ಸಿರಿಭೂವಲಯದ ಬಗ್ಗೆ ಪ್ರಚಲಿತದಲ್ಲಿರುವ ಅನೇಕ ನಿರೂಪಣೆಗಳನ್ನು ಹಂಪನಾ ದಿಟ್ಟವಾಗಿ ತಿರಸ್ಕರಿಸಿದ್ದಾರೆ.

ಪಠ್ಯಗಳ ಅಂತರ್ ಸಂಬಂಧಗಳ ಬಗ್ಗೆ ಅಪೂರ್ವ ಮಾಹಿತಿ

ಹಿಂದೂ ಪುರಾಣಗಳನ್ನು ಮತ್ತು ಅಲ್ಲಿಯ ಕೆಲವು ಪಾತ್ರಗಳನ್ನು ಜೈನ ಕವಿಗಳು ಮಾರ್ಪಡಿಸಿಕೊಂಡ ರೀತಿಯನ್ನು ಹೊಸದಾಗಿ ನೋಡಲು ಈ ಸಂಪುಟಗಳು ನಮಗೆ ಪ್ರೇರಣೆ ನೀಡುತ್ತವೆ. ಜೊತೆಗೆ ಪಠ್ಯ-ಪಠ್ಯಗಳ ನಡುವಣ ಸಂಬಂಧಗಳನ್ನು ಪರಿಶೀಲಿಸಲು ಅನುಕೂಲಕರವಾದ ಬಹಳ ಮಾಹಿತಿಗಳನ್ನು ಹಂಪನಾ ಒದಗಿಸಿದ್ದಾರೆ. ಅವರ ಬಹಳ ವಿಸ್ತಾರವಾದ ಓದು, ಬಹು ಭಾಷೆಗಳ ಮೇಲಣ ಪ್ರಭುತ್ವ, ಮತ್ತು ಪಾಂಡಿತ್ಯದ ಪ್ರಯೋಜನ ಪಡೆದ ಸಂಪುಟಗಳಿವು. ಪಠ್ಯಗಳ ನಡುವಣ ಸಂಬಂಧಗಳ ಪರಿಶೀಲನೆಗೆ ಮೂರು ಪ್ರಮುಖ ಆಯಾಮಗಳಿವೆ-

೧. ಸಂಸ್ಕೃತ ಮತ್ತು ಕನ್ನಡ ಪಠ್ಯಗಳ ಸಂಬಂಧ

೨. ಪ್ರಾಕೃತ-ಕನ್ನಡ ಸಂಬಂಧ ಹಾಗೂ

೩. ಕನ್ನಡ ಪಠ್ಯಗಳ ಆಂತರಿಕ ಸಂಬಂಧಗಳು

ಸಂಸ್ಕೃತ ಮತ್ತು ಕನ್ನಡ ಪಠ್ಯಗಳ ಸಂಬಂಧ:

ಕನ್ನಡ ಮತ್ತು ಸಂಸ್ಕೃತಗಳ ನಡುವಣ ಸಂಬಂಧದ ಕುರಿತು ಈಗಾಗಲೇ ಸಾಕಷ್ಟು ಅಧ್ಯಯನಗಳು ನಡೆದಿವೆ. ಎರಡನೇ ಸಂಪುಟದಲ್ಲಿ ಸಂಸ್ಕೃತ ಮಹಾಪುರಾಣವು ಚಾವುಂಡರಾಯನಿಗೆ ನೀಡಿದ ಪ್ರೇರಣೆಗಳ ಬಗ್ಗೆ ಮಾಹಿತಿಯಿದೆ. ಇಲ್ಲಿ ಹಂಪನಾ ಅವರು ಹೇಳುವ ಮಹತ್ವದ ಮಾತುಗಳು ಇಂತಿವೆ-?

When compared to Sanskrit source, we come across several deviations. It is embedded with many episodes which do not figure elsewhere. To cite concrete example, I have given the most popular story of Rama, Sita and Ravana, which is also a common topic in the poems of Nagachandra and Svayambhudeva who wrote in Apabhramsha (Volume 2, Page 298)

ರನ್ನ ಹೇಳುವ-

ಮೃದು ಪದ್ಯರಚನೆಯೊಳ್ ಕಾಳೀದಾಸಂ / ಗದ್ಯರಚನೆಯೊಳ್ ಬಾಣನುಮಂ (ಸಾಹಸಭೀಮವಿಜಯ ೧-೧೯)

ಅನು: `Kalidasa for his composition of melodious poetry

Bana for his composition of rhythmic prose' (Volume 2, Page : 264)

ಈ ಬಗೆಯ ಮಾತುಗಳು ಕನ್ನಡವು ಸಂಸ್ಕೃತವನ್ನು ಗ್ರಹಿಸಿದ ಬಗೆಯ ಮೇಲೆ ಬೆಳಕು ಚೆಲ್ಲುತ್ತದೆ. ಕರ್ಣಪಾರ್ಯನ ನೇಮಿನಾಥ ಪುರಾಣವು ಜಿನಸೇನನ ಹರಿವಂಶ ಪುರಾಣ, ಮತ್ತು ಭಾಗವತ ಪುರಾಣಗಳಿಗೆ ಋಣಿಯಾಗಿಯೂ ಹೇಗೆ ಅನನ್ಯವಾಗಿದೆ ಎಂಬುದನ್ನೂ ಹಂಪನಾ ಇಲ್ಲಿ ನಿರೂಪಿಸಿದ್ದಾರೆ.

ಪ್ರಾಕೃತ-ಕನ್ನಡ ಸಂಬಂಧ:

ಕರ್ನಾಟಕವು ಪ್ರಾಕೃತ ಭಾಷೆಯಲ್ಲಿ ಬರೆದ ಎಷ್ಟೋ ಲೇಖಕರಿಗೆ ಆಶ್ರಯ ಕೊಟ್ಟಿದೆ. ತ್ರಿವಿಕ್ರಮನ 'ಪ್ರಾಕೃತ ವ್ಯಾಕರಣ'. ಪುಷ್ಪದಂತನ 'ಮಹಾಪುರಾಣ'. ವೀರಸೇನಾಚಾರ್ಯರ 'ಧವಳಾ', 'ಜಯಧವಳಾ' ಮತ್ತು 'ಮಹಾಧವಳಾ' ಕೃತಿಗ ನೇಮಿಚಂದ್ರ ಯತಿಯ 'ಗೊಮ್ಮಟಸಾರ' ಮತ್ತು 'ತ್ರಿಲೋಕಸಾರ? ಮೊದಲಾದ ಕರ್ನಾಟಕದಲ್ಲಿಯೇ ಹುಟ್ಟಿಕೊಂಡ ಪ್ರಾಕೃತ ಕೃತಿಗಳು. ಪ್ರಾಕೃತ ಗ್ರಂಥಗಳಿಗೆ ಕನ್ನಡದ ಟೀಕೆ ಬರೆದವರು ಹಲವರು. ಹಂಪನಾ ಅವರೇ ಬೇರೊಂದು ಕಡೆಯಲ್ಲಿ ಹೇಳಿರುವಂತೆ, ಅನೇಕ ಪ್ರಾಚೀನ ಪ್ರಾಕೃತ ಕೃತಿಗಳು ಭಾಷೆಯಲ್ಲಿ ಪ್ರಾಕೃತ, ಲಿಪಿಯಲ್ಲಿ ಕನ್ನಡ. ವಡ್ಡಾರಾಧನೆಕಾರನು ಹೇರಳವಾಗಿ ಪ್ರಾಕೃತ ಗಾಹೆಗಳನ್ನು ಬಳಸಿಕೊಂಡರೆ, ನೇಮಿಚಂದ್ರನು ಸುಂದರವಾದ ಒಂದು ಗಾಹೆಯನ್ನೇ ರಚಿಸಿದ್ದಾನೆ, ರತ್ನಾಕರವರ್ಣಿಯು ಕೊಂಡಕುಂದಾಚಾರ್ಯರ ಆತ್ಮಸಿದ್ಧಾಂತ ಸಾರದಿಂದ ಪ್ರೇರಿತನಾಗಿದ್ದಾನೆ. ಅನೇಕ ಮುಖ್ಯ ಕೃತಿಗಳಿಗೆ ಪ್ರೇರಣೆ ನೀಡಿದ್ದು ಪ್ರಾಕೃತ ಕೃತಿಗಳೇ ಹೌದು. ಉದಾಹರಣೆಗೆ:

- ಅಭಿನವ ಪಂಪನೆಂದೇ ನಮ್ಮ ನಡುವೆ ಜನಪ್ರಿಯರಾಗಿರುವ ನಾಗಚಂದ್ರನ ರಾಮಚಂದ್ರ ಚರಿತಪುರಾಣಕ್ಕೆ ವಿಮಲಸೂರಿಯ ಪಉಮ ಚರಿಯ ಪ್ರೇರಣೆ ನೀಡಿದ್ದು.
- ನೇಮಿಚಂದ್ರನ ತ್ರಿಲೋಕಸಾರಕ್ಕೆ ಯತಿವೃಷಭರ ತಿಲೋಕಪಣ್ಣತ್ತಿ ಆಕರವಾದದ್ದು.
- ಕರ್ಣಪಾರ್ಯನ ನೇಮಿನಾಥ ಪುರಾಣಕ್ಕೆ ಸ್ವಯಂಭೂ ಕವಿಯ ರಿಟ್ಠಣೇಮೀಚರಿ ಪ್ರೇರಣೆ ನೀಡಿದ್ದು,

- ಅಗ್ಗಳನ ಚಂದ್ರಪ್ರಭಪುರಾಣಕ್ಕೆ ಯಶಕೀರ್ತಿಯ ಚಂದಪ್ಪಚರಿಯ ಮೂಲವಾಗಿರುವುದು ಇತ್ಯಾದಿ.
- ಕನ್ನಡ ಕವಿಗಳಿಗೆ ಬಹಳ ಆಪ್ತವಾದ ಕಂದ ಮತ್ತು ರಗಳೆ ಛಂದೋರೂಪಗಳ ಮೇಲೆ ಪ್ರಾಕೃತದ ಸ್ಕಂದ ಹಾಗೂ ರಘಟಾ ಬಂಧ'ಗಳ ಪ್ರಭಾವವಿದೆ.

ಪ್ರಾಕೃತ ಮತ್ತು ಕನ್ನಡ ಪಠ್ಯಗಳ ನಡುವಣ ಸಂಬಂಧದ ಕುರಿತು ತಿಳಿದುಕೊಳ್ಳಲು ಈ ಸಂಪುಟಗಳು ಬಹಳ ಉಪಯುಕ್ತವಾಗಿದೆ. ಈ ವಿಷಯದಲ್ಲಿ ನಮ್ಮ ಸಂಶೋಧನೆ ಇನ್ನಷ್ಟು ಮುಂದುವರೆಯಬೇಕಾಗಿದೆ.

ಕನ್ನಡ ಪಠ್ಯಗಳ ಆಂತರಿಕ ಸಂಬಂಧಗಳು:

ಈ ಸಂಪುಟಗಳಲ್ಲಿ ಸೇರ್ಪಡೆಯಾಗಿರುವ ಸುಮಾರು ೨೬ ಕವಿಗಳು ಪರಸ್ಪರ ಹೇಗೆ ಪ್ರಭಾವಿಸಿಕೊಂಡಿದ್ದಾರೆ ಎಂಬುದು ಬಹಳ ಕುತೂಹಲದ ಸಂಗತಿಯಾಗಿದೆ. ಸಂಪುಟಗಳು ಈ ಕುರಿತು ಓದುಗರಲ್ಲಿ ತಿಳಿವು ಮೂಡಿಸುತ್ತವೆ. ಈ ಕುರಿತಾಗಿ ಹಂಪನಾ ಬರೆದ ಮಾತುಗಳು ಓದುಗನಿಗೆ ಮಾರ್ಗದರ್ಶನ ಮಾಡಬಲ್ಲುವು–

`Following the conventions of Jaina narrative genre, Nagachandra evokes his illustrious literary precursors Pampa, Ponna and Ranna. Karnaparya (1135), Brahmashiva (1175), Parshva Pandita (1205), Janna (1209), Madhura and others have praised poetic genious of Nagachandra' (Volume 2, Page: 363).

ಕವಿಗಳು ಹೀಗೆ ಪರಸ್ಪರ ಪ್ರಭಾವಿಸಿಕೊಳ್ಳುವಾಗ ಏರ್ಪಡುವ ಅಂತರ–ಪಠ್ಯ ಸಂಬಂಧಗಳ ಕಡೆಗೆ ಹಂಪನಾ ಈ ಸಂಪುಟದಲ್ಲಿ ನಮ್ಮ ಗಮನ ಸೆಳೆದಿದ್ದಾರೆ. ಎರಡನೆಯ ನಾಗವರ್ಮನ ಬಗ್ಗೆ ಬರೆಯುವಾಗ ಅವರು ನಾಗವರ್ಮನು ತನ್ನ ವರ್ಧಮಾನ ಪುರಾಣದಲ್ಲಿ ಹೇಗೆ ಪಂಪ ಮತ್ತು ರನ್ನರ ಕೆಲವು ಪದ್ಯಗಳನ್ನು ಪುನರ್ ನಿರ್ಮಿಸಿಕೊಂಡಿದ್ದಾನೆ ಎಂದು ಉದಾಹರಣೆ ಸಹಿತ ವಿವರಿಸುತ್ತಾರೆ (ಪುಟ: ೩೪೨).

ಕೆಲವೆಡೆಗಳಲ್ಲಿ ಈ ಭಾಷಾ ಸಂಬಂಧಗಳು ಬಹಳ ಸಂಕೀರ್ಣವಾಗಿರುತ್ತವೆ. ಅಜಿತಪುರಾಣ, ಉತ್ತರಪುರಾಣ, ಆದಿಪುರಾಣ ಮತ್ತು ಶಾಂತಿಪುರಾಣಗಳು ಒಂದೆಡೆ ಸೇರುವಾಗ ಸಿದ್ಧಗೊಳ್ಳುವ ಪಠ್ಯಗಳ ಅಭ್ಯಾಸ ಇವತ್ತಿನ ಸಂಶೋಧನಾ ಆದ್ಯತೆಗಳಲ್ಲಿ ಒಂದಾಗಿದೆ.

ಮಹತ್ವದ ಮಾಹಿತಿಗಳ ಸೇರ್ಪಡೆ:

ಈ ಸಂಪುಟಗಳನ್ನು ಸಿದ್ಧಪಡಿಸುವಾಗ ಹಂಪನಾ ಅವರು ತಮ್ಮದೇ ಆದ ಇನ್ನೊಂದು ಮಹತ್ವದ ಕೃತಿ History of The Rastrakutas Of Malkhed & Jainism ನಿಂದ ಸಾಕಷ್ಟು ಮಾಹಿತಿಗಳನ್ನು ಎತ್ತಿಕೊಂಡಿದ್ದಾರೆ. ಆ ಬೃಹತ್ ಗ್ರಂಥದಲ್ಲಿ ಹಂಪನಾ ಅವರು ರಾಷ್ಟ್ರಕೂಟರ ರಾಜಧಾನಿಯಾಗಿದ್ದ ಮಳಖೇಡದಲ್ಲಿ ಕನ್ನಡ, ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳು ಸಮೃದ್ಧಗೊಂಡದ್ದನ್ನು ವಿವರಿಸಿದ್ದಾರೆ. ಸಮಂತಭದ್ರರ ಆಪ್ತಮೀಮಾಂಸೆಗೆ ವ್ಯಾಖ್ಯಾನ ಬರೆದ ಅಕಲಂಕ ಮತ್ತು ವಿದ್ಯಾನಂದರು ಅಲ್ಲಿದ್ದರು. ಪ್ರಖಾಂಡ ವಿದ್ವಾಂಸರಾದ ಮಾಣಿಕ್ಯನಂದಿ, ಪ್ರಭಾಚಂದ್ರರು ಓಡಾಡಿದ ಸ್ಥಳವೂ ಅದುವೇ. ಉಪಮಚರಿಯ, ಅರಿಷ್ಟನೇಮಿಚರಿಯಗಳ ಕರ್ತೃ ಸ್ವಯಂಭೂ ಕೂಡಾ ರಾಷ್ಟ್ರಕೂಟರ ಆಸ್ಥಾನದಲ್ಲಿ ಇದ್ದವನೇ. ವೀರಸೇನ ಮತ್ತು ಜಿನಸೇನರು ಇದೇ ಕಾಲದಲ್ಲಿ ಧವಲಾ, ಜಯಧವಲಾ ಗ್ರಂಥಗಳನ್ನು ರಚಿಸಿದರು. ನೃಪತುಂಗನ ಗೌರವಕ್ಕೆ ಪಾತ್ರರಾಗಿದ್ದ ಜಿನಸೇನರು ಮಹಾಪುರಾಣ ಕಾವ್ಯವನ್ನು ಬರೆದರು. ಇದು ಮುಂದೆ ಪಂಪ ಮತ್ತು ಚಾವುಂಡರಾಯರಿಗೆ ಪ್ರೇರಣೆ ನೀಡಿತು. ಅಚ್ಚರಿಯ ಸಂಗತಿ ಎಂದರೆ, ಜೈನ ಧರ್ಮವನ್ನು ನೆಲೆಗೊಳಿಸಿದ ತೀರ್ಥಂಕರರೆಲ್ಲ ಉತ್ತರ ಭಾರತದವರು. ಆದರೆ ಜೈನ ಧರ್ಮ ಪ್ರಚಾರಕರು, ವ್ಯಾಖ್ಯಾನಕಾರರು, ಆಚಾರ್ಯರು ಬಹುಮಟ್ಟಿಗೆ ಕರ್ನಾಟಕದವರು. ಆಚಾರ್ಯ ಶ್ರೇಷ್ಠರೂ ಪರಮ ಪಂಡಿತರೂ ಆಗಿದ್ದ ಕೊಂಡಕುಂದರು, ಸಮಂತಭದ್ರರು, ಪೂಜ್ಯಪಾದರು, ಕವಿ ಪರಮೇಷ್ಠಿ, ಅಕಳಂಕ, ವೀರಸೇನ, ಜಿನಸೇನ, ಗುಣಭದ್ರ, ಅಜಿತಸೇನ, ಶ್ರುತಕೀರ್ತಿ, ದಿವಾಕರನಂದಿ, ಮಲ್ಲಿಷೇಣ, ಚಾರುಕೀರ್ತಿ ಪಂಡಿತಾರಾಧ್ಯ, ಮೇಘನಂದಿ ಮೊದಲಾದವರು ಕನ್ನಡಿಗರು. ಜೈನ ಧರ್ಮದ ಶಾಖೆಯಾದ ಯಾಪನೀಯ ಪಂಥವು ಹುಟ್ಟಿದ್ದು ಬೆಳೆದದ್ದು ಕರ್ನಾಟಕದಲ್ಲಿಯೇ. ಕೊಪ್ಪಳ, ಪುಲಿಗೆರೆ, ಶ್ರವಣಬೆಳಗೊಳ, ಹೊಂಬುಜ, ಕಾರ್ಕಳ–ಮೂಡಬಿದ್ರಿ, ಮೊದಲಾದುವು ಪ್ರಸಿದ್ಧ ಜೈನಕೇಂದ್ರಗಳು.

೧೧೦ಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದ, ನಮ್ಮ ಕಾಲದ ಅತಿ ದೊಡ್ಡ ವಿದ್ವಾಂಸರಲ್ಲಿ ಒಬ್ಬರಾದ, ಹಲವು ವಿಷಯಗಳ ಬಗೆಗೆ ಆಳವಾದ ಜ್ಞಾನವಿರುವ ಹಂಪನಾ ಅವರು ಜೈನ ಮತದ ಕುರಿತಾದ ತಮ್ಮ ತಿಳಿವಳಿಕೆಗಳನ್ನು ಈ ಅನುವಾದ ಸಂಪುಟಗಳಲ್ಲಿ ಸೂಕ್ತವಾಗಿ ಬಳಸಿಕೊಂಡಿದ್ದಾರೆ. ಹೀಗಾಗಿ ಇದು ಇತರ ಸಾಹಿತ್ಯ ಚರಿತ್ರೆ ಸಂಪುಟಗಳಿಂದ ತುಂಬ ಭಿನ್ನವಾಗಿದೆ. ಇದರಲ್ಲಿ ಚರಿತ್ರೆ ಇದೆ, ಸಾಹಿತ್ಯ ಇದೆ ಮತ್ತು ಜೈನ ಮತ ಸಿದ್ಧಾಂತವೂ ಇದೆ.

ಜೈನ ರಾಮಾಯಣಗಳು:

ಕನ್ನಡ ಸಂಸ್ಕೃತಿಗೆ ರಾಮಾಯಣ ಮತ್ತು ಮಹಾಭಾರತ ಕಥನಗಳನ್ನು ಮೊದಲು ಜೋಡಿಸಿದವರು ಜೈನರು. ವ್ಯಾಸರು ಸಂಸ್ಕೃತದಲ್ಲಿ ಬರೆದ 'ಮಹಾಭಾರತ' ವನ್ನು ಕನ್ನಡದಂಥ ದೇಸೀ ಭಾಷೆಯಲ್ಲಿ ಮೊದಲ ಬಾರಿಗೆ ಬರೆದವನು ಪಂಪ. ಆಮೇಲೆ ತಮಿಳು, ಮಲೆಯಾಳಂ, ತೆಲುಗು, ಒಡಿಯಾ ಮೊದಲಾದ ಭಾಷೆಗಳಲ್ಲಿ ಮಹಾಭಾರತವನ್ನು ಬರೆಯಲಾಯಿತು. ಪ್ರಾಕೃತ ಭಾಷೆಯ ವಿಮಲಸೂರಿಗಳ ಪಉಮ ಚರಿಯ, ಮತ್ತು ಗುಣಭದ್ರರ ಉತ್ತರ ಪುರಾಣ– ಇವೆರಡೂ ರಾಮಾಯಣ ಪರಂಪರೆಗಳು ಕನ್ನಡಕ್ಕೆ ಬಂದಿವೆ.

ಹಂಪನಾ ಅವರು ಎರಡನೇ ಸಂಪುಟದಲ್ಲಿ ಹನ್ನೆರಡನೇ ಶತಮಾನದ ಪ್ರಾರಂಭದಲ್ಲಿ ಬದುಕಿದ್ದ ಅಭಿನವ ಪಂಪನೆಂದು ಪ್ರಸಿದ್ಧನಾದ ನಾಗಚಂದ್ರನ (ಕ್ರಿಸ್ತ ಶಕ) ರಾಮಚಂದ್ರಚರಿತಪುರಾಣ' ಅಥವಾ "ಪಂಪರಾಮಾಯಣವನ್ನು ವಿಸ್ತಾರವಾಗಿ ಪರಿಚಯಿಸಿ ಉಪಕಾರ ಮಾಡಿದ್ದಾರೆ. ಕ್ರಿಸ್ತ ಶಕ ೯೧೩ರಲ್ಲಿದ್ದ ಪೊನ್ನನ ಭುವನೈಕ ರಾಮಾಭ್ಯುದಯ ದೊರೆಯದೇ ಇದ್ದುದರಿಂದ ಅದರ ಬಗ್ಗೆ ಪ್ರಾಥಮಿಕ ಮಾಹಿತಿಗಳನ್ನಷ್ಟೇ ನೀಡಿದ್ದಾರೆ. 'ಅದು ಜೈನ ಪರಂಪರೆಯ ರಾಮಾಯಣವೆಂದು ಹೇಳಲು ಆಧಾರಗಳಿಲ್ಲ' ಎಂಬುದು ಬಹಳ ಮಹತ್ವದ ಮಾತು. ಕುಮುದೇಂದು, ದೇವಪ್ಪಕವಿ, ದೇವಚಂದ್ರ, ಚಂದ್ರ ಸಾಗರವರ್ಣಿ ಈ ಪರಂಪರೆಯನ್ನು ಅನುಸರಿಸಿ ರಾಮಾಯಣಗಳನ್ನು ಬರೆದಿದ್ದಾರೆ. ಹಂಪನಾ ಅವರು ನಾಗಚಂದ್ರನ ರಾಮಚಂದ್ರಚರಿತಪುರಾಣಂ ಅಥವಾ ಪಂಪರಾಮಾಯಣದ ಬಗ್ಗೆ ಹೇಳಿರುವ ಮಾತುಗಳು ಬಹಳ ಚೇತೋಹಾರಿಯಾಗಿವೆ. ಕನ್ನಡದ ಓದುಗರಿಗೆ ಗೊತ್ತಿಲ್ಲದ ಹಲವು ಸಂಗತಿಗಳು ಇದರಲ್ಲಿರುವುದು ವಿಶೇಷ. ಅವರು ಹೇಳುವಂತೆ–

'The poet dives deep into mysticism and spiritual world in narrating the story of Rama, Lakshmana and Ravana, who figure in the time of Munisuvratha, the 20th Tirthankara (Volume 2, Page 359).

Before Nagachandra, the story of Rama was narrated by Kuchibhattaraka (8th century), Nandimuni (8th century), Kaviparameshti (750AD), Ravishena (676), Veerasena, Padmanandi, Gunabhadra, and Chavundaraya' (Volume 2, Page 365). ಈ ಬಗೆಯ ಮಾಹಿತಿಗಳಿಗೆ ಕನ್ನಡ ಸಂಶೋಧನೆಯನ್ನು ಇನ್ನಷ್ಟು ವಿಸ್ತರಿಸುವ ಶಕ್ತಿಯಿದೆ.

ಸಿರಿಭೂವಲಯದ ಕುರಿತು:

ನನ್ನ ವಿದ್ಯಾರ್ಥಿ ದೆಸೆಯಿಂದಲೂ ನಾನು ಸಿರಿಭೂವಲಯದ ಬಗ್ಗೆ ಚಿತ್ರ ವಿಚಿತ್ರವಾದ ಮಾತುಗಳನ್ನು ಕೇಳುತ್ತಲೇ ಬಂದಿದ್ದೇನೆ. ಇದನ್ನು ೨೪ನೇ ತೀರ್ಥಂಕರ ಮಹಾವೀರರು ಕನ್ನಡ ಭಾಷೆಯಲ್ಲಿ ಹೇಳಿದ್ದರು, ಇದು ಸುಮಾರು ಎರಡೂವರೆ ಸಾವಿರ ವರ್ಷದಷ್ಟು ಹಳೆಯದು, ಇದು ಅಂಕ ಲಿಪಿಯಲ್ಲಿದ್ದು ಇದರಲ್ಲಿ ೧೮ ಲಿಪಿಗಳೂ ೭೧೮ ಭಾಷೆಗಳೂ ಇವೆ, ಭೌತ ಶಾಸ್ತ್ರ, ಖಗೋಳ ಶಾಸ್ತ್ರ, ವೈದ್ಯಕೀಯ, ಇತಿಹಾಸ, ಆಕಾಶ ಗಮನ, ಅಣುವಿಜ್ಞಾನ ಇತ್ಯಾದಿ ವಿಷಯಗಳ ಬಗ್ಗೆ ಇದರಲ್ಲಿ ನಿಗೂಢ ಮಾಹಿತಿಗಳಿವೆ, ಇದರಲ್ಲಿ ಆರು ಲಕ್ಷ ಶ್ಲೋಕಗಳಿವೆ, ಇದರಲ್ಲಿ ೧೬೦೦೦ ಚಕ್ರಗಳಿದ್ದು ಕೇವಲ ೧೭೨೦ ಮಾತ್ರ ಲಭ್ಯವಿದೆ, ಅಂಕೆಗಳ ರೂಪದಲ್ಲಿರುವ ಅಕ್ಷರಸಂಖ್ಯೆ ಹದಿನಾಲ್ಕು ಲಕ್ಷ, ಇತ್ಯಾದಿ ಮಾತುಗಳು ಸಿರಿಭೂವಲಯದ ಬಗ್ಗೆ ಕುತೂಹಲವನ್ನು ಹುಟ್ಟಿಸಿದ್ದಂತೂ ನಿಜ. ಆದರೆ ಹಂಪನಾ ಅವರು ಧೈರ್ಯದಿಂದ ಈ ಹುಸಿ ನಿರೂಪಣೆಗಳನ್ನು ಒಡೆದಿದ್ದಾರೆ–

' I strogly suspect its very credibility. It is entirely apocryphal and not deserving of any serious historical or literary or religious consideration. Yellappaji took the initiative to attempt to foisting the idea. The very name Siribhuvalaya is concoction, and all that followed it is simply made up cock and bull story. The exuberant easily believed it to be something marvelous' (Volume 2, Page 321).

ಜೈನೇತರ ಕವಿಗಳ ಪರಿಚಯ:

ಹಂಪನಾ ಅವರು ಈ ಸಂಪುಟಗಳಲ್ಲಿ ಜೈನೇತರ ಕವಿಗಳ ಬಗ್ಗೆ ಹೇಳುವ ಮಾತುಗಳು ಬಹಳ ಕುತೂಹಲಕರವಾಗಿವೆ. ಜೈನೇತರ ಕವಿಗಳಲ್ಲಿ ದುರ್ಗಸಿಂಹ (೧೦೩೧), ಮತ್ತು ವಜ್ರಭಟ್ಟ (೧೦೫೦), ಬಹಳ ಮುಖ್ಯರು. ಹಂಪನಾ ಇವರ ಬಗ್ಗೆ ಬರೆಯುವಾಗ ಇವರನ್ನು ಆಗಲೇ ಕನ್ನಡದಲ್ಲಿ ಬಹಳ ಆಳವಾಗಿ ಬೇರೂರಿದ್ದ ಜೈನ ಸಂಪ್ರದಾಯಕ್ಕೆ ಸೇರಿಸುವ ಕ್ರಮ ಬಹಳ ಕುತೂಹಲಕರವಾಗಿದೆ. ಪಂಚತಂತ್ರವನ್ನು ಬರೆದ ದುರ್ಗಸಿಂಹನು ವಸುಭಾಗಭಟ್ಟ ಪರಂಪರೆಯ ಕತೆಗಳನ್ನು ತನಗೆ ಆಕರವಾಗಿ ಬಳಸಿಕೊಂಡ. ಹಂಪನಾ ಪ್ರಕಾರ, ವಸುಭಾಗ ಭಟ್ಟ ಪರಂಪರೆಯ ಪಂಚತಂತ್ರವು ಜೈನ ಪರಂಪರೆಗೆ ಹತ್ತಿರವಾಗಿದ್ದರೆ, ವಿಷ್ಣುಶರ್ಮ ಪರಂಪರೆಯು ವೈದಿಕ ಪರಂಪರೆಗೆ ಹತ್ತಿರವಾಗಿದೆ. ಆದರೆ ಸ್ವತ: ವೈದಿಕನಾದ ದುರ್ಗಸಿಂಹನು ವಿಷ್ಣುಶರ್ಮ ಪರಂಪರೆಯನ್ನು ಬಿಟ್ಟು, ಜೈನ ಪರಂಪರೆಗೆ ಪ್ರಿಯವಾದ ವಸುಭಾಗ ಭಟ್ಟ ಪರಂಪರೆಯನ್ನು ಅಂಟಿಕೊಳ್ಳುತ್ತಾನೆ. ಹಂಪನಾ ಬರೆಯುತ್ತಾರೆ–

Durgasimha, being Brahmin poet how come he so willingly opted to Jain version when the famous Vishnusharma's tradition was more popular and was easily available is worth pondering' (Volume 2, Page 330).

ಹಂಪನಾ ಅವರ ಈ ಬಗೆಯ ಒಳನೋಟಗಳು ಅವರ ಆಳವಾದ ಅಧ್ಯಯನದಿಂದ ಬಂದಿದೆ, ಮತ್ತು ಕನ್ನಡ ಸಂಸ್ಕೃತಿಯ ಅನನ್ಯ ಗುಣಗಳನ್ನು ಕಟ್ಟಿಕೊಡಲು ಬಹಳ ಸಹಾಯ ಮಾಡುತ್ತವೆ.

ಅನುವಾದಗಳ ಸೊಗಸು:

ಈ ಸಂಪುಟಗಳ ಮುಖ್ಯ ಉದ್ದೇಶವು ಅಭಿಜಾತ ಯುಗದ ಕವಿಕೃತಿಗಳನ್ನು ಇಂಗ್ಲಿಷಿಗೆ ಅನುವಾದ ಮಾಡುವುದಲ್ಲ. ಅದರ ಬದಲು ಕವಿಗಳ ಬಗ್ಗೆ ಸೂಕ್ತ ಮಾಹಿತಿ ನೀಡಿ, ? ನೋಡಿ, ಇವನೆಷ್ಟು ಸೊಗಸಾಗಿ ಬರೆದಿದ್ದಾನೆ!? ಎಂದು ಹೇಳುತ್ತಾ ಸಹೃದಯರನ್ನು ಕನ್ನಡದ ಕೃತಿಗಳ ಕಡೆಗೆ ಸೆಳೆಯುವುದು. ಅದಕ್ಕಾಗಿ ಅವರು ಮೂಲ ಪಠ್ಯದ ಕೆಲವು ಅತ್ಯುತ್ತಮ ಪದ್ಯಗಳನ್ನೇ ಆಯ್ದುಕೊಂಡಿದ್ದಾರೆ. ಡಾ. ವಿವೇಕ ರೈ ಮತ್ತು ಸಿ ಎನ್ ರಾಮಚಂದ್ರನ್ ಅನುವಾದಿಸಿದ Classical Kannada Poetry and Prose: A Reader (೨೦೧೫), ಪ್ರೊ. ಆರ್ ವಿ ಸುಂದರಂ ಮತ್ತು ಅಮ್ಮೆಲ್ ಶೇರನ್ ಅನುವಾದಿಸಿದ ರನ್ನನ ಗದಾಯುದ್ಧ (೨೦೧೯) ಮೊದಲಾದ ಒಳ್ಳೆಯ ಅನುವಾದಗಳು ಲಭ್ಯ ಇದ್ದಾಗ್ಯೂ ಹಂಪನಾ ಅವರು ಅವುಗಳನ್ನು ಆಧರಿಸದೆ ತಮ್ಮದೇ ಅನುವಾದ ಮಾಡಿದ್ದಾರೆ. ಈ ಉದ್ದೇಶದಲ್ಲಿ ಹಂಪನಾ ಸಂಪೂರ್ಣವಾಗಿ ಯಶಸ್ವಿಯಾಗಿದ್ದಾರೆ. ಅವರ ಅನುವಾದಗಳು ಸರಳವಾಗಿವೆ, ಆಕರ್ಷಕವಾಗಿವೆ, ಮೂಲಕ್ಕೆ ನಿಷ್ಠವಾಗಿವೆ ಮತ್ತು ಓದುಗರಿಗೆ ಕಾವ್ಯದ ಸೊಗಸನ್ನು ಬಿಡಿಸಿ ತೋರಿಸುತ್ತವೆ.

ಒಂದು ಉದಾಹರಣೆಯನ್ನು ಇಲ್ಲಿ ಗಮನಿಸಬಹುದು.

ಶಕ್ತಿ ಕವಿ ರನ್ನನೆಂದರೆ ಎಲ್ಲ ಕನ್ನಡಿಗರಿಗೂ ಇಷ್ಟವೇ. ಪಂಪನಿಂದ ಸಾಕಷ್ಟು ಪ್ರಭಾವಿತನಾಗಿದ್ದರೂ ರನ್ನನ ಸ್ಥಾನಕ್ಕೇನೂ ಚ್ಯುತಿಬಂದಿಲ್ಲ. ಅವನ ಸಾಹಸ ಭೀಮವಿಜಯದ ಐದನೇ ಅಧ್ಯಾಯವು ದುರ್ಯೋಧನ ವಿಲಾಪಕ್ಕೆ ಪ್ರಸಿದ್ಧವಾಗಿದೆ. ಕುರುಕ್ಷೇತ್ರ ಯುದ್ಧಭೂಮಿಯಲ್ಲಿ ಕರ್ಣನ ಕಳೇಬರವನ್ನು ಕಂಡಾಗ ದುರ್ಯೋಧನ ಶೋಕಿಸುವ ಕೆಳಗಿನ ಪದ್ಯ ಪ್ರಸಿದ್ಧವಾಗಿದೆ ?

ನೀನುಳ್ಳೊಡುಂಟು ರಾಜ್ಯಂ
ನೀನುಳ್ಳೊಡೆ ಪಟ್ಟಮುಂಟು ಬೆಳ್ಗೊಡೆಯುಂಟಯ್
ನೀನುಳ್ಳೊಡುಂಟುಪೀಳಿಗೆ
ನೀನಿಲ್ಲದಿವೆಲ್ಲಮೊಳವೆ ಅಂಗಾಧಿಪತೀ (೫-೨೦)

ಇದನ್ನು ಹಂಪನಾ ಹೀಗೆ ಅನುವಾದಿಸಿದ್ದಾರೆ-

Karna the kingdom lives if you live
The crown lives if you live
The wite parasol, the throne
Live if you live
And if you are not alive, how can that be?

(Volume 2, Page: 285)

ಇದೇ ಕಂದ ಪದ್ಯವನ್ನು ಆರ್ ವಿ ಎಸ್ ಸುಂದರಂ ಮತ್ತು ಅಮ್ಮೇಲ್ ಈ ಕೆಳಗಿನಂತೆ ಅನುವಾದಿಸಿದ್ದಾರೆ-

With you my side I have a kingdom
With you there is kingship
With you the royal umbrella
With you our lineage endures

And without you, will any of these be, Angadhipati? (Sundaram RVS and Ammel Sharon 2019, Page : 151)

ಎರಡೂ ಅನುವಾದಗಳನ್ನು ತೌಲನಿಕವಾಗಿ ವಿಶ್ಲೇಷಿಸುವುದು ನನ್ನ ಉದ್ದೇಶವಲ್ಲ. ಸುಂದರಂ ಮತ್ತು ಅಮ್ಮೇಲ್ ಅವರ ಅನುವಾದ ಹೆಚ್ಚು ಸಾಹಿತ್ಯಿಕವಾದುದು. ಹಂಪನಾ ಅನುವಾದ ಸೀಮಿತವಾದ ಉದ್ದೇಶವನ್ನು ಸಮರ್ಥವಾಗಿ ಈಡೇರಿಸುವಂಥದ್ದು.

ಸಮಾರೋಪ:

ಈ ಸಂಪುಟಗಳನ್ನು ಓದುತ್ತಿದ್ದಂತೆಯೇ, ಕನ್ನಡವು ಒಂದೆಡೆಯಿಂದ ಪ್ರಾಕೃತ, ಮತ್ತೊಂಡೆಯಿಂದ ಸಂಸ್ಕೃತದ ಪ್ರಭಾವಕ್ಕೊಳಗಾಗುತ್ತಲೇ ಕನ್ನಡವಾಗುತ್ತಿದ್ದ ಬಗೆಯ ಕುರಿತು ಅನೇಕ ಒಳನೋಟಗಳು ಸಿಗುತ್ತವೆ. ಕೃಷ್ಣನನ್ನು ಗೌಣವಾಗಿಸಿದ ಪಂಪ, ರಾವಣನನ್ನು ಉದಾತ್ತಗೊಳಿಸಿದ ನಾಗಚಂದ್ರ, ಕಾವ್ಯಕ್ಕೆ ನಾಟಕೀಯತೆಯನ್ನು ತಂದುಕೊಟ್ಟ

ರನ್ನ, ಅನುವಾದವನ್ನು ಇನ್ನಷ್ಟು ಸೃಜನಶೀಲಗೊಳಿಸಿದ ಒಂದನೆಯ ನಾಗವರ್ಮ, ಕತೆ ಹೇಳಲು ಕಲಿಸಿದ ದುರ್ಗಸಿಂಹ, ಜನರಿಗಾಗಿ ಪುರಾಣ ಬರೆದ ನಯಸೇನ ಮೊದಲಾದವರು ತಮಗೆ ದಕ್ಕಿದ ಸಂಸ್ಕೃತ –ಪ್ರಾಕೃತ ಕಥನಗಳನ್ನು ಕನ್ನಡವಾಗಿಸಿದ ಬಗೆ ಅಚ್ಚರಿ ಹುಟ್ಟಿಸುತ್ತದೆ. ಇವರೆಲ್ಲರೂ ಸಂಸ್ಕೃತ–ಪ್ರಾಕೃತಗಳಿಂದ ತೆಗೆದುಕೊಂಡ ಆಶಯಗಳನ್ನು ಮತ್ತು ಆಕೃತಿಗಳನ್ನು ಕನ್ನಡ ಮನಸ್ಸಿನ ಜಾಯಮಾನಕ್ಕೆ ಬದಲಾಯಿಸಿ ಅದರಲ್ಲಿ ಮಾಡಿದ ಸಾಧನೆಗಳು ಅಮೋಘವಾಗಿವೆ. ಇತರ ಭಾಷೆಗಳ ಆಕರಗಳ ಸಹಾಯದಿಂದ ಅವರೆಲ್ಲ ಕನ್ನಡದ ಸಾಧ್ಯತೆಗಳನ್ನು ಅಪಾರವಾಗಿ ಹಿಗ್ಗಲಿಸಿದರು. ಸಂಸ್ಕೃತ ಸಾಹಿತ್ಯ ಮತ್ತು ಸಂಸ್ಕೃತ ಪಂಡಿತರೇ ಶ್ರೇಷ್ಠ ಎಂದೆನ್ನುತ್ತಿದ್ದ ಕಾಲದಲ್ಲಿ ಈ ಎಲ್ಲಾ ಕವಿಗಳು ಕನ್ನಡವನ್ನು ಕಟ್ಟಿದ ರೀತಿಗೆ ನಾವು ಹೆಮ್ಮೆ ಪಡಬಹುದು.

ಹೀಗೆ ಸಂಸ್ಕೃತ, ಪ್ರಾಕೃತಗಳು ಕನ್ನಡವಾದ ಪ್ರಕ್ರಿಯೆಗಳೇ ಅದ್ಭುತವಾದುವು. ಹೊಸ ಕಥನಗಳು ಸಿದ್ಧಗೊಳ್ಳುವುದೇ ಹೀಗೆ. ಗಮನಿಸಬೇಕಾದ ಮುಖ್ಯ ವಿಷಯವೆಂದರೆ, ಪಂಪಯುಗದಲ್ಲಾಗಲೀ, ಪಂಪೋತ್ತರ ಯುಗದಲ್ಲಾಗಲೀ ನಮ್ಮ ಕವಿಗಳು ಹಾಗೂ ಅವರ ಕೃತಿಗಳು ಸ್ಥಗಿತವಾಗುಳಿದಿಲ್ಲ. ಪಂಪನು ವ್ಯಾಸ ಮುನೀಂದ್ರ ರುಂದ್ರ ವಚನಾಮೃತವಾರ್ಧಿಯನ್ನು ಈಸಿದ. ಅವನ ವಿಕ್ರಮಾರ್ಜುನ ವಿಜಯದ ೧೩ನೇ ಆಶ್ವಾಸದಿಂದ ಪ್ರೇರಣೆ ಪಡೆದ ಕವಿಚಕ್ರವರ್ತಿ ರನ್ನನು ಅದನ್ನೇ ಒಂದು ಸ್ವತಂತ್ರ ಕಾವ್ಯವನ್ನಾಗಿ ಪರಿವರ್ತಿಸಿ 'ಸಾಹಸ ಭೀಮ ವಿಜಯಂ' ಬರೆದ. ಮುಂದೆ ಕುಮಾರವ್ಯಾಸನೂ ವ್ಯಾಸನನ್ನೇ ಆಧರಿಸಿ 'ಕರ್ಣಾಟ ಭಾರತ ಕಥಾಮಂಜರಿ' ಯನ್ನು ಬರೆದ. ಅದು ಗಮಕಿಗಳ ಮೂಲಕ ಹಾಡುವ ಕಾವ್ಯವಾಯಿತು. ಹರಿಕತೆಗಳ ಮೂಲಕ ಪ್ರದರ್ಶನ ಪಠ್ಯವಾಯಿತು. ದೇವಸ್ಥಾನದ ವಾಸ್ತು, ಶಿಲ್ಪ ಮತ್ತು ಚಿತ್ರಗಳಲ್ಲಿ ಕಾವ್ಯದ ಘಟನೆಗಳು ಮೂರ್ತರೂಪ ತಾಳಿದುವು. ಮುಂದೆ ಯಕ್ಷಗಾನದ ಮೂಲಕ ಕುಣಿಯುವ ಪಠ್ಯಗಳಾಗಿ ಇವತ್ತಿನವರೆಗೆ ಜನರ ಕಡೆಗೆ ನಡೆಯುತ್ತಲೇ ಇವೆ, ಹೀಗೆ ನೋಡುವಾಗ ಹಂಪನಾ ಈ ಸಂಪುಟದಲ್ಲಿ ಪರಿಚಯಿಸಿದ ಕವಿಗಳೆಲ್ಲರೂ ನಮ್ಮ ಸುತ್ತಲೇ ಇದ್ದಾರೆ ಎಂದು ಈಗಲೂ ಅನ್ನಿಸುತ್ತಿದೆ.

1. Nagarajaiah Hampa 2000, History of The Rastrakutas Of Malkhed & Jainism; Bangalore: Ankita Pustaka.
2. Nagarajaiah Hampa 2022, Spectrum of Classical Literature-Volumes 1 to 5, Bangalore: Sapna Book House

3. Ramachandran CN and Viveka Rai BA 2015, Classical Kannada Poetry and Prose: A reader; Hampi: Kannada University
4. Ramachandran CN and Viveka Rai BA 2022, Medieval Kannada Literature: A reader; Hampi: Kannada University.
5. Sundaram RVS and Ammel Sharon 2019, Gadayuddam- The Duel of the Maces; Delhi: Kannada Language Chair, JNU

❒❒

ಬೆಂಗಳೂರು ಜಿಲ್ಲೆಯ ಕೃಷಿ ಸಂಸ್ಕೃತಿ : ಸಂಕ್ಷಿಪ್ತ ಪಕ್ಷಿನೋಟ

ಎಸ್. ಕಾರ್ತಿಕ್

❖

ಕೃಷಿ ಎಂಬುದು ಬೇಸಾಯ ಮತ್ತು ಅರಣ್ಯಕಲೆಯ ಮೂಲಕ ಆಹಾರ ಮತ್ತು ಸರಕುಗಳನ್ನು ಉತ್ಪಾದಿಸುವ ಒಂದು ವಿಧಾನವಾಗಿದೆ. ಇದು ನಾಗರಿಕತೆಯ ಉತ್ಕರ್ಷಕ್ಕೆ ಕಾರಣವಾದ ಪ್ರಮುಖ ಬೆಳವಣಿಗೆಯಾಗಿತ್ತು. ಕೃಷಿ ಮತ್ತು ಕೃಷಿಕರ ಉಲ್ಲೇಖಗಳು ಪ್ರಪಂಚದಲ್ಲಿಯೇ ಅತ್ಯಂತ ಪ್ರಾಚೀನ ಸಂಕಲನವೆಂದು ಒಮ್ಮತದಿಂದ ಅಂಗೀಕರಿಸಿರುವ ಋಗ್ವೇದದಲ್ಲಿಯೇ ಕಂಡುಬರುತ್ತದೆ. ಪಶುಪಾಲನೆ ಮತ್ತು ವ್ಯವಸಾಯವೇ ಆ ಕಾಲದ ಪ್ರಮುಖವಾದ ವೃತ್ತಿಯಾಗಿತ್ತು. ಬಡಗಿ, ಕಮ್ಮಾರ, ವೈದ್ಯ, ಯಾಜಕ ಮುಂತಾದ ವೃತ್ತಿಗಳನ್ನು ಮಾಡುತ್ತಿದ್ದವರ ಉಲ್ಲೇಖ ಋಗ್ವೇದದಲ್ಲಿದೆ (೯–೧೧೧–೧). ಕೃಷಿಯ ಬಗೆಗೆ ವೇದದಗಳಲ್ಲಿ ದೊರಕುವ ವಿವರಗಳಲ್ಲಿ ಒಂದೆರಡು ಇಂತಿವೆ.

ಯುನಕ್ತಸೀರಾ ವಿಯುಗಾ ತನುಧ್ವಂ
ಕೃತೇ ಯೋನೌ ವಪತೇಹ ಬೀಜಂ
ಗಿರಾ ಚ ಶ್ರುಷ್ಟಿಃ ಸಭರಾಅಸನ್ನೋ
ನೇದೀಯ ಇತ್ಸೃಣ್ಯಃ ಪಕ್ವಮೇಯಾತ್ ॥ ೧೦–೧೦೧–೩ ॥

[ನೇಗಿಲನ್ನು ಹೂಡಿ, ನೊಗಗಳನ್ನು ವಿಸ್ತಾರಗೊಳಿಸಿಕೊಂಡು, ಉಳುಮೆ ಮಾಡಿದ ಸಾಲುಗಳಲ್ಲಿ ಕಾಳುಗಳನ್ನು ಬಿತ್ತನೆ ಮಾಡಿದರೆ, ನಮ್ಮ ಪ್ರಾರ್ಥನೆ ಅಥವಾ ಸ್ತುತಿಯಿಂದ ಸಮೃದ್ಧವಾದ ಬೆಳೆಯಾಗುತ್ತದೆ. ಕೊಯ್ಲನ್ನು ಮಾಡುವವರು ಕುಡುಗೋಲುಗಳೊಡನೆ ಮಾಗಿದ ಪೈರಿನ ಕಡೆ ಬರುವಂತಾಗಲಿ]

'ಕೃಷಿಮಿತ್ ಕೃಷಸ್ವ' (೫–೩೪–೧೩) ಎಂದು ಹೇಳುವ ಉದ್ದೇಶವೇನೆಂದರೆ ಪ್ರಾಮಾಣಿಕವಾದ ವೃತ್ತಿಯಿಂದ ಜೀವನವನ್ನು ಸಂಪಾದಿಸಬೇಕು ಎಂಬುದಾಗಿದೆ. ಕೃಷಿಗೆ

ಅಗತ್ಯವಾದ ನೀರಾವರಿ ಕಾಲುವೆಗಳ ಉಲ್ಲೇಖಗಳೂ ಋಗ್ವೇದದಲ್ಲಿದೆ (೩-೪೫-೩ ; ೭-೪೯-೨)

ವೇದದಲ್ಲಿರುವ ಪರ್ಜನ್ಯಸೂಕ್ತವು ನಮ್ಮ ಪೂರ್ವಿಕರು ಮಳೆ ಮತ್ತು ನೀರಾವರಿಗೆ ಎಷ್ಟು ಪ್ರಾಮುಖ್ಯವನ್ನು ಕೊಟ್ಟಿದ್ದರು ಎಂಬುದಕ್ಕೆ ಉತ್ಕೃಷ್ಟ ಉದಾಹರಣೆಯಾಗಿದೆ. ಏಕೆಂದರೆ ಮಳೆಯಿಲ್ಲದೆ ಕೃಷಿ ವ್ಯವಸ್ಥೆ ನಡೆಯಲು ಸಾಧ್ಯವಿಲ್ಲ. ಉತ್ತರ ಭಾರತದಲ್ಲಿ ಜೀವನದಿಗಳ ಅವಲಂಬನೆಯಿದ್ದರೆ, ದಕ್ಷಿಣಭಾರತದಲ್ಲಿ ಬಲುಮಟ್ಟಿಗೆ ಮಳೆಯ ಆಧಾರದಿಂದಲೇ ಹರಿಯುವ ನದಿಗಳಿವೆ. ಇದರಿಂದಾಗಿ ಪ್ರದೇಶವಾರು ಬೇರೆ ಬೇರೆ ರೀತಿಯ ನೀರಾವರಿ ವ್ಯವಸ್ಥೆಗಳನ್ನು ಮಾಡಿಕೊಳ್ಳಲಾಯಿತೆಂದು ಲಭ್ಯವಿರುವ ಆಧಾರಗಳು ಹೇಳುತ್ತವೆ. ಋಗ್ವೇದದಲ್ಲಿ ನದಿಗಳನ್ನು ಸ್ತುತಿಸುವ ಸೂಕ್ತಗಳೇ ಇವೆ. ನದಿಗಳೇ ಮಾನವನ ಜೀವ, ಜೀವನನಾಡಿಗಳಾದ ಕಾರಣ ಈ ಸೂಕ್ತಗಳು ರೂಪುಗೊಂಡಿವೆ. ಇದೇ ರೀತಿಯಾಗಿ ಪರ್ಜನ್ಯ ಸೂಕ್ತವೂ ಸಹ. ಯಜುರ್ವೇದದ ಚಮಕಪ್ರಶ್ನದಲ್ಲಿ (**ಸಸ್ವರ ವೇದಮಂತ್ರಾಃ**, ಪ್ರಕಟನೆ : ಶ್ರೀರಾಮಕೃಷ್ಣ ಆಶ್ರಮ, ಮೈಸೂರು-೨೦೧೦, ಪುಟ ೧೪೪೮) ವ್ರೀಹಿ (ಅಕ್ಕಿ), ಯವೆ (ಬಾರ್ಲಿ), ಮಾಷಾ (ಉದ್ದು), ತಿಲ (ಎಳ್ಳು), ಮುದ್ಗ (ಹೆಸರುಕಾಳು), ಖಲ್ವ (ದ್ವಿದಳ ಧಾನ್ಯ), ಗೋಧೂಮ (ಗೋಧಿ) ಧಾನ್ಯಗಳ ಉಲ್ಲೇಖವಿದೆ. ಇಂತಹ ಅನೇಕ ವಿವರಗಳು ವೇದಗಳಲ್ಲಿ ದೊರಕುತ್ತವೆ.

ಈ ವಿವರಗಳಿಂದ ಭಾರತದೇಶದ ಕೃಷಿಯು ಬಹಳ ಪ್ರಾಚೀನವಾದುದೆಂದೂ ಇಂದಿನ ವರೆಗೂ ಅದು ಬಲುಮಟ್ಟಿಗೆ ಸ್ವಸ್ವರೂಪದಲ್ಲಿಯೇ ಉಳಿದುಕೊಂಡು ಬಂದಿದೆ ಎಂದೂ ಹೇಳಬಹುದಾಗಿದೆ. ಇದಕ್ಕೆ ಸರಸ್ವತೀ ನದಿ ಕೊಳ್ಳದ ಉತ್ಖನನಗಳೂ (The Sarasvati Civilization by Major General G.D Bakshi, Garuda Prakashan, Haryana-2019) ಹಾಗೂ ಬೇರೆ ಬೇರೆ ಪ್ರದೇಶಗಳ ಉತ್ಖನನಗಳೂ ಪೋಷಕವಾಗಿವೆ.

ಬೆಂಗಳೂರು ಕರ್ನಾಟಕ ರಾಜ್ಯದ ದೊಡ್ಡ ನಗರ ಮತ್ತು ರಾಜಧಾನಿ ಕೇಂದ್ರ, ಜಿಲ್ಲಾಕೇಂದ್ರ ಮತ್ತು ತಾಲ್ಲೂಕು ಕೇಂದ್ರ ಹಾಗೂ ಕಸಬಾ ಹೋಬಳಿಯ ಕೇಂದ್ರ ಬೆಂಗಳೂರು ನಗರ. ಭೆಂಗಳೂರು ತಾಲ್ಲೂಕು ೪೮೬ ಚ.ಕಿ.ಮೀ ವಿಸ್ತೀರ್ಣ ಹೊಂದಿದೆ. ಬೆಂಗಳೂರು ನಗರ ಜಿಲ್ಲೆಯು ೫ ತಾಲ್ಲೂಕುಗಳನ್ನು ಹೊಂದಿದ್ದು {ಬೆಂಗಳೂರು ಉತ್ತರ ಅಥವಾ ಬೆಂಗಳೂರು, ಬೆಂಗಳೂರು ದಕ್ಷಿಣ ಅಥವಾ ಕೆಂಗೇರಿ, ಬೆಂಗಳೂರು ಪೂರ್ವ ಅಥವಾ ಕೃಷ್ಣರಾಜಪುರ, ಯಲಹಂಕ ಮತ್ತು ಆನೇಕಲ್}, ಬೆಂಗಳೂರು ಗ್ರಾಮಾಂತರ ಜಿಲ್ಲೆಯು ೪ ತಾಲ್ಲೂಕುಗಳನ್ನು ಹೊಂದಿದೆ (ನೆಲಮಂಗಲ, ದೇವನಹಳ್ಳಿ,

ದೊಡ್ಡಬಳ್ಳಾಪುರ, ಹೊಸಕೋಟೆ). ಬೆಂಗಳೂರು ಪ್ರದೇಶವು ಸಮುದ್ರಮಟ್ಟದಿಂದ ಸುಮಾರು ೯೧೪ ಮೀಟರ್ ಎತ್ತರದಲ್ಲಿದೆ. ಭೌಗೋಳಿಕವಾಗಿ ೧೨° ೫೯' ಉ ಹಾಗೂ ೧೩° ಉ ಅಕ್ಷಾಂಶದಲ್ಲಿದ್ದರೂ ಕೂಡ ಬೆಂಗಳೂರಿನಲ್ಲಿ ಸದಾಕಾಲ ತಂಪು ವಾತಾವರಣವಿರುವುದು, ಸುವಾರು ೨೪°ಅ ರಿಂದ ೩೫°ಅ ರವರೆಗೆ ಉಷ್ಣಾಂಶವಿರುವುದು. ದಕ್ಷಿಣ ಪ್ರಸ್ತಭೂಮಿಯ ಒಂದು ಭಾಗವಾದ ಮೈಸೂರು ಪ್ರಸ್ತಭೂಮಿಯ ಹೃದಯ ಭಾಗದಲ್ಲಿ ನೆಲೆಸಿರುವ ಈ ನಗರವು, ಕರ್ನಾಟಕದ ಆಗ್ನೇಯ ಭಾಗದಲ್ಲಿದೆ. ೭೪೧ ಚ.ಕಿ.ಮೀ. ವಿಸ್ತೀರ್ಣವುಳ್ಳ ಈ ಪ್ರದೇಶವು ೫.೮ ಮಿಲಿಯನ್ (ಅತಿ ಹೆಚ್ಚು ಜನಸಂಖ್ಯೆಯುಳ್ಳ ಮೂರನೆಯ ನಗರ) ಜನಸಂಖ್ಯೆಯನ್ನು ಹೊಂದಿದೆ. ಉಷ್ಣವಲಯದ ವಾತಾವರಣವಿರುವುದರಿಂದ, ಈ ಪಟ್ಟಣವು ಪದೇ ಪದೇ ಮಳೆಯನ್ನು ಅನುಭವಿಸುತ್ತ ಬೇಸಿಗೆಗಾಲದಲ್ಲಿ ಬೆಚ್ಚಗಿದ್ದು ಚಳಿಗಾಲದಲ್ಲಿ ತಂಪಾಗಿರುತ್ತದೆ. ಇಂತಹ ಸುಂದರ ವಾತಾವರಣವು ಒಂದು ಕಾಲದಲ್ಲಿ ನಿವೃತ್ತಿ ಹೊಂದಿದವರನ್ನು ಆಕರ್ಷಿಸಿದ್ದು, ಈ ಕಾರಣದಿಂದಲೇ ಬೆಂಗಳೂರನ್ನು ನಿವೃತ್ತಿ ಹೊಂದಿದವರ ಸ್ವರ್ಗ ಎಂದೂ ಕೂಡ ಕರೆಯಲಾಗುತ್ತಿತ್ತು. ಬೇಸಿಗೆಯಲ್ಲಿ ತಾಪಮಾನವು ೨೦ ರಿಂದ ೩೬ ಡಿಗ್ರಿಯಿದ್ದು, ಚಳಿಗಾಲದಲ್ಲಿ ೧೭ ರಿಂದ ೨೭ ಡಿಗ್ರಿಯಾಗಿರುತ್ತದೆ (ಈಚಿನ ದಿನಗಳ ಚಳಿಗಾಲದಲ್ಲಿ ಥಂಡಿ ಎನ್ನುವುದು ೧೩ ಡಿಗ್ರಿಗೂ ಇಳಿದಿರುವುದು ಹಾಗೂ ವ್ಯಾಪಕವಾಗಿ ವಾತಾವರಣ ವ್ಯತ್ಯಯವಾಗುತ್ತಿರುವುದು ಗಮನಾರ್ಹ).

ಇಂದಿನ ಬೆಂಗಳೂರು ಜಿಲ್ಲೆಯಲ್ಲಿ ಪುರಾತತ್ತ್ವ ಉತ್ಖನನಗಳಾವುವೂ ನಡೆದಿಲ್ಲ. ನಡೆದಿರುವ ಸಣ್ಣಪ್ರಮಾಣದ ಕೆಲವು ಉತ್ಖನನಗಳಲ್ಲಿ (ಉತ್ಖನನವೆನ್ನುವುದಕ್ಕಿಂತ ಅನ್ವೇಷಣೆ ಎಂಬ ಪದ ಹೆಚ್ಚು ಸೂಕ್ತ) ನೇರವಾಗಿ ಕೃಷಿಗೆ ಸಂಬಂಧಪಟ್ಟ ವಿವರಗಳು ದೊರೆತಿಲ್ಲ. ಆಹಾರಕ್ಕೆ ಸಂಬಂಧಪಡುವ ಅವಶೇಷಗಳೂ ದೊರೆತಿಲ್ಲ. ಒಂದೆರಡು ಕಡೆ ದೊರೆತಿದೆ ಎಂದು ವರದಿಯಾಗಿದ್ದರೂ ವಿವರಗಳು ಅಸ್ಪಷ್ಟ. ಆಹಾರ ಪದ್ಧತಿಗೆ ಸಂಬಂಧಪಡುವ ಕೆಲವೊಂದು ಪಾತ್ರೆಗಳು ದೊರೆತಿವೆ ಎಂದು ಅಸ್ಪಷ್ಟವಾಗಿ ವರದಿಯಾಗಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ಜಿಲ್ಲೆಯ ಕೃಷಿ ಸಂಸ್ಕೃತಿ ಹಾಗೂ ಹಸುರಿನ ವಿವರಗಳನ್ನು ತಿಳಿಯಲು ಶಾಸನಗಳು, ಸಾಹಿತ್ಯ ಕೃತಿಗಳು ಹಾಗೂ ಆಧುನಿಕ ಕಾಲದ ಕೆಲವು ಗ್ರಂಥಗಳು ಮಾತ್ರ ನೆರವು ನೀಡುತ್ತವೆ. ಕೆಲವೊಂದು ಸಾಹಿತ್ಯಿಕ ಕೃತಿಗಳಲ್ಲಿ ಕೃಷಿಕರ ವಿವರ ಅಲ್ಲಲ್ಲಿ ದೊರಕುತ್ತದೆ. ವಿಖ್ಯಾತ ಶಾಸನತಜ್ಞ ಲೂಯಿ ರೈಸ್ ಅವರ ಮೈಸೂರು ಗೆಜೆಟಿಯರ್‌ನಲ್ಲಿ ಕೆಲವೊಂದು ವಿವರಗಳು ದೊರಕುತ್ತವೆ. ಈ ವಿವರಗಳು ಸಣ್ಣಪುಟ್ಟ ವ್ಯತ್ಯಾಸಗಳನ್ನು ಹೊರತುಪಡಿಸಿ ಇಂದಿನ ಸ್ವರೂಪಕ್ಕೆ ಸದೃಶವಾಗಿಯೇ ಇದೆ. ಬೆಂಗಳೂರಿನ ಪ್ರದೇಶ ಬಲುಮಟ್ಟಿಗೆ ಹೊಲಗದ್ದೆಗಳಿದ್ದ ಪ್ರದೇಶವೇ ಆಗಿತ್ತು ಎಂಬುದನ್ನು ಮಾಸ್ತಿ ವೆಂಕಟೇಶ ಅಯ್ಯಂಗಾರ್

ಅವರ ಆತ್ಮಕತೆ 'ಭಾವ' ಸಂಪುಟಗಳು, ತಿ.ತಾ. ಶರ್ಮ ಮತ್ತು ಡಿ.ವಿ.ಗುಂಡಪ್ಪನವರ ಬರಹಗಳು ಹಾಗೂ ಇತ್ಯಾದಿ ಆಕರಗಳಲ್ಲಿನ ಸಾಂದರ್ಭಿಕ ವಿವರಗಳು ಸಾಬೀತು ಮಾಡುತ್ತವೆ. ಇಂದು ನಗರೀಕರಣ ಪ್ರಕ್ರಿಯೆ ಅತ್ಯಂತ ವೇಗವಾಗಿ ಸಾಗಿ ಹೊಲಗದ್ದೆಗಳಿದ್ದ ಪ್ರದೇಶಗಳು ನಾಶವಾಗಿವೆ. ಶಾಸನಗಳಲ್ಲಿ ಹೊಲಗದ್ದೆಗಳ ವಿವರಗಳು ದಾಖಲಾಗಿರುವ ಕಾರಣ, ಆ ಕಾಲದ ಸ್ವರೂಪವನ್ನು ನಾವು ಪುನಾರಚಿಸಿಕೊಳ್ಳಬೇಕಿದೆ. ಆ ಕಾಲದಲ್ಲಿ (ಪ್ರಾಚೀನ ಕಾಲ ಮತ್ತು ೧೮೦೦-೧೯೦೦ ರ ಸುಮಾರು) ಬಳಕೆಯಲ್ಲಿದ್ದ ಎಷ್ಟೋ ಬೆಳೆಗಳ ದೇಶೀ ಹೆಸರುಗಳು, ತಳಿಗಳು ಇಂದು ನಮಗೆ ಕೈತಪ್ಪಿ ಹೋಗಿವೆ. ಉದಾಹರಣೆಗೆ : ಲೂಯಿ ರೈಸರು ತಮ್ಮ ಮೈಸೂರು ಗೆಜೆಟಿಯರ್‌ನಲ್ಲಿ ಸುಮಾರು ೨೧ ಬಗೆಯ ಬಾಳೆಹಣ್ಣು ತಳಿಗಳ ಹೆಸರುಗಳನ್ನು ದಾಖಲಿಸಿದ್ದಾರೆ. ಇಂತಹವುಗಳ ಬಗೆಗೆ ಕೋಶವೊಂದು ರಚನೆಯಾಗಬೇಕಾದ ಅಗತ್ಯವಿದೆ.

ಪ್ರಾಚೀನ ಬೆಂಗಳೂರಿನ ಕೃಷಿ ಸಂಸ್ಕೃತಿ, ಶಾಸನಗಳಲ್ಲಿ ಕಂಡುಬರುವ ಕೃಷಿಭೂಮಿಯ ವಿವರಗಳು : ಬೆಂಗಳೂರು ಜಿಲ್ಲೆಯ ಶಾಸನಗಳಲ್ಲಿ ಬೆಳೆಗಳ ವಿವರ ದೊರಕುವುದು ಅಪರೂಪ. ದಾನಗಳನ್ನು ನೀಡಿರುವ ಸಮಯದಲ್ಲಿ ಉಲ್ಲೇಖಗೊಂಡಿರುವ ಅಡಕೆ, ಎಲೆ ಇತ್ಯಾದಿಗಳನ್ನು ಈ ಜಿಲ್ಲೆಯ ಬೆಳೆಗಳೆಂದು ನೇರವಾಗಿ ಹೇಳುವುದು ಸಮರ್ಥನೀಯವಲ್ಲ. ಇಂತಹ ಕೆಲವು ಪದಾರ್ಥಗಳಿಗೆ ಸುಂಕವನ್ನು ಹೇರಲಾಗುತ್ತಿತ್ತು. ಇವುಗಳನ್ನು ಸಂತೆಗಳಲ್ಲಿ ಮಾರಾಟ ಮಾಡುತ್ತಿದ್ದ ವಿವರಗಳು ಶಾಸನೋಕ್ತವಾಗಿವೆ. ಭೂಮಿಯನ್ನು ದಾನ ಕೊಟ್ಟಿರುವ ವಿವರಗಳನ್ನು ಶಾಸನಗಳು ಧಾರಾಳವಾಗಿ ದಾಖಲಿಸಿವೆ. ಈ ಸಂದರ್ಭದಲ್ಲಿ ಗದ್ದೆ, ಬೆದ್ದಲು ಇತ್ಯಾದಿ ಶಬ್ದಗಳು ಸೀಮಾ ವಿವರಗಳ ಸಹಿತ ಶಾಸನಗಳಲ್ಲಿ ದೊರಕುತ್ತವೆ. ಉದಾಹರಣೆಗೆ:

- ಆವೂರ ಗದ್ದೆ ಬೆದ್ದಲು {**ಎಪಿಗ್ರಾಫಿಯಾ ಕರ್ಣಾಟಿಕಾ**, ಸಂಪುಟ-೯ (ರೈಸ್ ಆವೃತ್ತಿ), ಬೆಂಗಳೂರು-೨೨}
- ಮಾವಿನಕೆಱೆಹುರವಾಮಾರಾಡಿಯಕೆಱೆಯವೊಳಗಾದಚತುಸ್ಸೀಮೆಯ ಗದ್ದೆ ಬೆಜ್ಜಲನು {**ಎಪಿಗ್ರಾಫಿಯಾ ಕರ್ಣಾಟಿಕಾ**, ಸಂಪುಟ-೯ (ರೈಸ್ ಆವೃತ್ತಿ), ಬೆಂಗಳೂರ್ರು-೨೪}

  ಕೃಷಿಯೇ ಪ್ರಧಾನವಾಗಿರುವ ನಾಡಿನಲ್ಲಿ ಕೃಷಿಗೆಂದು ಎಂಬ ಉಲ್ಲೇಖವನ್ನು ಮಾಡುವ ಅಗತ್ಯವಂತೂ ನಾಡಿನವರಿಗೆ ಕಂಡುಬಂದಿಲ್ಲ. ನೀರಾವರಿಗೆ, ಕೆರೆಗಳಿಗೆ ಸಂಬಂಧಪಡುವ ವಿವರಗಳು ಶಾಸನಗಳಲ್ಲಿವೆ. ಇವುಗಳ ಬಗೆಗೆ ಈಗಾಗಲೇ ಅಧ್ಯಯನವೂ ನಡೆದು ಬರಹಗಳು ಪ್ರಕಟವಾಗಿದೆ. ಆದುದರಿಂದ ಶಾಸನಗಳಿಂದ ಲಭ್ಯವಾಗುವ ವಿವರಗಳನ್ನು ದಿಙ್ಮಾತ್ರ ಇಲ್ಲಿ ದಾಖಲಿಸಲಾಗಿದೆ.

- ಕೆಲವು ಶಾಸನಗಳಲ್ಲಿ ಗದ್ದೆಯನ್ನು ದಾನವಾಗಿ ನೀಡಲಾಗಿದೆ ಎಂದು ಹೇಳುವ ಸಂದರ್ಭದಲ್ಲಿ ಬತ್ತವನ್ನು ಬೆಳೆಯುವ ಭೂಮಿ ಎಂದು ಅಧ್ಯಾಹಾರ ಮಾಡಿಕೊಳ್ಳಬೇಕಾದ ಸಂದರ್ಭಗಳೂ ಉಂಟು {ಉದಾಹರಣೆಗೆ : **ಎಪಿಗ್ರಾಫಿಯಾ ಕರ್ಣಾಟಿಕಾ,** ಸಂಪುಟ-೯ (ರೈಸ್ ಆವೃತ್ತಿ), ನೆಲಮಂಗಲ-೧, ಕಾಲ : ಕ್ರಿ.ಶ. ೧೦೨೯}. ಲೂಯಿ ರೈಸ್ ಅವರು ಇದೇ ರೀತಿ ಅರ್ಥೈಸಿದ್ದಾರೆ.

  ಶಾಸನಗಳಲ್ಲಿ ಕಾಡಾರಂಭ, ನೀರಾರಂಭ, ಗುಡಿ, ಗುಯ್ಯಲು, ಬಿತ್ತುವಟ, ತೋಟ, ತುಡಿಕೆ ಎಂಬ ಶಬ್ದಗಳು ದೊರಕುತ್ತವೆ. ಇವೆಲ್ಲವೂ ಮೂಲತಃ ಕೃಷಿಗೆ ಸಂಬಂಧಪಟ್ಟ ಶಬ್ದಗಳೇ ಆಗಿವೆ.

- ತಲಕಾಡು ಗಂಗರ ಕಾಲದ ಕೆರೆಗಳಲ್ಲಿ, ಕ್ರಿ. ಶ. ೮೭೦ರಲ್ಲಿ ಸತ್ಯವಾಕ್ಯ ಪೆರ್ಮಾ[ನ]ಡಿಯ ಸಾಮಂತನಾದ ಕಲಿಯುಗದಣುಗ ನಾಗತ್ತರನ ಆಳು, ಇರ್ವ್ಬುಲಿಯೂರಿನ (ಇಂದಿನ ಸರ್ಜಾಪುರ ರಸ್ತೆಯ ಅಗರ ಸಮೀಪದ ಇಬ್ಬಲೂರು) ಒಡೆಯ, ಇರುಗಮಯ್ಯನ ಮಗ ಸಿರಿಯಮಯ್ಯ ಎಂಬುವನು ಬೆಂಗಳೂರು ದಕ್ಷಿಣ ತಾಲ್ಲೂಕು ಅಗರದ ಬಳಿ ಮೂಡಣ ಕೆರೆಯೊಂದನ್ನು ಕಟ್ಟಿಸಿದ ವಿವರ ಹಾಗೂ ಅದಕ್ಕೂ ಮೊದಲೇ ಅಲ್ಲಿದ್ದ ಎರಡು ಕೆರೆಗಳಿಗೆ ತೂಬುಗಳನ್ನು ಇಡಿಸಿದ ವಿವರ ಶಾಸನದಲ್ಲಿ ದಾಖಲಾಗಿದೆ {ನೋಡಿ : **ಬೆಂಪೂರೊಡೆಯ (=ಬೇಗೂರು) ನಾಗತ್ತರನ ಶಾಸನಗಳು**-ಎಸ್. ಕಾರ್ತಿಕ್, ಸಂಶೋಧನ ಸಂಭಾವನೆ (ಇತಿಹಾಸ, ಹಸ್ತಪ್ರತಿ, ವಿಮರ್ಶೆ ವ್ಯಕ್ತಿಚಿತ್ರ ಸಂಬಂಧೀ ಬರಹಗಳು), ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು-೨೦೧೬, ಪುಟ ೭-೨೨}. ಇವುಗಳೇ ಬಲುಮಟ್ಟಿಗೆ ಬೆಂಗಳೂರಿನ ಪ್ರಾಚೀನ ಕೆರೆಗಳೆಂದು ಕಾಣುತ್ತದೆ. ಇವುಗಳಲ್ಲಿ ಅಗರದ ಕೆರೆ ಈಗಲೂ ಉಳಿದುಕೊಂಡಿದೆ.

- ಕ್ರಿ.ಶ. ೧೨-೩-೧೨೪೭ ರ ಮಡಿವಾಳದ ಶಾಸನದಲ್ಲಿ 'ವೆಂಗಳೂರು ಪಿರಿಯ ಕೆರೆ' ಎಂಬ ಉಲ್ಲೇಖ ಕಂಡುಬರುತ್ತದೆ {**ಎಪಿಗ್ರಾಫಿಯಾ ಕರ್ಣಾಟಿಕಾ,** ಸಂಪುಟ-೯ (ರೈಸ್ ಆವೃತ್ತಿ), ಬೆಂಗಳೂರು-೬೮}. ಕನ್ನಡದ ಬ ತಮಿಳಿನಲ್ಲಿ ವ ಆಗುವುದರಿಂದ ವೆಂಗಳೂರು ಎಂಬ ರೂಪ ಬಳಕೆಯಾಗಿದೆ. ಶಾಸನಪಾಠ ಅಲ್ಲಲ್ಲಿ ತ್ರುಟಿತವಾಗಿದೆ. ವೆಂಗಳೂರ ಪಿರಿಯ ಕೆರೆ ಎಂದರೆ ಈಗ ಮಡಿವಾಳದ ಕೆರೆಯೆಂದು ಕರೆಯುವುದೇ ಆಗಿದೆಯೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಇದಕ್ಕೆ ಆಧಾರಗಳು ಸಾಲವು.

- ಕ್ರಿ. ಶ. ೧೧ನೆಯ ಶತಮಾನದ ಕೊನೆಕೊನೆಗೆ ಬೆಂಗಳೂರು ಜಿಲ್ಲಾ ಪ್ರದೇಶವು

ಚೋಳರ ಆಳ್ವಿಕೆಗೆ ಒಳಪಟ್ಟಿತು. ಆಗಲೂ ಕೆರೆಗಳ ನಿರ್ಮಾಣ ಕಾರ್ಯ ಅವಿರತವಾಗಿ ಮುಂದುವರೆದಿರುವುದು ಕಂಡುಬರುತ್ತದೆ. ಸಣ್ಣೆನಾಡ ಗಾಮುಂಡನ ಮಗ ರಾಜರಾಜ ವೇಳಾನ್ ಎಂಬುವನು ಪಟ್ಟಂದೂರು ಕೆರೆಯನ್ನು ಕಟ್ಟಿಸಿದ ವಿವರ ಕ್ರಿ. ಶ. ೧೦೪೩ರ ಚೋಳ ರಾಜೇಂದ್ರನ ಕಾಡುಗೋಡಿಯ ಶಾಸನದಲ್ಲಿ ಬಂದಿದೆ {**ಎಪಿಗ್ರಾಫಿಯಾ ಕರ್ಣಾಟಿಕಾ,** ಸಂಪುಟ-೯ (ರೈಸ್ ಆವೃತ್ತಿ). ಹೊಸಕೋಟೆ -೧೪೨}.

- ಹನ್ನೆರಡನೆಯ ಶತಮಾನದ ವೇಳೆಗೆ ಹೊಯ್ಸಳರ ಆಳ್ವಿಕೆ ಬೆಂಗಳೂರು ಜಿಲ್ಲಾ ಪ್ರದೇಶದ ಮೇಲೆ ನೆಲೆಗೊಂಡಿತು. ಹೊಯ್ಸಳರ ಮಹಾಮಂಡಳೇಶ್ವರರಾದ ಕಕ್ಕಡ ಮಹಾರಾಯರೂ ಪೂರ್ವಾಧಿರಾಯರೂ ಆನೇಕಲ್ ತಾಲ್ಲೂಕು ಪ್ರದೇಶದಲ್ಲಿ ಅನೇಕ ಕೆರೆಕಟ್ಟೆಗಳ ನಿರ್ಮಾಣ ಕಾರ್ಯವನ್ನು ಕೈಕೊಂಡ ವಿವರಗಳು ದೊರಕುತ್ತವೆ. ಕ್ರಿ.ಶ. ೧೨೬೫ರ ಹಂದೇನಹಳ್ಳಿ ಗ್ರಾಮದ ಶಾಸನವು ಮಂಡಲರಾಯ ತ್ರಿಭುವನಮಲ್ಲ ಕಕ್ಕಡ ಮಹಾರಾಯನಿಂದ ಆ ಗ್ರಾಮದ ಕೆರೆ ರೂಪುಗೊಂಡಿದೆ ಎಂದು ತಿಳಿಸುತ್ತದೆ {**ಎಪಿಗ್ರಾಫಿಯಾ ಕರ್ಣಾಟಿಕಾ,** ಸಂಪುಟ-೯ (ರೈಸ್ ಆವೃತ್ತಿ). ಆನೇಕಲ್-೪೧}. ತ್ರಿಭುವನಮಲ್ಲ ಪೂರ್ವಾದಿರಾಯ ಅಲ್ಲಾಳ ಪೆರುಮಾಳ್ ಎಂಬುವನಿಗಾಗಿ ಸೋಮಗಾವುಂಡನ ಮದ್ದೆಯನ್ನನ ಮಗ ವೈರವನ್ ಎಂಬುವ ಕೆರೆಯೊಂದನ್ನು ಕಟ್ಟಿಸಿದ ವಿವರ ಕ್ರಿ. ಶ. ೧೨೭೪ರ ಮಾಯಸಂದ್ರ ಗ್ರಾಮ ಶಾಸನದಲ್ಲಿ ಬಂದಿದೆ {**ಎಪಿಗ್ರಾಫಿಯಾ ಕರ್ಣಾಟಿಕಾ,** ಸಂಪುಟ-೯ (ರೈ ಆವೃತ್ತಿ), ಆನೇಕಲ್-೪೫}.
- ಕ್ರಿ.ಶ. ೧೪-೧೧-೧೪೧೨ರ ಮಾಯಸಂದ್ರ ಶಾಸನದಲ್ಲಿ ತತ್ತನಕೆಜೆ, ಬೆಳ್ಳವಾರಣದ ಕೆಜೆಗಳ ಹೆಸರು ದಾಖಲಾಗಿದೆ {ನೋಡಿ : **ಬೆಂಗಳೂರು ಜಿಲ್ಲೆ ಆನೇಕಲ್ ತಾಲ್ಲೂಕು ಮಾಯಸಂದ್ರ ಶಾಸನದ ಪರಿಷ್ಕೃತ ಪಾಠ ಮತ್ತು ವಿಶ್ಲೇಷಣೆ**-ಎಸ್. ಕಾರ್ತಿಕ್, ಸಂಶೋಧನ ಸಂಭಾವನೆ (ಇತಿಹಾಸ, ಹಸ್ತಪ್ರತಿ, ವಿಮರ್ಶೆ ವ್ಯಕ್ತಿಚಿತ್ರ ಸಂಬಂಧೀ ಬರಹಗಳು), ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು-೨೦೧೬, ಪುಟ ೩೬-೪೫}. ಈಗ ಇವುಗಳನ್ನು ಗುರುತಿಸುವುದೇ ಕಷ್ಟಕರವಾಗಿದೆ.
- ಬೆಂಗಳೂರು ಪೂರ್ವತಾಲ್ಲೂಕಿನ ವಿಭೂತಿಪುರ ಗ್ರಾಮದ ಶಾಸನವು ಕ್ರಿ.ಶ. ೧೩೦೭ರಲ್ಲಿ ಮಾಸಂದಿನಾಡಿನ ಪಶ್ಚಿಮ ಭಾಗದ ಅಧಿಕಾರಿ ಸೆಂಬಿದೇವನ್, ನಾಡಗೌಡ ವಿಲ್ಲಗಾವುಂಡನ್ ಮುಂತಾದವರು ಸೇರಿ ಕಾಡನ್ನು ಕಡಿದು, ಮರಳನ್ನು

ತೆಗೆದು, ಮಟ್ಟಮಾಡಿ ಕೆರೆಯೊಂದನ್ನು ರಚಿಸಿ, ಊರೊಂದನ್ನು ಕಟ್ಟಿ ಆ ಊರಿಗೆ ವಾಚ್ಚಿದೇವಪುರವೆಂದು ನಾಮಕರಣ ಮಾಡಿ, ವಾಚ್ಚಿದೇವ ಯತಿಗೆ ಮಡಪುರಂ ಅಂದರೆ ಪುರಧರ್ಮವಾಗಿ ದತ್ತಿಬಿಟ್ಟ ಸಂಗತಿಯನ್ನು ತಿಳಿಸುತ್ತದೆ {**ಎಪಿಗ್ರಾಫಿಯಾ ಕರ್ಣಾಟಿಕಾ,** ಸಂಪುಟ-೯ (ರೈಸ್ ಆವೃತ್ತಿ), ಬೆಂಗಳೂರು - ೧೩೩}.

- ಕ್ರಿ.ಶ.೧೩೧೦ರಲ್ಲಿ ಹೊಯ್ಸಳ ಮೂರನೆಯ ವೀರಬಲ್ಲಾಳನ ಸಾಮಂತಾಧಿಪತಿಯಾದ ನರಲೋಕಗಂಡ ಮಯಿಲೆಯ ನಾಯಕರ ಸೋದರ ಚೆಂನಯ ನಾಯಕನು ಮೂರು ಸಾವಿರ ಹೊನ್ನನ್ನು ವೆಚ್ಚಮಾಡಿ "ರಾಮಸಮುದ್ರ' ಎಂಬ ಕೆರೆಯನ್ನು ಕಟ್ಟಿಸಿದ. ಈ ಶಾಸನದಲ್ಲಿ ಭೂತಳದಲ್ಲಿರುವ ನರ, ಮೃಗ, ಪಶುಪಕ್ಷಿ ಮೊದಲಾದ ಯೋನಿ ಮೊದಲಾದವು ಸಾಯುವುದನ್ನು ತಡೆಯಲು ಸದಾ ಲೋಕವು ಗಂಗಾದೇವಿಯ ಅಂದರೆ ನೀರಿನ ಆವಲಂಬನೆಯಲ್ಲಿರಲು ಈ ಕೆರೆಯನ್ನು ಕಟ್ಟಿಸಿರುವ ಸಂಗತಿ ದಾಖಲಾಗಿದೆ {**ಎಪಿಗ್ರಾಫಿಯಾ ಕರ್ಣಾಟಿಕಾ,** ಸಂಪುಟ-೯ (ರೈಸ್ ಆವೃತ್ತಿ), ಬೆಂಗಳೂರು-೧೧೧}.
- ಹೊಸಕೋಟೆಯ ತಾಮ್ರಶಾಸನವೊಂದರಲ್ಲಿ (ಕ್ರಿ.ಶ. ೨-೧೧-೧೬೯೩) ಸುಗುಟೂರು ಪಾಳೆಯಗಾರ ಮುಮ್ಮಡಿ ಚಿಕ್ಕರಾಯ ಚಿಕ್ಕತಮ್ಮೇಗೌಡನು ಭೂದಾನದ ಜೊತೆಗೆ ನೆಲ್ಲು, ರಾಗಿ ಮತ್ತು ಹಣದ ರೂಪದಲ್ಲಿ ವಾರ್ಷಿಕ ವರಮಾನ ಬರುವಂತೆ ಉದಾರವಾದ ದತ್ತಿ ಬಿಟ್ಟಿರುವ ಉಲ್ಲೇಖ ದೊರಕುತ್ತದೆ {**ಎಪಿಗ್ರಾಫಿಯಾ ಕರ್ಣಾಟಿಕಾ,** ಸಂಪುಟ-೯ (ರೈಸ್ ಆವೃತ್ತಿ), ಹೊಸಕೋಟೆ-೧೦೫}. ಈ ಉಲ್ಲೇಖವು ಆಗ ಬೆಳೆಯುತ್ತಿದ್ದ ಬೆಳೆಗಳನ್ನು ಕುರಿತು ಹೇಳುತ್ತಿರುವಂತಿದೆ ಎಂಬ ಅಂಶ ಸಂಭಾವ್ಯವಾದ್ದು.
- ವಿಜಯನಗರ ಸಾಮ್ರಾಜ್ಯದ ಅರಸರು ಮತ್ತು ಅಧಿಕಾರಿಗಳು ಬಹಳವಾಗಿ ಕೆರೆ, ಕಟ್ಟೆಗಳ ನಿರ್ಮಾಣಕ್ಕೆ ಪ್ರೋತ್ಸಾಹ ನೀಡಿದರು. ಸಾಮಂತ ಅರಸರು, ಪಾಳೆಯಗಾರರು ಕೂಡ ಈ ವಿಷಯದಲ್ಲಿ ಹಿಂದೆ ಬಿದ್ದಿಲ್ಲವೆನ್ನುವುದು ಅಷ್ಟೇ ಗಮನಾರ್ಹ ಸಂಗತಿಯಾಗಿದೆ.

ಮೇಲೆ ದಾಖಲಿಸಿರುವಂತಹ ವಿವರಗಳು ಸಂಕ್ಷಿಪ್ತ ಪಕ್ಷಿನೋಟವಷ್ಟೇ ಆಗಿದೆ. ಇನ್ನೂ ಅನೇಕ ವಿವರಗಳು ಶಾಸನಗಳಲ್ಲಿ ಧಾರಾಳವಾಗಿ ದೊರಕುತ್ತವೆ. ಬೆಂಗಳೂರು ಜಿಲ್ಲೆಯಲ್ಲಿ ಸುಮಾರು ೩೦೦ ಕ್ಕೂ ಅಧಿಕ ಕೆರೆಗಳಿದ್ದವೆಂದು ಶಾಸನಗಳಿಂದ ತಿಳಿದುಬರುತ್ತದೆ. ಸಮಸ್ತ ಜೀವಜಂತುಗಳು, ಮನುಷ್ಯ-ಪ್ರಾಣಿಗಳಾದಿಯಾಗಿ ಎಲ್ಲರಿಗೂ ಉದಕವೇ

ಜೀವವಾದ ಕಾರಣ ಎಲ್ಲರಿಗೂ ಉಪಯೋಗವಾಗಬೇಕೆಂಬ ಸದುದ್ದೇಶದಿಂದಲೇ ಕೆರೆಗಳ ರಚನೆಯಾಗಿದೆ. ಇವುಗಳಿಂದ ಕೃಷಿ ಚಟುವಟಿಕೆಗೆ ಬಲವಿತ್ತು. ಇವುಗಳ ದಡಗಳಲ್ಲಿ ಕೃಷಿ ವ್ಯಾಪಕವಾಗಿ ನಡೆಯುತ್ತಿತ್ತು. ಬೆಂಗಳೂರು ನಗರದಲ್ಲಿ ಕಾರಂಜಿ, ಧರ್ಮಾಂಬುಧಿ ಮುಂತಾದ ಕೆರೆಗಳು ಇಂದು ನಗರೀಕರಣದ ಕಾರಣ ಇಲ್ಲವಾಗಿವೆ (ಗವಿಪುರದ ಕೆಂಪಾಂಬುಧಿ, ಮಾಗಡಿ ರಸ್ತೆಯ ಹೇರೋಹಳ್ಳಿ, ಅಂದ್ರಹಳ್ಳಿ, ಹಲಸೂರು, ಯಡಿಯೂರು, ಸಾರಕ್ಕಿ, ಪುಟ್ಟೇನಹಳ್ಳಿ, ಹೊಸಕೆರೆಹಳ್ಳಿ ಮತ್ತು ಕೆ.ಆರ್.ಪುರ, ಹೆಬ್ಬಾಳ, ಮಡಿವಾಳ ಮುಂತಾದ ಪ್ರದೇಶಗಳ ಕೆರೆಗಳು ಇದ್ದರೂ ಕೆಲಮಟ್ಟಿಗೆ ಮೂಲಸ್ವರೂಪವನ್ನು ಕಳೆದುಕೊಂಡು, ಕಲುಷಿತವಾಗಿ ಉಪಯೋಗವನ್ನೇ ಕಳೆದುಕೊಂಡಿವೆ/ ಕಳೆದುಕೊಳ್ಳುತ್ತಿವೆ). ಇಂದಿನ ಬೆಂಗಳೂರಿನ ನ್ಯಾಷನಲ್ ಕಾಲೇಜ್ ವೃತ್ತ, ಬಳ್ಳಾರಿ ರಸ್ತೆಯ ಗಂಗೇನಹಳ್ಳಿ (ಈಗ ಗಂಗಾನಗರ), ಸರ್ಜಾಪುರ ರಸ್ತೆ, ಹೊಸೂರು ರಸ್ತೆ, ಬನ್ನೇರುಘಟ್ಟ ರಸ್ತೆ, ಮೈಸೂರು ರಸ್ತೆ, ಕನಕಪುರ ರಸ್ತೆ, ಮಾಗಡಿ ರಸ್ತೆ ಮುಂತಾದ ಕಡೆಗಳಲ್ಲಿ ಇದ್ದ ಕೃಷಿಭೂಮಿ ಮತ್ತು ಹಸುರು ವ್ಯಾಪಕವಾಗಿಯೇ ನಾಶವಾಗಿದೆ. ಸರ್ಜಾಪುರದಲ್ಲಿ ಇದ್ದ ದಂಡನ ಕೆರೆ ಎಂಬುದು ಈಗ ಇಲ್ಲ. ಇದರ ಹೆಸರು ತಿಳಿದಿರುವವರೂ ಬಹಳ ಕಡಿಮೆ ಮಂದಿ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ, ದೇವನಹಳ್ಳಿ, ರಾಮಸಂದ್ರ ಮುಂತಾದ ಪ್ರದೇಶಗಳ ಕೆರೆಗಳು, ಬೆಂಗಳೂರು ನಗರ ಜಿಲ್ಲೆಯ ಮುತ್ತಾನಲ್ಲೂರು, ಕೋಟಗಾನಹಳ್ಳಿ, ಚಿಕ್ಕನಹಳ್ಳಿ, ತ್ಯಾವಕನಹಳ್ಳಿ, ಹಂದೇನಹಳ್ಳಿ, ಬಿಲ್ಲಾಪುರ, ಬಿದರಗು ಗುಡ್ಡಹಳ್ಳಿ, ಭಕ್ತಿಪುರ, ಮಾಯಸಂದ್ರ, ಸಿಂಗೇನ ಅಗ್ರಹಾರ, ಹುಸ್ಕೂರು, ಚಿಕ್ಕತಿಮ್ಮಸಂ, ಬಳ್ಳೂರು ಇತ್ಯಾದಿ ಗ್ರಾಮಗಳ ಕೆರೆಗಳು ಕೆಲಮಟ್ಟಿಗೆ ಉಳಿದುಕೊಂಡಿವೆ. ಕುಡಿಯುವ ನೀರಿಗೆಂದು ಬಾವಿಗಳನ್ನು ತೋಡಿಸಿರುವ ವಿವರಗಳೂ ಅವುಗಳನ್ನು ಬಳಸುತ್ತಿದ್ದ ವಿವರಗಳೂ ಮೌಖಿಕವಾಗಿ ದೊರಕುತ್ತವೆ. ಉದಾಹರಣೆಗೆ : ಬೆಂಗಳೂರು ನಗರ ಜಿಲ್ಲೆಯ ಸರ್ಜಾಪುರದಲ್ಲಿದ್ದ ಸರಿಗೆಬಾವಿ, ತೊಟ್ಟಿಲು ಬಾವಿ, ನಾಗರಬಾವಿ (ಕಲ್ಯಾಣಿ), ಗೋವಿಂದರಾಜುಲ ಬಾವಿ (ಕಲ್ಯಾಣಿ) ಮುಂತಾದವು. ಇವುಗಳಲ್ಲಿ ಬಹುತೇಕವು ಈಗ ಇಲ್ಲವಾಗಿವೆ. ಇರುವವುಗಳೂ ತಮ್ಮ ಮೂಲಸ್ವರೂಪವನ್ನು ಕಳೆದುಕೊಂಡಿವೆ. ಎಷ್ಟೋ ಸ್ಥಳನಾಮಗಳು ಕೂಡ ಕೆರೆಕಟ್ಟೆಗಳು, ಬೆಳೆಗಳ ವಿವರಗಳನ್ನು ಅರಿಯುವ ದಿಸೆಯಲ್ಲಿ ನೆರವೀಯುತ್ತವೆ (ಉದಾಹರಣೆಗೆ : ಸಣ್ಣಕ್ಕಿ ಬಯಲು ಇತ್ಯಾದಿ).

ಈಗಿನ ಮೂಲ ಸೌಕರ್ಯ ಮತ್ತು ಸಂಪನ್ಮೂಲಗಳು : ಬೆಂಗಳೂರಿನಲ್ಲಿ ೪೦.೭೬% ವ್ಯವಸಾಯ ಮಾಡದೇ ಇರುವಂತಹ ಭೂಮಿ ಇದೆ. ಉಳಿದ ೪೩.೬೬% ಭೂಮಿಯಲ್ಲಿ ೧೪.೦೯% ಭೂಮಿಯಲ್ಲಿ ವ್ಯವಸಾಯ ಮಾಡಲಾಗುತ್ತಿದೆ ಮತ್ತು ೧.೪೯% ರಷ್ಟು ಭೂಮಿ ಅರಣ್ಯ ಪ್ರದೇಶವಾಗಿದೆ. ಬೆಂಗಳೂರು ಭೂ ಪ್ರದೇಶದಲ್ಲಿ ಗ್ರಾನೈಟ್, ಜೆನೆಸಿಸ್,

ಮಿಗ್ಮಟೈಟ್ಸ್ ಇದ್ದು ಕೆಂಪು ಮಣ್ಣು ಮತ್ತು ಜೇಡಿ ಮಣ್ಣನ್ನು ಹೊಂದಿದೆ. ಬೆಂಗಳೂರಲ್ಲಿ ಮಧ್ಯಮ ಮತ್ತು ಎರಡು ಮಾದರಿ ಮಳೆಯ ವಿನ್ಯಾಸವಿದ್ದು ಸಣ್ಣ ಮತ್ತು ದೀರ್ಘ ಅವಧಿಯ ಬೆಳೆಗಳನ್ನು ಬೆಳೆಯಲು ಪ್ರಶಸ್ತವಾಗಿದೆ. ಬೆಂಗಳೂರು ಜಿಲ್ಲೆಯನ್ನು ಭೌಗೋಳಿಕವಾಗಿ ಬಯಲುನಾಡಿನ ಪ್ರದೇಶವೆಂದು ಗುರುತಿಸಲಾಗಿದೆ. ಬೆಂಗಳೂರು ಜಿಲ್ಲಾ ಪ್ರದೇಶವು, ಈಶಾನ್ಯ ಮತ್ತು ಪೂರ್ವಕ್ಕೆ ಬಹುಮಟ್ಟಿಗೆ ಸಮತಟ್ಟಾಗಿದ್ದು ದಕ್ಷಿಣ ಪಿನಾಕಿನೀ ನದಿಯ ಜಲಾನಯನ ಪ್ರದೇಶವಾಗಿದೆ. ವಾಯವ್ಯ ಮತ್ತು ಪಶ್ಚಿಮ ಪ್ರದೇಶಗಳು ಅರ್ಕಾವತಿ ನದಿಗೆ ನೀರುಣಿಸುವ ಕೊರಕಲು ಪ್ರದೇಶದಿಂದ ಕೂಡಿದೆ. ದಕ್ಷಿಣ ಭಾಗದಲ್ಲಿ ಬನ್ನೇರುಘಟ್ಟದ ಬೆಟ್ಟಗುಡ್ಡಗಳ ಸಾಲುಗಳಿದ್ದು ಇದರ ಪಶ್ಚಿಮಕ್ಕಿರುವ ಪ್ರದೇಶಗಳು ಅರ್ಕಾವತಿಗೂ ಪೂರ್ವಕ್ಕಿರುವ ಪ್ರದೇಶಗಳು ದಕ್ಷಿಣ ಪಿನಾಕಿನಿಗೂ ನೀರೊದಗಿಸುತ್ತವೆ. ಕೃಷಿ ಚಟುವಟಿಕೆಯು ಈ ಭಾಗಗಳಲ್ಲಿ ಹೆಚ್ಚಾಗಿಯೇ ಕಂಡುಬರುತ್ತದೆ. ಬೆಂಗಳೂರು ನಗರ ಜಿಲ್ಲೆಯನ್ನು ಮಳೆಯನ್ನು ಅವಲಂಬಿಸಿರುವ ಇಲ್ಲವೇ ಒಣಬೇಸಾಯ ವಲಯ ಎಂದು ಇಂದಿನ ದಿನಗಳಲ್ಲಿ ಗುರುತಿಸಲಾಗಿದೆ.

ವ್ಯವಸಾಯಕ್ಕೆ ಪ್ರಾಮುಖ್ಯತೆ : ಬೆಂಗಳೂರಿನ ಒಟ್ಟು ವಿಸ್ತೀರ್ಣದಲ್ಲಿ ಶೇಕಡಾ ೧೪.೦೯ ರಷ್ಟು ಭೂಮಿಯಲ್ಲಿ ಮಾತ್ರ ವ್ಯವಸಾಯ ಮಾಡಲಾಗುತ್ತದೆ. ಇದರಲ್ಲಿ ಪ್ರಧಾನವಾಗಿ ಬೇಳೆಕಾಳುಗಳು ೬೬.೩೬% ಭೂಮಿಯಲ್ಲಿ ಕೇಂದ್ರೀಕೃತವಾಗಿದೆ. ದ್ವಿದಳ ಧಾನ್ಯಗಳನ್ನು ೯.೯೪% ವಿಸ್ತೀರ್ಣದ ಭೂಮಿಯಲ್ಲಿ ಬೆಳೆಯಲಾಗುತ್ತದೆ. ಆನೇಕಲ್ ತಾಲ್ಲೂಕನ್ನು ರಾಜ್ಯದ ರಾಗಿಯ ಬಟ್ಟಲು ಎಂದು ಕರೆಯುತ್ತಾರೆ. ಆದರೆ ಈಚೆಗೆ ಈ ತಾಲ್ಲೂಕಿನಲ್ಲಿ ಮಳೆ ಹಾಗೂ ಅಂತರ್ಜಲ ಕುಸಿತದಿಂದಾಗಿ ರಾಗಿ ಬೆಳೆ ಕಡಿಮೆಯಾಗಿದೆ. ಬೆಂಗಳೂರು ನಗರ ಹೂವಿನ ಕೃಷಿಯಲ್ಲಿ ಅತ್ಯುನ್ನತ ಮಟ್ಟದಲ್ಲಿ ಗುರುತಿಸಿಕೊಂಡಿದೆ. ಇಲ್ಲಿನ ಪ್ರಮುಖ ಬೆಳೆಗಳು ಬತ್ತ, ರಾಗಿ, ಜೋಳ, ಹುರುಳಿಕಾಳು, ಎಣ್ಣೆ ಬೀಜಗಳು. ಇದಲ್ಲದೇ ಬಾಳೆಹಣ್ಣು, ದ್ರಾಕ್ಷಿ, ಪಪ್ಪಾಯ, ಮಾವು, ಸಪೋಟ, ದಾಳಿಂಬೆ, ತೆಂಗು ಇವುಗಳನ್ನು ಬೆಳೆಯಲಾಗುತ್ತದೆ. ಪನ್ನೀರ್, ಚಪ್ಪರದ ಬದನೆಕಾಯಿಯನ್ನು ಕೂಡ ಬೆಂಗಳೂರಿನಲ್ಲಿ ಬೆಳೆಯಲಾಗುತ್ತದೆ. ದೇವನಹಳ್ಳಿಯಲ್ಲಿ ಬೆಳೆಯಲಾಗುವ ಚಕ್ಕೋತ ಪ್ರಸಿದ್ಧಿಯನ್ನು ಪಡೆದಿದೆ. ಇದೇ ರೀತಿ ಹೊಸಕೋಟೆ ಪ್ರದೇಶದ ಹೂವಿನ ಬೆಳೆ ಉಲ್ಲೇಖಾರ್ಹವಾಗಿದೆ. ಆನೇಕಲ್ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಮಲ್ಲಿಗೆ, ಕನಕಾಂಬರ, ಶಾಮಂತಿಗೆ, ಕಾಕಡಾ, ಸೂರ್ಯಕಾಂತಿ, ಗುಲಾಬಿ ಹೂವುಗಳನ್ನು ಕೂಡ ಬೆಳೆಯಲಾಗುತ್ತದೆ. ಆನೇಕಲ್, ಸರ್ಜಾಪುರ ಪ್ರದೇಶಗಳಲ್ಲಿ ಸೌತೇಕಾಯಿ, ಅವರೇಕಾಯಿ, ಸೊಪ್ಪು ಇವನ್ನು ಈಗ ಅಧಿಕ ಪ್ರಮಾಣದಲ್ಲಿ ಬೆಳೆಯಲಾಗುತ್ತದೆ. ಬೇರೆ ಬೇರೆ ಪ್ರದೇಶಗಳಲ್ಲಿಯೂ ಸಂದರ್ಭಕ್ಕೆ ತಕ್ಕಂತೆ ಬೆಳೆಗಳಲ್ಲಿ ವ್ಯತ್ಯಾಸಗಳಾಗುವುದುಂಟು.

ಬೆಂಗಳೂರು ನೀಲಿ ದ್ರಾಕ್ಷಿಗೆ, ಅದರ ವಿಶೇಷ ರುಚಿ ಹಾಗೂ ಬೆಳೆಯ ವೈಜ್ಞಾನಿಕ ಗುಣಕ್ಕಾಗಿಯೇ ಪ್ರಸಿದ್ಧವಾಗಿದೆ. ಜೊತೆಗೆ ನೀಲಿ ದ್ರಾಕ್ಷಿ ಬೆಳೆಯುವ ಭಾರತದ ಏಕೈಕ ರಾಜ್ಯ ಕರ್ನಾಟಕವೇ ಆಗಿದೆ. ಇದನ್ನು ಬೆಂಗಳೂರು ಗ್ರಾಮಾಂತರ, ಕೋಲಾರ ಹಾಗೂ ಬೆಂಗಳೂರು ನಗರ ಜಿಲ್ಲೆಗಳಲ್ಲಿ ಬೆಳೆಯಲಾಗುತ್ತದೆ. ಆದರೆ ಇಂದಿನ ದಿನಗಳಲ್ಲಿ ಈ ಭಾಗಗಳಲ್ಲಿನ ಅಂತರ್ಜಲ ಮಟ್ಟ ಕುಸಿದಿದೆ. ಹೀಗಾಗಿ ದ್ರಾಕ್ಷಿ ಬೆಳೆಗೆ ನೀರಿನ ಕೊರತೆ ಎದುರಾಗಿದೆ. ಕೆಲವೊಂದು ನಿರ್ದಿಷ್ಟ ಗುಣ ಹೊಂದಿರುವ ಕೃಷಿ ಮತ್ತು ತೋಟಗಾರಿಕಾ ತಳಿಗಳಿಗೆ 'ಭೌಗೋಳಿಕ ಗುರುತಿಸುವಿಕೆ' (ಜಿಯಾಗ್ರಫಿಕಲ್ ಇಂಡಿಕೇಷನ್-ಜಿಐ) ಎಂದು ಮಾನ್ಯತೆ ದೊರೆಯುತ್ತದೆ. ಅದರಂತೆ ಬೆಂಗಳೂರು ನೀಲಿ ದ್ರಾಕ್ಷಿಯ ವಿಶಿಷ್ಟ ಗುಣಕ್ಕಾಗಿ ೨೦೧೧ರಲ್ಲಿ, ಈ ಬೆಳೆಗೆ ಭೌಗೋಳಿಕ ಮಾನ್ಯತೆ ದೊರೆತಿದೆ. ಬಹೂಪಯೋಗಿ ಬೆಂಗಳೂರು ನೀಲಿ ದ್ರಾಕ್ಷಿಯನ್ನು ತಿನ್ನಲು ಮಾತ್ರವಲ್ಲ, ಮದ್ಯ ತಯಾರಿಕೆಗೂ ಬಳಸಲಾಗುತ್ತದೆ. ಸಾಮಾನ್ಯವಾಗಿ ಫ್ರೆಂಚ್ ದ್ರಾಕ್ಷಿ ಮದ್ಯ ತಯಾರಿಕೆಗೆ ಸೂಕ್ತವಾಗಿದ್ದರೂ ಅದನ್ನು ಹಣ್ಣಿನ ರೂಪದಲ್ಲಿ ತಿನ್ನಲು ಸಾಧ್ಯವಿಲ್ಲ. ಆದರೆ ಬೆಂಗಳೂರು ನೀಲಿ ದ್ರಾಕ್ಷಿಯಿಂದ ಮದ್ಯ, ಹಣ್ಣಿನರಸ, ಸ್ಪಿರಿಟ್, ಹಣ್ಣಿನ ರಸಾಯನಗಳನ್ನು ತಯಾರಿಸಬಹುದು, ಅಲ್ಲದೆ ತಿನ್ನಲು ಕೂಡ ರುಚಿಯಾಗಿರುತ್ತದೆ. ಇದು ವರ್ಷಪೂರ್ತಿ ಫಲ ನೀಡುತ್ತದೆಯಾದರೂ ಫೆಬ್ರುವರಿ ಮಧ್ಯದಿಂದ ಏಪ್ರಿಲ್‌ವರೆಗೆ ಇರುವ ಈ ಹಣ್ಣು ಬೇಸಿಗೆ ಹಣ್ಣು ಎಂದೇ ಪ್ರಸಿದ್ಧಿ ಪಡೆದಿದೆ.

ಬಸವನಗುಡಿ ಪ್ರದೇಶದಲ್ಲಿ ಕಡಲೆಕಾಯಿ ಬೆಳೆಯುವಿಕೆಯ ಐತಿಹ್ಯ : ದೊಡ್ಡಬಸವಣ್ಣನ ಗುಡಿ ಇರುವ ಪ್ರದೇಶದಲ್ಲಿ ಪ್ರತಿವರ್ಷವೂ ಕಾರ್ತಿಕ ಮಾಸದ ಕೊನೆಯ ಸೋಮವಾರದಂದು ನಡೆಯುವ ಕಡಲೆಕಾಯಿ ಪರಿಷೆ ಬೆಂಗಳೂರಿನ ಸಾಂಸ್ಕೃತಿಕ ಪರಂಪರೆಗೆ ಜೀವಂತಸಾಕ್ಷಿಯಾಗಿದೆ. ಈ ಪ್ರದೇಶವು ಸುಂಕೇನಹಳ್ಳಿ ಎಂಬ ಗ್ರಾಮವಾಗಿದ್ದು, ಈಗಲೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಇಲ್ಲಿ ಕಡಲೆಕಾಯಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲಾಗುತ್ತಿತ್ತೆಂದೂ ಅದನ್ನು ಬಸವ ಅಥವಾ ಗೂಳಿ ಬಂದು ತಿಂದುಹೋಗುತ್ತಿತ್ತು ಎಂದೂ ಕಡೆಗೆ ಅದನ್ನು ಹಿಡಿಯಲು ಹೋದಾಗ ವಿಗ್ರಹವಾಗಿ ಕುಳಿತಿತೆಂದೂ ಕತೆಗಳಿವೆ. ಸಾಕ್ಷಾತ್ ಕೈಲಾಸದ ನಂದಿಯೇ ಇದು ಎಂಬ ನಂಬಿಕೆಯಿಂದ ಇಂದಿಗೂ ಇಲ್ಲಿ ಕಡಲೆಕಾಯಿಯನ್ನು ನೈವೇದ್ಯಮಾಡಿ ೩ ದಿನ ವಿಜೃಂಭಣೆಯಿಂದ ಕಡಲೆಕಾಯಿ ಪರಿಷೆಯನ್ನು ಆಚರಿಸಲಾಗುತ್ತದೆ. ಈ ಪ್ರದೇಶದಲ್ಲಿ ಕಡಲೆಕಾಯಿಯನ್ನು ಬೆಳೆಯಲಾಗುತ್ತಿತ್ತು ಎಂಬುದಕ್ಕೆ ವೈಜ್ಞಾನಿಕವಾಗಿ ಪುರಾವೆಯೇನೂ ದೊರಕದು. ಆದರೆ ಸಾಂಸ್ಕೃತಿಕ ಆಚರಣೆಗೆ ಇರುವ ಹಲವು ಆಯಾಮಗಳಲ್ಲಿ ಇದನ್ನೂ ಒಂದಾಗಿ ಪರಿಗಣಿಸಬಹುದು.

ಬೆಂಗಳೂರು ಮತ್ತು ಬುಕನನ್ : ಬುಕನನ್ ತನ್ನ ಪ್ರವಾಸ ಕಥನದಲ್ಲಿ ಅಕ್ಕಿ, ರಾಗಿ, ಗೋಡಂಬಿ ಇತ್ಯಾದಿಗಳ ಬೆಲೆಗಳನ್ನು, ಆಮದು ರಫ್ತುಗಳ ವಿವರವನ್ನು ವಿವರವಾಗಿ ಪ್ರಸ್ತಾಪಿಸಿದ್ದಾನೆ. ಇವನು ಪ್ರಸ್ತಾಪಿಸುವ ಬೆಳೆಗಳೇ ಇಂದಿಗೂ ಈ ಪ್ರದೇಶದಲ್ಲಿ ರೂಢಿಯಲ್ಲಿವೆ.

ಕೃಷಿ ಸಂಬಂಧೀ ಸಮಸ್ಯೆಗಳು ಮತ್ತು ಸಂಸ್ಥೆಗಳು : ಇನ್ನು ಭೂಮಿಪೂಜೆ, ಫಸಲು ಬಂದಾಗ ಅದರಲ್ಲಿ ಒಂದು ಭಾಗವನ್ನು ದೇವರಿಗೆ, ಭೂಮಿತಾಯಿಗೆಂದು ನೈವೇದ್ಯ ಮಾಡುವುದು ಇಂದಿಗೂ ನಡೆದುಕೊಂಡು ಬಂದಿದೆ. ಮಳೆಗಾಗಿ ಕಾಯುವಾಗ ಸ್ವಾತಿ ಮಳೆ, ಹಸ್ತಾಮಳೆ ಎಂದು ಹೇಳುವುದು ಇಂದಿಗೂ ವಾಡಿಕೆಯಲ್ಲಿದೆ. ಕೃಷಿಯನ್ನು ಬಲುಮಟ್ಟಿಗೆ ಎಲ್ಲ ಪಂಗಡದವರೂ ರೂಢಿಸಿಕೊಂಡಿದ್ದಾರೆ. ಬೆಂಗಳೂರು ಪ್ರದೇಶದಲ್ಲಿ ತಿಗಳರು, ರೆಡ್ಡಿಗಳು, ಗೌಡರು, ಬ್ರಾಹ್ಮಣರು ಮುಂತಾದ ಎಲ್ಲ ಪಂಗಡಗಳೂ ಕೃಷಿಯನ್ನು ಅವಲಂಬಿಸಿವೆ. ಆದರೆ ಇಂದಿನ ಕಾಲದಲ್ಲಿ ಮಳೆಯ ಕೊರತೆ, ಅಂತರ್ಜಲದ ಕುಸಿತ, ಇತರ ರೀತಿಯ ಪ್ರಕೃತಿಯ ವೈಪರೀತ್ಯಗಳಿಂದ ರೈತರು ಬೆಳೆಯನ್ನು ಬೆಳೆಯುವುದು ಕಷ್ಟಸಾಧ್ಯ ಎಂಬಂತಾಗಿದೆ. ಕಾಡನ್ನು, ನಗರ ಪ್ರದೇಶದ ಮರಗಳನ್ನು ಸತತವಾಗಿ ಕಡಿಯುತ್ತಿರುವ ಕಾರಣ ಮಳೆ ಕುಂಠಿತಗೊಂಡು ತೊಂದರೆಯಾಗತೊಡಗಿದೆ. ಅತಿವೃಷ್ಟಿ ಅನಾವೃಷ್ಟಿಯೂ ಇಂದಿನ ದಿನಗಳಲ್ಲಿ ಸರ್ವೇಸಾಮಾನ್ಯ ಎನ್ನುವಂತಾಗಿದೆ. ಹಸುರು ಎಂಬುದು ರಾರಾಜಿಸುತ್ತಿದ್ದ ಕಾಲ ಸಂಪೂರ್ಣವಾಗಿ ಬದಲಾಗಿಹೋಗಿದೆ. ರೈತರಮಕ್ಕಳು ರೈತರಾಗಿ ಕಷ್ಟಪಡುವುದು ಬೇಡ ಎಂಬಂತಹ ಮಾತು ಕೇಳಿಬರುತ್ತಿರುವುದು ಈ ಹಿನ್ನೆಲೆಯಲ್ಲಿಯೇ ಎಂದು ಕಾಣುತ್ತದೆ. ಇದನ್ನು ಪೂರ್ಣವಾಗಿ ಸರಿ ಎನ್ನಲೂ ಸಾಧ್ಯವಿಲ್ಲ, ತಪ್ಪು ಎನ್ನಲೂ ಸಾಧ್ಯವಿಲ್ಲ. ಪೂರ್ವಕಾಲದಲ್ಲಿ ಇದು ಕರ್ತವ್ಯ ಎಂಬ ನೆಲೆಯಲ್ಲಿ ಪರಿಗಣಿತವಾಗಿತ್ತು. ಎಷ್ಟೋ ಪ್ರದೇಶಗಳು ಇಂದು ನಗರೀಕರಣದ ಪ್ರಭಾವಕ್ಕೆ ಒಳಗಾಗಿ ಕೃಷಿಭೂಮಿಯನ್ನು ಕಳೆದುಕೊಂಡಿವೆ. ಮಣ್ಣಿನಸಾರ ತನ್ನ ಕ್ಷಮತೆಯನ್ನು ಕಳೆದುಕೊಂಡಿದೆ. ವೈಜ್ಞಾನಿಕ ರೀತಿಯ ಕೃಷಿಯನ್ನು ನಮ್ಮಲ್ಲಿ ಇನ್ನೂ ರೂಢಿಸಿಕೊಂಡಿಲ್ಲವೇನೋ ಎಂಬಂತಹ ಅನುಮಾನವನ್ನು ಕೆಲವರು ಹೊರಹಾಕಿದ್ದಾರೆ. ಈ ಕಾರಣಕ್ಕಾಗಿಯೇ ಬೆಂಗಳೂರಿನಲ್ಲಿ ಗಾಂಧಿ ಕೃಷಿವಿಜ್ಞಾನ ಕೇಂದ್ರದ (ಜಿ.ಕೆ.ವಿ.ಕೆ.) ಆವರಣದಲ್ಲಿ ಕೃಷಿ ವಿಶ್ವವಿದ್ಯಾನಿಲಯ ೧೯೪೬ ರಲ್ಲಿ ಸ್ಥಾಪನೆಗೊಂಡಿತು. ಇದು ಬೆಂಗಳೂರು ನಗರದಿಂದ ೧೫ ಕಿ.ಮೀ. ದೂರದಲ್ಲಿ ಬೆಂಗಳೂರು-ಬಳ್ಳಾರಿ ರಸ್ತೆಯಲ್ಲಿ ಇದೆ. ಭೌಗೋಳಿಕವಾಗಿ ಈ ಸ್ಥಳವು ೧೩೦ ೦೫" ಉತ್ತರ ಅಕ್ಷಾಂಶ ಮತ್ತು ೭೭೦ ೩೪" ಪೂರ್ವ ರೇಖಾಂಶದಲ್ಲಿ ಇದೆ. ಕೇಂದ್ರವು ಸರಾಸರಿ ಸಾಗರಮಟ್ಟಕ್ಕಿಂತ ೯೨೪ ಮೀ. ಎತ್ತರದಲ್ಲಿದೆ. ಇಲ್ಲಿನ ವಾರ್ಷಿಕ ಮಳೆಯು ೫೨೮ ಮಿ.ಮೀ.ಗಳಿಂದ ೧೩೭೪.೪ ಮಿ.ಮೀ.ಗಳಷ್ಟು ಹಾಗೂ ಸರಾಸರಿ

ಮಳೆಯು ೯೧೫.೮ ಮಿ.ಮೀ.ಗಳಷ್ಟಿದೆ. ಇಂತಹ ಪ್ರದೇಶದಲ್ಲಿ ಕೃಷಿಗೆ ಸಂಬಂಧ ಪಡುವ ಪ್ರಯೋಗಗಳು ಮತ್ತು ಸಮ್ಮೇಳನಗಳು ಸತತವಾಗಿ ನಡೆಯುತ್ತಲೇ ಇದ್ದು, ಮತ್ತಷ್ಟು ರೈತಸ್ನೇಹಿಯಾಗಬೇಕಿದೆ. ಹೆಸರುಘಟ್ಟದಲ್ಲಿರುವ ಭಾರತೀಯ ತೋಟಗಾರಿಕೆ ಸಂಶೋಧನ ಸಂಸ್ಥೆಯು {Indian Council of Agricultural Research-Indian Institute of Horticultural Research} ಹಣ್ಣು, ತರಕಾರಿಗಳ ಸಂರಕ್ಷಣೆ, ಹೊಸ ತಳಿಗಳ ಆವಿಷ್ಕಾರ ಮತ್ತು ಅವುಗಳನ್ನು ಪ್ರಚುರಪಡಿಸುವುದು ಮುಂತಾದ ಕೆಲಸಗಳನ್ನು ಬಹಳವಾಗಿ ಮಾಡಿದೆ, ಮಾಡುತ್ತಿದೆ. ಯಲಹಂಕದ ಅಲ್ಲಾಳಸಂದ್ರದಲ್ಲಿರುವ Council Of Scientific and Industrial Research–Central Institute of Medicinal and Aromatic Plants ಸಂಸ್ಥೆಯು ದವನ, ಮರುಗ, ಮಜ್ಜಿಗೆಹುಲ್ಲು, ತೈಲಗಳು ಮುಂತಾದವುಗಳ ಪರೀಕ್ಷೆ, ಅವುಗಳ ಔಷಧೀಯ ಗುಣ, ರೈತರಿಗೆ ಅವುಗಳ ಪರಿಚಯ ಮತ್ತು ಆರ್ಥಿಕವಾಗಿ ಬೆನ್ನೆಲುಬಾಗಿ ನಿಲ್ಲುವುದು ಮುಂತಾದ ಕೆಲಸಗಳನ್ನು ವ್ಯಾಪಕವಾಗಿ ಮಾಡುತ್ತಿದೆ. ಲಾಲ್‌ಬಾಗಿನಲ್ಲಿ ವಿವಿಧ ರೀತಿಯ ಹಣ್ಣುಗಳನ್ನು, ತರಕಾರಿಗಳನ್ನು ಬೆಳೆಯಲಾಗುತ್ತದೆ. ರೈತರ ಅನುಕೂಲಕ್ಕಾಗಿ ಸರ್ಕಾರಗಳು ವಿವಿಧ ರೀತಿಯ ಯೋಜನೆಗಳನ್ನು ಮಾಡುತ್ತಲೇ ಇವೆ. ರೈತರು ತಾವು ಬೆಳೆದ ಬೆಳೆಯನ್ನು ಮಾರಾಟ ಮಾಡಲು ಸರ್ಕಾರವು ಮಾರುಕಟ್ಟೆಗಳನ್ನು, ಉಗ್ರಾಣಗಳನ್ನು ಸ್ಥಾಪಿಸಿದೆ. ಹಿಂದೆ ಬೆಂಗಳೂರಿನ ಸರ್ಕಾರಿ ವಸ್ತುಸಂಗ್ರಹಾಲಯದಲ್ಲಿ ಬೆಳೆಗಳ ಪ್ರಾತ್ಯಕ್ಷಿಕೆಗಳನ್ನು ತೋರಿಸಲಾಗುತ್ತಿತ್ತು, ಬೆಳೆಗಳನ್ನು ಕಿರುಪ್ರಮಾಣದಲ್ಲಿ ಮಾರಾಟ ಕೂಡ ಮಾಡಲಾಗುತ್ತಿತ್ತು. ೧೮೬೬ ರಲ್ಲಿ ರೈತರಿಗೆ ಅನುಕೂಲವಾಗುವ ಹಾಗೆ ಬೆಂಗಳೂರಿನ ಸುತ್ತ ಯಾವ ಯಾವ ಬೆಳೆಯನ್ನು ಬೆಳೆಯಬಹುದು ಎಂಬ ಮಾಹಿತಿ ಸಹ ವಸ್ತುಸಂಗ್ರಹಾಲಯದಲ್ಲಿ ದೊರಕುತ್ತಿತ್ತು. ಸಂತೆಗಳ ಬಗೆಗೆ ಶಾಸನಗಳಲ್ಲಿ ಅನೇಕ ಉಲ್ಲೇಖಗಳಿವೆ. ಇವುಗಳು ಕೂಡ ಕೃಷಿ ಬೆಳೆಗಳ ಮಾರಾಟಕ್ಕೆ ಇಂಬು ಕೊಡುತ್ತಿದ್ದವು. ಆದುದರಿಂದ ಕೃಷಿ ಚಟುವಟಿಕೆಗಳಿಗೆ ಸಂತೆಗಳ ಕೊಡುಗೆ ಅಪಾರ. ಇಂದು ಇವುಗಳ ಸಂಖ್ಯೆ ಕಡಿಮೆಯಾಗಿ ನಡೆಯುವ ರೀತಿ ವ್ಯತ್ಯಾಸಗೊಂಡಿದ್ದರೂ ಕೊಡುಗೆಯನ್ನು ನಿರ್ಲಕ್ಷಿಸುವಂತಿಲ್ಲ. ಮಳೆ ಕೊಯ್ಲು ಪದ್ಧತಿಯಿಂದ ಅಂತರ್ಜಲವನ್ನು ಕಾಯ್ದುಕೊಳ್ಳುವ ಪ್ರಕ್ರಿಯೆ ನಡೆದೇ ಇದೆ. ಇವೆಲ್ಲವುಗಳ ಪ್ರಯೋಜನವನ್ನು ಪಡೆದುಕೊಳ್ಳುವುದು ನಮ್ಮದೇ ಕರ್ತವ್ಯವಾಗಿದೆ.

ಕೃಷಿಯ ಸಮಸ್ಯೆಗಳ ಬಗೆಗೆ ನಾವು ಮಾಧ್ಯಮಗಳಲ್ಲಿ ಗಮನಿಸುತ್ತಲೇ ಇರುತ್ತೇವೆ. ಇವುಗಳಲ್ಲಿ ಸತ್ಯವೆಷ್ಟು ಎಂಬುದನ್ನು ಸ್ವತಃ ಅಧ್ಯಯನ ಮಾಡಬೇಕು. ಇಲ್ಲವಾದಲ್ಲಿ ಸರಿಯಲ್ಲದ ಮಾಹಿತಿಗಳನ್ನೇ ನಂಬುವಂತಾಗುತ್ತದೆ. ಕೃಷಿಗೆ ಮೂಲಭೂತವಾದ ನೀರಾವರಿ ಸೌಲಭ್ಯ ಇಂದು ಸಮರ್ಪಕವಾಗಿ ಇದೆಯೇ ಎಂಬ ಪ್ರಶ್ನೆಯನ್ನು ಹಲವರು ಎತ್ತಿದ್ದಾರೆ.

ಬೆಂಗಳೂರಿನ ಶಾಸನಗಳಲ್ಲಿ ಕಂಡುಬರುವ ಕೆರೆಗಳಲ್ಲಿ ಶೇಕಡಾ ೫೦-೬೦% ಕೆರೆಗಳು ಇಂದು ಇಲ್ಲವಾಗಿವೆ. ಇವುಗಳ ಸಂರಕ್ಷಣೆಯ ಬಗೆಗೆ ಕೂಗು ಎದ್ದಿದೆಯಾದರೂ ಸಮರ್ಪಕ ಅನುಷ್ಠಾನದ ಕೊರತೆಯಂತೂ ಇದೆ. ರಾಸಾಯನಿಕಗಳ ಬಳಕೆಯ ಸಾಧಕ-ಬಾಧಕಗಳ ಬಗೆಗೆ ಸತತವಾಗಿ ಚರ್ಚೆಯಾಗುತ್ತಿರುವುದು ಗಮನಿಸತಕ್ಕ ವಿಷಯವೇ ಆಗಿದೆ. ತಿಪ್ಪೆಯ ಗೊಬ್ಬರವನ್ನು ಬಳಸುವುದು, ಮಣ್ಣಿನ ಪರೀಕ್ಷೆಯನ್ನು ಮಾಡಿ ಅದರ ಸಾರವನ್ನು ಸಂರಕ್ಷಿಸುವುದು ಇತ್ಯಾದಿ ಯೋಜನೆಗಳು ಇವೆಂಬಾದರೂ ಪೂರ್ಣಪ್ರಮಾಣದಲ್ಲಿ ಇವುಗಳ ಅನುಷ್ಠಾನ ನಡೆಯುತ್ತಿಲ್ಲ ಎಂಬುದೂ ನಿಜವೇ ಎಂದು ಅಂಕಿ-ಅಂಶಗಳು ತೋರಿಸಿಕೊಡುತ್ತವೆ. ಎಲ್ಲವನ್ನೂ ಸರ್ಕಾರವೇ ಕಾನೂನುಗಳ ಮೂಲಕ ಜಾರಿಗೆ ತಂದು ಮಾಡಿಸಲು ಸಾಧ್ಯವಿಲ್ಲ. ಪೂರ್ವದಲ್ಲಿ ಜನರು ತಮ್ಮ ಇಚ್ಛಾಶಕ್ತಿಯ ಅವಲಂಬನೆಯಿಂದಲೇ ಅಚ್ಚುಕಟ್ಟಾಗಿ ನಿಭಾಯಿಸುತ್ತಿದ್ದ ರೀತಿ ಇಂದು ನಮಗೆ ಆದರ್ಶವಾಗಬೇಕು. ಪರ್ಯಾಯ ಬೆಳೆಗಳ ಸಾಧ್ಯತೆಯನ್ನು ಹಿಂದಿನ ಕಾಲದಲ್ಲಿ ಬಹಳ ಚೆನ್ನಾಗಿ ಮನಗಂಡಿದ್ದರು. ಇದನ್ನು ಇಂದಿನ ದಿನಗಳಲ್ಲಿಯೂ ಯಥೋಚಿತವಾಗಿ ಅನುಸರಿಸುವಂತಾಗಬೇಕು. ಅರಣ್ಯವನ್ನು ಬೆಳೆಸುವ ಮಾತುಗಳು, ಯೋಜನೆಗಳು ಈಚೀಚೆಗೆ ಬಹಳವಾಗಿ ಕೇಳಿಬರುತ್ತಿದೆ. ಇದು ಕೂಡ ಸಮರ್ಪವಾಗಿ ನಡೆಯಬೇಕು. ಪ್ರಕೃತ ಬರಹದಲ್ಲಿ ಲಭ್ಯವಿರುವ ಆಧಾರಗಳ ಅವಲಂಬನೆಯಿಂದ ಸಂಕ್ಷಿಪ್ತವಾದ ಪಕ್ಷಿನೋಟವನ್ನು ಒದಗಿಸಲಾಗಿದೆ. ಇಂತಹ ಹತ್ತು ಹಲವು ಅಂಶಗಳ ಹಿನ್ನೆಲೆಯಲ್ಲಿ ಬೆಂಗಳೂರು ಜಿಲ್ಲೆಯ ಕೃಷಿಪರಂಪರೆಯನ್ನು ಅಧ್ಯಯನ ನಡೆಸಬೇಕಾದ ಅಗತ್ಯವಿದೆ.

ಕಾಲೇ ವರ್ಷತು ಪರ್ಜನ್ಯಃ ಪೃಥಿವೀ ಸಸ್ಯಶಾಲಿನೀ
ದೇಶೋಯಂ ಕ್ಷೋಭ ರಹಿತಃ ಸಜ್ಜನಾ ಸಂತು ನಿರ್ಭಯಾಃ

[ಕಾಲಕಾಲಕ್ಕೆ ಮಳೆಯಾಗಲಿ, ಪೃಥ್ವಿಯು ಸಸ್ಯಶಾಮಲೆಯಾಗಿರಲಿ, ದೇಶದಲ್ಲಿ ಕ್ಷೋಭೆ ಇಲ್ಲದಿರಲಿ. ಸಜ್ಜನರು ನಿರ್ಭಯದಿಂದ ಇರುವಂತಾಗಲಿ]

ಆಧಾರಸೂಚಿ :

೧. **ಆನೆನಾಡು** {ಆನೆಕಲ್ಲು ತಾಲ್ಲೂಕು ಪ್ರದೇಶದ ಪ್ರಾಚೀನ ಇತಿಹಾಸ}- ಪಿ.ವಿ.ಕೃಷ್ಣಮೂರ್ತಿ, ಆನೇಕಲ್ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು, ಆನೇಕಲ್, ಬೆಂಗಳೂರು-೨೦೨೦

೨. **ಎಪಿಗ್ರಾಫಿಯಾ ಕರ್ನಾಟಿಕಾ**, ಸಂಪುಟ-೯ (ಬೆಂಗಳೂರು), (ಸಂ) ಬಿ.ಎಲ್.ರೈಸ್, ಮೈಸೂರು ಪುರಾತತ್ತ್ವ ಇಲಾಖೆ, ಬೆಂಗಳೂರು- ೧೯೦೫

೩. **ಎಪಿಗ್ರಾಫಿಯಾ ಕರ್ನಾಟಿಕಾ-೯** (ಬೆಂಗಳೂರು ಜಿಲ್ಲೆ ಅಪ್ರಕಟಿತ ಪುರವಣಿ ಸಂಪುಟ)

೪. **ಜಾನಪದದಲ್ಲಿ ಮಳೆ ಮತ್ತು ಬರ ಒಂದು ನೋಟ**-ಲಕ್ಷ್ಮಣ್ ತೆಲಗಾವಿ, ರವಿದಾಸ ಪ್ರಕಾಶನ, ಧಾರವಾಡ-೨೦೨೧

೫. **ಜ್ಞಾಪಕ ಚಿತ್ರಶಾಲೆ** (೮ ಸಂಪುಟಗಳು)-ಡಿ.ವಿ.ಗುಂಡಪ್ಪ, ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ-೨೦೧೮

೬. **ನನ್ನ ಜೀವನ ಮತ್ತು ನನ್ನ ಧ್ಯೇಯ**- ತಿ.ತಾ.ಶರ್ಮ, ನವನೀತ ಪ್ರಕಾಶನ, ಬೆಂಗಳೂರು-೨೦೦೨

೭. **ಪುರಾತತ್ತ್ವ ಪಿತಾಮಹ ಬಿ.ಎಲ್. ರೈಸ್ ಜೀವನ ಸಾಧನೆ**-ಎಸ್. ಎಲ್. ಶ್ರೀನಿವಾಸಮೂರ್ತಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು-೨೦೧೧

೮. **ಪರ್ಜನ್ಯ ಯಾಗಾಚರಣೆ ಮತ್ತು ಬರನಿವಾರಣೆ ಒಂದು ಅವಲೋಕನ**-ಲಕ್ಷ್ಮಣ್ ತೆಲಗಾವಿ, ರೇಣುಕಾ ಪ್ರಕಾಶನ, ಚಿತ್ರದುರ್ಗ-೨೦೧೯

೯. **ಬೆಂಗಳೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ತ್ವ** ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು-೨೦೧೩

೧೦. **ಭಾವ** (೩ ಸಂಪುಟಗಳು)-ಮಾಸ್ತಿ ವೆಂಕಟೇಶ ಅಯ್ಯಂಗಾರ್, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಜೀವನ ಕಾರ್ಯಾಲಯ ಟ್ರಸ್ಟ್, ಗವೀಪುರ ವಿಸ್ತರಣ, ಬೆಂಗಳೂರು-೨೦೦೮ (ಅನುಬಂಧ ಸಹಿತವಾದ ಸಚಿತ್ರ ಮುದ್ರಣ)

೧೧. **ವಿಶ್ವಕರ್ಣಾಟಕ ಪತ್ರಿಕೆಯ ಸಂಚಿಕೆಗಳು**-(ಸಂ) ತಿ.ತಾ.ಶರ್ಮ

೧೨. **ವೈದಿಕ ಸಾಹಿತ್ಯ ಚರಿತ್ರೆ**-ಎನ್. ಎಸ್. ಅನಂತರಂಗಾಚಾರ್, ಡಿ.ವಿ.ಕೆ. ಮೂರ್ತಿ, ಪ್ರಕಾಶಕರು, ಮೈಸೂರು-೨೦೦೫, ನಾಲ್ಕನೆಯ ಮುದ್ರಣ

೧೩. **ಸುಗುಟೂರು ವೀರಶೈವ ಅರಸುಮನೆತನ**-ಪಿ.ವಿ.ಕೃಷ್ಣಮೂರ್ತಿ, ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೧೯೯೪

೧೪. ಕರ್ನಾಟಕ ಸರ್ಕಾರದ ಅಧಿಕೃತ ಅಂತರ್ಜಾಲತಾಣಗಳು

೧೫. **Agricultural College, Hebbal 1946-1971** (Silver Jubilee Souvenir), University of Agricultural Sciences, Hebbal, Bangalore

೧೬. **A Journey from Madras through the Countries of Mysore, Canara and Malabar** (Volume-1)-Francis Buchanan-Hamilton, 1870 second Edition

೧೭. **Mysore: A Gazetteer** Compiled for Government by Benjamin Lewis Rice (2 Volumes, Revised), 1897

೧೮. **Mysore: A Gazetteer** Compiled for Government by C. Hayavadana Rao (5 Volumes).

ಪ್ರೊ. ಸಿ. ಮಹಾದೇವಪ್ಪನವರ "ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ"ಯ ಪುನಾರಚಿತ ಪಠ್ಯಗ್ರಂಥ – ಕುರಿತ ಒಂದು ಟಿಪ್ಪಣಿ

ಪ್ರೊ. ಎಸ್. ಬಸವರಾಜು

❖

ಕನ್ನಡದಲ್ಲಿ ಇಬ್ಬರು ನಾಗವರ್ಮರು. ಒಬ್ಬ ಕ್ರಿ.ಶ. ಹತ್ತನೆಯ ಶತಮಾನದ ಕೊನೆಯ ಭಾಗದಲ್ಲಿದ್ದ ಬ್ರಾಹ್ಮಣ ಕವಿ. ಅವನ ಕೃತಿಗಳು ಛಂದೋಂಬುಧಿ ಮತ್ತು ಕರ್ಣಾಟಕ ಕಾದಂಬರಿ. ಮತ್ತೊಬ್ಬ ಕ್ರಿ.ಶ. ಹನ್ನೆರಡನೆಯ ಶತಮಾನದಲ್ಲಿದ್ದ ಜೈನಧರ್ಮದವನು. ಮೊದಲು ಈತ ಶಾಸ್ತ್ರಕಾರ ಮಾತ್ರ ಎಂದು ಭಾವಿಸಲಾಗಿತ್ತು. ಇವನು ಬರೆದ ವರ್ಧಮಾನ ಪುರಾಣ ದೊರೆತ ಮೇಲೆ ಈತ –ಕವಿಯೂ ಕೂಡ ಎಂಬುದು ಖಚಿತವಾಗಿದೆ. ಇವನು ಬರೆದ ಶಾಸ್ತ್ರಗ್ರಂಥಗಳೆಂದರೆ– ಕಾವ್ಯಾವಲೋಕನ, ಕರ್ಣಾಟಕ ಭಾಷಾಭೂಷಣ. ಅಭಿದಾನ ವಸ್ತು ಕೋಶ ಮತ್ತು ಛಂದೋವಿಚಿತಿ.

ಈ ಇಬ್ಬರಲ್ಲದೆ ಕ್ರಿ.ಶ. ಹನ್ನೊಂದನೆಯ ಶತಮಾನದ ಉತ್ತರಾರ್ಧ(೧೦೭೦)ದಲ್ಲಿ ಇದ್ದಿರಬಹುದು ಎನ್ನಲಾದ ಚಂದ್ರಚೂಡಾಮಣಿ ಶತಕ ಗ್ರಂಥದ ಕರ್ತೃವಾಗಿರಬಹುದೆಂಬ ನಾಗವರ್ಮಾಚಾರ್ಯ ಎನ್ನುವವನು ಬೇರೆ. ಇದು ಕನ್ನಡ ಸಾಹಿತ್ಯ ಚರಿತ್ರೆಯ ಅಧ್ಯಯನದ ಪರಿಪಾಟ.

ಕವಿಚರಿತೆಕಾರರ, ಕನ್ನಡ ಕೈಪಿಡಿ(ಸಂಪುಟ–೨) ಕನ್ನಡ ಸಾಹಿತ್ಯ ಚರಿತ್ರೆಕಾರರೂ ಈ ಮೂಲ ಅಭಿಪ್ರಾಯವನ್ನು ಬಹುತೇಕ ಒಪ್ಪಿಕೊಂಡಿರುವ ರಂ.ಶ್ರೀ. ಮುಗುಳಿ ಮುಂತಾದ ಹಿರಿಯ ಸಾಹಿತ್ಯ ಚರಿತ್ರೆಕಾರರ, ಕನ್ನಡ ಸಾಹಿತ್ಯ ಚರಿತ್ರೆಯ ವಿಶ್ವವಿದ್ಯಾಲಯಗಳ ಆವೃತ್ತಿಗಳ ಅಭಿಪ್ರಾಯವನ್ನು ಹಿರಿಯ ವಿದ್ವಾಂಸರಾದ ಪ್ರೊ. ಸಿ. ಮಹಾದೇವಪ್ಪನವರು ತಮ್ಮ ನಿರಂತರ ಅಧ್ಯಯನದಿಂದ ತಾವು ಕಂಡುಕೊಂಡ ಬಾಹ್ಯ ಮತ್ತು ಆಂತರಿಕ ಪ್ರಮಾಣಗಳಿಂದ ಬದಲಾಯಿಸಲು ಪ್ರಯತ್ನಿಸಿದ್ದಾರೆ. ಅವರ 'ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ' ಯ ಪುನಾರಚಿತ ಪಠ್ಯ ಗ್ರಂಥದಲ್ಲಿ ನಾಗವವರ್ಮ– ಉದಯಾದಿತ್ಯರ ಬಗೆಗೆ,

ಅವರ ಪರಸ್ಪರ ಸಂಬಂಧ ಪ್ರಭಾವಗಳ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ್ದಾರೆ. ಅವರ ಅಭಿಪ್ರಾಯಗಳಲ್ಲಿ ಮುಖ್ಯವಾದ ಕೆಲವನ್ನು ಇಲ್ಲಿ ಪ್ರಸ್ತಾಪಿಸಬಹುದು.

ಕನ್ನಡದಲ್ಲಿ ನಾಗವರ್ಮರು ಹಲವರಿಲ್ಲ, ಒಬ್ಬನೇ ಇವನ ಕಾಲ ಕ್ರಿ.ಶ. ೧೧೪೭-೧೧೪೯. ನಾಗವರ್ಮ ಜೈನ ಬ್ರಾಹ್ಮಣ ಸಂಪ್ರದಾಯದವನು. ಇವನ ಆಶ್ರಯಧಾತ ಗುರು ಉದಯಾದಿತ್ಯ. ಈ ಉದಯಾದಿತ್ಯ ಈಗಿನ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ತಾಡಪತ್ರಿ ಪ್ರದೇಶದ ದೊರೆ. ಸ್ವತಃ ವಿದ್ವಾಂಸನಾಗಿದ್ದ ಉದಯಾದಿತ್ಯ ಬರೆದಿರುವುದು 'ಉದಯಾದಿತ್ಯಾಲಂಕಾರ' ವೊಂದೇ ಎಂಬುದು ಕವಿಚರಿತೆಕಾರರ ಅಭಿಪ್ರಾಯವಾಗಿತ್ತು. ಆದರೆ ನಾಗವರ್ಮಾಚಾರ್ಯನೆನ್ನುವವನು ಬರೆದಿದ್ದಾನೆಂದು ಭಾವಿಸಲಾಗಿದ್ದ 'ಚಂದ್ರ ಚೂಡಾಮಣಿ ಶತಕ' (ಜ್ಞಾನ ಸಾರ) ಗ್ರಂಥದ ಕೃರ್ತ ಈ ಉದಯಾದಿತ್ಯನೇ. ಅಲ್ಲದೆ ಈತ 'ಛಂದೋವಿಚಿತಿ' ಇದರ ಪೂರ್ಣ ಹೆಸರು 'ರತ್ನ ಮಂಜೂಷಿಕಾ ಛಂದೋವಿಚಿತಿ' ಎಂಬ ಛಂದಶಾಸ್ತ್ರ ಗ್ರಂಥವನ್ನೂ ಬರೆದಿದ್ದಾನೆ ಎಂಬುದನ್ನು ಪ್ರೊ. ಸಿ. ಮಹಾದೇವಪ್ಪನವರು ಆಧಾರ ಸಹಿತವಾಗಿ ತೋರಿ ಕೊಟ್ಟಿದ್ದಾರೆ.

ಕ್ರಿ.ಶ. ೧೧೪೯ರ ತಾಡಪತ್ರಿ ಶಾಸನದ ಕರ್ತೃವೂ ಈ ಉದಯಾದಿತ್ಯನೇ, ಸಂಸ್ಕೃತ ಕಾದಂಬರಿಯ ಕರ್ತೃ ಬಾಣಭಟ್ಟನ ಮಗ ಭೂಷಣಭಟ್ಟನು ತಾಡಪತ್ರಿಯಲ್ಲಿ ಜಮೀನನ್ನು ಹೊಂದಿದ್ದನೆಂದು ಶಾಸನದ 'ಭೂಷಣ ಭಟರ ಕಾಲ್ವೆ ಇಂ' ಎಂಬ ಉಲ್ಲೇಖದಿಂದ ಸ್ಪಷ್ಟಪಡುತ್ತದೆ. ಭೂಷಣಭಟ್ಟ ಕಾದಂಬರಿ ಕಾವ್ಯದ ಉತ್ತರಭಾಗವನ್ನು ಬರೆದು ಪೂರ್ಣಮಾಡಿದವನು. ಬಾಣ ಭಟ್ಟನ ಮೂಲ ಸ್ಥಳವೂ ಈ ತಾಡಪತ್ರಿಯೇ. ಬಾಣನೇ ತನ್ನ ತಾತನ ವಾಸಸ್ಥಳ ತಾಡಪತ್ರಿ ಎಂದು ಉಲ್ಲೇಖಿಸುತ್ತಾನೆ.

ಕರ್ಣಾಟಕ ಕಾದಂಬರಿ, ಛಂದೋಂಬುಧಿ, ಕಾವ್ಯಾವಲೋಕನ, ಕರ್ಣಾಟಕ ಭಾಷಾಭೂಷಣ, ಅಭಿಧಾನವಸ್ತುಕೋಶ ಮತ್ತು ವರ್ಧಮಾನ ಪುರಾಣ- ಈ ಎಲ್ಲ ಕೃತಿಗಳ ಕರ್ತೃ ನಾಗವರ್ಮನೇ ಅಲ್ಲದೆ ಉದಯಾದಿತ್ಯನ ಛಂದೋವಿಚಿತಿಗೆ ಒಂದು ವ್ಯಾಖ್ಯಾನ ಗ್ರಂಥವನ್ನೂ ಬರೆದಿದ್ದಾನೆ. ಅದು 'ರತ್ನ ಮಂಜೂಷಿಕಾ ಛಂದೋವಿಚಿತಿ ಭಾಷ್ಯ' ಕನ್ನಡದಲ್ಲಿ ಛಂದಸ್ಸು, ಅಲಂಕಾರ, ವ್ಯಾಕರಣ-ಹೀಗೆ ಕಾವ್ಯಾಂಗದ ಎಲ್ಲ ಪ್ರಕಾರಗಳನ್ನು ಕುರಿತು ಕೃತಿ ರಚನೆ ಮಾಡಿದವನು ನಾಗವರ್ಮನೊಬ್ಬನೇ, ನಾಗವರ್ಮನ ಛಂದೋಂಬುಧಿಯ ಮೇಲೆ ಉದಯಾದಿತ್ಯನ ಛಂದೋ ವಿಚಿತಿಯ ಪ್ರಭಾವವಿದೆ ಎಂಬುದ ಪ್ರೊ. ಸಿ. ಮಹಾದೇವಪ್ಪನವರು ಹಲವು ಸಾಕ್ಷ್ಯಗಳನ್ನು ಕೊಡುತ್ತಾರೆ.

ನಾಗವರ್ಮ-ಉದಯಾದಿತ್ಯರಿಬ್ಬರೂ 'ಸಯ್ಯಡಿ'ಯವರು. 'ಸಯ್ಯಡಿ' ಎಂಬುದು ಯಾವುದೇ ಸ್ಥಳದ ಹೆಸರಲ್ಲ. 'ಸೂರ್ಯರಶ್ಮಿ ತೀವ್ರವಾದ ದೇಶಭಾಗ' 'ಭಾಸ್ಕರ ಕ್ಷೇತ್ರ'

ಅಂದರೆ ಪ್ರಖರವಾದ ಬಿಸಿಲಿನ ಪ್ರದೇಶ ಎಂದರ್ಥವಾಗುತ್ತದೆ. ಇದು ಸಾಂಕೇತಿಕವಾಗಿ ಉದಯಾದಿತ್ಯನ ಆಡಳಿತ ಪ್ರದೇಶವನ್ನೇ ಸೂಚಿಸುತ್ತದೆ. ಉದಯಾದಿತ್ಯ ಶೈವನಾದುದರಿಂದ ಜೈನ ಬ್ರಾಹ್ಮಣ ಸಂಪ್ರದಾಯದವನಾದ ನಾಗವರ್ಮನ ಮೇಲೆ ಶೈವ ಧರ್ಮದ ಪ್ರಭಾವವೂ ಇದ್ದು; ಅವನ ವ್ಯಕ್ತಿತ್ವದಲ್ಲಿ ಶೈವ ಸಂಸ್ಕಾರವೂ ಸೇರ್ಪಡೆಯಾಗಿದೆ.

ಕವಿ ಚಕ್ರವರ್ತಿ ಜನ್ನ(ಕ್ರಿ.ಶ. ೧೨೨೫)ನ ಗುರು ಈ ನಾಗವರ್ಮನೇ. ಉದಯಾದಿತ್ಯ-ನಾಗವರ್ಮ-ಜನ್ನ- ಈ ಮೂವರೂ ಸಮಕಾಲೀನರು. 'ಜಗದೇಕನಲ್ಲಿ ಕಟಕೋಪಾಧ್ಯಾಯನಾ ನಾಗವರ್ಮ' ಎಂಬುದು ಅನಂತನಾಥ ಪುರಾಣದಲ್ಲಿ ಜನ್ನನ ಹೇಳಿಕೆ. ಈ 'ಜಗದೇಕ' ಎಂಬುದು ಉದಯಾದಿತ್ಯನನ್ನೇ ಸೂಚಿಸುತ್ತದೆ. ಉದಯಾದಿತ್ಯನ ತಾಡಪತ್ರಿ ಶಾಸನ (ಕ್ರಿ.ಶ. ೧೧೯೯)ದ ಉಲ್ಲೇಖ (ಚಿದಪನಾಯಕ) ಮತ್ತು ಜನ್ನನ ಅನಂತನಾಥ ಪುರಾಣದ ಹೇಳಿಕೆಗಳಿಂದ ನಾಗವರ್ಮನು ಉದಯಾದಿತ್ಯನ ಪ್ರಧಾನಿ/ ಸೇನಾಧಿಪನಾಗಿದ್ದನೆಂದು ತಿಳಿಯುತ್ತದೆ. ೧) ಕವಿ ಕರ್ಣಾಭರಣ/ಕವಿ ಕಂಠಾಭರಣ ೨) ಕವಿ ಕರ್ಣಪೂರ ೩)ಕವಿತಾ ಗುಣೋದಯ ೪)। ಬುಧಾಬ್ಜವನ ಕಳಹಂಸ ೫) ಬುಧ ಸರೋಜಿನಿ ವನಹಂಸ ೬) ಚತುರ ಕವಿ ಲಲಾಮ ೭)ವಿಬುಧ ಜನ ಮನಃ ಪದ್ಮಿನೀ ರಾಜ ಹಂಸ... ಮುಂತಾದವು ನಾಗವರ್ಮನ ಬಿರುದುಗಳಾಗಿ ಇವು ಕೃತಿಗಳಲ್ಲಿ ಉಲ್ಲೇಖವಾಗಿವೆ.

'ನಾಕಿ', ನಾಕಿಗ' ಎಂಬಿವು ನಾಗವರ್ಮನ ಪರ್ಯಾಯ ನಾಮಗಳು. ನಾಗವರ್ಮ ಉದಯಾದಿತ್ಯನನ್ನು 'ಪಿನಾಕಿ' ಎಂಬ ಹೆಸರಿನಿಂದ ಕರೆದಿದ್ದಾನೆ. 'ಪಿನಾಕಿ' ಎಂಬುದು 'ಪೆನ್ನೆ ನಾಡ ಪ್ರಭು' ಎಂಬುದರ ಸೂಚಕ. ಕರ್ನಾಟಕ ಕಾದಂಬರಿಯಲ್ಲಿ ನಾಗವರ್ಮ ಹೆಸರಿಸುವ 'ಚಂದ್ರ' ನೆಂಬ ರಾಜ ಈ ಉದಯಾದಿತ್ಯನೇ. ಉದಯಾದಿತ್ಯ ಸೂರ್ಯ-ಚಂದ್ರೋಭಯನಾಯಕ. (ಸೂರ್ಯ-ಚಂದ್ರ + ಉಭಯನಾಯಕ) ಕರ್ನಾಟಕ ಕಾದಂಬರಿಯಲ್ಲಿ ಕಥಾನಾಯಕನಾದ ಚಂದ್ರಾಪೀಡನಲ್ಲಿ (ಕಾವ್ಯದ ಶೀರ್ಷಿಕೆ 'ಕಾದಂಬರಿ'ಯಾಗಿರುವುದರಿಂದ ಕಥಾನಾಯಕ ಚಂದ್ರಾಪೀಡನೆಂಬುದರಲ್ಲಿ ಅನುಮಾನವಿಲ್ಲ)ಕವಿ ತನ್ನ ಪ್ರಭುವಾದ ಉದಯಾದಿತ್ಯನನ್ನು ಅಭೇದಗೊಳಿಸಿದ್ದಾನೆ. ಹಾಗೆಯೇ ತನ್ನ ವರ್ಧಮಾನ ಪುರಾಣದಲ್ಲಿ ಕವಿ ವರ್ಧಮಾನನೊಂದಿಗೆ ತನ್ನ ಆಶ್ರಯದಾತ ಉದಯಾದಿತ್ಯನನ್ನು ಸಮೀಕರಿಸಿದ್ದಾನೆ.

ಇನ್ನು ಕರ್ಣಾಟಕ ಕಾದಂಬರಿಯ 'ತಣಿವಿನೆಗಂ- ಭೋಜರಾಜ ಕ್ಷಿತೀಶಂ' ಎಂಬುದನ್ನು ತಪ್ಪಾಗಿ ಶಬ್ದಾನ್ವಯ ಮಾಡಿಕೊಳ್ಳಲಾಗಿದೆ ಎಂಬುದು ಪ್ರೊ. ಸಿ. ಮಹಾದೇವಪ್ಪನವರ ಅಭಿಪ್ರಾಯ. ಅದರಂತೆ ಭೋಜರಾಜನು ಕವಿಯ ಕೃತಿಗೆ

ಮೆಚ್ಚುಗೆಯಾಗಿ ಕೆಲವು ಜಾತ್ಯಶ್ವಗಳನ್ನೂ ಕೊಟ್ಟಂತೆ ಹೇಳಿರುವುದರಿಂದ, ನಾಗವರ್ಮ ಭೋಜರಾಜನ ಕಾಲದಲ್ಲಿದ್ದನೆಂದು, ಈ ಭೋಜರಾಜನು ಮಧ್ಯ ಪ್ರದೇಶದ ಧಾರಾಪುರದ ಭೋಜನೆಂದೂ (ಕಾಲ ಕ್ರಿ.ಶ. ೧೦೧೮–೧೦೬೦)ಹೇಳುವ ಕವಿ ಚರಿತೆಕಾರರು ಹಾಗೂ ಇತರ ವಿದ್ವಾಂಸರ ಅಭಿಪ್ರಾಯವನ್ನು ಅಲ್ಲಗಳೆಯುವ ಪ್ರೊ. ಸಿ. ಮಹಾದೇವಪ್ಪನವರು, ಮೇಲಿನವಾಕ್ಯವನ್ನು 'ತಣಿವಿನೆಗಂ–ಅಂಭೋಜರಾಜ ಕ್ಷಿತೀಶಂ' ಎಂದು ಅನ್ವಯ ಮಾಡಿಕೊಳ್ಳಬೇಕೆಂದು ಅಭಿಪ್ರಾಯ ಪಡುತ್ತಾರೆ. ಇಲ್ಲಿ 'ಅಂಭೋರಾಜ' ಎಂಬುದು ಸೂರ್ಯ >ಚಂದ್ರ, ಅಂದರೆ ಕವಿಯೂ ಆಶ್ರಯಧಾತನಾದ ಉದಯಾದಿತ್ಯನನ್ನೇ ಸೂಚಿಸುತ್ತದೆ ಎಂಬುದು ಅವರ ಅಭಿಪ್ರಾಯ.

ಹೀಗೆ ಪ್ರೊ. ಸಿ. ಮಹಾದೇವಪ್ಪನವರು ತಮ್ಮ ಸಂಸ್ಕೃತ–ಕನ್ನಡ ಕಾವ್ಯಗಳ ಆಳವಾದ ಅಧ್ಯಯನ, ಸೂಕ್ಷ್ಮಗ್ರಹಿಕೆ, ಆಂತರಿಕ–ಬಾಹ್ಯ ಪ್ರಮಾಣಗಳನ್ನು ಔಚಿತ್ಯವರಿತು ಬಳಸಿಕೊಳ್ಳುವ ಜಾಣ್ಮೆ ಹಾಗೂ ಸಂಶೋಧನ ಕೌಶಲ್ಯಗಳಿಂದ ಉದಯಾದಿತ್ಯ ನಾಗವರ್ಮರ ಪರಸ್ಪರ ಸಂಬಂಧ–ಪ್ರಭಾವಗಳನ್ನು ಸ್ಪಷ್ಟ ಪಡಿಸುವುದಲ್ಲದೆ 'ಕನ್ನಡದಲ್ಲಿ ಹಲವರು ನಾಗವರ್ಮರು' ಎಂಬ ವಾದವನ್ನು ಸಾಧಾರವಾಗಿ ಅಲ್ಲಗಳೆದು, 'ಕನ್ನಡದಲ್ಲಿ ನಾಗವರ್ಮ ಒಬ್ಬನೇ' ಎಂಬುದನ್ನು ತಮ್ಮ ಈ ಗ್ರಂಥದ ಮೂಲಕ ಸ್ಥಾಪಿಸುವ ಪ್ರಯತ್ನ ಮಾಡಿದ್ದಾರೆ.

ಅಡಿ ಟಿಪ್ಪಣಿ

೧. **'ಚದಪ ನಾಯಕ'– 'ಚದಪ ಎಂದರೆ 'ಚಿತ್ತೋಹಾರ ಪ್ರಜ್ಞ', ತನ್ನ ರಾಜ್ಯ ಶುದ್ಧಾಂತಃಕರಣವನ್ನು ಬಲ್ಲಾತ. 'ನಾಯಕ' –ನಾಯಕ> ನಾಯ್ಕ> ನಾಟ್ಕಿಗ > ನಾಕಿಗ > ನಾಕಿ– ನಾಗವರ್ಮ' ತನ್ನ ರಾಜನಾದ ಉದಯಾದಿತ್ಯನ ಶುದ್ಧಾಂತಃಕರಣವನ್ನು ಬಲ್ಲಾತ ತಾನು' ಎಂಬುದು ಪ್ರೊ. ಸಿ. ಮಹಾದೇವಪ್ಪನವರ ವಿವರಣೆ.**

□□

ದುರ್ಯೋಧನನ ಧ್ವಜಲಾಂಛನ

ಪ್ರೊ. ಎಸ್. ಬಿಳಿಗಿರಿವಾಸನ್

❖

ಇಂದಿನ ದಿನಗಳಲ್ಲಿ ಧ್ವಜ ಅಥವಾ ಪತಾಕೆ ಎಂಬುದು ಒಂದು ರಾಷ್ಟ್ರದ ಪ್ರತೀಕ. ಅದನ್ನು ರಾಷ್ಟ್ರಧ್ವಜವೆಂದು ಕರೆಯಲಾಗಿದೆ. ಒಂದು ರಾಷ್ಟ್ರದ ಧ್ವಜವನ್ನು ಗೌರವಿಸಿದರೆ ಸಮಸ್ತ ರಾಷ್ಟ್ರವನ್ನು ಗೌರವಿಸಿದಂತೆ ಎಂಬ ಭಾವವು ವಿಶ್ವವ್ಯಾಪಿಯಾಗಿದೆ. ವ್ಯಾಸ ವಿರಚಿತ ಮಹಾಭಾರತ ಕಾವ್ಯದಲ್ಲಿ ಪ್ರತಿಯೊಬ್ಬ ವೀರರಿಗೂ ಅವರವರದೇ ಆದ ಧ್ವಜಗಳಿದ್ದವೆಂದು ದ್ರೋಣಪರ್ವದಿಂದ ತಿಳಿದುಬರುತ್ತದೆ. ಅದರ ವಿವರಣೆಯನ್ನು ಹೀಗೆ ಕಾಣಬಹುದು. ಯುಧಿಷ್ಠಿರನಿಗೆ ರಜತ ಚಂದ್ರ, ಗ್ರಹಗಳಿಂದ ಹೊಳೆಯುವ ಧ್ವಜ ಭೀಮನಿಗೆ ರಜತಸಿಂಹ, ಅರ್ಜುನನಿಗೆ ಸ್ವರ್ಣಹನುಮಾನ್ ಧ್ವಜ, ನಕುಲನಿಗೆ ಸ್ವರ್ಣಶರಭ (ಅಷ್ಟಪಾದಗಳ ಸ್ವರ್ಣಹಿಂಬದಿಯ ಭಯಾನಕಧ್ವಜ) ಸಹದೇವನಿಗೆ ರಜತಹಂಸ, ಉಪಪಾಂಡವರಾದ ಪ್ರತಿವಿಂಧ್ಯ, ಶ್ರುತಸೋಮ, ಶ್ರುತಕೀರ್ತಿ, ಶತಾನೀಕ, ಶ್ರುತಸೇನರಿಗೆ ಕ್ರಮವಾಗಿ ಯಮ, ವಾಯು, ಇಂದ್ರ ಮತ್ತು ಅಶ್ವಿನಿಗಳು, ಅಭಿಮನ್ಯುವಿಗೆ ಸ್ವರ್ಣ ಮಯೂರ, ಸಾತ್ಯಕಿಗೆ ಸ್ವರ್ಣಸಿಂಹ ರೂಪ, ಘಟೋತ್ಕಚನಿಗೆ ರಣಹದ್ದು, ಭೀಷ್ಮರಿಗೆ ಪಂಚನಕ್ಷತ್ರಗಳೊಂದಿಗೆ ಸ್ವರ್ಣ ತಾಳೆಮರವನ್ನು ಹೊಂದಿರುವ ರಜತ ಧ್ವಜ, ದ್ರೋಣರಿಗೆ ಕಮಂಡಲದೊಂದಿಗೆ ಬೆದರಿದ ಬಲಿಪೀಠ, ಕೃಪಾಚಾರ್ಯರಿಗೆ ವೃಷಭ, ಅಶ್ವತ್ಥಾಮನಿಗೆ ಸಿಂಹಪುಚ್ಛ. ಕರ್ಣನಿಗೆ ಸ್ವರ್ಣಗಜರಜ್ಜು, ಜಯದ್ರಥನಿಗೆ ರಜತ ಪುರುಷವರಾಹ. ಶಲ್ಯನಿಗೆ ದೇವತೆ, ವೃಷಸೇನನಿಗೆ ಸ್ವರ್ಣ ಮಯೂರ ಹಾಗೂ ನೇಗಿಲಿನ ಮೊಳೆ. ಬಲರಾಮನಿಗೆ ತಾಳವೃಕ್ಷಧ್ವಜ. ಕೃಷ್ಣನಿಗೆ ಗರುಡ ಧ್ವಜ. ಭೂರಿಶ್ರವಸ್ಸನಿಗೆ ಯೂಪಸ್ಥಂಭ, ದುರ್ಯೋಧನನಿಗೆ ನಾಗಧ್ವಜ (ಆನೆ ಅಥವಾ ಸರ್ಪ) ಇತ್ಯಾದಿ.

ಪ್ರಸ್ತುತ ಜಿಜ್ಞಾಸೆಯಿರುವುದು ದುರ್ಯೋಧನನ ಧ್ವಜವಾದ ನಾಗ ಧ್ವಜದ ಬಗ್ಗೆ. 'ನಾಗ' ಎಂಬುದಕ್ಕೆ ಆನೆ ಮತ್ತು ಸರ್ಪ ಎಂಬ ಅರ್ಥವಿದೆ. ಮಹಾ ಭಾರತದ

ಪಾಠಗಳಲ್ಲಿ ಔತ್ತರೇಯ ಪಾಠ ಹಾಗೂ ದಾಕ್ಷಿಣಾತ್ಯ ಪಾಠವೆಂಬ ಎರಡು ಪ್ರಬೇಧಗಳಿವೆ. ಔತ್ತರೇಯ ಪಾಠದಲ್ಲಿ 'ನಾಗ' ಶಬ್ದಕ್ಕೆ 'ಆನೆ' ಎಂದೂ ದಾಕ್ಷಿಣಾತ್ಯ ಪಾಠದಲ್ಲಿ 'ನಾಗ' ಶಬ್ದಕ್ಕೆ 'ಸರ್ಪ' ಎಂಬ ಅರ್ಥವನ್ನು ವಿದ್ವಾಂಸರು ಗುರುತಿಸಿದ್ದಾರೆ.

ವ್ಯಾಸರು "ನಾಗ" ಪದಕ್ಕೆ ಒಂದು ಸಂದರ್ಭದಲ್ಲಿ ಸ್ಪಷ್ಟವಾಗಿ "ಆನೆ" ಎಂದು ಅರ್ಥೈಸುವರು.

ಯಥಾಶ್ವೇತೋ ಮಹಾನಾಗೋ ದೇವರಾಜ ಚಮೂಮ್ ಯಥಾ।
ನಾಗೋ ಮಣಿಮ ಯೋ ರಾಜ್ಞೋ ಧ್ವಜಃ ಕನಕ ಸಂವೃತಃ॥

–ದ್ರೋಣ ಪರ್ವ ೧೦೫–೨೬

"ಇಂದ್ರ (ದೇವರಾಜ)ನ ಯಾವ ಶ್ವೇತನಾಗವು ಅವನ ಸೈನ್ಯಕ್ಕೆ ಘನತೆಯನ್ನು ತರುವುದೋ ಹಾಗೆಯೇ ವಜ್ರದಲ್ಲಿ ಕೆತ್ತಿರುವ ನಾಗಧ್ವಜವು ದುರ್ಯೋಧನನ ಸೈನ್ಯಕ್ಕೆ ಘನತೆಯನ್ನು ತರುತ್ತದೆ."

ಇಂದ್ರನ ಶ್ವೇತಗಜಕ್ಕೆ ಹೋಲಿಸಿರುವುದರಿಂದ, ಖಂಡಿತವಾಗಿಯೂ ಅದೊಂದು ಗಜಲಾಂಛನವಾಗಿರುತ್ತದೆ. ಯಾರೂ ಹಾವನ್ನು ಗಜಕ್ಕೆ ಅದರಲ್ಲಿಯೂ ಶ್ವೇತಗಜಕ್ಕೆ ಹೋಲಿಸುವುದಿಲ್ಲ.

ವ್ಯಾಸರು ಮತ್ತೊಮ್ಮೆ ತಮ್ಮ ಕಾವ್ಯದಲ್ಲಿ "ನಾಗ" ಪದಕ್ಕೆ "ಆನೆ" ಎಂದು ಅರ್ಥೈಸುವರು :

೧. ಮಹಾನ್ ದುರ್ಯೋಧನಸ್ಯಾಸೀನ್ನಾಗೋ ಮಣಿಮಯೋಧ್ವಜಃ॥

– ಭೀಷ್ಮಪರ್ವ ೧೭–೨೬

೨. ಜ್ವಲಂತಂ ಸೂರ್ಯ ಸಂಕಾಶಂ ನಾಗಂ ಮಣಿಮಯಂ ಶುಭಮ್।
ಧ್ವಜಂ ಕುರುಪೇಶ್ಚಿನ್ನಂ ದದೃಶೌ ಸರ್ವ ಪಾರ್ಥಿವಃ॥

– ಭೀಷ್ಮ ಪರ್ವ(೭೯–೧೫)

೩. ಅಥೈನಂ ದಶರ್ಭಿಬನೈಃ ತುತ್ರೈರಿವ ಮಹಾದ್ವಿಪಂ।
ಅಜಘಾನ ರಣೇವೀರಂ ಸ್ಮಾಯನ್ನಿವ ಮಹಾರಥಃ॥

– ದ್ರೋಣ ಪರ್ವ ೭೭–೧೫–೧

ಈ ಮೇಲಿನ ೨, ೩ನೆಯ ಶ್ಲೋಕಗಳಲ್ಲಿ ಭೀಮನು ಹೇಗೆ ದುರ್ಯೋಧನನ ಧ್ವಜವನ್ನು ಕೆಳಗಿಳಿಸಿದನು ಹಾಗೂ ಅವನನ್ನು ಹೇಗೆ ಸದೆಬಡಿದನು ಎಂಬುದನ್ನು ವ್ಯಾಸರು ವರ್ಣಿಸುವರು.

ಮೂರನೆಯ ಶ್ಲೋಕದಲ್ಲಿ ಭೀಮಸೇನನು ಮಾವುತನು ತನ್ನ ಆನೆಯನ್ನು ಅಂಕುಶದಿಂದ ನಿಯಂತ್ರಿಸುವಂತೆ ದುರ್ಯೋಧನನನ್ನು ನಿಯಂತ್ರಿಸಿದನೆಂದು ಹೇಳಲಾಗಿದೆ.

ಭೀಮಸೇನನು ದುರ್ಯೋಧನನ ಗಜಲಾಂಛನವನ್ನು ಮಾವುತನಂತೆ ಪತನಗೊಳಿಸಿ ಹತ್ತು ಬಾಣಗಳಿಂದ ಅವನನ್ನು ಸದೆಬಡಿದನು. ಇಲ್ಲಿ ಭೀಮನನ್ನು ಮಾವುತನಿಗೆ ಹೋಲಿಸಲಾಗಿದೆ.

ಈ ಉಪಮೆಯು ಧ್ವಜದಲ್ಲಿನ ಲಾಂಛನವು 'ಆನೆ' ಎಂಬುದನ್ನು ಸೂಚಿಸುತ್ತದೆ. ಭೀಮಸೇನ ಧ್ವಜವು ಸಿಂಹಲಾಂಛನವನ್ನು ಹೊಂದಿದೆಯೆಂದು "ಧ್ವಜಂ ಕೇಸರಿನಾಂಶ್ಚಾಸ್ಯ ಚಿಛೇದ ವಿಸಿಕೈಸ್ತ್ರಿಭಿಃ" (ಭಗದತ್ತನು ಸಿಂಹಲಾಂಛನ ಧ್ವಜವನ್ನು ಮೂರು ಬಾಣಗಳಿಂದ ಕತ್ತರಿಸಿದನು) ಎಂದು ದ್ರೋಣಪರ್ವ-೯೫-೭೫ರಲ್ಲಿ ಹೇಳಲಾಗಿದೆ.

ಮಹಾಭಾರತ ವಿರಾಟ ಪರ್ವದಲ್ಲಿನ ಈ ಪ್ರಯೋಗವನ್ನು ನೋಡಬಹುದು.
ಯಸ್ಯನಾಗೋ ಧ್ವಜಾಗ್ರೇಸೌ ಹೇಮಕೇತನ ಸಂವೃತಃ।
ಧೃತರಾಷ್ಟ್ರಾತ್ಮಜಃ ಶ್ರೀಮಾನೇಷ ರಾಜಾ ಸುಯೋಧನಃ ॥ (೫೫-೪೯)

ಈ ಮೇಲಿನ ಶ್ಲೋಕಗಳಲ್ಲೆಲ್ಲಾ ಕಡೆಯೂ 'ನಾಗ' ಎಂಬ ಉಭಯಾರ್ಥಕ ಶಬ್ದವೇ ಕಂಡು ಬರುತ್ತದೆ. ಮಣಿಕಿಂಕಿಣಿಗಳಿಂದ ಅಲಂಕೃತವಾಗುವ ಸಾಧ್ಯತೆ ಹಾವಿಗಿಂತ ಆನೆಗೆ ಹೆಚ್ಚೆಂದು ತೋರುತ್ತದೆ.

ಭಾಸನ 'ಕರ್ಣಭಾರ'ದ ಸಂಪಾದಕರು 'ನಾಗಕೇತು' ಎಂದರೆ 'ಆನೆಯ ಧ್ವಜ' ಎಂದು ಅರ್ಥವನ್ನು ಸೂಚಿಸಿದ್ದಾರೆ. ಈ ಅರ್ಥವು ಸಂಸ್ಕೃತ ವಿದ್ವಾಂಸರನ್ನೂ ಸಹಾ ಚಕಿತಗೊಳಿಸಿದೆ. ಮಹಾಭಾರತದಲ್ಲಿ ದುರ್ಯೋಧನನ ಧ್ವಜ ಲಾಂಛನದ ಉಲ್ಲೇಖವಿರುವೆಡೆಯಲ್ಲೆಲ್ಲಾ 'ನಾಗ' ಶಬ್ದ ಪ್ರಯೋಗವಾಗಿದೆ.

"ನಾಗ" ಶಬ್ದಕ್ಕೆ ಎರಡು ಅರ್ಥಗಳಿರುವುದು ಸುವಿದಿತ. ಅದು "ಆನೆ" ಮತ್ತು "ಹಾವು". ಈ ಎರಡೂ ಅರ್ಥಗಳು ದುಯೋರ್ಧನನಿಗೆ ಸೂಕ್ತವಾದುದು. \

ಅ) ದುಯೋರ್ಧನನ ರಾಜಧಾನಿ ನಾಗಪುರ (ಹಸ್ತಿನಾಪುರ) ಮತ್ತು ಅವನ ಧ್ವಜವು ಆನೆಯ (ಹಸ್ತಿ) ಲಾಂಛನವನ್ನು ಒಳಗೊಂಡಿರುವುದು ಸರಿಯಾಗಿದೆ.

ಆ) ದುರ್ಯೋಧನನ ವಿಷಪೂರಿತ ನಡತೆಯು ಧ್ವಜ ಚಿಹ್ನೆಯ ಮೂಲಕ ಸರಿಯಾಗಿ ಪ್ರತಿನಿಧಿಸಲಾಗಿದೆ.

ಅಸಂಖ್ಯಾತ ಕವಿ, ವಿಮರ್ಶಕರು ಹಾಗೂ ಬಹುಪಾಲು ಸಹೃದಯರು ಮಹಾಭಾರತದಲ್ಲಿ ಚಿತ್ರಿಸಲಾಗಿರುವ ದುರ್ಯೋಧನನ ಪಾತ್ರದಿಂದ ಪ್ರಭಾವಿತರಾಗಿವುದು "ನಾಗ" ಶಬ್ಧದ "ಹಾವು" ಎಂಬರ್ಥದ ವ್ಯುತ್ಪತ್ತಿಯಲ್ಲಿ ಕಾಣಬಹುದಾಗಿದೆ.

ದ್ರಾವಿಡ ದೇಶದಲ್ಲಿ ಮಹಾಭಾರತವು ತಮಿಳು, ತೆಲುಗು, ಕನ್ನಡ ಹಾಗು ಮಲೆಯಾಳಂ ಭಾಷೆಗಳಲ್ಲಿ ರಚಿತವಾಗಿದೆ. ಪೆರುಂದೇವನಾರ್ 'ಭಾರತವೆಣ್ಬ', ವಿಲ್ಲಿಪುತ್ತೂರ್ ಭಾರತಂ ಮತ್ತು ನಲ್ಲಪಿಳ್ಳೈ ಭಾರತಗಳು ತಮಿಳಿನವಾದರೆ, ತೆಲುಗಿನಲ್ಲಿ ನನ್ನಯ, ತಿಕ್ಕನ, ಎರ್ರನರಿಂದ ಭಾರತ ರಚನೆಯಾಗಿದೆ. ಕನ್ನಡದಲ್ಲಿ ಪಂಪನ 'ವಿಕ್ರಮಾರ್ಜುನ ವಿಜಯ', ರನ್ನನ 'ಗದಾಯುದ್ಧ', 'ಸಾಳ್ವಭಾರತ', ಬ್ರಹ್ಮಕವಿ ಭಾರತ, ಕುಮಾರವ್ಯಾಸ ಭಾರತ, ವಿಜಯನಗರ ಕಾಲದ ತಿಮ್ಮಣ್ಣ ಕವಿಯ ಭಾರತಗಳಿವೆ.

ತಮಿಳುನಾಡಿನ ಕವಿ ಪೆರುಂದೇವನಾರ್ (ಕ್ರಿ.ಶ. ೯ನೆಯ ಶತಮಾನ) ಕಾಲದಲ್ಲಿಯೂ ಸಹಾ ನಾಗ–ಹಾವು ಎಂಬ ಈ ಅರ್ಥವು ಅತ್ಯಂತ ಪ್ರಸಿದ್ಧವಾಗಿತ್ತೆಂದು ಕಾಣುತ್ತದೆ. ಅವನು ಅತ್ಯಂತ ವಿರಳವಾಗಿ ತನ್ನ 'ಭಾರತವೆಣ್ಬ' ಕೃತಿಯಲ್ಲಿ ದುರ್ಯೋಧನನಿಗೆ 'ಅರವುಯಿರತೋಣ' ವಿಶೇಷಣಕ್ಕೆ ಪ್ರತಿಯಾಗಿ "ಸರ್ಪಧ್ವಜ" ಎಂದು ಬಳಸುತ್ತಾನೆ. ಅದೇ ರೀತಿಯಲ್ಲಿ ವಿಲ್ಲಿ ಪುತ್ತೂರಾರ್ ಪೆರುಂದೇವನಾರ್‌ನನ್ನು ಅನುಸರಿಸಿದ್ದಾನೆ.

ಪಂಪನ 'ವಿಕ್ರಮಾರ್ಜುನ ವಿಜಯ'ದಲ್ಲಿ ದುರ್ಯೋಧನನ ಧ್ವಜಕ್ಕೆ ಸಂಬಂಧಿಸಿದಂತೆ "ನಾಗ" ಪದಕ್ಕೆ "ಹಾವು" ಎಂಬ ಅರ್ಥವಲ್ಲದೆ ಬೇರೇನೂ ಇಲ್ಲವೆಂದು ಕಾಣುತ್ತದೆ. ರನ್ನ ಹಾಗೂ ಕುಮಾರವ್ಯಾಸರು ಪಂಪನನ್ನು ಅನುಸರಿಸಿ ಯಾವುದೇ ಭಿನ್ನಾಭಿಪ್ರಾಯವಿಲ್ಲದೆ ದುರ್ಯೋಧನನ್ನು ಸರ್ಪಧ್ವಜನೆಂದು ಕರೆದಿದ್ದಾರೆ.

ಸಂಸ್ಕೃತದ 'ಭಾರತ ಚಂಪು' ವಿನಂತಹ ಕೃತಿಯಲ್ಲಿಯೂ ಸಹಾ ದುರ್ಯೋಧಃ ಲಾಂಛನವು ಸರ್ಪಧ್ವಜವೆಂದು ಕರೆದಿರುವುದು ಅತ್ಯಂತ ಅಚ್ಚರಿಯ ಸಂಗತಿಯಾಗಿದೆ.

ತೆಲುಗು ಕವಿಗಳಾದ ನನ್ನಯ, ತಿಕ್ಕನ, ಎರ್ರನರೂ ಮಹಾ ದುರ್ಯೋಧನನ ಲಾಂಛನವು ಸರ್ಪಧ್ವಜವೆಂದು ಸ್ವೀಕರಿಸಿದ್ದಾರೆ. (ತಿಕ್ಕನ ಭಾರತ–ಭೀಷ್ಮ–ಪರ್ವ–೧–೯೫ ಮತ್ತು ಕರ್ಣಪರ್ವ–೨–೨೬೯)ನನ್ನಯನು ಪಂಪನಿಂದ ಪ್ರಭಾವಿತನಾಗಿರುವುದರಿಂದ ಸ್ವಾಭಾವಿಕವಾಗಿಯೇ ಪಂಪನನ್ನು ಅನುಸರಿಸಿದ್ದಾನೆ. ತಿಕ್ಕನ, ಎರ್ರನರು ನನ್ನಯನನ್ನು ಅನುಸರಿಸಿದ್ದಾರೆ.

ಮಹಾಭಾರತವನ್ನು ಆಂಗ್ಲಭಾಷೆಗೆ ಅನುವಾದಿಸಿದ ಐ.ಸಿ. ರಾಯ್ ಮತ್ತು ಮನ್ಮಥನಾಥ ದತ್ತರು ತಮ್ಮ ಅನುವಾದದಲ್ಲಿ "ನಾಗ" ಎಂಬುದಕ್ಕೆ "ಆನೆ"ಎಂದು ಅನುವಾದಿಸಿದ್ದಾರೆ. ಈ ಮಹಾಕಾವ್ಯದ ಅನುವಾದವನ್ನು ಪ್ರಸ್ತುತಪಡಿಸುವಲ್ಲಿ ಅವರಿಬ್ಬರೂ ಅತ್ಯಂತ ಪ್ರಾಮಾಣಿಕರೆಂಬುದನ್ನು ಡಾ.ಕೆ. ಕೃಷ್ಣ ಮೂರ್ತಿಯವರು ಗಮನಿಸಿದ್ದಾರೆ. ಉತ್ತರಭಾರತದ ಸಹೃದಯರು, ವಿಮರ್ಶಕರು ದುರ್ಯೋಧನನ ಧ್ವಜ ಲಾಂಛನವನ್ನು 'ಆನೆ' ಎಂದು ಸ್ವೀಕರಿಸಿದ್ದಾರೆ.

ಭೀಮಸೇನ ಹಾಗೂ ದುರ್ಯೋಧನರ ನಡುವಿನ ಶತ್ರುತ್ವವು ಸಿಂಹ ಹಾಗೂ ಆನೆಗಳ ನಡುವಿನ ಸಹಜ ಶತ್ರುತ್ವಕ್ಕೆ ಪ್ರತಿನಿಧಿಸಲಾಗುತ್ತದೆ. ಸಿಂಹವು ಆನೆಯನ್ನು ಕೊಲ್ಲುತ್ತದೆ. ಭೀಮಸೇನನು (ಅವನ ಧ್ವಜಲಾಂಛನದ ಮೂಲಕ ಸಿಂಹವೆಂದು ಪ್ರತಿನಿಧಿಸಲಾಗುತ್ತದೆ.) ದುರ್ಯೋಧನನನ್ನು ವಧಿಸುವನು. (ಅವನ ಧ್ವಜಲಾಂಛನದ ಮೂಲಕ 'ಆನೆ' ಎಂದು ಪ್ರತಿನಿಧಿಸಲಾಗುತ್ತದೆ.)

ಮೂಲ ಪಾಠದಲ್ಲಿ 'ನಾಗ' ಪದದ ಅರ್ಥವು 'ಆನೆ' ಎಂದು ಅತ್ಯಂತ ಸ್ಪಷ್ಟವಾಗಿರುವಾಗ 'ಸರ್ಪ' ಎಂದು ಏಕೆ ತಪ್ಪು ಅಭಿಪ್ರಾಯವಾಯಿತು?

ತಪ್ಪು ಮಾಡಿದ ಪ್ರಥಮ ಕವಿ ಯಾರು? ಹಾಗೂ ಬೇರೆಯವರನ್ನು ದಾರಿ ತಪ್ಪಿಸಿದ್ದೇಕೆ? ಎಂಬ ಪ್ರಶ್ನೆಗಳಿಗೆ ವಿದ್ವಾಂಸರ ಸಮಾಧಾನವು ಹೀಗಿದೆ.

ನಮಗೆ ತಿಳಿದಿರುವ ಮಟ್ಟಿಗೆ ದಕ್ಷಿಣ ಭಾರತದ ಪ್ರಥಮ ಭಾರತ ಕವಿ (ಕ್ರಿ.ಶ. ೯ನೆಯ ಶತ) ಪೆರುಂದೇವನಾರ್ ದುರ್ಯೋಧನನನ್ನು 'ಸರ್ಪಧ್ವಜ'ನೆಂದು ಕರೆದಿರುವನು. ಅವನು ಪ್ರಸಿದ್ಧ ದಂತಕಥೆ ಹಾಗೂ ಜಾನಪದ ಸಾಹಿತ್ಯದಿಂದ ಹೆಚ್ಚು ಪ್ರಭಾವಿತನಾಗಿರಬಹುದು. ಅವನು ಮೂಲಪಾಠವನ್ನು ಪ್ರಾಮಾಣಿಕವಾಗಿ ನೋಡಿಲ್ಲವೆಂದು ಕವಿಯನ್ನು ಆಪಾದಿಸುವುದು ಅಧಿಕ ಪ್ರಸಂಗವೆನಿಸುತ್ತದೆ.

ಆದರೆ ಅವನು ಇತರ ಕವಿಗಳನ್ನು ದಾರಿ ತಪ್ಪಿಸಿದನೆಂದು ಹೇಳುವುದು ಅಸಾಧ್ಯವಾದುದು. ದಕ್ಷಿಣಭಾರತದಲ್ಲಿ ತಮಿಳು, ಕನ್ನಡ, ತೆಲುಗು ಹಾಗೂ ಸಂಸ್ಕೃತ ಕೃತಿಗಳಲ್ಲಿಯೂ ಸಹಾ ಇದಕ್ಕೆ ಸಂಬಂಧಿಸಿದಂತೆ ಪರಸ್ಪರ ಒಪ್ಪಿರುವುದು. ದಕ್ಷಿಣ ಭಾರತದ ಸಂಪ್ರದಾಯದಲ್ಲಿ ಅದು ಪ್ರಸಿದ್ಧವಾಗಿರಬಹುದು ಹಾಗೂ ಹಸ್ತಿ ಧ್ವಜದ ದುರ್ಯೋಧನನನ್ನು ಸರ್ಪಧ್ವಜದ ದುರ್ಯೋಧನನನ್ನಾಗಿ ಪರಿವರ್ತಿಸಿರಬಹುದು.

ಇಲ್ಲಿ ಉದ್ಭವಿಸಬಹುದಾದ ಮತ್ತೊಂದು ಪ್ರಶ್ನೆಯೆಂದರೆ 'ವ್ಯಾಸಮುನೀಂದ್ರರುಂದ್ರ ವಚನಾಮೃತವಾರ್ಧಿಯನೀಸುವೆಂ' ಎಂದು ಹೇಳಿಕೊಂಡ ಪಂಪನಾಗಲೀ 'ಕುಮಾರವ್ಯಾಸ'ನೆಂದು ಕರೆದುಕೊಂಡ ಗದುಗಿನ ನಾರಣಪ್ಪನಾಗಲೀ ಮಹಾಭಾರತದ ಔತ್ತರೇಯ ಪಾಠವನ್ನು ಗಮನಿಸಿರಲಿಲ್ಲವೇ ಎಂಬುದಾಗಿದೆ. ಆದರೆ ಅವರಿಬ್ಬರೂ ಔತ್ತರೇಯ ಪಾಠವನ್ನು ಅನುಸರಿಸಿರುವರೆಂಬುದಕ್ಕೆ ಅವರ ಕಾವ್ಯಗಳಲ್ಲಿಯೇ ಸಾಕಷ್ಟು ಪುರಾವೆಗಳು ದೊರೆಯುವುದೆಂದು ಡಾ.ಎ.ಆರ್. ಕೃಷ್ಣಶಾಸ್ತ್ರಿಗಳು ಅಭಿಪ್ರಾಯ ಪಡುತ್ತಾರೆ. ನಿದರ್ಶನಕ್ಕೆ ಈ ಪ್ರಸಂಗವನ್ನು ನೋಡಬಹುದು.

ಈ ಕರ್ಣನ ಅವಸಾನದ ನಂತರ ಸೂರ್ಯಾಸ್ತವಾಗುತ್ತದೆ. ಔತ್ತರೇಯ ಪಾಠದಲ್ಲಿ ಅದರ ವರ್ಣನೆ ಹೀಗಿದೆ :

ಕರ್ಣಸ್ಯದೇಹಂ ರುಧಿರಾವಸಿಕ್ತಂ ಭಕ್ತಾನುಕಂಪೋ ಭಗವಾನ್ ವಿವಸ್ವಾನ್ ।
ಸ್ಪೃಷ್ಟ್ವಾಂಶುಭಿರ್ಲೋಹಿತ ರಕ್ತ ರೂಪಃ ಸಿಸ್ನಾಸುರಭ್ಯೇತಿಪರಂ ಸಮುದ್ರಂ॥

–ಕರ್ಣ ಪರ್ವ, ೯೪–೨೯

ದಾಕ್ಷಿಣಾತ್ಯ ಪಾಠದಲ್ಲಿ ಹೀಗಿದೆ:

ವ್ಯೂಢೋರಸ್ಕಂ ಕಮಲವದನಂ ತಪ್ತ ಹೇಮಾವಭಾಸಂ
ಕರ್ಣಂ ದೃಷ್ಟ್ವಾಭುವಿ ನಿಪತಿತಂ ಪಾರ್ಥಬಾಣಾಭಿತಪ್ತಂ।
ಪಾಂಸುಗ್ರಸ್ತಂ ಮಲಿನಮಸಕೃತ್ಸುತ್ರಮನ್ವೀಕ್ಷಮಾಣೋ
ಮಂದಂ ಮಂದಂ ವ್ರಜತಿ ಸವಿತಾ ಮಂದಿರಂ ಮಂದರಶ್ಮಿಃ॥

– ಕರ್ಣ ಪರ್ವ, ೯೮–೭೨

ಪಂಪನೂ, ನಾರಣಪ್ಪನೂ ಅನುಸರಿಸಿರುವ ಪಾಠವು ಔತ್ತರೇಯ ಪಾಠದ ಹತ್ತಿರಕ್ಕೆ ಬರುವುದೆಂದು ಮುಂದಿನ ಪದ್ಯಗಳಿಂದ ತಿಳಿಯುತ್ತದೆ.

ಪಟಯಿಗೆಯನುಡುಗಿ ರಥಮಂ
ಪೆಟವನನೆಸಗಲ್ಕೆ ವೇೞ್ದು ಸುತ ಶೋಕದ ಪೊಂ
ಪುೞಿಯೊಳ್ಮೆಯ್ಯೞಿಯದೆ ನೀ।
ರಿೞಿವಂತೆ ಪೊಲಿಟೆದನಪರ ಜಳಧಿಗೆ ದಿನಪಂ॥

– ಪಂಪ ಭಾರತ ೧೨, –೨೨೦

ಇತ್ತ ಪರವಶವಾದ ರಾಯನ
ತೆತ್ತಿಗರು ದಂಡಿಗೆಯೊಳೀತನ
ನೆತ್ತಿ ತಂದರು ಪಾಳೆಯಕೆ ದುಃಸ್ಥಿತಿಯ ಮೇಳೆಯಕೆ।
ತೆತ್ತನೇ ಮಗನಸುವನ ಕಟ ಎ
ನುತ್ತ ಚಿಂತಾರಾಗದಲಿ ಕಡ
ಲತ್ತ ಹಾಯ್ದನು ಬಿಸುಟನಂಬುಜಮಿತ್ರನಂಬರವ॥

– ಕ.ಭಾ.ಕ. ಕರ್ಣಪರ್ವ ೨೭–೩೦

(ಕುಮಾರವ್ಯಾಸ ಭಾರತ)

ಹೀಗೆ ಈ ಕವಿಗಳೀರ್ವರೂ ಔತ್ತರೇಯ ಪಾಠವನ್ನು ಅನುಸರಿಸಿರುವಾಗ ನಾಗ (ಆನೆ) ಧ್ವಜವನ್ನು ಸರ್ಪಧ್ವಜವಾಗಿ ಅಂಗೀಕರಿಸಲು ಕಾರಣವೇನೆಂಬ ಪ್ರಶ್ನೆಯು ಉದ್ಭವಿಸುತ್ತದೆ. ಇದಕ್ಕೆ ಪುರಾಣಭಾಸ್ಕರ ಡಾ. ಕಂಬಾಲೂರು ವೆಂಕಟೇಶ ಆಚಾರ್ಯ(ಪ್ರಸ್ತುತ ಶ್ರೀ ಶ್ರೀ ವಿದ್ಯಾಸಾಗರ ಮಾಧವ ತೀರ್ಥರು)ರು ತಮ್ಮ ಅಭಿಪ್ರಾಯವನ್ನು ಪ್ರಸ್ತುತಪಡಿಸುವರು.

ಈ ವಿಷಯಕ್ಕೆ ಸಂಬಂಧಿಸಿದಂತೆ ತಮಿಳು ಕವಿ ಕ್ರಿಶ. ೯ನೆ ಯ ಶತಮಾನದ ಪೆರುಂದೇವನಾರ್‌ಗಿಂತಲೂ ಮೊದಲು ಜೀವಿಸಿದ್ಧ ತಿರುಮಂಗೈ ಆಳ್ವಾರರ 'ಪೆರಿಯ ತಿರುಮೊಳಿ' ಯಲ್ಲಿನ 'ತಿರುಕಣ್ಣನ್ ಕುಡಿ ಪಾಶುರಂ' ನಲ್ಲಿ ನಮಗೆ ಆಧಾರ ದೊರೆಯುತ್ತದೆ. ಅದು ಹೀಗಿದೆ.

ಅರವನಿಲ್ ಕೊಡಿಯಾನ್ ಅವೇಯುಲ್
ಆಸಾನಥೈ ಅಂಜಿದಾತೆ ಇದ ಅದರ್ಕಪ್
ಪೆರಿಯಮಾಮೇನಿ ಅಂದಮುದುರುವಾಪ್ ಪೆರುನ್
ತಿಸೈ ಅದಿನ್ನಿಡ ನಿರ್ಮಿನ್‌ಡೊನ್
ವಾರೈಯಿನ್ ಮಾಮನಿಯುಂ ಮಾರಾಟಗತ್ ತಿರಲುಂ
ವೈರಮುಂ ವೇದಿರುದಿರ್ ಮುತ್ತುಂ
ತಿರೈ ಕೊನ್ಸಾರ್‌ನ್‌ಘುಂಧಿ ವಾಯಾಲ್ ತೋರುಂ
ಕುವಿಕ್ಕುಂ ತಿರುಕಣ್ಣನ್ ಕುಡಿಯುಲ್ ನಿಸ್ರಾನೆ

ಇಲ್ಲಿ ದುರ್ಯೋಧನನ ಆಸ್ಥಾನದಲ್ಲಿನ ಕೃಷ್ಣನ ವಿಶ್ವರೂಪದರ್ಶನವನ್ನು ಉಲ್ಲೇಖಿಸಲಾಗಿದೆ. ಇಲ್ಲಿ ದುರ್ಯೋಧನು ಸರ್ಪಧ್ವಜನೆಂದು ಆಳ್ವಾರರಿಂದ ಸ್ಪಷ್ಟವಾಗಿ ಹೇಳಲಾಗಿದೆ (ಅರವಿನಿಲ್ ಕೊಡಿಯಾನ್) ಪೆರಿಯ ಆಚಾನ್ ಪಿಳ್ಳೈ ಅವರ ವ್ಯಾಖ್ಯಾನ ಹೀಗಿದೆ;

'ಸರ್ಪತ್-ದುವಜನ್ ಎನ್ನಾಕ್ ಕಡವ್‌ತಿರೆ ದುರ್ಯೋಧನನೈ'

ಆಳ್ವಾರರ ಹೇಳಿಕೆಯನ್ನು ಪ್ರಶ್ನಿಸುವ ಧೈರ್ಯ ಯಾರಿಗೂ ಈ ಪ್ರಪಂಚದಲ್ಲಿಲ್ಲ. ಸಂಪ್ರದಾಯದಂತೆ ಅವುಗಳನ್ನು 'ಮಧಿನಾಲುಂ ಅರುಲಾಪ್ ಪೆರ್‍ರವಾರ್' ಎಂದು ಪರಿಗಣಿಸಬೇಕು. ಆದುದರಿಂದ ಅವರ ಹೇಳಿಕೆಗಳು ಪ್ರಶ್ನಾತೀತ ನಿಯಮಗಳು.

ಆಳ್ವಾರರು ಅನ್ಯರನ್ನು ದಾರಿ ತಪ್ಪಿಸಲಿಲ್ಲ. ಅವರೂ ದಾರಿತಪ್ಪಲಿಲ್ಲ. ಅವರು ಮೂರನೆಯ ನಂದಿವರ್ಮನ ತಾತ ನಂದಿವರ್ಮನ್ ಪಲ್ಲವ ಮಲ್ಲನ ಸಮಕಾಲೀನರು ಹಾಗೂ ಪೆರುಂದೇವನಾರ್‌ಗಿಂತ ಅರ್ಧ ಶತಮಾನಕ್ಕಿಂತಲೂ ಹೆಚ್ಚು ಹಿಂದಿನವರು. ನಾವೀಗ ಸಂಗಂ ಕಾಲದ ಕೃತಿಗಳು ದುರ್ಯೋಧನನು ಸರ್ಪಧ್ವಜನೆಂದು ಉಲ್ಲೇಖಿಸುತ್ತವೆಯೇ ಎಂಬುದನ್ನು ಗಮನಿಸಬೇಕು. ಆದರೆ ಅವು ಈ ವಿಚಾರವಲ್ಲಿ ಮೌನವಹಿಸಿವೆ. ಆದುದರಿಂದ ಪೆರುಂದೇವನಾರ್‌ನ ಅಭಿಪ್ರಾಯಕ್ಕೆ ಆಳ್ವಾರರೇ ಪ್ರವರ್ತಕರೆಂದು ನಿರ್ಧರಿಸಬಹುದು. ಪೆರುಂದೇವನಾರ್ ನಿಷ್ಠಾವಂತ ವೈಷ್ಣವ ಭಕ್ತ (ಶ್ರೀ ಭಗವದ್ರಾಮಾನುಜಾಚಾರ್ಯರ ಕಾಲದಲ್ಲಿ ಶ್ರೀ ವೈಷ್ಣವರೆಂದು ವೈಷ್ಣವ ಭಕ್ತರನ್ನು ಕರೆಯಲಾಯಿತು) ನಾದುದರಿಂದ ಆಳ್ವಾರರ ಹೇಳಿಕೆಗಳನ್ನು ಮಂತ್ರದಂತೆ ಭಾವಿಸಿ

ತನ್ನ 'ಭಾರತವೆಣ್ಬ'ದಲ್ಲಿ ಅವರ ವಿಚಾರಗಳನ್ನು ಅಳವಡಿಸಿಕೊಂಡನು. ವಾಸ್ತವವಾಗಿ 'ಭಾರತವೆಣ್ಬ'ದ ಉದ್ಯೋಗ ಪರ್ವವು 'ಧೌಮಿಯನ್ ಥೂದು' ಎಂಬುದು 'ಅರವುಯಾರ್ಧನ್ ಕೊನ್ನ' ಅಂದರೆ 'ಸರ್ಪಧ್ವಜ ದುರ್ಯೋಧನನು ಹೇಳಿದಂತೆ' ಎಂದು ಪ್ರಾರಂಭವಾಗುತ್ತದೆ.

ತಿರುಮಂಗೈ ಆಳ್ವಾರರೂ ಸಹಾ 'ನಾಗ' ಪದವನ್ನು 'ಅರವು ಅಥವಾ ಸರ್ಪ' ಎಂಬ ಅರ್ಥದಲ್ಲಿ ಸ್ವೀಕರಿಸಿದುದೇಕೆ ಎಂಬ ಪ್ರಶ್ನೆಯು ಬರುತ್ತದೆ. ತಿರುಮಂಗೈ ಆಳ್ವಾರ್ ಮೂಲತಃ ಅಲಿನಾಡಿನ ದಳವಾಯಿ ಹಾಗೂ ಸಣ್ಣದೊರೆಯಾಗಿದ್ದರು. ಹಾಗಾಗಿ ಅವರು ತಮ್ಮ ಕಾಲದ ಚೇರ, ಚೋಳ, ಪಾಂಡ್ಯ, ಪಲ್ಲವ, ಚಾಳುಕ್ಯ ಮತ್ತಿತರ ರಾಜರ ಧ್ವಜ ಲಾಂಛನಗಳನ್ನು ಅರಿತಿದ್ದರು.

ಆಳ್ವಾರರು ತಮ್ಮ 'ಪೆರಿಯ ತಿರುಮೋಳಿ'ಯ ಅತ್ಯಂತ ಅರ್ಥಪೂರ್ಣವಾದ ಪದ್ಯದಲ್ಲಿ ದ್ವಿತೀಯ ಪರಮೇಶ್ವರವರ್ಮನು ತನ್ನ ಸರ್ಪಧ್ವಜದೊಂದಿಗೆ ಯುದ್ಧ ಭೂಮಿಗೆ ಪಾಂಡ್ಯರಾಜನೊಂದಿಗೆ ಯುದ್ಧಮಾಡಲು ಹೋದನು.

ತೆಂಪೊಳಿಲ್ ಕುನ್ರೆಯಿಲ್ ತೆನ್ನಾವನೈತ್ ತಿಸೈಪ್ಪಾಕ್
ಸೆರುಮೆಲ್ ವಿಯಾಂಧು ಅನ್ರುಸೆನ್ರ
ಪಾಂಪುದ್ಯೆಪ್ ಪಲ್ಲವರ್‌ಕೋನ್ ಪನಿನ್ದ
ಪರಮೇಶ್ವರ ವಿನ್ನಗರಂ ಅದುವೆ- (ಪೆರಿಯ ತಿರುಮೋಳಿ II೯-೬)

ಪೆರಿಯ ಆಚಾನ್ ಪಿಳ್ಳೆಯವರು 'ಪಂಪುದ್ಯೆ' ಯನ್ನು ವ್ಯಾಖ್ಯಾನಿಸುತ್ತ 'ಪಂಪುಕ್ಕೊಡಿ ಉದಯ'ವೆಂಬುದು ಪಲ್ಲವರಾಜನು 'ನಾಗಲೋಕ'ದ ಮೇಲೆ ವಿಜಯವನ್ನು ಸಾಧಿಸಿ ಸರ್ಪಧ್ವಜವನ್ನು ಸ್ಮರಣಾರ್ಥವಾಗಿ ಉನ್ನತ ಮಟ್ಟಕ್ಕೆ ಏರಿಸಿದನು. "ನಾಗಲೋಕತ್ತೈವೆನ್ರು ಸರ್ಪತ್ತೈತ್ ಧ್ವಜವಾಹ ಎಡುತ್ತನಾಗ ಕೊಲ್ಲಾರ್-ಕಡವಡು'-ಎಂದಿದ್ದಾರೆ (ನಾಗಾಲೋಕವನ್ನು ಜಯಿಸಿ ಸರ್ಪವನ್ನು ಧ್ವಜವಾಗಿ ಸ್ವೀಕರಿಸಿದನು.)

ಇಲ್ಲಿ ನಾವು ಗಮನಿಸಬೇಕಾದುದೆಂದರೆ ಆಳ್ವಾರರು ಪಲ್ಲವರಾಜ ನಂದಿವರ್ಮನ್ ಪಲ್ಲವ ಮಲ್ಲನ ಸಮಕಾಲೀನರು. ಅವರು ಪಲ್ಲವ ಧ್ವಜವು ನಾಗಧ್ವಜವೆಂದು ಹೇಳಿರುವರು. ಪಲ್ಲವರೇಕೆ ನಾಗಧ್ವಜವನ್ನು ಅವಲಂಬಿಸಿದರೆಂಬುದು ಯಥೋಚಿತವಾದ ಪ್ರಶ್ನೆಯಾಗುತ್ತದೆ. ಡಾ. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ಯರು ಗಮನಿಸುರುವಂತೆ ಪಲ್ಲವರು ನಾಗವಂಶಸ್ಥರು ಅಂದಿನ ಇತರ ವರ್ಗಗಳಲ್ಲಿ ಅತ್ಯಂತ ನಾಗರಿಕ ವರ್ಗದವರು. ಸಂಘ ಕಾಲದ ಬೌದ್ಧಕಾವ್ಯ 'ಮಣಿಮೇಖಲೈ' ನಲ್ಲಿ ಉಲ್ಲೇಖಿಸಿರುವಂತೆ ಅವರು ತಮ್ಮ ಭಾಷೆಯಾಗಿ 'ನಾಗಭಾಷೆ'ಯನ್ನು ಅಭಿವೃದ್ಧಿಪಡಿಸಿಕೊಂಡರು. ಆದುದರಿಂದ 'ನಾಗಧ್ವಜ'ವು ಪಲ್ಲವ ಪರಂಪರೆಯನ್ನು ಸೂಚಿಸುತ್ತದೆ.

ಈಗ ಮತ್ತೊಂದು ಸಂದೇಹವುಂಟಾಗುತ್ತದೆ. ಪಲ್ಲವರಾಜ ಪರಮೇಶ್ವರವರ್ಮನಿಗೆ ಸಂಬಂಧಿಸಿದಂತೆ ನಾಗಧ್ವಜವನ್ನು ಸ್ತುತಿಸುವರು. ಆದರೆ ದುರ್ಯೋಧನನಿಗೆ ಸಂಬಂಧಿಸಿದಂತೆ ವಿಷಪೂರಿತವಾದ ಕಡೆಗಣಿಸುವಂತಹ ತಿರಸ್ಕೃತ ಧ್ವನಿಯಿರುತ್ತದೆ. ಅದೇ ಆಳ್ವಾರರ ಮುಖದಿಂದ ಈ ವಿರೋಧಾತ್ಮಕ ಸುಳಿವುಗಳನ್ನು ಸಮನ್ವಯಗೊಳಿಸುವುದು ಹೇಗೆ? ನಾವೀಗ ನಿರ್ಣಾಯಕ ಅಂಶವನ್ನು ಗಮನಿಸಬೇಕು.

ದಕ್ಷಿಣಭಾರತದಲ್ಲಿ ಅತ್ಯಂತ ಪ್ರಾಚೀನ ಕಾಲದಿಂದಲೂ ನಾಗಪೂಜೆಯು ಪ್ರಚಲಿತವಿದೆ. ಸರ್ಪವನ್ನು ಆದಿಶೇಷನೆಂದು ಪೂಜಿಸಲಾಗುತ್ತದೆ ಹಾಗೂ ಶಿವ ಪಾರ್ವತಿಯರು ಸರ್ಪವನ್ನು ಆಭರಣವಾಗಿ ಧರಿಸಿರುವರು. ದಕ್ಷಿಣ ಭಾರತದಲ್ಲಿ ನಾಗಪೂಜೆಯ ಪರಂಪರೆಯ ಸಂಕೇತವಾಗಿ ಕನ್ಯಾಕುಮಾರಿ ಜಿಲ್ಲೆಯ ನಾಗರ ಕೋಯಿಲ್ ಸ್ಥಳವಿದೆ. ಆದುದರಿಂದ ಪಲ್ಲವರು ವಿಜಯ, ಆನಂದ, ಸಂತಾನಾಭಿವೃದ್ಧಿಯ ಮುನ್ಸೂಚಕವಾಗಿ ತಮ್ಮ ಧ್ವಜದಲ್ಲಿ ನಾಗಲಾಂಚನವನ್ನು ಹೊಂದಿದರು.

ತಮಿಳಿನ ನಾಣ್ಣುಡಿ 'ಪಾಂಬಿನಾಲ್ ಪಡೆಯುಂ ನಡುಂಗುಂ' ಎಂದರೆ ಹಾವಿನಿಂದ ಸೈನ್ಯವೂ ನಡುಗುತ್ತದೆ ಎಂಬಂತೆ, ಒಂದು ಬುಟ್ಟಿಯ ತುಂಬಾ ಹಾವನ್ನು ಯುದ್ಧರಂಗದಲ್ಲಿ ಬಿಟ್ಟರೆ ಮುನ್ನಡೆಯುತ್ತಿರುವ ಸೈನ್ಯವನ್ನೂ ಓಡಿಸುತ್ತದೆ. ಸರ್ಪವು ಆನೆಯನ್ನು ಕಚ್ಚಿದರೆ ಅವುಗಳೂ ಏನೂ ಮಾಡಲಾಗುವುದಿಲ್ಲ. ಸಿಂಹಗಳೂ ಸಹಾ ಸರ್ಪದಂಷ್ಟ್ರದಿಂದ ನಿಧಾನಗತಿಯು ಸಾವನ್ನು ಹೊಂದುತ್ತವೆ. ಸರ್ಪಕ್ಕೆ ಅಂತಹ ಶಕ್ತಿ ಸಾಮರ್ಥ್ಯವಿರುವುದರಿಂದಲೇ ಪಲ್ಲವರು ಹಾಗೂ ದುರ್ಯೋಧನರು ನಾಗ ಲಾಂಛನವನ್ನು ತಮ್ಮ ಧ್ವಜಗಳಲ್ಲಿ ಹೊಂದಿದ್ದರು.

ಮತ್ತೊಂದು ಬಹುಮುಖ್ಯವಾದ ಸಾದೃಶ್ಯವೆಂದರೆ ದುರ್ಯೋಧನ ಹಾಗೂ ಸರ್ಪದಲ್ಲಿರುವುದು. ಸರ್ಪಕ್ಕೆ ನಾಲ್ಕು ವಿಷದ ಹಲ್ಲುಗಳಿವೆ ಅವುಗಳು ಯಮನ್, ಯಮದೂತಿ, ಕಲಾರ್ಥಿ ಮತ್ತು ಕಾಳಿ ಎಂಬುದು ಹಾಗೆಯೇ ದುರ್ಯೋಧನನೂ ಸಹಾ ವಿಷ ಪೂರಿತವಾದ ದುಷ್ಟ ಚತುಷ್ಟಯಗಳನ್ನು ಹೊಂದಿರುವನು. ಆ ನಾಲ್ಕು ದುಷ್ಟ ನೀಚ ಅಪರಾಧಿಗಳೆಂದರೆ ಧೃತರಾಷ್ಟ್ರ, ದುಶ್ಶಾಸನ, ಕರ್ಣ ಹಾಗೂ ಶಕುನಿಯರು. ಹೀಗೆ ಇವೆಲ್ಲವನ್ನೂ ಪರಿಗಣಿಸಿ ವ್ಯಾಸ ಮಹಾಭಾರತದ ಮೇಲಿನ ಚಿಂತಕರು ಹಾಗೂ ಲೇಖಕರು ನಾಗಧ್ವಜನಾದ ದುರ್ಯೋಧನನ್ನು ಸರ್ಪಧ್ವಜನೆಂದು ವ್ಯಾಖ್ಯಾನಿಸುವುದು ಉತ್ತಮವೆಂದು ಚಿಂತಿಸಿದರು.

ಹೀಗಾಗಿ ವೈಷ್ಣವ ಭಕ್ತನಾದ ಪೆರುಂದೇವನಾರ್ ತಿರುಮಂಗೈ ಆಳ್ವಾರರನ್ನು ಅನುಸರಿಸಿದನು. ಅನಂತರ ಸಂಸ್ಕೃತ, ಕನ್ನಡ, ತೆಲುಗು, ಮಲೆಯಾಳಂ ಕವಿಗಳೂ

ಅವನನ್ನು (ಪೆರುಂದೇವನಾರ್) ಅನುಸರಿಸಿದುದರಿಂದ ಔತ್ತರೇಯದಲ್ಲಿನ 'ಹಸ್ತಿಧ್ವಜ'ವು ದಾಕ್ಷಿಣಾತ್ಯದಲ್ಲಿ 'ಸರ್ಪಧ್ವಜ'ವಾಗಿ ಮಾರ್ಪಾಡಾಯಿತು.

ಗ್ರಂಥ ಋಣ :

೧. **Mahabharatha and Variations –Purana Bhaskara Dr. Kambaluru Venkatesha Acharya**

೨. ಮಹಾಭಾರತ ಹಾಗೂ ಪರಿವರ್ತನೆಗಳು – ಮೂಲ : ಪುರಾಣ ಭಾಸ್ಕರ ಡಾ. ಕಂಬಾಲೂರು ವೆಂಕಟೇಶಾಚಾರ್, ಅನುವಾದ : ಪ್ರೊ. ಎಸ್. ಬಿಳಿಗಿರಿವಾಸನ್

೩. ವಚನ ಭಾರತ – ಡಾ. ಎ.ಆರ್. ಕೃಷ್ಣಶಾಸ್ತ್ರಿ

೪. ಪಂಪ ಒಂದು ಅಧ್ಯಯನ – ಸಂ. ಡಾ. ಜಿ.ಎಸ್. ಶಿವರುದ್ರಪ್ಪ

೫. ಪುರಾಣನಾಮ ಚೂಡಾಮಣಿ – ಬೆನಗಲ್ ರಾಮರಾವ್

ಪರಿಶಿಷ್ಟ

'ದುರ್ಯೋಧನನ ಧ್ವಜ ಲಾಂಛನ'ವನ್ನು ಕುರಿತು ವಿದ್ವಾಂಸರ ವಲಯದಲ್ಲಿ ಗಣನೀಯ ಪ್ರಮಾಣದಲ್ಲಿ ಚರ್ಚೆಗಳಾಗಿರುವುದಾದರೂ 'ನಾಗ' ಎಂಬುದಕ್ಕೆ 'ಆನೆ' ಎಂಬ ಅರ್ಥವು ಮಹಾಭಾರತದ ಔತ್ತರೇಯ ಪಾಠದಲ್ಲಿದೆ. ದಾಕ್ಷಿಣಾತ್ಯ ಪಾಠದಲ್ಲಿ 'ಹಾವು', 'ಸರ್ಪ' ಎಂಬ ಅರ್ಥವು ಪರಿಗಣಿಸಲ್ಪಟ್ಟಿರುವುದಕ್ಕೆ ಮೂಲ ಕಾರಣವನ್ನು ಅನ್ವೇಷಿಸಿದಾಗ ಡಾ. ಕಂಬಾಲೂರು ವೆಂಕಟೇಶಾಚಾರ್ಯರು (ಪ್ರಸ್ತುತ ಶ್ರೀಶ್ರೀ ಮಧ್ವ ತೀರ್ಥ ಶ್ರೀಮಠದ ಮಠಾಧೀಶರಾದ ಶ್ರೀ ಶ್ರೀ ವಿದ್ಯಾಸಾಗರ ಮಾಧವ ತೀರ್ಥರು) ವೈಷ್ಣವ (ಶ್ರೀ ವೈಷ್ಣವ) ಆಳ್ವಾರರಾದ ತಿರುಮಂಗೈ ಆಳ್ವಾರರು ತಮ್ಮ 'ತಿರುಕುನ್ನಾನಡಿ ಪಾಶುರಂ'ನಲ್ಲಿ ದುರ್ಯೋಧನನು 'ಸರ್ಪಧ್ವಜ'ನೆಂದು ತಿಳಿಸಿರುವರೆಂಬುದನ್ನು ತಮ್ಮ ಮಹಾಪ್ರಬಂಧದಲ್ಲಿ ಪ್ರಸ್ತುತಪಡಿಸುವರು. ಆಳ್ವಾರರ ಹೇಳಿಕೆಗಳು ವೇದವಾಕ್ಯವೆಂಬಂತಿದ್ದ ಅಂದಿನ ಕಾಲದಲ್ಲಿ ಅದನ್ನು ಪ್ರಶ್ನಿಸುವ ಎಂಟೆರ್ದೆ ಈ ಭೂಮಂಡಲದಲ್ಲಿ ಯಾರಿಗೂ ಇರಲಿಲ್ಲವಾಗಿ ಮುಂದೆ ಅದೇ ರೂಢಿಯಾಯಿತು. ಅವರ ಪರಮ ಪದವಾದ ೫೦ ವರ್ಷದ ನಂತರದಲ್ಲಿ ಜೀವಿಸಿದ್ದ ಕ್ರಿ.ಶ. ೯ನೆಯ ಶತಮಾನದ ತಮಿಳು ಕವಿಯಾದ ಪೆರುಂದೇವನಾರ್ ನಿಷ್ಠಾವಂತ ವೈಷ್ಣವನಾಗಿದ್ದುದರಿಂದ ಆಳ್ವಾರರನ್ನೇ ಅನುಸರಿಸಿ ದುರ್ಯೋಧನನು ಸರ್ಪಧ್ವಜನೆಂದು ತನ್ನ ಕಾವ್ಯದಲ್ಲಿ ಪ್ರಸ್ತುತಪಡಿಸಿದ. ಅವನನ್ನು

ಅನುಸರಿಸಿದ ದಕ್ಷಿಣ ಭಾರತದ ಸಂಸ್ಕೃತ, ಕನ್ನಡ, ತಮಿಳು, ತೆಲುಗು ಮಲೆಯಾಳಂನ ಭಾರತದ ಕವಿಗಳು ದುರ್ಯೋಧನನ 'ನಾಗಧ್ವಜ'ವನ್ನು 'ಸರ್ಪಧ್ವಜ'ವನ್ನಾಗಿಸಿ ವರ್ಣಿಸಿದರು.

ವಿದ್ವಾಂಸರ ವಲಯದಲ್ಲಿ ದುಯೋಧನನನ್ನು 'ಸರ್ಪಧ್ವಜ'ನೆಂದು ಅಂಗೀಕರಿಸಿದ ಕವಿರನ್ನನು ಸಂಸ್ಕೃತ ನಾಟಕಕಾರ ಭಟ್ಟನಾರಾಯಣನ 'ವೇಣೀಸಂಹಾರ' ದಿಂದ ಪ್ರಭಾವಿತನಾಗಿ ಸ್ವೀಕರಿಸಿರುವನೆಂಬ ವಿಚಾರವಿದೆ. ಅದರೆ ಭಟ್ಟನಾರಾಯಣನೂ ಸಹಾ ಪ್ರಾಚೀನ ಸಂಸ್ಕೃತ ಕವಿಗಳಂತೆ 'ಸರ್ಪಧ್ವಜ'ವನ್ನು ಅಂಗೀಕರಿಸಿರುವುದರಿಂದಲೇ ತನ್ನ ನಾಟಕದಲ್ಲಿ ಪ್ರಸ್ತಾಪಿಸಿರುವನೆನ್ನಬಹುದು. ರನ್ನನು ಪಂಪನನ್ನು ಅನುಸರಿಸಿ ಅವನ ಕಾವ್ಯಭಾಗಗಳನ್ನು ತನ್ನದನ್ನಾಗಿ ಕೊಂಡಿರುವಂತೆ 'ಸರ್ಪಧ್ವಜ'ವನ್ನೂ ಸ್ವೀಕರಿಸಿರುವನು. ಅಂತೆಯೇ ಭಟ್ಟನಾರಾಯಣನ ಪ್ರಭಾವಕ್ಕೂ ಒಳಗಾಗಿರುವ ಸಾಧ್ಯತೆಗಳಿರುತ್ತವೆ. ಆದರೆ ರನ್ನನು ಪಂಪನಿಗೇ ಹೆಚ್ಚು ಋಣಿಯಾಗಿರುವನೆನ್ನಬಹುದು.

'ನಾಗಧ್ವಜ'ನಾದ ದುರ್ಯೋಧನನನ್ನು 'ಸರ್ಪಧ್ವಜ'ನನ್ನಾಗಿಸಲು ಮೂಲಕಾರಣ ತಿರುಮಂಗೈ ಆಳ್ವಾರರು ಎಂಬುದನ್ನು ಕನ್ನಡ ಸಾರಸ್ವತ ಲೋಕಕ್ಕೆ ತಿಳಿಯಪಡಿಸುವ ಒಂದು ಕಿರುಪ್ರಯತ್ನವಾಗಿದೆಯೆಂಬುದನ್ನು ವಿನಂತಿಸುತ್ತೇನೆ.–ಲೇ

□□

ಅಸದೃಶ ಸಾಹಿತ್ಯ ಸನಾಥ ಸೋಮನಾಥ

ಡಾ. ಜೆ. ಸದಾನಂದ ಶಾಸ್ತ್ರಿ

❖

ಮುಂದುವರೆದ ಭಾಗ

ಕಣ್ಣೆದುರಲ್ಲಿ ನಿಲ್ಲಿಸುವ ರೂಪ ಚಿತ್ರಣ– ಲೋಕವೃತ್ತ ಪರಿಜ್ಞಾನ.

ಸೋಮನಾಥನದು ಕೇವಲ ಪುಸ್ತಕಪಾಂಡಿತ್ಯವಲ್ಲ. ಲೋಕವನ್ನು ಚೆನ್ನಾಗಿ ಪರಿಶಿಲಿಸಿದ ಅನುಭವ ಈತನ ವಸ್ತು, ಪರಿಸರ, ವ್ಯಕ್ತಿ ವರ್ಣನೆಗಳಲ್ಲಿ ಸ್ಪಷ್ಟವಾಗಿ ಕಾಣಿಸುತ್ತವೆ. ಸೂರಸಾನಮ್ಮನ ಕಥೆಯಲ್ಲಿ ಶಿವನು ಒಬ್ಬ ಚರ್ಮಕಾರನಾದ ಹೊಲೆಯನ ವೇಷದಲ್ಲಿ ಬರುತ್ತಾನೆ. ಆಗ ಸೋಮನನು ಮಾಡಿದ ವರ್ಣನೆ (ದೀಕ್ಷಾಪ್ರಕರಣ ಪು. ೬೧) ಅದ್ಭುತವಾಗಿದೆ.

"ದೊಡ್ಡಮೋರೆ, ಬಲವಾದ ಕೈ, ಒಳಗೆ ಅಂಟಿಕೊಂಡ ಡೊಕ್ಕೆ, ಕಾಯಿಕಾತ ಅಂಗೈ, ಸಣ್ಣ ತೊಡೆ, ಹಸಿ ತೊಗಲನ್ನು ಕೊಯ್ದು ಸುಲಿಯುವಾಗ ಏಟು ತಗುಲಿ ಎಡಗೈಗೆ ಆದ ಗಾಯದ ಕಲೆ, ಮಣ್ಣಾಗಿರುವ ಕಾಲು, ಕೊಳಕಾದ ಮೈ, ಉಬ್ಬಿದ ಹಣೆ, ಕಾಂತಿವಿಹೀನವಾದ ಗೋಣು, ಪಾಚುಹಿಡಿದು ಅರ್ಧಾಮರ್ಧ ಹೊರಗೇ ಕಾಣಿಸುತ್ತಿದ್ದ ಹಲ್ಲು, ಬಗ್ಗಿದ ಬೆನ್ನು, ಊದಿದ್ದ ಕಾಲು, ಕುಣಿಗಣ್ಣು, ಮುದುಡಿದ ಹುಬ್ಬು, ಜೋಲಾಡುವ ಕಿವಿ, ದೊಡ್ಡಮೂಗು, ಸಡಿಲಾದ ಸಣ್ಣ ತೊಡೆ, ಬಡಕಲು ಬೆರಳು, ಸುಟ್ಟಂತಿರುವ ಉಗುರು, ಒಳಕ್ಕೆ ಬಗ್ಗಿದ ಕಾಲು, ಕಂದಿಹೋದ ಪಿರ್ರೆ" ಗಳಿಂದ ವಿಚಿತ್ರವಾಗಿರುವ ಚರ್ಮಕಾರ ದೇಹವನ್ನು ವರ್ಣಿಸಿದ್ದಾನೆ ಸೋಮನಾಥ. ಶರೀರದ ವರ್ಣನೆ ನಂತರ ಅವನು ಧರಿಸಿರುವ ವೇಷವನ್ನು ವರ್ಣಿಸುತ್ತಾನೆ.

ಅವನು ಬಿಳಿಯ ಬೂದಿಯನ್ನು ಹಣೆಗೆಲ್ಲಾ ಮೆತ್ತಿಕೊಂಡಿದ್ದನು. ಕೈಗಳಿಗೆಲ್ಲ ವಿಭೂತಿಯ ರೇಖೆಗಳನ್ನು ಬಳಿದುಕೊಂಡಿದ್ದನು. ದೊಡ್ಡದೊಡ್ಡ ರುದ್ರಾಕ್ಷಿಗಳನ್ನು

ಧರಿಸಿದ್ದನು. ಜೊತೆಗೆ ಸ್ಫಟಿಕದ ಮಾಲೆ, ಸಾಲವೃಕ್ಷದ ಮರದಿಂದ ಮಾಡಿದ ಮಣಿಗಳನ್ನು ಧರಿಸಿದ್ದನು. ಕೂದಲು ಬಿರುಸಾಗಿದ್ದವು. ಮೇಲೆ ತುರುಬು ಕಟ್ಟಿದ್ದನು. ಅದರಲ್ಲಿ ಶಿವಲಿಂಗ ಪೇಟಿಕೆ ಧರಿಸಿರಿವುದು ಕಾಣಿಸುತ್ತಿತ್ತು. ಅದಕ್ಕೆ ಶಿವಸೂತ್ರವನ್ನು ಕಟ್ಟಿದ್ದನು. ನಡುವಿಗೆ ತಿರುಮಣಿಯನ್ನು ಸಿಕ್ಕಿಸಿದ್ದನು. ತಲೆಯಲ್ಲಿ ನರದ ಹಗ್ಗ ಸುತ್ತಿದ್ದನು.

ಕೆರ ಹೊಲಿಯುವ ಆರೆ, ಕತ್ತಿ, ರಟ್ಟಿನ ದಿಂಡು, ತೊಗಲಿನ ತುಂಡುಗಳು, ಚಪ್ಪಲಿಗಳು, ಕೈಯಲ್ಲಿ ಸಂಬಳಿಗೋಲು (ತಾನು ಬರುವಾಗ ಪಕ್ಕಕ್ಕೆ ಸರಿಯಿರೆಂದು ಸೂಚಿಸುತ್ತಾ ನೆಲಕ್ಕೆ ಕುಕ್ಕಿ ಸದ್ದು ಮಾಡುವ ಹರಿಜನನ ಕೈಯಲ್ಲಿನ ಕೋಲು) ಹಿಡಿದು ಶಿವನು ಒಬ್ಬ ಹೊಲೆಯನ ವೇಷ ಧರಿಸಿ ಬರುತ್ತಿದ್ದನು. ಅವನು ನೇರವಾಗಿ ಬ್ರಾಹ್ಮಣರ ಅಗ್ರಹಾರವನ್ನು ಹೊಕ್ಕನು. ಅಗ್ರಹಾರದ ಬ್ರಾಹ್ಮಣರು ಬರುತ್ತಿರುವುದನ್ನು ನೋಡಿ ಅವನು ಬೆಚ್ಚಿಬಿದ್ದು, ಸಂಬಳಿ ಸಂಬಳಿ ಎನ್ನುತ್ತಾ, ಬಗ್ಗುತ್ತಾ ಬಗಲಾಗುತ್ತಾ "ಕೆರಬೇಕೆನ್ರೀ, ಕೆರ, ಮಿಣಿ ಬೇಕೇನ್ರಿ ಬುದ್ಧಿ ಮಿಣಿ" ಎನ್ನುತ್ತಾ ಮಾರುತ್ತಿದ್ದನು" ಎಂದು ಆ ವ್ಯಕ್ತಿಯ ಸರ್ವಾಂಗೀಣ ವರ್ಣನೆಯನ್ನು ಮಾಡಿದ ಸೋಮನಾಥನು ದೇವತೆಗಳನ್ನೋ ರಾಜಮಹಾರಾಜರನ್ನೋ ಅಲ್ಲದೆ ಸಾಮಾನ್ಯನನ್ನು ಕುರಿತು ಹೇಳಬೇಕೆನ್ನುವ ಇಂದಿನವರಿಗೆ ಮಾರ್ಗದರ್ಶನವನ್ನು ನೀಡಬಲ್ಲ ಪ್ರತಿಭೆಯನ್ನು ಮೆರೆದಿದ್ದಾನೆ. ಅಂದಿನ ಚರ್ಮಕಾರರ ಕಸುಬನ್ನು, ಅವರಿಗಿದ್ದ ಸಾಮಾಜಕ ಮಟ್ಟವನ್ನು, ಆಚಾರವಿಚಾರವನ್ನು ಜಾತಿಗಳ ನಡುವಿನ ಅಂತರವನ್ನು ಈ ಮೂಲಕ ಸೋಮನಾಥನು ಸ್ಪಷ್ಟಪಡಿಸುತ್ತಾನೆ.

ಅವನ ವೇಷ, ನಡವಳಿ, ತಾನು ಬರುವುದನ್ನು ಸೂಚಿಸುತ್ತಾ ತೊಲಗಿರಿ ಎನ್ನುವಂತೆ ಕೋಲು ಕುಟುಕುತ್ತಾ ಸಂಬಳಿ ಸಂಬಳಿ ಎನ್ನುವುದು ಇವೆಲ್ಲ ಅಂದಿನ ಸಾಮಾಜಕ ಸ್ಥಿತಿಗತಿಗಳಿಗೆ ಕನ್ನಡಿಹಿಡಿಯುತ್ತವೆ. ಆದರೆ ಅವನ ರೂಪವನ್ನು ವರ್ಣಿಸಿದ ರೀತಿ ಮಾತ್ರ ಕಲ್ಪನೆ ಎನ್ನುವುದು ಸ್ಪಷ್ಟ. ಅಂದಿನ ಚರ್ಮಕಾರರೆಲ್ಲರು ಇಷ್ಟೇ ವಿಕಾರವಾಗಿ ಇರುತ್ತಾರೆ ಎನ್ನುವುದು ಸೋಮನಾಥನ ನಿರೂಪಣೆ ಅಲ್ಲ. ಅಲ್ಲಿನ ಹಾರುವರಿಗೆ ಮತ್ತಷ್ಟು ಅಸಹ್ಯವನ್ನು ಉಂಟುಮಾಡುವುದಕ್ಕಾಗಿ ಸೋಮನಾಥನು ಶಿವನಿಂದ ಆಡಿಸಿದ ನಾಟಕ ಅದು. ನಂತರ ಅವನು ಊಟ ಮಾಡುವಾಗ ನಡೆದುಕೊಂಡ ರೀತಿಯು ಈ ಅಭಿಪ್ರಾಯಕ್ಕೆ ಪೋಷಕವಾಗುತ್ತದೆ. ಇಲ್ಲೆಲ್ಲ ನಾಟಕೀಯ ವಾತಾವರಣವನ್ನು ರಕ್ತಿಗೊಳಿಸುವಲ್ಲಿ ಸೋಮನಾಥನು ತೋರಿದ ನೈಪುಣ್ಯ ಅಸದೃಶವಾದದ್ದು. ಈ ಕಥೆಯಲ್ಲಿ ರಸಸಿದ್ಧಿಯ ಅಂತ್ಯದಲ್ಲಿ ಶಿವನ ಜಯ, ಶಿವಭಕ್ತೆಯ ಜಯ, ಶಿವಭಕ್ತಿಯ ಜಯ ಸಿದ್ಧಿಸಿದಾಗ ಉಂಟಾಗುತ್ತದೆ. ರಸಸಿದ್ಧ ಪಾಲ್ಕುರಿಕೆಯ ಸೋಮನಾಥ.

"ಬೆಳಗಿನ ಕೋಳಿ ಕಣ್ಣು ತೆರೆದು, ಎದ್ದು ನಿಂತು, ಮೈ ಬೆಳೆಸಿ, ರಪರಪನೆ ರೆಕ್ಕೆ ಹೊಡೆದು ಸಡಲಿಸಿ, ಸೆಟೆದು, ಕಾಲು ಚಾಚಿ, ಕಂಠವನ್ನು ಬಿಚ್ಚಿ, ಕೊಕ್ಕೆಯಿಂದ ಪುಕ್ಕಗಳನ್ನು

ಸರಿಪಡಿಸಿಕೊಂಡು, ಹೊಟ್ಟೆಯನ್ನು ಉಬ್ಬಿಸಿ, ಗೋಣು ಚಾಚಿ, ಮತ್ತೊಮ್ಮೆ ಸೆಟೆದು, ಬಾನನ್ನು ನೋಡುತ್ತಾ, ಕೊಕ್ಕೊರೋ ಕೋ ಎಂದು ಇನ್ನೂ ಕೂಗಿರಲಿಲ್ಲ"ಎಂದು ಸೋಮನಾಥನು ಬೆಳಗುವ ಜಾವವನ್ನು ಕುರಿತು ಪುರಾತನ ಪ್ರಕರಣದಲ್ಲಿ ಹೇಳುತ್ತಾನೆ. ಸಾಧಾರಣವಾಗಿ ಸೋಮನಾಥನ ಕವಿತ್ವವನ್ನು ಕೀರ್ತಿಸುವವರೆಲ್ಲ ಅವನು ಚಿತ್ರಿಸಿದ ಬೆಳಗುವ ಕಾಲದಲ್ಲಿ ಕೂಗುವ ಈ ಕೋಳಿಯ ಚಿತ್ರಣವನ್ನು ಕುರಿತು ಹೇಳುತ್ತಿರುತ್ತಾರೆ. ಆದರೆ ಅವನ ಕಾವ್ಯಗಳಲ್ಲಿ ಅಡಿಗಡಿಗೂ ಇಂಥ ಅನೇಕ ಚಿತ್ರಣಗಳನ್ನು ನಾವು ಕಾಣಬಹುದು. ವ್ಯಕ್ತಿಯ, ದೃಶ್ಯದ, ಸನ್ನಿವೇಶದ, ಮನಸ್ಥಿತಿಯ, ಪರಿಸರದ, ಒಂದು ಸಾಮಾಜಕ ವರ್ಗದ ಪರಿಚಯವನ್ನು ಎಲ್ಲ ಕೋನಗಳಿಂದಲೂ ಸಂಪೂರ್ಣವಾಗಿ ಯಾವ ಕೊರತೆಯೂ ಇಲ್ಲದಂತೆ ನೀಡುವುದು ಸೋಮನಾಥನ ಕಥನಪದ್ಧತಿ. .

ಪರ್ವತ ಪ್ರಕರಣದಲ್ಲಿ ಬೇಟೆಗಾರನನ್ನು ಹಿಂಬಾಲಿಸಿದ ಹುಲಿ ಅವನು ಮರವನ್ನು ಹತ್ತಿದಾಗ ಅವನಿಗಾಗಿ ಚಡಪಡಿಸುವ ರೀತಿಯನ್ನು ಸೋಮನಾಥನು ವರ್ಣಿಸಿದ ರೀತಿ ಅತ್ಯಂತ ಹೃದ್ಯ ಮತ್ತು ಸಹಜ ಆಗಿದೆ.

ಬೆಲಿದೇವ ವೇಮನಾರಾಧ್ಯರ ಕಥೆಯಲ್ಲಿ ರಾಜನು ಸತ್ತಾಗ ಅವನ ಹೆಣದ ಅತ್ಯಂತ ಘೋರವಾದ ಪರಿಸ್ಥಿತಿ ಹೇಗಿತ್ತು ಎನ್ನುವುದನ್ನು "ಆಗ ಆ ಹೆಣದ ಕಣ್ಣು ವಿಕೃತವಾಗಿ ತೆರೆದಿತ್ತು. ಬಾಯಿ ಸಹ ವಿಕೃತವಾಗಿ ತೆರೆದುಕೊಂಡಿತ್ತು. ಕಣ್ಣರೆಪ್ಪೆ ಮುಚ್ಚಿಕೊಳ್ಳದೆ ತೆರೆದುಕೊಂಡು ವಿಕಾರವಾಗಿ ಕಾಣಿಸುತ್ತಿತ್ತು. ತುಟಿ ಜೋಲಾಡುತ್ತಿತ್ತು. ಗಲ್ಲ ಒಳಗೆ ಸೇದಿಕೊಂಡುಹೋಗಿತ್ತು. ಮೂಗಿನ ಸೊಳ್ಳೆ ಉಬ್ಬಿಕೊಂಡಿತ್ತು. ಮೂಗಿನ ಕಂಬ ಕುಗ್ಗಿ ಹೋಗಿತ್ತು. ಪಾಚಿ ಹಿಡಿದ ಹಲ್ಲುಗಳು ಹೊರಬಿದ್ದಿದ್ದವು. ಬಾಯಿಂದ ಜೊಲ್ಲು ಸೋರಿ ಅಲ್ಲಲ್ಲಿ ಅಂಟಿಕೊಂಡಿರುವ ಗುರ್ತು ಕಾಣಿಸುತ್ತಿತ್ತು. ಕೂದಲು ಕೆದರಿತ್ತು. ಹೊಟ್ಟೆ ಉಬ್ಬಿತ್ತು. ಶರೀರದ ಬಣ್ಣ ವಿಕೃತವಾಗಿತ್ತು. ತಲೆ ಒಂದುಕಡೆ ಒರಗಿತ್ತು. ಬೆನ್ನು ಪೂರ್ತಿಯಾಗಿ ಬಗ್ಗಿತ್ತು. ನೀರು ಹಿಡಿದಂತೆ ಮೈಯೆಲ್ಲ ಊದಿಕೊಂಡಿತ್ತು. ಆ ಹೆಣದಿಂದ ದುರ್ಗಂಧ ಹೊರಡುತ್ತಿತ್ತು. ನೊಣ ಬಂದು ಮುತ್ತುತ್ತಿದ್ದವು. ನೋಡುವುದಕ್ಕೆ ಭಯಂಕರವಾಗಿತ್ತು ಆ ಹೆಣ" ಎಂದು ಸೋಮನಾಥನು ಭೀಭತ್ಸವಾಗಿ ವರ್ಣಿಸುತ್ತಾನೆ.

ಸಾಮವೇದಿಯ ಕಥೆಯಲ್ಲಿ ಕಪಟಚಂಡಾಲವೇಷದಲ್ಲಿ ಬಂದ ಶಿವನ ಹಿಂದೆ ಬಂದ ಪಾರ್ವತಿಯ ವರ್ಣನೆ. "ಆಕೆಯ ವೇಷ ಶಿವನ ಚಂಡಾಲವೇಷಕ್ಕೆ ಅನುಗುಣವಾಗಿ ಇತ್ತು. ಅವಳದು ಸ್ವಲ್ಪ ಕುಳ್ಳು ದೇಹ. ದಪ್ಪನಾದ ಜಘನ. ಅವಳವು ಗುಂಗುರುಗೂದಲು, ಅದರಲ್ಲಿ ಸೊಟ್ಟ ಬೈತಲು. ಅಡ್ಡಮೂಗುತಿಯನ್ನು ಧರಿಸಿದ್ದಳು. ಅವಳ ಸಣ್ಣನೆಯ ನಡು ಬಳಕುತ್ತಿತ್ತು. ಅಡ್ಡಡ್ಡವಾಗಿ ರೇಖೆಗಳಿರುವ ಸೀರೆ ಉಟ್ಟಿದ್ದಳು. ಜಾರುವ ಸೆರಗನ್ನು

ಸವರಿಸುತ್ತಿದ್ದಳು. ಅಧರ ಅರಳಿ ಕೆಂಪುಬಣ್ಣದಿಂದ ಶೋಭಿಸುತ್ತಿತ್ತು. ಕಳೆಯುಳ್ಳ ಹಣೆ, ವಿಶಾಲವಾದ ಸುಂದರ ನಯನ, ಬಗ್ಗಿದ ಸುಂದರವಾದ ಕಣ್ಣಹುಬ್ಬುಗಳು, ಕರಿಯ ಮೈಬಣ್ಣ, ಬಿಳಿಯ ಹಲ್ಲಿನವರಸೆ ಸೊಬಗನ್ನು ಬೀರುತ್ತಿದ್ದವು. ಹಣೆಯಲ್ಲಿ ಬಿಳಿಯ ಭಸ್ಮದ ಲೇಪ, ಅದರಮೇಲೆ ತಿಲಕ ಕಾಣಿಸುತ್ತಿತ್ತು. ಬಿಳಿಯ ಲಿಂಗದ ಕರಡಿಗೆ ಕಾಣಿಸುವ ರೀತಿಯಲ್ಲಿ ಸೀರೆಯ ಮುಡಿ ಹಾಕಿದ್ದಳು. ಅವಳ ಮೈಬಣ್ಣ ತಳತಳನೆ ಪ್ರಕಾಶಿಸುತ್ತಿತ್ತು. ತುಂಬಿದ ಸ್ತನಯುಗಳದಿಂದ ಆಕೆ ಸುಂದರವಾಗಿದ್ದಳು. ಕಂಚಿನ ಕಾಲ್ಗೆಜ್ಜೆ ಗಲುಗಲ್ಲೆಂದು ಮೊರೆಯುತ್ತಿದ್ದವು. ಬೆರಳಿಗೆ ಕಂಚಿನ ಉಂಗುರಗಳನ್ನು ಧರಿಸಿದ್ದಳು. ದೊಡ್ಡ ತೊಡೆಗಳುಳ್ಳ ಆಕೆ, ಕರಿಯಬಳೆ, ತವರದ ಕಡಗಗಳು ಧರಿಸಿದ್ದಳು. ಬಿಳಿಯ ಗಾಜಿನ ಮಣಿಯ, ಶಂಖದಮಣಿಯ, ಕರಿಯಮಣಿಯ ಸರಗಳನ್ನು ಎದೆಯಮೇಲೆ ಮಿನುಗುವಂತೆ ಧರಿಸಿದ್ದಳು. ಒಂದು ಬುಟ್ಟಿಯನ್ನು ಕಂಕುಳಲ್ಲಿ ಇಟ್ಟಿದ್ದಳು. ಇದರಂತೆ ಗೌರಿ ಹೊಲೆಯನ ವೇಷದ ಶಿವನ ಹಿಂದೆ ಬಂದಳು." ಇದಕ್ಕಿಂತ ಹೆಚ್ಚಾಗಿ ಯಾವ ಕವಿ ಏನನ್ನು ವರ್ಣಿಸಬಲ್ಲನು?.

ಇಷ್ಟಲಿಂಗದಲ್ಲಿ ದರ್ಶನ ನೀಡಿದ ಶಿವನನ್ನು ಪಂಡಿತರು ನೋಡಿದ ರೀತಿಯನ್ನು ಸೋಮನಾಥನು ಹಲವು ಬಗೆಯಲ್ಲಿ ವರ್ಣಿಸಿದ್ದಾನೆ. "ಪಂಡಿತರು ಆಗ ಅನಿಮಿಷಕೇಶಿ ಅನಿಮಿಷನಾಗಿ ನೋಡಿದಂತೆ ನೋಡುತ್ತಿದ್ದರು. ಅವುಕರುಳು ಕೇತಯ್ಯ ಶಿವನನ್ನು ತನ್ನ ಕಣ್ತುಂಬ ತುಂಬಿಕೊಂಡು ಕಂಡಂತೆ ಕಂಡರು. ಹಿಂದೆ ಗಜೇಶ ಮಸಣಯ್ಯನವರು ತಮ್ಮನ್ನು ತಾವು ಮರೆತು ಮನ್ಮಥಾರಿಯನ್ನು ಕಂಡಂತೆ ಶಿವನನ್ನು ಕಂಡರು. ಪ್ರಯತ್ನಪೂರ್ವಕವಾಗಿ ಶಿವನಲ್ಲಿ ಮಗ್ನವಾದ ದೃಷ್ಟಿಗಳು ತಂತ್ರಿಗಳಾಗಿ ನಾದವನ್ನು ಹೊರಸೂಸುತ್ತಿರಲು ಪಂಡಿತರು ಶಿವನನ್ನು ಪ್ರಭುವನ್ನು ಕಂಡಂತೆ ಕಂಡರು. ಶಾರೀರಕಗುಣದಿಂದ ಅತೀತರಾಗಿ ಲಿಂಗಮೂರ್ತಿಯನ್ನು ಭೃಂಗೀಶ್ವರನು ಕಂಡಂತೆ ಕಂಡರು. ನಂದಿಕೇಶ್ವರನು ಅವಿನಾಭಾವ ಲೀಲೆಯಿಂದ ಕಂದರ್ಪಹರನನ್ನು ಕಂಡಂತೆ ಕಂಡರು. ತಮ್ಮ ನೋಟವನ್ನು ಶಿವನಿಗೆ ಹತ್ತಿಸಿದರು. ಲೇಪಿಸಿದರು. ನೋಟದಿಂದಲೇ ಶಿವನನ್ನು ಮುತ್ತಿಗೆ ಹಾಕಿದರು. ನೋಟವನ್ನು ಶಿವನತ್ತ ಸಾರಿದರು. ನಿಷ್ಠೆಯಿಂದ ಕಂಡರು. ನೋಟವನ್ನು ಶಿವನಲ್ಲಿ ನಿಯಮಿಸಿದರು. ಶಿವನಲ್ಲೇ ಮಗ್ನಗೊಳಿಸಿದರು. ಶಿವನಲ್ಲಿ ಸಂಧಿಸಿದರು. ಬಿಗಿಸಿದರು. ಶಿವನಮೇಲೆ ಬಿಟ್ಟರು. ದಿಟ್ಟಿಸಿದರು. ನಿಟ್ಟಿಸಿದರು. ಸುತ್ತುಮುತ್ತುವಂತೆ ಮಾಡಿದರು. ನೆಲೆಗೊಳಿಸಿದರು. ನಿಲಿಸಿದರು. ಚೆನ್ನಾಗಿ ಹೊಂದಿಸಿದರು. ಹುರಿದುಂಬಿಸಿದರು. ಸರಿಹೋಗುವಂತೆ ಮಾಡಿದರು. ಬೆರೆಸಿದರು. ಸಿಕ್ಕಿಸಿದರು. ಸೋಲುವಂತೆ ಮಾಡಿದರು. ಸ್ಥಿರಪಡಿಸಿದರು. ನಾಟಿಸಿದರು. ಕೂಡಿಸಿದರು. ಸೇರಿಸಿದರು.

ಸಂತೋಷಪಡುವಂತೆ ಮಾಡಿದರು. ಹೋರಾಡಿಸಿದರು. ಸಖ್ಯಗೊಳಿಸಿದರು. ಸಮಪಡಿಸಿದರು. ಕೀಲಿಸಿದರು. ಮರುಗಿಸಿದರು ತುಂಬಿದರು." ಇಂಥಾ ಸಂದರ್ಭದಲ್ಲಿ ಒಂದು ಮಾತಿನಲ್ಲಿ ಮುಗಿಸುವುದು ಸೋಮನಾಥನ ಪದ್ಧತಿಯಲ್ಲ. ಅವನು ಸ್ವಯಂ ಭಾವೋದ್ವೇಗಕ್ಕೆ ಒಳಗಾಗುತ್ತಾನೆ. ಪುಂಖಾನುಪುಂಖವಾಗಿ ಮಾತಿನ ಸುರಿಮಳೆ ಮೊದಲಾಗುತ್ತದೆ. ತನ್ನಜೊತೆಗೆ ಸಹೃದಯರನ್ನು ಸಹ ತನ್ನ ಭಾವನಾಪ್ರಪಂಚಕ್ಕೆ ಸೆಳೆದೊಯ್ಯುವ ಸಾಮರ್ಥ್ಯ ಸೋಮನಾಥನದು.

ಇದರಂತೆ ಪಂಡಿತಾರಾಧ್ಯರು ರಾಜನ ಸಭೆಯಲ್ಲಿ ತಮ್ಮ ಕಣ್ಣು ತಾವೇ ಕಿತ್ತುಕೊಂಡಾಗ ಮತ್ತೆ ಮತ್ತೆ ಮೂಡುತ್ತಿರುವ ಕಣ್ಣುಗಳನ್ನು ತಾವೇ ಪುನಃ ಕಿತ್ತು ತಳಿಗೆಯಲ್ಲಿ ಇಟ್ಟು ಕಳಿಸಿದಾಗ ಅಲ್ಲಿ ಸೇರಿದ ಜನರು ಹೇಗೆ ಅವುಗಳನ್ನು ನೋಡುವುದಕ್ಕೆ ಚಡಪಡಿಸುತ್ತಿದ್ದರು ಎನ್ನುವುದರ ವರ್ಣನೆಯೂ ಸ್ವಾರಸ್ಯಪೂರ್ಣ.

ಕಾರಣ ಮತ್ತು ಕಾರ್ಯ

'ಪ್ರಯೋಜನಮನುದ್ದಿಶ್ಯ ನ ಮಂದೋಪಿ ಪ್ರವರ್ತತೇ!' ಎನ್ನುವ ಮಾತೊಂದಿದೆ. ಮಂದಬುದ್ಧಿಯಾದ ಮನುಷ್ಯನು ಸಹ ಯಾವ ಪ್ರಯೋಜನವೂ ಇಲ್ಲದೆ ಕೆಲಸಕ್ಕೆ ತೊಡಗುವುದಿಲ್ಲ ಎಂದು ಅದರ ಅರ್ಥ. ಸಾಮಾನ್ಯರ ಸಂಗತಿಯೇ ಹೀಗಿರುವಾಗ ಮಹಾಪಂಡಿತಾಗ್ರಣಿಯೆನಿಸಿದ ಸೋಮನಾಥನ ವಿಷಯ ಹೇಳಬೇಕೇ? ಅವನು ಹೇಳುವ ಒಂದೊಂದು ಘಟ್ಟವೂ ಒಂದು ಮಹೋದ್ದೇಶ ಇಟ್ಟುಕೊಂಡೇ ಹೇಳಿರುವಂಥದ್ದು. ಸೋಮನಾಥನ ಕವಿತಾಜೀವನವೆಲ್ಲವೂ ವೀರಶೈವ ಧರ್ಮಪ್ರಚಾರಕ್ಕೆ ಪ್ರಸಾರಕ್ಕೇ ಮುಡುಪಾದಂಥದ್ದು. ಒಂದೊಂದು ಕವಿತೆಯೂ ಒಂದೊಂದು ಅಕ್ಷರವೂ ಶಿವಭಕ್ತಿಮತಪ್ರಚಾರಕ್ಕೆ ಸಾಧನಗಳೇ ಆಗಿವೆ. ಅವನು ಬಸವಪುರಾಣ ಪಂಡಿತಾರಾಧ್ಯಚರಿತ್ರೆಯಂತಹ ಉದ್ಗ್ರಂಥಗಳನ್ನು ರಚಿಸಿದ್ದು ಕೇವಲ ಆ ಇಬ್ಬರು ಶೈವ ವೀರಶೈವ ಪ್ರತಿಭಾಮೂರ್ತಿಗಳನ್ನು ಲೋಕಕ್ಕೆ ಪರಿಚಯಿಸಬೇಕೆನ್ನುವ ಉದ್ದೇಶದಿಂದ ಮಾತ್ರ ಅಲ್ಲ. ಆ ಮೂಲಕವಾಗಿ ವೀರಶೈವಧರ್ಮಗಂಗೆಯನ್ನು ಸಾಮಾನ್ಯಪ್ರಜಾ ಹೃದಯಕ್ಷೇತ್ರಗಳಲ್ಲಿ ಹರಿಸಿ ಧರ್ಮಪ್ರಚಾರೋದ್ದಿಷ್ಟ ಫಲವನ್ನು ಪಡೆಯುವುದಕ್ಕಾಗಿ. ಹೀಗಾಗಿ ಅವನು ತನ್ನ ಗ್ರಂಥಗಳಲ್ಲಿ ಬರೆದ ಪ್ರತಿಯೊಂದು ಘಟ್ಟವೂ ಯಾವುದೋ ಒಂದು ವೀರಶೈವ ಧರ್ಮದ ಪ್ರಮೇಯವನ್ನು ನಿರೂಪಿಸುವಂಥದ್ದಾಗಿದೆ. ಹಾಗಾಗಿ ಅವನು ಹೇಳಿದ ಒಂದೊಂದು ಮಾತೂ ಬಲವಾಗಿ ಪ್ರಜೆಯಲ್ಲಿ ಹೊಕ್ಕಿದೆ. ಇದನ್ನು ತನ್ನ ಕವಿತೆಯ ಮೂಲಕ ಸಾಧಿಸಿ ಆ ಗ್ರಂಥಗಳನ್ನು ಓದುವಂತೆ ಕೇಳುವಂತೆ ಆಕರ್ಷಿಸಿದ ಸೋಮನಾಥನ ಕವಿತಾ ಪ್ರತಿಭೆ ಅತ್ಯಂತ ಪ್ರಶಂಸಾರ್ಹವಾದದ್ದು.

ಸಾಮಾನ್ಯವಾದ ಮನುಷ್ಯನ ಮಾತಿಗೂ ದೇವರ ಮನುಷ್ಯನ ಮಾತಿಗೂ ಜನರು ನೀಡುವ ಬೆಲೆಯಲ್ಲಿ ವ್ಯತ್ಯಾಸ ಉಂಟು. ಸೋಮನಾಥನು ತನ್ನ ಎರಡು ಕಾವ್ಯಗಳಲ್ಲಿಯೂ ಬಸವಣ್ಣನವರನ್ನೂ, ಪಂಡಿತಾರಾಧ್ಯರನ್ನೂ ದೇವರ ಮನುಷ್ಯರೆಂದು ಹೇಳಿದ್ದಾನೆ. ಅವರು ಎಲ್ಲರಂತೆ ಸಾಮಾನ್ಯವಾದ ಹುಟ್ಟು ಇರುವವರಲ್ಲ. ಒಂದು ಮಹೋದ್ದೇಶಕ್ಕಾಗಿ ಸಾಕ್ಷಾತ್ ಶಿವನೇ ಅವರನ್ನು ಭೂಮಿಗೆ ಕಳಿಸಿದ್ದಾನೆ ತಾನೆ. ಮತ್ತೊಂದು ಅರ್ಥದಲ್ಲಿ ಶಿವನೇ ಆ ರೂಪದಲ್ಲಿ ಬಂದಿದ್ದಾನೆ. ಬಸವಣ್ಣನವರು ಸಾಕ್ಷಾತ್ ಶಿವನ ವಾಹನವೂ ಬಾಹ್ಯರೂಪವೂ ಆದ ನಂದೀಶನ ಅವತಾರ. ಇನ್ನು ಮಲ್ಲಿಕಾರ್ಜುನ ಪಂಡಿತಾರಾಧ್ಯರ ಅವತಾರದಲ್ಲಿ ಮತ್ತೊಂದು ವಿಶೇಷವಿದೆ. ನಂದಿಕೇಶನನ್ನು ಬಸವಣ್ಣನ ರೂಪದಲ್ಲಿ ಶಿವನು ಭೂಮಿಗೆ ಕಳಿಸುವಾಗ, ನಿರುಪಮ ಪರಮಾನಂದವನ್ನು ನೀಡುವ ಶಿವನ ಪಾದಭಕ್ತಿ, ನಂದೀಶ್ವರನ ಸರ್ವಜ್ಞತೆ, ಭೃಂಗಿಯ ಸಹಜ ನಿಷ್ಠೆ ದೂರ್ವಾಸರು ಮುಂತಾದ ಶಿವಭಕ್ತರ ದೃಢವಾದ ಶಾಪಶಕ್ತಿ, ಅಕ್ಷಪಾದ ಮುಂತಾದ ಶಿವಭಕ್ತರ ಅಸಮಾನವಾದ ಮಾತಿನ ಸಾಮರ್ಥ್ಯ, ಉಪಮನ್ಯುವಿನ ಸದ್ಗುರುತ್ವ, ಮಹನೀಯರಾದ ರುದ್ರಗಣಗಳ, ಪ್ರಮಥಗಣನಾಯಕರ ಸ್ವತಸ್ಸಿದ್ಧವಾದ ನಿಜ ಪ್ರಸಾದಾಭಿಲಾಷೆ, ಪುರಾತನ ನವೀನ ಭಕ್ತ ಸಮೂಹದ ಲೋಕಾನುಭವ ರೂಪವಾದ ಪ್ರತ್ಯಕ್ಷಮಹಿಮಾ ಸಮಗ್ರತೆ, ಘನವೀರಭದ್ರನ ಪ್ರಖ್ಯಾತವಾದ ಶೌರ್ಯ ಈ ಎಲ್ಲವೂ ಒಂದುಗೂಡಿ ಮೂರ್ತೀಭವಿಸಿ ಶಿವನ ಸಂಕಲ್ಪದಮೇರೆಗೆ ಶಿವಮಹಿಮಾವತಾರ ಮೂರ್ತಿಯಾದ ಪಂಡಿತಾರಾಧ್ಯರಾಗಿ ಬಂದಿತು. ತಾನೇ ಗುರುವಾಗಿ ಬಂದು ಉದ್ಧರಿಸುತ್ತೇನೆ ಎಂದು ಸಹ ಹೇಳಿ ಪಂಡಿತಮೂರ್ತಿಯನ್ನು ಭೂಮಿಗೆ ಕಳಿಸುತ್ತಾನೆ ಶಿವ.

ಬಸವಣ್ಣ, ಮತ್ತು ಪಂಡಿತರ ಅವತಾರ ಕಥನವೇ ಅವರ ಬಗೆಗೆ ಅತ್ಯಂತ ಭಕ್ತಿ ಉಂಟಾಗುವ ರೀತಿಯಲ್ಲಿದೆ. ಇದಕ್ಕೆ ತಕ್ಕಂತೆ ನಂತರದ ಕಥನವೆಲ್ಲವೂ ಶಿವಭಕ್ತಿಯ, ಶೈವಧರ್ಮದ ಪ್ರಸಾರದ ಉದ್ದೇಶವನ್ನು ಪೂರ್ಣಗೊಳಿಸುವ ರೀತಿಯಲ್ಲಿ ಮುನ್ನಡೆದಿದೆ.

ದೀಕ್ಷಾಪ್ರಕರಣದ ಆದಿಯಲ್ಲಿ ಭೂಸುರರು ನರರು ಪಂಡಿತರನ್ನು ಕುರಿತು ಭಸ್ಮಧಾರಣ, ಲಿಂಗಪೂಜಾದಿಗಳನ್ನು ಕುರಿತ ಆಕ್ಷೇಪಣೆಗೆ ಪಂಡಿತಾರಾಧ್ಯರು ನೀಡಿದ ಸಮಾಧಾನ, ಭಸ್ಮಧಾರಣೆ, ಲಿಂಗಪೂಜೆ, ಶಿವನಿರ್ಮಾಲ್ಯ ಸ್ವೀಕರಣಾದಿಗಳೇ ಮೊದಲಾಗಿ ಎಲ್ಲ ಶೈವದೀಕ್ಷಾವಿಧಿವಿಧಾನಗಳು ವೇದಪುರಾಣ ಶಾಸ್ತ್ರಸಮ್ಮತವೆನ್ನುವುದನ್ನು ನಿರೂಪಿಸುತ್ತದೆ. ಸುಮಾರು ೫೩ಪುಟಗಳ ತನಕ ಇರುವ ಈ ನಿರೂಪಣೆ ಒಂದು ರೀತಿಯಲ್ಲಿ ಸಿದ್ಧಾಂತವಾದರೆ ಸೂರಸಾನಮ್ಮನ ಕಥೆ ಮೊದಲು ಮಿಕ್ಕ ರಚನೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸ್ಪಷ್ಟವಾಗುತ್ತದೆ.

ಸೂರಸಾನಮ್ಮನ ಕಥೆ 'ಕುಲವನ್ನು ಎಣಿಸಬೇಡ. ಶಿವಭಕ್ತನಾಗಿದ್ದರೆ ಅವನು ಶಿವಸ್ವರೂಪನೇ' ಎನ್ನುವ ವೀರಮಾಹೇಶ್ವರಸಿದ್ಧಾಂತವನ್ನು ನಿರೂಪಿಸುತ್ತದೆ. ಹಾಗೂ ಅಂದಿನ ಸಮಾಜದಲ್ಲಿನ ಜಾತಿಸಂಬಂಧವಾದ ಏರುಪೇರುಗಳನ್ನು ನಿರೂಪಿಸುತ್ತದೆ. ಬಂದವನು ಚಂಡಾಲನ ವೇಷದಲ್ಲಿದ್ದರೂ ಅವನು ಶೈವಲಾಂಛನ ಉಳ್ಳವನಾದಕಾರಣ ಲಿಂಗಸ್ವರೂಪನೇ ಎನ್ನುವುದು ಸೋಮನಾಥನ ನಿರೂಪಣೆ. ಸಾಮವೇದಿಯ ಕಥೆಯಲ್ಲಿಯೂ ಚಂಡಾಲನು ಸತ್ತ ಕರುವನ್ನು ಹೆಗಲಮೇಲೆ ಹೊತ್ತು ಯಜ್ಞಮಾಡುತ್ತಿರುವ ಜಾಗಕ್ಕೆ ಬರುತ್ತಾನೆ. ಶೈವಧರ್ಮಾಚರಣೆಯ ಪ್ರತಿರೂಪವಾದ ಸಾಮವೇದಿ ಅವನನ್ನು ಕೂಡಿಸಿ ಪಾದತೊಳೆಯುತ್ತಾನೆ. ಹೆಂಡತಿ ಸಂಕೋಚಪಡುತ್ತಾಳೆ. ಅವಳಿಗೆ ತಿಳಿಹೇಳಿ ಪಾದತೊಳೆಯುತ್ತಾನೆ. ಆ ಸಂದರ್ಭದಲ್ಲಿ ಅನುಷ್ಠಾನದ ಮಹತ್ತರವಾದ ಚಿಂತನೆಯನ್ನು ನೀಡುತ್ತಾನೆ ಸೋಮನಾಥ. ಪಾದ ತೊಳೆದಾಗ ಕೆಳಗೆ ಹರಿದ ನೀರು ಪಾದೋದಕವಾಯಿತು. ಅದೇ ನಿರಿನಲ್ಲಿ ಶಂಕರನ ಪ್ರತಿಬಿಂಬ ಮೂಡಿದಾಗ ಅದು ಲಿಂಗೋದಕವಾಯಿತು. ಆ ಜಲವನ್ನು ಶಂಕರನು ಅನುಗ್ರಹಪೂರ್ಣದೃಷ್ಟಿಯಿಂದ ಕಂಡಾಗ ಅದು ಪ್ರಸಾದೋದಕವಾಯಿತು. ಈರೀತಿ ಶೈವಭಕ್ತನಿಗೆ ಸ್ವೀಕಾರ್ಯವಾದ ಮೂರು ರೀತಿಯ ಉದಕವೂ ಸಾಮವೇದಿಗೆ ಲಭಿಸಿತೆಂದು ನಿರೂಪಿಸುವ ಸೋಮನಾಥನು 'ನೋಡಬೇಕಾದ ದೃಷ್ಟಿಕೋನ ಹೇಗಿರಬೇಕು' ಎನ್ನುವುದನ್ನು ಈ ಕಥೆ ಹೇಳುತ್ತಿರುವ ಸೂರಸಾನಮ್ಮನ ಮೂಲಕ ನಿರೂಪಿಸುತ್ತಾನೆ.

ಈ ಕಥೆ ಶಿವಭಕ್ತಿರಹಿತವಾದ ಯಜ್ಞ ದುಷ್ಫಲದಾಯಕವೆಂದು ನಿರೂಪಿಸುತ್ತದೆ. ಕಥೆಗಳಲ್ಲಿ ಬರುವ ಶೇಷನ, ಘಂಟಾಕರ್ಣನ, ಅಲ್ಲಲ್ಲಿ ಬರುವ ವಿಷ್ಣುವಿನ ಬ್ರಹ್ಮನ ವೃತ್ತಾಂತಗಳು ಸಕಲದೇವತೆಗಳೂ ಪರಮಶಿವನ ಅನುಗ್ರಹದಿಂದಲೇ ತಮ್ಮ ತಮ್ಮ ಪದವಿಗಳನ್ನು, ಅಸ್ತಿತ್ವವನ್ನು ಪಡೆದುಕೊಂಡವರು ಎನ್ನುವುದನ್ನು, ಶಿವಸರ್ವೋತ್ತಮತ್ವವನ್ನೂ ನಿರೂಪಿಸುತ್ತವೆ. ದೂರ್ವಾಸರ ಕಥೆ ಕೃಷ್ಣನಿರ್ಯಾಣದ ಕಥೆಗೆ ಕಾರಣವನ್ನು ಹೇಳುತ್ತದೆ. ದೂರ್ವಾಸರ ಕಥೆಯೇ ಮತ್ತೊಂದು ರೂಪದಲ್ಲಿ ದ್ವಾರಕೆಗೆ ಒಂದೂವರೆ ಕಿ.ಮೀ.ದೂರದಲ್ಲಿರುವ ಶ್ರೀರುಕ್ಮಿಣೀಮಂದಿರದಲ್ಲಿ ಹೇಳಲಾಗುತ್ತದೆ. ಸುಕೇಶಿಯಕಥೆ ಒಂದು ಅದ್ಭುತವಾದ ವೀರಶೈವ ಧರ್ಮಪ್ರಮೇಯವನ್ನು ನಿರೂಪಿಸುವಂಥದ್ದು ಇಡೀ ಜಗತ್ತು ಪಂಚಭೂತಾತ್ಮಕ. ಅದೆಲ್ಲವೂ ಶಿವನಿಗೆ ಅರ್ಪಿಸಬೇಕಾದದ್ದು ಆದರೆ ಮೊದಲು ಅದನ್ನು ಬಾಹ್ಯವಾಗಿ ಅಥವಾ ಅಂತರಂಗದಲ್ಲಿ ತಾನು ಸ್ಪರ್ಶಿಸಿ ಅಥವಾ ಅನುಭವಿಸಿ ಶಿವನಿಗೆ ಅರ್ಪಿಸುವುದು ತಪ್ಪು ಎನ್ನುವುದು ಸುಕೇಶಿಯ ಭಾವನೆ. ಅಂಥ ಭಕ್ತರನ್ನು ಶಿವನು ಹೇಗೆ ಬೆಂಬಲಿಸುತ್ತಾನೆ ಎನ್ನುವುದು ಇಲ್ಲಿ ನಿರೂಪಿತ.

ತಿರುಣಾಳ್ಳಪ್ಪೋವ, ಮಾದರ ದೂಡಯ್ಯ, ಗುಡ್ಡವ್ವೆಯರ ಕಥೆಗಳು ಶಿವದೀಕ್ಷೆ ವಹಿಸಿದವನಿಗೆ ತನ್ನ ದೀಕ್ಷೆಯಲ್ಲಿ ಅಪಾರವಾದ ನಿಷ್ಠೆ ಕಷ್ಟಸಹಿಷ್ಣುತೆ ಇದ್ದರೆ ಶಿವನೇ ಸ್ವಯಂ ಬಂದು ಅವರನ್ನು ರಕ್ಷಿಸುತ್ತಾನೆ ಎನ್ನುವುದನ್ನು ತಿಳಿಸಲಾಗಿದೆ. ಅನೇಕ ಕಥೆಗಳಲ್ಲಿ ಕುಲಹೀನರೆನಿಸಿಕೊಂಡವರನ್ನು ಶಿವನು ಕರುಣಿಸಿದ ಅಥವಾ ಅದೇರೂಪದಲ್ಲಿ ಬಂದ ಘಟ್ಟಗಳನ್ನು ಕಾಣಬಹುದು. ಕುಲನಿರ್ಮೂಲನೆ ಬಸವಣ್ಣನವರ ಸಂಕಲ್ಪ. ಅದಕ್ಕೆ ತಕ್ಕಂತೆಯೇ ಈ ಕತೆಗಳಲ್ಲೆಲ್ಲ ನಿರೂಪಣೆ ಕಾಣಿಸುತ್ತದೆ. ಸ್ವಯಂ ಬಸವಣ್ಣನವರೆ ಕೈಹಿಡಿದು ಹಸ್ತದಲ್ಲಿ ಪರಮಾಮೃತವನ್ನು ಸುರಿದ ಶಿವನಾಗಮಯ್ಯ, ಸಾಮವೇದಿಯಿಂದ ಆರಾಧಿತನಾದ ಶ್ವಪಚಯ್ಯ ಮುಂತಾದವರ ವೃತ್ತಾಂತಗಳು ಇದನ್ನೇ ಹೇಳುತ್ತವೆ.

"ಶಿವಭಕ್ತಗಣಗಳು ಉತ್ತಮರು. ನಿಜವನ್ನು ಕಂಡು ನೋಡಿದರೆ ಅವರು ಸಾಕ್ಷಾತ್ ಶಿವನ ಪ್ರತಿಬಿಂಬ. ಉತ್ತಮ ಕುಲದಲ್ಲಿ ಹುಟ್ಟಿದವರು ಕುಲಜರೇ? ಶಿವಭಕ್ತಿ ಇಲ್ಲದೆಹೋದರೆ ಅವರು ಕುಲಜರಲ್ಲ. ಕುಲಹೀನರಾದರೂ ಶಿವಭಕ್ತರಾದವರು ಕುಲಜರು. ಬಂಗಾರ ಬಂಗಾರವೇ. ರಸಸ್ಪರ್ಶದಿಂದ ಪಂಚಲೋಹವೂ ಬಂಗಾರವಾಗುತ್ತದೆ. ಶರತ್ಕಾಲದ ಮೇಘಗಳು ಕವಿದಾಗ, ಅಥವಾ ಹೊಗೆ ಮುಂತಾದವುಗಳು ಕವಿದಾಗ ಆಕಾಶ ನಿರ್ಮಲವಾಗಿಯೇ ಇರತ್ತದೆ ತಾನೆ? ಅದರ ಪಾವಿತ್ರ್ಯತೆಯಲ್ಲಿ ನ್ಯೂನಾತಿರಿಕ್ತಗಳು ಎಲ್ಲಿಯವು? ಹಗ್ಗ, ಹಾವು, ಬೆಳ್ಳಿ, ಕಪ್ಪೆಚಿಪ್ಪು, ಶತ್ರು, ಸಜ್ಜನ, ಚೋರ ಹೀಗಿರುವವುಗಳನ್ನು ಕಂಡಾಗ ಯಾರಿಗಾದರೂ ಭಿನ್ನಭಾವಗಳೇ ಹುಟ್ಟಿಕೊಳ್ಳುತ್ತವೆ. ಅವುಗಳ ನಿಜವನ್ನು ಅರಿತಾಗ ಅವು ಸಹಜರೂಪಗಳೇ ಎಂದು ತಿಳಿಯುತ್ತದೆ. ಕರ್ಮದ ದೃಷ್ಟಿಯಿಂದ ನೋಡಿದರೆ ಕುಲಭ್ರಾಂತಿ ಧರ್ಮವೆಂದೇ ತೋರುತ್ತದೆ. ಆದರೆ ತತ್ಪ್ರೋಕ್ತವಾದ ಶೈವ ಧರ್ಮದ ದೃಷ್ಟಿಯಿಂದ ಕಂಡಾಗ ಕುಲಭ್ರಾಂತಿ ಧರ್ಮೇತರವಾಗಿ, ಅಸದ್ಧರ್ಮವಾಗಿ ತೋರುತ್ತದೆ" (ದೀಕ್ಷಾಪ್ರಕರಣ) ಎನ್ನುವುದು ಈ ಕಥೆಗಳ ಸಾರ.

'ಜಾತಿಹೀನನ ಮನೆಯ ಜ್ಯೋತಿ ತಾ ಹೀನವೇ?' ಎನ್ನುವ ಶರಣರ ಮಾತನ್ನು ಇಲ್ಲಿ ನೆನೆಯಬೇಕು. ಇಲ್ಲಿ ಮನೆಯೇ ದೇಹ. ಅದರಲ್ಲಿನ ಜ್ಯೋತಿಯೇ ಆತ್ಮ. ಅದು ಶಿವಸ್ವರೂಪ ಎನ್ನುವುದು ಶರಣರ ನಿಲುವು.

ಇಡೀ ದೀಕ್ಷಾಪ್ರಕರಣ ಇಬ್ಬರು ವ್ಯಕ್ತಿಗಳ ಚರ್ಯೆ ಆಗಿದೆ. ಪಂಡಿತಾರಾಧ್ಯರು, ಸೂರಸಾನಮ್ಮ ಇವರ ಚರ್ಯೆಯೇ ಇಲ್ಲಿ ನಿರೂಪಿತವಾಗಿದೆ. ಪಂಡಿತಾರಾಧ್ಯರು ಶಿವದೀಕ್ಷಾಪೂಜಾದಿಗಳ ತ್ರಿವಿಧೋದಕಗಳ, ಲಿಂಗಾರ್ಚನೆಯ ಪದ್ಧತಿ, ಭಸ್ಮಲೇಪಾದಿಗಳ ವಿವರಣೆ ಸಿದ್ಧಾಂತವಾದರೆ ನಂತರ ಅವರು ಮಾಡಿದ ಇಷ್ಟ, ಪ್ರಾಣಲಿಂಗಾರ್ಚನೆ ಅದಕ್ಕೆ ಅನುಷ್ಠಾನ ರೂಪವಾಗಿದೆ. ಆ ಉತ್ತಮ ಅನುಷ್ಠಾನದ ಫಲವ ಸೂರಸಾನಮ್ಮ ಬೆಲಿದೇವ

ವೇಮನಾರಾಧ್ಯರು ತಮ್ಮಲ್ಲಿಗೆ ಬಂದಾಗ ಪಂಡಿತರಿಗೆ ತಮ್ಮ ಇಷ್ಟಲಿಂಗದಲ್ಲಿಯೇ ಈ ಜಂಗಮದ ದರ್ಶನ. "ನಿನ್ನನ್ನು ಕಂಡಾಗ ತನ್ನನ್ನು ಜಗತ್ತನ್ನು ಮರೆಯಬೇಕು. ಇನ್ನು ಭಕ್ತನಾದ ನೀನೇ ಜಂಗಮವಾದ ಕಾರಣ ಜಂಗಮವನ್ನು ಕಂಡಾಗ ನಿನ್ನನ್ನು ಮರೆಯಬೇಕು" ಎನ್ನುವ ಪಂಡಿತಾರಾಧ್ಯರ ವೀರಶೈವ ಧರ್ಮೋಕ್ತಿ ಇಲ್ಲಿ ಆಚರಣೆಗೆ ಬಂದಿದೆ. ಅವರು ಜಂಗಮಲಿಂಗ ಭಕ್ತಿ ಪಾರವಶ್ಯದಲ್ಲಿ ನಮಸ್ಕರಿಸಿದಾಗ ಆ ಲಿಂಗ ಕೆಳಗೆ ಜೀಳದೆ ಗಾಳಿಯಲ್ಲೇ ನಿಲ್ಲುತ್ತದೆ ಎನ್ನುವುದು ಪ್ರಾಣಲಿಂಗನ ಒಲುಮೆಗೆ ನಿದರ್ಶನ. ಇದರಂತೆ ಸಿದ್ಧಾಂತ, ಅನುಷ್ಠಾನಮತ್ತು ಫಲಮೂರೂ ಇಲ್ಲಿ ಸ್ಪಷ್ಟವಾಗುತ್ತವೆ.

ಪಂಡಿತಾರಾಧ್ಯರಲ್ಲದೆ ಮತ್ತೊಬ್ಬ ಮುಖ್ಯ ಅವತಾರಮೂರ್ತಿ ಬಸವಣ್ಣ. ಈ ಎರಡು ಚೇತನಗಳಲ್ಲಿ ಸಾರೂಪ್ಯತೆಯನ್ನು ಸಾಧಿಸುವುದು ದೀಕ್ಷಾಪ್ರಕರಣದ ಮತ್ತೊಂದು ಮುಖ್ಯಸಾಫಲ್ಯ. ಪಂಡಿತರ ಪೂಜೆ ಅವರ ತನ್ಮಯ ಲಿಂಗಜಂಗಮದರ್ಶನ ಸಾಮರಸ್ಯ ಆದಮೇಲೆ ಅಲ್ಲಿ ಸೇರಿದವರು ಇಂಥವರು ಯಾರಿದ್ದಾರೆ ಹಿಂದೆ ಬಸವ ದಂಡನಾಯಕರು ಹೀಗೆ ಲಿಂಗದಲ್ಲಿ ಜಂಗಮವನ್ನು ಕಂಡವರೆಂದು ಕೇಳಿದ್ದೆವು ಕಂಡಿದ್ದಿಲ್ಲ ಇಂದು ಕಂಡೆವು ಎನ್ನುತ್ತಾ ಬಸವಣ್ಣನವರ ಚರಿತ್ರೆಯನ್ನು ಮೆಲುಕು ಹಾಕುತ್ತಾರೆ.

ಆ ಕಥೆಯಲ್ಲಿ ಬಸವಣ್ಣನವರ ಬಳಿಗೆ ಚನ್ನಬಸವಣ್ಣ ಬಂದಾಗ ಅವರು ಯೋಗನಿದ್ರಾಪರವಶರಾಗಿರುತ್ತಾರೆ. ಆದೇ ಸಮಯಕ್ಕೆ ಬಂದ ಅಪರೂಪ ಜಂಗಮವೊಂದು ಇವರ ಸ್ಥಿತಿಯನ್ನು ದ್ವಾರಪಾಲರಿಂದ ತಿಳಿದು ಹಿಂದಕ್ಕೆ ತಿರುಗಿ ಹೋಗುತ್ತಾನೆ. 'ಭಕ್ತರೆಲ್ಲರಿಗ ಪ್ರಾಣಲಿಂಗವೇ ವ್ಯಕ್ತವಾದ ಸದ್ಗುರು. ಪ್ರಾಣಲಿಂಗಕ್ಕೆ ಆ ಗುರುವೇ ಪ್ರಾಣ. ಆ ಗುರುವಿಗ ಪ್ರತಿರೂಪಲಿಂಗವಾದ ಜಂಗಮಲಿಂಗ ನಮ್ಮ ಪ್ರಾಣ. ಇದಕ್ಕೆ ಈ ಸಂಗಮೇಶ್ವರನೇ ಸಾಕ್ಷಿ. ಇದು ಮೂರುಮಾತಿಗೂ ಸತ್ಯ. ಇದೇ ನನ್ನ ವ್ರತ.' ಎಂದು ಹೇಳಿದ್ದ ಜಂಗಮಪ್ರಾಣರಾದ ಬಸವಣ್ಣನವರ ಪ್ರಾಣವೂ ಆತನ ಜೊತೆಯಲ್ಲೇ ಹೊಗುತ್ತದೆ. ಆಗ ಅಲ್ಲಿ ಒಂದು ಲಕ್ಷದ ಎಂಭತ್ತುಸಾವಿರ ಮಂದಿ ಪ್ರಸಿದ್ಧ ಭಕ್ತರು ಇದ್ದರಂತೆ. ಚನ್ನಬಸವಣ್ಣನಿಂದ ವಿಷಯ ತಿಳಿದು ಎಲ್ಲರೂ ಯೋಚಿಸಿ ಹುಡುಕಿಸಿ ಜಂಗಮವನ್ನು ಕರೆತರುತ್ತಾರೆ. ಬಸವಣ್ಣನವರ ಪ್ರಾಣ ಮರಳಿಬರುತ್ತದೆ.

ಇಷ್ಟರಲ್ಲಿ ಮತ್ತೊಂದು ಅವಾಂತರ ಉಂಟಾಗುತ್ತದೆ. ಪರೀಕ್ಷೆಗೆಂದು ಶಿವನು ಕಿನ್ನರ ಬ್ರಹ್ಮಯ್ಯನವರ ಪ್ರಾಣವನ್ನು ತನ್ನಲ್ಲಿಗೆ ಸೇರಿಸಿಕೊಳ್ಳುತ್ತಾನೆ. ಇದು ಕಂಡು ಬಸವಣ್ಣನವರು ಗೋಗರೆಯುತ್ತಾರೆ. ವಿಷಯ ತಿಳಿದ ಮಡಿವಾಳ ಮಾಚಯ್ಯನವರು ಬಸವಣ್ಣನಿಗೆ ಏನಿದು ಹುಚ್ಚು. ಅಳುವುದಕ್ಕೆ ಅಲ್ಲಿಗೆ ನಾವೇತಕ್ಕೆ ಬರಬೇಕು? ಬಸವಣ್ಣನೆ ಸಾಕು ಎನ್ನುತ್ತಾರೆ, ಇದು ಕೇಳಿ ಸತ್ಯದ ಅರಿವು ಮೂಡಿದ ಬಸವಣ್ಣ ಬ್ರಹ್ಮಯ್ಯನವರ

ಪ್ರಾಣದಲ್ಲಿ ತಮ್ಮ ಪ್ರಾಣವನ್ನು ಜೋಡಿಸುತ್ತಾರೆ. ವಿಷಯ ತಿಳಿದ ಮಾಚಯ್ಯನವರು ಅಲ್ಲಿಗೆ ಬಂದು ಬ್ರಹ್ಮಯ್ಯನರನ್ನು ಕಂಡು "ಹೀಗೆ ಒಂದಾಗಿ ಮಾತನಾಡಿಕೊಂಡು ಹೋದಂತೆ ನೀವಿಬ್ಬರೂ ಶಿವನಲ್ಲಿಗೆ ಹೋಗುವುದು ನಿಮಗೆ ಇಷ್ಟವೋ ಹೇಗೆ? ಅದು ಸಲ್ಲದು. ಬಸವಣ್ಣ ಇನ್ನೂ ಬಹಳಕಾಲ ಇರಬೇಕು. ನೀನು ಸಹ ಬಸವಣ್ಣನ ಸನ್ನಿಧಿಯಲ್ಲೇ ಇರಬೇಕು. ಅದೇ ನ್ಯಾಯ. ಏಳೇಳಿ" ಎಂದಾಗ, ಬ್ರಹ್ಮಯ್ಯನವರೂ, ಬಸವಣ್ಣನವರು ನಿದ್ದೆಯಿಂದ ಎದ್ದಂತೆ ಏಳುತ್ತಾರೆ. ಇದು ಬಸವಣ್ಣನವರು ತೋರಿಸಿದ ಅನುಷ್ಠಾನ. ಇಲ್ಲಿಗೆ ದೀಕ್ಷಾಪ್ರಕರಣ ಮುಗಿಯುತ್ತದೆ.

ಪಂಡಿತಾರಾಧ್ಯಚರಿತ್ರೆಯಲ್ಲಿ ಒಟ್ಟು ಐದು ಪ್ರಕರಣಗಳು ಇವೆ. ಇವುಗಳಲ್ಲಿ ಮೊದಲನೆಯ ಪ್ರಕರಣದ ಅರ್ಧಭಾಗ ಸಿದ್ಧಾಂತ. ಅಲ್ಲಿಂದ ಎರಡನೆಯ ಪುರಾತನ ಪ್ರಕರಣದಲ್ಲಿ ಬರುವ ಭಕ್ತರ ಕಥೆಗಳೆಲ್ಲವೂ ಅನುಷ್ಠಾನದ ಸ್ವರೂಪವೇ. ಪುರಾತನ ಪ್ರಕರಣದಲ್ಲಿ ಪುರಾತನರಾದ ಶಿವಭಕ್ತರ ವೀರಶೈವ ದೀಕ್ಷೆಯ ನಿರೂಪಣೆಯ ಜೊತೆಗೆ ಅಲ್ಲಮಪ್ರಭುಗಳಂತಹ ನಂತರದ ಭಕ್ತರ ಪ್ರಶಂಸೆಯೂ ಬಂದಿದೆ. ಬಸವಣ್ಣನವರು ಪಂಡಿತಾರಾಧ್ಯರ ಸಮಕಾಲೀನರು. ಪಂಡಿತಾರಾಧ್ಯರ ಸಮಕಾಲೀನರೂ ಶಿಷ್ಯರೂ ಆದ ಬೆಲಿದೇವ ವೇಮನಾರಾಧ್ಯರ ಮೊಮ್ಮಗನಿಗೆ ಶಿಷ್ಯನಾದ ಸೋಮನಾಥನಿಗೆ ಬಸವಣ್ಣನವರ ಸಮಕಾಲೀನರಾದ ಅಲ್ಲಪ್ರಭು ಇತ್ಯಾದಿಗಳು ಪುರಾತನರೇ ಆಗುತ್ತಾರೆ ತಾನೆ. ಪುರಾತನ ಪ್ರಕರಣ ಎನ್ನುವುದಕ್ಕೆ ಅರವತ್ತು ಮೂರುಮಂದಿ ಪುರಾತನರಿಗೆ ಸಂಭಂಧಿಸಿದ ವೃತ್ತಾಂತ ಎಂದು ಈ ಸಂದರ್ಭದಲ್ಲಿ ಭಾವಿಸಬೇಕಾಗಿಲ್ಲ. ಪುರಾತನ ಪ್ರಕರಣದಲ್ಲಿ ಬಸವಣ್ಣನವರು ಜಂಗಮಪ್ರಾಣರಾಗಿ ಕಿನ್ನರ ಬ್ರಹ್ಮಯ್ಯನಿಗಾಗಿ ದುಃಖಿಸಿದರೆ ನಾಲ್ಕನೆಯ ಪ್ರಕರಣದಲ್ಲಿ ಪಂಡಿತಾರಾಧ್ಯರು ಬಸವಣ್ಣನವರಿಗಾಗಿ ದುಃಖಿಸುತ್ತಾರೆ.

ಮೂರನೆಯದಾದ ವಾದಪ್ರಕರಣ ಸಿದ್ಧಾಂತವಾದರೆ, ನಾಲ್ಕನೆಯದಾದ ಮಹಿಮಾಪ್ರಕರಣ ಇದಕ್ಕೆ ವ್ಯಾಖ್ಯಾನ, ವಿವರಣೆ ಮತ್ತು ಅನುಷ್ಠಾನದ ರೂಪ ಎನಿಸುತ್ತದೆ. ವಾದಪ್ರಕರಣದ ಆದಿಯಲ್ಲಿ ಬೌದ್ಧಗುರುವಿನ ಜೊತೆಯಲ್ಲಿ ನಡೆದ ವಾದ ಪ್ರಸಂಗವೆಲ್ಲ ವೀರಶೈವಧರ್ಮ ವೇದಸಮ್ಮತವಾದದ್ದು ಎನ್ನುವುದನ್ನೂ, ಶಿವನು ಸರ್ವೋತ್ತಮನೂ, ನಿರ್ದೋಷನೂ ಎನ್ನುವುದನ್ನೂ ನಿರೂಪಿಸುತ್ತದೆ. ಈ ಸಂದರ್ಭದಲ್ಲಿ ನಡೆದ ವಾದದಲ್ಲಿ ಪಂಡಿತಾರಾಧ್ಯರು ವೇದ, ಕರ್ಮ, ಕಾಲ, ವೇದಾಂತ (ಅದ್ವೈತ), ಸಾಂಖ್ಯ, ಯೋಗ, ಚಾರ್ವಾಕ, ಪಾಂಚರಾತ್ರ, ಬೌದ್ಧ, ಜೈನ ವಾದಗಳನ್ನು ಖಂಡಿಸಿ, ಶಿವನ ಚಂದ್ರಧರತ್ವವನ್ನು ಅವನ ಕರುಣೆಗೆ ನಿದರ್ಶನವಾಗಿ ನಿರೂಪಿಸಿ, ಶಿವನು ಬ್ರಹ್ಮನ ಮುಖದಿಂದ ಹುಟ್ಟಿದನೆನ್ನುವುದನ್ನು ಖಂಡಿಸುತ್ತಾರೆ. ಅವನ ಕಪಾಲಮಾಲಾಧಾರಣೆ, ಗಂಗಾಧಾರಣ, ಗಂಗಾವತರಣ, ಗಂಗೋತ್ಪತ್ತಿ, ತ್ರಿವಿಕ್ರಮಖಂಡನ, ಪಂಚವಿಂಶತಿಲೀಲೆ, ರುದ್ರಾಧಿಕ್ಯ,

ಗರಳಧಾರಣ, ನಗ್ನತ್ವ, ದಕ್ಷಾಧ್ವರಧ್ವಂಸನ, ಪ್ರಳಯಲೀಲೆ, ಮಹಾತಾಂಡವಲೀಲೆಗಳ ವರ್ಣನೆಯೊಂದಿಗೆ ಈ ವಾದಪ್ರಕರಣ ಸಮಾಪ್ತವಾಗುತ್ತದೆ. ಇದೆಲ್ಲವೂ ಶಿವಮಹಿಮಾ ಸಿದ್ಧಾಂತವಾದರೆ ನಂತರದ ಮಹಿಮಾಪ್ರಕರಣ ಅದರ ಅನುಷ್ಠಾನವಾಗುತ್ತದೆ. ಮೊದಲನೆಯ ಭಾಗದಲ್ಲಿನ ಸಿದ್ಧಾಂತ ಶಿವಾರಾಧನೆಗೆ ಸಂಬಂಧಪಟ್ಟದ್ದು. ಮೂರನೆಯ ಭಾಗದಲ್ಲಿನ ಸಿದ್ಧಾಂತ ಶಿವನ ಸರ್ವೋತ್ತಮತ್ವಕ್ಕೆ ಅವನ ನಿರ್ದೋಷತ್ವದ ಪ್ರತಿಪಾದನೆಗೆ ಸಂಬಂಧಿಸಿದ್ದು ಆಗಿದೆ.

ಕಡೆಯದಾದ ಪರ್ವತಪ್ರಕರಣವನ್ನು ಸಿದ್ಧಾಂತ ಅನುಷ್ಠಾನಗಳ ಫಲರೂಪವೆಂದು ಭಾವಿಸತಕ್ಕದ್ದು. ಪಂಡಿತರ ಶಿಷ್ಯನಾದ ದೋನಯ್ಯ ಗುರುಗಳ ಅನುಜ್ಞೆಯ ಮೇರೆಗೆ ಶ್ರೀಶೈಲಕ್ಕೆ ಹೋಗಿ ಶಿವರಾತ್ರಿಯ ವ್ರತನಿರ್ವಹಣೆ ಮಾಡುತ್ತಾನೆ. ದೋನಯ್ಯನ ಜೊತೆಯಲ್ಲಿ ಇಡೀ ಶ್ರೀಪರ್ವತವನ್ನು ಸುತ್ತುವುದರ ಮೂಲಕ, ಶಿವದರ್ಶನದ ಮೂಲಕ, ಸಹೃದಯರಿಗೆ ಶಿವದರ್ಶನಾನಂದ ಸಿದ್ಧಿಯಾಗುತ್ತದೆ. ಪಂಡಿತಾರಾಧ್ಯರು ಸಕುಟುಂಬವಾಗಿ ಶ್ರೀಶೈಲಾಧಿಪತಿಯಲ್ಲಿ ಸೇರುವ ಮೋಕ್ಷಸಿದ್ಧಿ ಕಾವ್ಯಾನಂದಫಲರೂಪವಾಗಿದೆ. ಕಾವ್ಯವನ್ನು ಓದುವ ಕೇಳುವ ಸಹೃದಯನು ಸಹ ಆ ಫಲಕ್ಕೆ ಅಧಿಕಾರಿಯಾಗುತ್ತಾನೆ.

ಸಾಧಾರಣವಾಗಿ ಗ್ರಂಥಭಾಗಗಳಿಗೆ ಕಾವ್ಯಗಳಲ್ಲಿ ಆಶ್ವಾಸ, ಸಂಧಿ, ಅಧ್ಯಾಯ ಇತ್ಯಾದಿ ಹೆಸರುಗಳನ್ನು ಇಡುತ್ತಾರೆ. ಸೋಮನಾಥನು ಬಸವಪುರಾಣದಲ್ಲಿ ಆಶ್ವಾಸಗಳೆಂದು ಕರೆದು ಪಂಡಿತಾರಾಧ್ಯಚರಿತ್ರೆಯಲ್ಲಿ ಪ್ರಕರಣ ಎಂದು ಕರೆದಿದ್ದಾನೆ. ಕಾವ್ಯವನ್ನು ಚರಿತ್ರೆಯೆಂದು ಹೆಸರಿಸಿದ ಕಾರಣ 'ನಡೆದ ಸಂಗತಿ' ಎನ್ನುವ ಅರ್ಥದಲ್ಲಿ ಪ್ರಕರಣ ಎಂದು ಹೆಸರಿಸಿರಬೇಕು ಎನಿಸುತ್ತದೆ.

ಸಂಕ್ಷೇಪ ವಿಸ್ತಾರ ಸಾಮರ್ಥ್ಯ

ಸೋಮನಾಥನು ಕಥೆಯನ್ನು ಬೆಳೆಸಲೂ ಬಲ್ಲ. ಸಂಕ್ಷೇಪವಾಗಿ ಅಥವಾ ಸೂಚನಾಪ್ರಾಯವಾಗಿ ಹೇಳಲೂ ಬಲ್ಲ. ಇಂದಿನಂತಲ್ಲದೆ ಹಿಂದೆ ಸಾಮಾನ್ಯಜನರಿಗೂ ಭಕ್ತರ, ಇತಿಹಾಸಗಳ, ಪೌರಾಣಿಕವ್ಯಕ್ತಿಗಳ ಪರಿಚಯ ಚನ್ನಾಗಿತ್ತು ಎನ್ನುವುದಕ್ಕೆ ಆಯಾ ಕವಿಗಳ ರಚನೆಗಳಲ್ಲಿ ಬರುವ ಸಂಕ್ಷೇಪವಾದ ಉಕ್ತಿಗಳೇ ನಿದರ್ಶನ.

ಸೋಮನಾಥನು ಸಹ ಅನೇಕ ಕಡೆ ಇದರಂತೆ ಸಂಕ್ಷೇಪವಾಗಿ ಸಂಘಟನೆಗಳನ್ನು ಹೇಳುತ್ತಾನೆ. ಇದರಿಂದ ಎರಡು ಪ್ರಯೋಜನವಿದೆ. ಒಂದು, ಈ ಘಟ್ಟಗಳಿಗೆ ಸಂಬಂಧಿಸಿದ ಕಥೆಗಳು ಜನಸಾಮಾನ್ಯರಲ್ಲಿ ಇದಕ್ಕೂ ಮುಂಚೆಯೇ ಪ್ರಚಾರದಲ್ಲಿವೆ ಎನ್ನುವುದು ತಿಳಿಯುತ್ತದೆ. ಎರಡು, ಒಂದುವೇಳೆ ಆ ಕಥೆಗಳು ಕಾವ್ಯವನ್ನು ಓದುವ ಅಥವಾ ಕೇಳುವ ಜನರಿಗೆ ಪರಿಚಯ ಇಲ್ಲ ಎಂದರೆ ಅವನ್ನು ತಿಳಿಯಬೇಕೆನ್ನುವ ಕುತೂಹಲವನ್ನು

ಅವರಲ್ಲಿ ಉಂಟುಮಾಡುವುದು ಇಂತಹ ಉಕ್ತಿಗಳ ಉತ್ತಮ ಪ್ರಯೋಜನವಾಗುತ್ತದೆ. ಈ ಪದ್ಧತಿಯನ್ನು ನಮ್ಮ ಸಾಹಿತ್ಯದಲ್ಲಿ ಅನೇಕ ಕಡೆ ನಾವು ಕಾಣಬಹುದು. ಹೇಳುವವನು ಒಂದು ವಿಷಯವನ್ನು ಸುಚಿಸಿದಾಗ ಕೇಳುವವನು ಅದನ್ನು ಕುರಿತು ಪ್ರಶ್ನೆಗಳನ್ನು ಹಾಕಿ ವಿಸ್ತಾರವಾಗಿ ತಿಳಿಸಬೇಕೆಂದು ಕೇಳುತ್ತಾನೆ. ಬಲ್ಲವರು ಓದಿ ತಿಳಿಯುತ್ತಾರೆ. ಇತರರು ಕೇಳಿ ತಿಳಿಯುತ್ತಾರೆ ಎನ್ನುವುದು ಸೋಮನಾಥನ ಉದ್ದೇಶ.

ಸಾಮವೇದಿಯ ಕಥೆಯಲ್ಲಿಯೂ ಶಿವನು ಊಟ ಮಾಡದೆ ಹೊರಟ, ಊಟ ಮಾಡಿದ ಅನೇಕ ಭಕ್ತರ ವೃತ್ತಾಂತಗಳನ್ನು ಹೇಳುತ್ತಾನೆ. ಇವೆಲ್ಲ ಕಥೆಗಳೂ ಮೇಲೆ ಹೇಳಿದ ಅಭಿಪ್ರಾಯಕ್ಕೆ ನಿದರ್ಶನಗಳಾಗುತ್ತವೆ. ಹತ್ತು ಮಾತಿನಲ್ಲಿ ಹೇಳಬಹುದಾದ ಕಥೆಯನ್ನು ನೂರುಮಾತಿನಷ್ಟು ಬೆಳೆಸಬಲ್ಲ ಸಾಮರ್ಥ್ಯ ಸೋಮನಾಥನದು. ಹಿಂದಿನ ಯಾವುದೇ ಕಾವ್ಯವನ್ನು ನೋಡಿದಾಗ ಅದರಲ್ಲಿನ ವರ್ಣನಾಸಾಮಗ್ರಿಯಿಂದಲೇ ಕಾವ್ಯದ ಗಾತ್ರ ಬೆಳೆದಿರುತ್ತದೆ ಎನ್ನುವುದು ಸ್ಪಷ್ಟವಾಗುತ್ತದೆ.

ಪಾತ್ರಗಳ ಆಹಾರ್ಯ, ಮುಖವಿಕಾರ, ಸಾಭಿಪ್ರಾಯವಾದ ಅಂಗಾಂಗ ಚಲನೆ, ಪರಿಸರ, ವಸ್ತುವಿಶೇಷ, ಪ್ರಕೃತಿ, ಮಾನಸಿಕ ಸ್ಥಿತಿ, ವಿಷಯ ನಿರೂಪಣೆಯ ಕ್ರಮ, ಶಾಸ್ತ್ರೀಯ ವಿಷಯ, ಒಂದೇ ಘಟನೆಯನ್ನು ಅನೇಕ ಕೋನಗಳಲ್ಲಿ ನೋಡುವ ಕ್ರಮ, ಸಾಮಾಜಕ ಚಟುವಟಿಕೆಗಳು, ಸಾಂಸ್ಕೃತಿಕ ಕಾರ್ಯಕಲಾಪಗಳು, ವಿದ್ಯಾಪ್ರದರ್ಶನ, ಹೃದಯಸ್ಪಂದನೆಯ ಪ್ರಕಟನೆ ಇತ್ಯಾದಿಗಳನ್ನು ಕೂಲಂಕಷವಾಗಿ ಓದುಗರ ಮುಂದೆ ನಿಲ್ಲಿಸುವ ಸಂದರ್ಭದಲ್ಲಿ ಸೋಮನಾಥನು ತನ್ನ ಪ್ರತಿಭೆಯಿಂದ ಕಾವ್ಯವನ್ನು ವಿಸ್ತೃತಿಗೊಳಿಸುತ್ತಾನೆ. ಸಂಕ್ಷೇಪಿಸಿದ ಸಂದರ್ಭಗಳಲ್ಲಿ ಓದುಗನ ಚಿಂತನೆಯಲ್ಲಿ ಅದು ವಿಸ್ತೃತಿಗೊಳ್ಳುವುದೂ, ವಿಸ್ತೃತಿಯ ಸಂದರ್ಭದಲ್ಲಿ ಓದಿಸಿಕೊಳ್ಳುವ ಸೆಳೆತದ ಕಾರಣದಿಂದಾಗಿ ವಿಸ್ತೃತಿಯ ಅನುಭವ ಓದುಗನಿಗೆ ಬೇಸರವನ್ನು ತರದೆ ಉತ್ಸಾಹಕ್ಕೆ, ಕುತೂಹಲಕ್ಕೆ ಕಾರಣವಾಗುವುದು ಸೋಮನಾಥನ ಅಸದೃಶ ಕಥನ ನೈಪುಣ್ಯಕ್ಕೆ ನಿದರ್ಶನವಾಗುತ್ತದೆ.

ಸೊಮನಾಥನ ಇತರ ಕೃತಿಗಳು

ಸೋಮನಾಥನ ರಚನೆಗಳಲ್ಲಿ ಬೃಹತ್ ಪ್ರಮಾಣದ ಗ್ರಂಥಗಳು ಬಸವಪುರಾಣ ಮತ್ತು ಪಂಡಿತಾರಾಧ್ಯಚರಿತ್ರೆ. ಇವಲ್ಲದೆ ಅನೇಕ ಲಘುಕೃತಿಗಳನ್ನು ಸಹ ಅವನು ರಚಿಸಿದ್ದಾನೆ. ಅವುಗಳಲ್ಲಿ ಕೆಲವನ್ನು ಇಲ್ಲಿ ವಿಹಂಗಮದೃಷ್ಟಿಯಲ್ಲಿ ಪರಿಶೀಲಿಸಲಾಗಿದೆ.

ಪಂಚಪ್ರಕಾರ ಗದ್ಯ– ಇಲ್ಲಿ ಗದ್ಯ ಎಂದರೆ ಛಂದೋರಹಿತವಾದ ವಚನ ರಚನೆ ಎಂದು ಅರ್ಥ ಅಲ್ಲ. ಹೆಸರಿಗೆ ಗದ್ಯವೆಂದಿದ್ದರೂ ಸೋಮನಾಥನ ಗದ್ಯಗಳು ನಿರ್ದಿಷ್ಟಲಯಾನ್ವಿತವಾಗಿವೆ. ಪಂಚಪ್ರಕಾರ ಗದ್ಯ ಎನ್ನುವ ಹೆಸರಿನಲ್ಲೇ ಇರುವಂತೆ

ಇದು ಐದುರೀತಿಯ ಲಯವನ್ನು ಹೊಂದಿದ ಗದ್ಯವನ್ನು ಒಳಗೊಂಡಿದೆ. ಈ ಕಾರಣದಿಂದಲೇ ಇದಕ್ಕೆ ಈ ಹೆಸರು ಬಂದಿದೆ. ಪಂಡಿತಾರಾಧ್ಯ ಚರಿತ್ರೆಯ ದೀಕ್ಷಾಪ್ರಕರಣದಲ್ಲಿ ಮಲ್ಲಿಕಾರ್ಜುನ ಪಂಡಿತರು ಪಂಚಗದ್ಯಗಳಿಂದ ಶಿವನನ್ನು ನುತಿಸಿದ ಸಂಗತಿಯನ್ನು "ಪಾಂಚಭೌತಿಕ ಪಂಚ ಪಂಚೇಂದ್ರಿಯ ಪ್ರ/ ಪಂಚದೂರು ನುತಿಂಚು ಪಂಚಗದ್ಯಮುಲ" ಎನ್ನುವ ಮಾತಿನ ಮೂಲಕ ಸೋಮನಾಥನು ತಿಳಿಸುತ್ತಾನೆ. ಈ ಪಂಚಗದ್ಯಗಳು ಸಹ ಈ ರೀತಿಯದೇ ಆಗಿರಬೇಕು. ಆದರೆ ಪಂಡಿತರು ಹೇಳಿದ ಪಂಚಗದ್ಯಗಳು ಐದು ಬೇರೆ ಬೇರೆ ಗದ್ಯಗಳಾಗಿರಬೇಕು. ಅವುಗಳಲ್ಲಿ ಶ್ರೀಮುಖ ದರ್ಶನ ಗದ್ಯ, ಅಕ್ಷರಾಂಕಗದ್ಯ, ಲಭ್ಯವಾಗಿವೆ. ಪಂಡಿತರು ಬೌದ್ಧಾಚಾರ್ಯನನ್ನು ಗೆದ್ದನಂತರ ಚಂದವೋಲುನಲ್ಲಿ ಲಿಂಗೋದ್ಭವಾಲಯದಲ್ಲಿ "ಲಿಂಗೋದ್ಭವದೇವು ಗದ್ಯಂಬು ನಾ ನೊಕ್ಕ ಗದ್ಯಂಬು ಚೆಪ್ಪಿ" ಎಂದು ಸೋಮನಾಥನು ಹೇಳಿರುವುದರಿಂದ, ಲಿಂಗೋದ್ಭವಗದ್ಯವನ್ನು ಪಂಡಿತರು ರಚಿಸಿದರೆಂದು ತಿಳಿಯುತ್ತದೆ. ಇದು ಅಲಭ್ಯ. ಸೋಮನನ ನಂತರದವನಾದ, ಪಂಡಿತಾರಾಧ್ಯಚರಿತ್ರೆಯನ್ನು ಪದ್ಯರೂಪದಲ್ಲಿ ರಚಿಸಿದ ಶ್ರೀನಾಥನು ತನ್ನ 'ಹರವಿಲಾಸ ಕಾವ್ಯ'ದಲ್ಲಿ ದಾರುಕಾವನ ವಿಹಾರದ ಸಂದರ್ಭದಲ್ಲಿ 'ಲಿಂಗೋದ್ಭವ ಗದ್ಯವನ್ನು' ಹೇಳಿದ್ದಾನೆ. ಅದು ಪಂಡಿತರಗದ್ಯಕೃತಿ ಆಗಿರಬಹುದು. ಮಿಕ್ಕ ಎರಡು ಗದ್ಯಗಳು ಅಲಭ್ಯವಾಗಿವೆ. ಸೋಮನಾಥನ ಪಂಚಪ್ರಕಾರ ಗದ್ಯಗಳಲ್ಲಿ ಮೊದಲನೆಯದು–

ಜಯಜಯ ಬಸವ ಶ್ರೀಮನ್ಮಹಾವೃಷಭೇಂದ್ರಾವತಾರ! / ಸಮಂಚಿತ ವೀರಮಾಹೇಶ್ವರಾಚಾರ / ಪ್ರಮಥಗಣಾಲಂಕಾರ! ಜಗತ್ತ್ರಯಾ / ಧಾರಾ ದೇವ ಬಸವಾ! / ಎಂದು ಪ್ರಾರಂಭವಾಗಿ ಹೀಗೆ ಅನುಪ್ರಾಸಗಳಿಂದ ಎಂಟು ಭಾಗಗಳಲ್ಲಿ ರಚಿತವಾಗಿದೆ. ಎರಡನೆಯದು "ಅಪಿ ಚ ಮಹಾಮಹಿಮೋನ್ನತ ವಿಭವಾ / ಭವಪಾಶೋತ್ಕರ ಶಾತಲವಿತ್ರಾ / ವಿತ್ರಾಸಿತ...." ಇತ್ಯಾದಿಯಾಗಿ ಇರುತ್ತದೆ. ಇದು ನಾಲ್ಕು ನಾಲ್ಕು ಮಾತ್ರೆಗಳ ಗಣಗಳಿಂದ ಕೂಡಿದ್ದು ಮುಕ್ತಪದ ಗ್ರಸ್ತ ಲಕ್ಷಣವಿರುವ ರಚನೆ. ಮೂರನೆಯದು "ಜಯ ಜಯ ನಿರವಧಿ ನಿರ್ಮಲ ಗಾತ್ರಾ / ಜಯ ಜಯ ದುರಿತ ಲತಾಚಯ ದಾತ್ರಾ" ಹೀಗೆ ಅಂತ್ಯಾನುಪ್ರಾಸದಿಂದ ರಚಿತವಾಗಿದೆ. ಇದು ಸಹ ನಾಲಕ್ಕು ಮಾತ್ರೆಗಳ ಗಣಗಳು ಉಳ್ಳದ್ದು. ನಾಲ್ಕನೆಯ್ಯ ಗದ್ಯ ಐದು ಮಾತ್ರೆಗಳ ಗಣಗಳಿಂದ ಕೂಡಿದುದು. "ಜಯ ದುರಿತ ಪರಿಹರಣ / ಜಯ ಸುಕೃತ ಪರಿಚರಣ" ಹೀಗೆ ಮುಂದುವರಿಯುತ್ತದೆ. ಐದನೆಯದು "ಜಯ ಶಿವರಂಜನ/ ಜಯ ಭವಭಂಜನ" ಹೀಗೆ ಮುಂದುವರಿಯುತ್ತದೆ. ಇದರ ಬಗೆಗೆ ಭಾರತಿ ಪತ್ರಿಕೆಯಲ್ಲಿ ಸಮೀಕ್ಷೆ ಬರೆದ ನಿಡದವೋಲು ವೇಂಕಟರಾಯರು ಇದರಲ್ಲಿ ನೂರು ಚರಣಗಳಿವೆ ಎಂದು ಹೇಳಿದ್ದಾರೆ. ಮೊದಲನೆಯ ಪ್ರಕಾರದ ಗದ್ಯದ

ಎಂಟು ವಿಭಾಗಗಳಲ್ಲಿನ ಮತ್ತು ಉಳಿದ ನಾಲ್ಕು ಪ್ರಕಾರಗಳಲ್ಲಿನ 'ದೇವ ಬಸವಾ' ಎನ್ನುವ ಎಂಟು ಮಕುಟಗಳ ಸಂಖ್ಯೆಯನ್ನು ಜೋಡಿಸಿದರೆ ಒಟ್ಟು ೧೧೦೮ ಚರಣಗಳು ಎಂದು ಅವರು ಹೇಳಿದ್ದಾರೆ. ಆದರೆ ಧೂಪಂನಾಗಯ್ಯನವರ ಸಂಪಾದಕತ್ವದಲ್ಲಿ ಬಂದ ಸೋಮನಾಥನ 'ಲಘುಕೃತುಲು ವೃಷಾಧಿಪ ಶತಕಮು' ಎನ್ನುವ (ನಿಡದವೋಲು ರವರ ಈ ಬಗೆಗಿನ ಪ್ರಬಂಧ ಇರುವ)ಪುಸ್ತಕದಲ್ಲಿ ನೀಡಿದ ಪಾಠದಲ್ಲಿ ಚೂರ್ಣಿಕೆಯ ಜೊತೆಯಲ್ಲಿ ದೇವಬಸವಾ ಎನ್ನುವ ಹತ್ತು ಮಕುಟಗಳು ಇವೆ. ಒಂದನೆಯ, ನಾಲ್ಕನೆಯ ಮತ್ತು ಐದನೆಯ ಗದ್ಯಪ್ರಕಾರಗಳ ಪಾದಗಳ ಸಂಖ್ಯ ಸರಿಹೋಗುತ್ತಿಲ್ಲ. ಅವರು ನೋಡಿದ ಪಾಠ ಬೇರೆಯದಿರಬಹುದೇನೋ ಎನಿಸುತ್ತದೆ.

ನಮಸ್ಕಾರ ಗದ್ಯ– ಇದು ಸಂಸ್ಕೃತದಲ್ಲಿದೆ. ಮೊದಲು ಒಂದು ಶಾರ್ದೂಲವಿಕ್ರೀಡಿತ ಪದ್ಯವಿದ್ದು ನಂತರ "ಅಪಿಚ ಶ್ರೀ ಪ್ರಮಥೇಂದ್ರಾಯ ನಮೋ/ ವ್ಯಪಗತ ಹೃದ್ಗತ ತಂದ್ರಾಯ ನಮೋ" ಇತ್ಯಾದಿಯಾಗಿ ನಾಲ್ಕು ಮಾತ್ರೆಯ ನಾಲ್ಕು ಗಣಗಳಿಂದ ಕೂಡಿದ ೧೧೦೮ ಸಾಲುಗಳ ನಂತರ "ಮಂಗಳ ಪ್ರಸಂಗ ಸಂಗನ ಬಸವಲಿಂಗಾಯ" ಇತ್ಯಾದಿಯಾಗಿ ಭಿನ್ನವಾದ ಗತಿ ಇರುವ ಆರು ಪಾದಗಳಿವೆ. ಅದರ ನಂತರ "ಸರಸನಮಸ್ಕೃತಿ ಗದ್ಯಂ ಪರಪದ ಮಣಿಖಚಿತ ವಾಕ್ಸುವರ್ಣಾಭಮ್/ ಅಷ್ಟೋತ್ತರಶತಕುಸುಮಂ ರಚಿತಂ ಪಾಲ್ಕುರಿಕಿ ಸೋಮನಾಥೇನ//" ಎನ್ನುವ ಆರ್ಯಾವೃತ್ತ ರಚಿತವಾಗಿದೆ. ಪ್ರತಿಸಾಲಿನ ಅಂತ್ಯದಲ್ಲೂ ನಮೋ ಎಂದು ಇರುವುದರಿಂದ ಇದು ನಮಸ್ಕಾರ ಗದ್ಯ ಎಂದು ಹೆಸರು ಪಡೆದಿದೆ. ಇದು ಬಸವ ಸ್ತುತ್ಯಾತ್ಮಕವಾದದ್ದು.

ಅಕ್ಷರಾಂಕಗದ್ಯ – ಇದು ಅಂತಾದಿ ರಚನೆಗಳ ವರ್ಗಕ್ಕೆ ಸೇರಿದ್ದು. ಅಕಾರದಿಂದ ಕ್ಷಕಾರದವರೆಗಿನ ಅಕ್ಷರಗಳಲ್ಲಿ ಪಾದಾದಿಯಲ್ಲಿ ಬರುವಂತೆ ಇವು ರಚಿತವಾಗಿರುತ್ತವೆ. ಇದು ಐದು ಮಾತ್ರೆಯ ಎರಡು ಗಣಗಳ ಪಾದಗಳನ್ನು ಹೊಂದಿದೆ. ಪ್ರತಿಪಾದದ ಕಡೆಯಲ್ಲಿ ಓಂ ಎನ್ನುವ ಉಚ್ಚಾರಣೆ ಬರುತ್ತದೆ. ತೆಲುಗಿನಲ್ಲಿ ಇಂತಹ ರಚನೆಗಳು ಮಾಡಿದವರಲ್ಲಿ ಸೋಮನಾಥನೇ ಮೊದಲಿಗನು. ಇವನಿಗೆ ಮುಂಚೆ ತಮಿಳು ಕನ್ನಡಗಳಲ್ಲಿ ಇಂತಹ ರಚನೆಗಳಿವೆ. ಪೊನ್ನಕವಿ ಜಿನಾಕ್ಷರಮಾಲೆ ಎನ್ನುವ ಹೆಸರಿನಿಂದ ಕಂದಪದ್ಯಗಳಲ್ಲಿ ಇಂತಹ ರಚನೆ ಮಾಡಿದ್ದಾನೆ. ಸೋಮನಾಥನದು ಕೇವಲ ಸಂಸ್ಕೃತ ರಚನೆ. ಅದಕ್ಕಾಗಿಯೇ ಕನ್ನಡಕ್ಕೆ ತೆಲುಗಿಗೆ ಸಂಬಂಧಿಸಿದ ಹ್ರಸ್ವವಾದ "ಎ, ಒ" ಗಳನ್ನು ಇಲ್ಲಿ ಬಳಸಲಾಗಿಲ್ಲ. ಹಿಂದಿನ ಕಾಲದಲ್ಲಿ ತೆಲುಗಿನಲ್ಲಿಯೂ ಬಳಸಲಾಗಿದ್ದ ಲ್ರು, ಲ್ರೂ ಸಂಸ್ಕೃತದ ಎನ್ನುವ ಅಕ್ಷರಗಳನ್ನು, ಸೋಮನಾಥನು ಬಳಸಿದ್ದಾನೆ. ತೆಲುಗಿನಲ್ಲಿ ಇವುಗಳನ್ನು ಲು, ಲೂ ಎಂದು ಉಚ್ಚಾರಣೆ ಮಾಡಲಾಗುತ್ತಿತ್ತು. ಈಗ ತೆಲುಗಿನಲ್ಲಿ ಇವುಗಳ ಬಳಕೆ ಪೂರ್ತಿಯಾಗಿ ನಿಂತುಹೋಗಿದೆ. ಈ ಎರಡು ಅಕ್ಷರ ಮತ್ತು ಙ, ಞ, ಣ ಎನ್ನುವ ಅಕ್ಷರಗಳನ್ನು

ಸ್ವತಂತ್ರವಾಗಿ ಸಾರ್ಥಕವಾದ ಪದಗಳಾಗಿ ಸೋಮನಾಥನು ಬಳಸಿರುವುದು ಸಂಸ್ಕೃತಭಾಷೆಯಮೇಲೆ ಅವನಿಗಿರುವ ಅಪಾರ ಸಾಧಿಕಾರ ಪಾಂಡಿತ್ಯಕ್ಕೆ ನಿದರ್ಶನವಾಗಿದೆ. ಇಂತಹ ಸಾರ್ಥಕವಾದ ಪದಗಳ ಅರ್ಥವಿವರಣೆಯೊಂದಿಗೆ ಈ ಗದ್ಯಗಳು ಸಹೃದಯರಿಗೆ ತಲುಪಿದರೆ ಸೋಮನಾಥನ ವೈದುಷ್ಯ ಮತ್ತಷ್ಟು ತಿಳಿಯುವ ಅವಕಾಶವಿದೆ.

ಅಕ್ಷರಾಂಕ ಪದ್ಯ– ಹೆಸರಿನಲ್ಲೇ ಇರುವಂತೆ ಇದು ಒಂದು ಪದ್ಯರಚನೆ. ಇದರಲ್ಲಿ ಒಟ್ಟು ೩೯ ಪದ್ಯಗಳಿವೆ ಇವುಗಳಲ್ಲಿ ಎರಡು ಕಂದಪದ್ಯಗಳು. ಒಂದು ಉತ್ಪಲಮಾಲೆ. ಮಿಕ್ಕ ೩೬ಪದ್ಯಗಳು ಚಂಪಕಮಾಲೆಯಲ್ಲಿ ಇವೆ. ಕಡೆಯಲ್ಲಿ ಪ್ರಾರ್ಥನಾರೂಪವಾದ ಒಂದು ಕನ್ನಡ ವಚನ, ಆಶೀರ್ವಾದಾಶಂಸನಾರೂಪವಾದ ಒಂದು ಸಂಸ್ಕೃತದ ವಚನ ಇವೆ.

ಮೊದಲನೆಯ ಮತ್ತು ಎರಡನೆಯ ಪದ್ಯ ಶ್ರೀಕಾರದಿಂದ ಪ್ರಾರಂಭವಾಗಿವೆ. ಪ್ರಾಣಾಕ್ಷರಗಳನ್ನೆಲ್ಲ ಒಂದು ಗುಂಪಾಗಿ ಭಾವಿಸಿ ಆ ಇಂದ ಅಃ ವರೆಗೆ ಇರುವ ೧೬ ಅಕ್ಷರಗಳನ್ನು (ಲ್ರು, ಲ್ರೂ ಸೇರಿ) ಒಂದೇ ಪದ್ಯದಲ್ಲಿ ಬಳಸಲಾಗಿದೆ. ಅಕ್ಷರಾಂಕ ಗದ್ಯದಲ್ಲಿನಂತೆ ಇಲ್ಲಿಯೂ (ಲ್ರು, ಲ್ರೂ ,ಙ,ಜ, ಣ ಅಕ್ಷರಗಳನ್ನು ಪ್ರತ್ಯೇಕ ಅರ್ಥವಿರುವ ಪದಗಳಾಗಿ ಬಳಸಲಾಗಿದೆ. ಇದು ಕನ್ನಡದ ರಚನೆ ಆಗಿದ್ದರೂ ಇದರಲ್ಲಿಯೂ ಕನ್ನಡ, ಮತ್ತು ತೆಲುಗುಗಳಿಗೆ ಪ್ರತ್ಯೇಕವೆನಿಸಿದ ಹ್ರಸ್ವವಾದ 'ಎ' 'ಒ' ಅಕ್ಷರಗಳಿಗೆ ಪ್ರತ್ಯೇಕವಾಗಿ ಪದ್ಯವನ್ನು ಹೇಳಿಲ್ಲ. ಇದರಲ್ಲಿ ಹೇಳಿರುವ ಅಕ್ಷರಗಳೆಲ್ಲವನ್ನು ತತ್ಸಮಸಮಾಸಗಳಲ್ಲಿಯೇ ಬಳಸಲಾಗಿದೆ. ಈ ಎ, ಒ ಗಳನ್ನು ತತ್ಸಮ ಸಮಾಸದಲ್ಲಿ ಬಳಸುವಂತಿಲ್ಲ ಎನ್ನುವುದು ಗಮನಾರ್ಹ.

ಕಡೆಯಲ್ಲಿ ಬರುವ ಕಂದ ಪದ್ಯದಲ್ಲಿ –

"ಇತಿ ಭಾವನ್ನಕ್ಷರ ಸಂ
ಸ್ತುತಿ ಸಂಕಲಿತಾಕ್ಷರಾಂಕಿತ ಸ್ತೋತ್ರವುಮಾ
ಪತಿ ನಿಮಗರ್ಪಿಸಿದೆಂ ಸ
ತ್ಕೃತಿಯಿಂ ಪಾಲ್ಕುರಿಕಿ ಸೋಮಕೃತಿ ಬಸವೇಶಾ!"

ಎಂದು ಸಮರ್ಪಣೆ ಹೇಳಲಾಗಿದೆ. ಇದರಲ್ಲಿನ ಭಾವನ್ನಕ್ಷರ ಎನ್ನುವುದು ಗಮನಾರ್ಹ. ಭಾವಂ +ಅಕ್ಷರ ಆದ್ಧರೆ ಭಾವನ್ನಕ್ಷರ ಆಗುವುದಿಲ್ಲ. ಭಾವಿಸುತ್ತಾ ಎನ್ನುವ ಅರ್ಥದಲ್ಲಿ ಇದು ಭಾವಯನ್ ಆಗಬೇಕಾಗುತ್ತದೆ. ಆಗ ಛಂದಸ್ಸು ಕೆಡುತ್ತದೆ. ಆದ ಕಾರಣ ಇದು ಭಾವನ್ನಕ್ಕಷರ ಆಗಿರದೆ ಬಾವನ್ನಕ್ಷರ ಎಂದು ಆಗಿರಲೇಬೇಕು. ಬಾವನ್> ಬಾವನ್ನ ಆಗಿದೆ. (ಛಪ್ಪನ್ನದಂತೆ ಇದು ಬಾವನ್ನ. ತೆತ್ತಿಸ ಕೋಟಿ, ಬತ್ತೀಸರಾಗ ಇತ್ಯಾದಿ ಪ್ರಾಕೃತ ಪದಗಳು ಕನ್ನಡದಲ್ಲಿ ಬಳಕೆಯಾಗುವುದನ್ನು ಗಮನಿಸಬೇಕು). ಆಗ ೫೨ ಅಕ್ಷರಗಳೆಂದು

ಹೇಳಿದಹಾಗಾಯಿತು. ಪ್ರಾಣಾಕ್ಷರ ೧೬, ವರ್ಗಾಕ್ಷರ ೨೬, ಯ, ರ, ಲ, ವ, ಶ, ಷ, ಸ, ಹ, ಳ, ಕ್ಷ ಇವು ೧೦. ಒಟ್ಟು ೫೧ ಅಕ್ಷರ. ೫೨ನೆಯ ಅಕ್ಷರ ಯಾವುದು? ಎನ್ನುವ ಪ್ರಶ್ನೆ ಮೂಡುತ್ತದೆ.

ಪ್ರಾಣಾಕ್ಷರಗಳನ್ನೆಲ್ಲ ಒಂದು ಗುಂಪು ಮಾಡಿ ಅವುಗಳ ಆದ್ಯಕ್ಷರದಿಂದ ಒಂದು ಪದ್ಯವನ್ನು ಬರೆದ ಸೋಮನಾಥನು ಮಿಕ್ಕೆಲ್ಲ ಅಕ್ಷರಗಳಿಗೆ ಒಂದೊಂದು ಪ್ರತ್ಯೇಕ ಪದ್ಯವನ್ನು ರಚಿಸಿದ್ದಾನೆ. ಆದಿಯಲ್ಲಿ ಶ್ರೀಕಾರದಿಂದ ಎರಡು ಪದ್ಯಗಳನ್ನು ರಚಿಸಿದ್ದಾನೆ. ಈ ಪದ್ಯಗಳಲ್ಲಿ ಮೊದಲನೆಯದು ಶ್ರೀಯುತ ನಮಶ್ಶಿವಾಯ ಎನ್ನುವ ಆಯತ ಪಂಚಾಕ್ಷರೀ ಸಂಭೂತವಾದ ಸ್ವಾಯತ್ತವಾದ ಅಕ್ಷರ ಕಾಯಸ್ಥನಾದ ಬಸವನನ್ನು ಕೀರ್ತಿಸುವಂಥದ್ದು. ಎರಡನೆಯ ಪದ್ಯದ ವಿಷಯ, ಅಕಾರ ಉಕಾರ ಮಕಾರ ಬಿಂದು ನಾದಾತಿಶಯಾತ್ಮಕವಾದ ಪ್ರಣವವನ್ನು ಪೂರ್ವದಲ್ಲಿ ಹೊಂದಿರುವ ಓಂ ನಮಶ್ಶಿವಾಯ ಎಂದು ಶಿವನ ಮುಖದಿಂದ ಉದಿಸಿದ ಷಡಕ್ಷರದಿಂದ ಹುಟ್ಟಿದ ಪರಾಸ್ವರಾದಿ ಅಖಿಲ ವರ್ಣನುತನಾದ ಬಸವನನ್ನು ಶರಣು ಬೇಡುವುದು. ಈ ಎರಡು ಪದ್ಯಗಳು ಶ್ರೀಕಾರದಿಂದ ಪ್ರಾರಂಭವಾಗುತ್ತವೆ. ಓಂಕಾರ, ಪಂಚಾಕ್ಷರ, ಷಡಕ್ಷರ, ಮತ್ತು ಸಕಲ ಅಕ್ಷರಗಳ ಉದಯವನ್ನು ಹೇಳುತ್ತವೆ. ಪದ್ಯಗಳೆರಡೂ ಶ್ರೀಕಾರದಿಂದ ಪ್ರಾರಂಭವಾಗಿವೆ ಆದಕಾರಣ ಶ್ರೀ ಎನ್ನುವ ಅಕ್ಷರವನ್ನಾಗಲೀ, ಓಂಕಾರವನ್ನಾಗಲೀ, ಪ್ರತಿಪಾದಿಸುತ್ತಿವೆ ಆದಕಾರಣ ಓಂಕಾರವನ್ನು ಇಲ್ಲಿ ಸ್ವೀಕರಿಸಬಹುದು. ಈ ಒಂದು ಅಕ್ಷರದ ಸ್ವೀಕಾರದಿಂದ ಒಟ್ಟು ಅಕ್ಷರಗಳು ೫೨ ಆಗುತ್ತವೆ. ಆಗ ಕಡೆಯ ಪದ್ಯದಲ್ಲಿ ಹೇಳಿದ ಬಾವನ್ನ ಎನ್ನುವ ಶಬ್ದಕ್ಕೆ ಸಾರ್ಥಕ್ಯ ಸಿಗುತ್ತದೆ. ಹಿಂದಿನ ಕಾಲದಲ್ಲಿ ಅಕ್ಷರಗಳನ್ನು ತೆಲುಗು ದೇಶದಲ್ಲಿ ಶ್ರೀಕಾರದಿಂದಲೇ ಪ್ರಾರಂಭಿಸಿ ಕಲಿಸುತ್ತಿದ್ದರು ಎನ್ನುವುದನ್ನು ಇಲ್ಲಿ ನೆನೆಯಬಹುದು. ೩೯ನೆಯಪದ್ಯದ ನಂತರ ಇರುವ ವಚನದಿಂದ ಸ್ವರಾದ್ಯಕ್ಷರ (ಸ್ವರಗಳು ೧೬), ಕಾದಿಕ್ಷಾಂತಾಕ್ಷರ (ವ್ಯಂಜನಗಳು ೩೫), ಮೂಲ+ಆದ್ಯಕ್ಷರ (ಶ್ರೀ ಅಥವಾ ಓಂ ೧) ಒಟ್ಟು ೫೨ಅಕ್ಷರಗಳು = ಬಾವನ್ನಕ್ಷರ ಎನ್ನುವ ಮಾತು ಅನ್ವರ್ಥವೆಂದು ನಿರೂಪಿತವಾಗುತ್ತದೆ.

ಕಕಾರನುತಂ, ಚಕಾರನುತಂ, ಜಕಾರನುತಂ ಕ್ಷಕಾರನುತಂ ಹೀಗೆ ಎಲ್ಲ ಪದ್ಯಗಳ ಕಡೆಯಲ್ಲಿ ಬಂದಿದ್ದು ಅದರ ನಂತರ ಬಸವೇಶ ಪಾಹಿಮಾಂ ಎನ್ನುವ ಪ್ರಾರ್ಥನೆ ಇದೆ. ಕಕಾರದಿಂದ ನುತನಾದ ಬಸವನೇ ನನ್ನನ್ನು ರಕ್ಷಿಸು ಎಂದರೆ ಸರಿ. ಆದರೆ ಈ ಅರ್ಥ ಕಕಾರನುತಂ ಬಸವೇಶ ಎಂದರೆ ಬರುತ್ತದೆಯೇ? ಹಳಗನ್ನಡದಲ್ಲಿ ಇದು ಪ್ರಥಮಾವಿಭಕ್ತಿಯ ರೂಪ. ಬಸವೇಶ ಎನ್ನುವುದು ಸಂಬೋಧನೆ ಎರಡಕ್ಕೂ ಹೊಂದಾಣಿಕೆ ಆಗುವುದು ಹೇಗೆ? ಕಕಾರನುತಾ! ಬಸವೇಶ ಎಂದರೆ ಸರಿಹೋಗುತ್ತದೆ. ಅಥವಾ ಇದಕ್ಕೆ "ಹೀಗೆ ಕಕಾರವು ನುತವಾಗಿದೆ. ಬಸವೇಶಾ ನನ್ನನ್ನು ರಕ್ಷಿಸು" ಎನ್ನುವುದು ಸೋಮನಾಥನ

ಉದ್ದೇಶವಾಗಿರಬಹುದೋ? ಆಗಲೂ ಅದು ಕಕಾರಂ ನುತಂ ಆಗಬೇಕು ತಾನೆ? ಸಂಸ್ಕೃತ, ಮತ್ತು ತೆಲುಗುಗಳ ಮೇಲೆ ಇರುವಷ್ಟು ಅಧಿಕಾರ ಸೋಮನನಿಗೆ ಕನ್ನಡಾದಿ ಇತರಭಾಷೆಗಳಮೇಲೆ ಇಲ್ಲ ಎನ್ನುವುದು ನಿಜ. ಅವನ ರಚನೆಗಳು ಹೆಸರಿಗೆ ಕನ್ನಡ ಎನಿಸಿದರೂ ಅಲ್ಲೆಲ್ಲ ತತ್ಸಮಪದಗಳಿಂದ, ಸಮಾಸಗಳಿಂದ ತುಂಬಿರುವುದನ್ನು ಕಾಣಬಹುದು. ಬಸವನೆಂದರೆ ಸಾಕು ಮೈಮರೆಯುವ ಸೋಮನಾಥನು ವೀರಶೈವ ತತ್ತ್ವವನ್ನು ಬಸವ ವೈಭವವನ್ನು ಎಲ್ಲಭಾಷೆಗಳ ಜನರಿಗೆ ತಲುಪಿಸಬೇಕೆನ್ನುವ ಉದ್ದೇಶದಿಂದ ಮರಾಠ, ತಮಿಳು ಮೊದಲಾದ ಭಾಷೆಗಳಲ್ಲಿ ಕ್ವಚಿತ್ತಾಗಿಕನ್ನಡ ತೆಲುಗು ಸಂಸ್ಕೃತಗಳಲ್ಲಿ ವಿಶೇಷವಾಗಿ ರಚನೆ ಮಾಡಿದ್ದಾನೆ. ಸೋಮನಾಥನ ಈ ಪ್ರಯತ್ನ ಅತ್ಯಂತ ಪ್ರಶಂಸನೀಯವಾದದ್ದು.

ಸಂಸ್ಕೃತ ಭಾಷೆಯಮೇಲೆ ಸೋಮನಾಥನಿಗಿರುವ ಅಧಿಕಾರ ಅಸದೃಶವಾದದ್ದು. ತನ್ನ ಮನಸಿಗೆ ಬಂದರೀತಿಯಲ್ಲಿ ಅಕ್ಷರಗಳನ್ನು ಕುಣಿಸುವ ಶಕ್ತಿ ಸೋಮನಾಥನದು. ಒಂದು ಅಕ್ಷರಕ್ಕೆ ಸಂಬಂಧಿಸಿದ ಪದ್ಯದಲ್ಲಿ ಅದೇ ಅಕ್ಷರವನ್ನು ಆದಿಯಲ್ಲಿರುವ ಅನೇಕ ಪದಗಳನ್ನು ಪ್ರಯೋಗಿಸಿದ್ದಾನೆ. ಪದಗಳೇ ಇಲ್ಲವೆನಿಸುವ ಙ ಞ ದಂತಹ ಅಕ್ಷರಗಳನ್ನೂ ಸಹ ಇದೇ ರೀತಿಯಲ್ಲಿ ಬಳಸುತ್ತಾನೆ. ಙವಿರಹಿತ, ಙತಮಸ್ತಕ, ಙಮದಾಂತ, ಞತಿಮಿರ ಕರ್ಕಶಾರ್ಕ, ಝುಗಜೇಂದ್ರ ಮೃಗೇಂದ್ರ, ಞಸೂತ್ರದಾತ್ರ, ಞದಾವದಾವ, ಞಸರೋಜಮದೇಭ ಇತ್ಯಾದಿ ವಿಶೇಷ ಪ್ರಯೋಗಗಳನ್ನು ಗಮನಿಸಿದಾಗ ಸೋಮನಾಥನಿಗೆ ಸಂಸ್ಕೃತ ಭಾಷೆಯಮೇಲಿರುವ ಅಪಾರವಾದ ಪಾಂಡಿತ್ಯ ಸ್ಪಷ್ಟವಾಗುತ್ತದೆ. "ಟಟಕಿಟ ಟಟ್ಟಕಿಟ್ಟಟಟ ಕಿಟ್ಟಟಟಟ್ಟ ಟಕಿಟ್ಟಟಟ್ಟಕಿ/ಟ್ಟಟ....." "ಣಣ್ಣೃಣ ಣಣ್ಣೃಣ ಣ್ಣೃಣಣ ಣಣ್ಣೃಣ ಣಣ್ಣೃಣ ಣಣ್ಣೃಣಣ್ಣೃಣ/ಣ್ಣಣ್ಣೃಣ....." ಹೀಗೆ ಅನುಕರಣ ಶಬ್ದಗಳಿಂದಲೇ ಶಿವನ ತಾಂಡವವನ್ನು ವರ್ಣಿಸಿದ ಚಮತ್ಕೃತಿ ಸೋಮನಾಥನದು. ಈ ಪದ್ಯಗಳಲ್ಲಿ ತೆಲುಗಿನ ಪದ್ಧತಿಯ ವಡಿಯನ್ನು ಪಾಲಿಸಿಲ್ಲ. ಕನ್ನಡದ ಪದ್ಧತಿಯಂತೆ ಯತಿವಿಲಂಘನೆ ಮಾಡಲಾಗಿದೆ. ಪ್ರಾಸನಿಯಮ ಇದೆ.

ಶರಣ ಬಸವ ರಗಳೆ – ಇದು ಕನ್ನಡದಲ್ಲಿದೆ. ಪ್ರತಿಪಾದದಲ್ಲಿಯೂ ಮೂರು ಮಾತ್ರೆಗಳ ಎಂಟು ಗಣಗಳು ಇರುತ್ತವೆ. ಮೊದಲನೆಯ ಅಕ್ಷರಕ್ಕೆ ಐದನೆಯ ಗಣದ ಮೊದಲ ಅಕ್ಷರಕ್ಕೆ ತೆಲುಗಿನ ಸಂಪ್ರದಾಯದ ಪ್ರಕಾರ ವಡಿ (ಸಜಾತ್ಯಕ್ಷರ) ಅಳವಡಿಸಲಾಗಿದೆ. ಶ್ರೀವದಾದಿದೇವರಾಜ ಎಂದು ಪ್ರಾರಂಭವಾಗಿ ಶ್ರೀವೃಷೇಧಿನಾಯಕಾ ಎಂದು ಅಂತವಾಗುವ ಮೊದಲನೆಯ ನಾಲ್ಕು ಸಾಲುಗಳ ನಂತರ ಈ ರಗಳೆ ಪ್ರಾರಂಭವಾಗುತ್ತದೆ. ಮೊದಲನೆಯ ಪಾದದ ಆದಿಯಲ್ಲಿ ನಿಡದವೋಲು ವೇಂಕಟರಾಯರು ನೀಡಿದ ಪಾಠ "ಶ್ರೀಕೃಷ್ಣಾಂಘ್ರಿ ಸೇವಕಾ..."ಎಂದು ಪ್ರಾರಂಭವಾಗುತ್ತದೆ. ಆದರೆ ಧೂಪಂ ಬಸವ ನಾಗಯ್ಯನವರ

ಸಂಪಾದಕತ್ವದಲ್ಲಿ ಬಂದ "ಪಾಲಕುರಿಕಿ ಸೋಮನಾಥುನಿ ಲಘುಕೃತುಲು" ನಲ್ಲಿ ನೀಡಲಾದ ಪಾಠ "ಶ್ರೀವೃಷಾಧಿನಾಯಕ ಪ್ರಸಿದ್ಧ...." ಎಂದು ಇದೆ. ಇದೇ ಸರಿಯಾದ ಪಾಠ ಎನಿಸುತ್ತದೆ. ಶ್ರೀಕೃಷ್ಣಾಂಘ್ರಿ ಎಂದು ಪ್ರಾರಂಭವಾದರೆ ಎಂಟು ಗಣಗಳು ಮುಗಿಯುವಷ್ಟರಲ್ಲಿ ಒಟ್ಟು ೨೪ ಮಾತ್ರೆ ಸರಿಹೋದರೂ ಮೊದಲಿನ ಶ್ರೀಕೃಷ್ಣಾಂಘ್ರಿ ಎನ್ನುವಲ್ಲಿ ಮೂರುಮೂರು ಮಾತ್ರೆ ಕಾಣುವುದಿಲ್ಲ. ಮೂರುಮಾತ್ರೆ ಬರಬೇಕಾದರೆ ಅದು ಒಂದು ಗುರು ಒಂದು ಲಘು ಅಥವಾ ಮೂರು ಲಘುಗಳು ಇರಬೇಕು. ಒಂದು ಲಘು ಒಂದು ಗುರು ಇದ್ದರೂ ಮೂರು ಮಾತ್ರೆ ಆಗುತ್ತದೆ ಆದರೂ ಅಂತಹ ಪ್ರಯೋಗ ಇದರಲ್ಲಿ ಇಲ್ಲ. ಈ ರಗಳೆಯೆಲ್ಲ ತತ್ಸಮಪದಭೂಯಿಷ್ಠವಾಗಿದೆ. ಚೂರ್ಣಿಕೆಯ ನಾಲ್ಕನೆಯ ಸಾಲಿನಲ್ಲಿ ಬರುವ "ನಿಮ್ಮ ನಾಂ ಪೊಗಳ್ವೆ", ಪ್ರತಿಪಾದದ ಕಡೆಯಲ್ಲಿ ಬರುವ 'ಶರಣು ಬಸವ' ಮತ್ತು ಕಡೆಯಲ್ಲಿರುವ ಒಂದು ಕಂದಪದ್ಯ ಕನ್ನಡದಲ್ಲಿವೆ. ಮಿಕ್ಕೆಲ್ಲಭಾಗ ತತ್ಸಮವೇ. ಕಡೆಯಲ್ಲಿರುವ ಕಂದಪದ್ಯದಲ್ಲಿನ "ಶರಣಸ್ತವಕಲ್ಪಕುಜಾಂ/ಕುರಪದಶಾಖಾಭಿಜಾತ-ನವಕುಸುಮಾಪ್ಪೋ/ ತ್ತರಶತನಾಮಂಗಳ ಬಸ/ ವರನಂಗರ್ಪಿಸಿದ ಪಾಲ್ಕು-ರಿಕಿ ಸೋಮಾಂಕಂ" ಎನ್ನುವ ಪ್ರಯೋಗದಲ್ಲಿ ಅರ್ಪಿಸಿದನ್, ಎಂದು ಇರಬೇಕಾಗಿತ್ತು. ಈ ಪದ್ಯ ಮಹಾಪಂಡಿತನಾದ ಸೋಮನಾಥನದು ಎಂದು ಎನಿಸುವುದಿಲ್ಲ. ರಗಳೆ ಕನ್ನಡದಲ್ಲಿ ರಚಿಸಿದ್ದರೂ ಅದರಲ್ಲಿ ತೆಲುಗಿನ ಲಕ್ಷಣವಾದ ವಡಿಯನ್ನು ತಂದ ಸೋಮನಾಥನು ಈ ಕಂದಪದ್ಯದಲ್ಲಿ ಅದರಂತೆ ವಡಿಯನ್ನು ಕೂಡಿಸಿಲ್ಲ ಎನ್ನುವುದು ಗಮನಾರ್ಹ.

ಸೋಮನಾಥ ಸ್ತವ– ಇದು ತೆಲುಗಿನ ರಚನೆ. ದ್ವಿಪದ ಛಂದಸ್ಸಿನಲ್ಲಿದೆ. ವಡಿಯನ್ನು ಬಳಸಲಾಗಿದೆ. "ವರುಸಗಾ ನಖಿಲಂಬು ನರಸಿ ರಕ್ಷಿಂಚು" "ಗುರುಚರೇಶ್ವರುಡವ್ವೈ ಧರಣಿಕಿ ವಚ್ಚಿ" ಮುಂತಾದ ಕಡೆಗಳಲ್ಲಿ ಪ್ರಾಸಯತಿಯನ್ನು ತರಲಾಗಿದೆ.

'ಬಸವಣ್ಣ ಮುಂತಾದ ಭಕ್ತರಿಗೆಲ್ಲ, ಆಣತಿ ನೀಡಿ ನಿನ್ನ ಪದವಿಗೆ ಪಾತ್ರರನ್ನಾಗಿ ಮಾಡಿ, ಭವವನ್ನು ತೊಲಗಿಸಿದೆ' ಎನ್ನುವ ಮಾತಿನಿಂದ ಇದರಲ್ಲಿ ಶಿವಾದ್ವೈತ ಪ್ರತಿಪಾದಿತವೆಂದು ಸ್ಪಷ್ಟವಾಗುತ್ತದೆ. ಪ್ರಸಿದ್ಧರಾದ ಸೂರಸಾನಮ್ಮ ಮೊದಲಾದ ಭಕ್ತರನ್ನು ಶಿವನು ರಕ್ಷಿಸಿದ ಕಥೆಗಳೆಲ್ಲ ಇಲ್ಲಿ ಸ್ಮರಿಸಲ್ಪಟ್ಟಿವೆ. ಶಿವ ಮಹಿಮೆ ಮತ್ತು ಶಿವನ ಸರ್ವೋತ್ತಮತ್ವಗಳನ್ನು ವೇದೋಕ್ತಿಗಳಿಂದ ನಿರೂಪಿಸಲಾಗಿದೆ. ಬ್ರಹ್ಮ ವಿಷ್ಣುಗಳನ್ನು ಎರಡು ಭುಜಗಳಿಂದ ಸೃಷ್ಟಿಸಿದ ಶಿವಮಹಿಮೆಯನ್ನು ಹೇಳಿದೆ. ಸ್ಕಾಂದ, ಶಿವಪುರಾಣಾದಿಗಳಲ್ಲಿ ಬರುವ ಕಥೆಗಳನ್ನೂ ಇಲ್ಲಿ ಸ್ಮರಿಸಲಾಗಿವೆ. ಶಿವನನ್ನು ಅರಿಯದೆ ಸಂಸಾರಮಗ್ನರಾದ, ಅಜ್ಞಾನದ ಕತ್ತಲಲ್ಲಿ ಶಿವನನ್ನು ಮರೆತ, ವ್ಯಸನ ಗುಣದಿಂದ ವ್ಯರ್ಥರಾದ, ಸ್ತ್ರೀಲೋಲರಾದ, ಮಲಯುತರಾಗಿ, ಮಮತೆಗಳಲ್ಲಿ ಬಿದ್ದ, ಕಾಮಾದಿ ದಿರ್ಗುಣಕಲಿತರಾದ ಹುಟ್ಟು ಸಾವುಗಳಿಗೆ ಸಿಕ್ಕಿದ, ಶಿವರಹಸ್ಯಗಳನ್ನು ಕೇಳಿ ತಿಳಿಯದ,

ಶಿವಭಕ್ತರು ಉಂಡಲ್ಲಿ ಪ್ರಸಾದ ಸ್ವೀಕರಿಸದ, ಅವರ ಪಾದಧೂಳಿಧರಿಸದ, ಅವರ ಪಾದರಕ್ಷೆಗಳನ್ನು ಶಿರದಲ್ಲಿ ಧರಿಸದ, ಜನರ ದೋಷಗಳನ್ನು ತನ್ನಮೇಲೆ ಆಪಾದಿಸಿಕೊಂಡು ಕವಿ ಮರುಗುತ್ತಾನೆ. ನಿನ್ನ ಭಕ್ತರು ಕಾಲಿಡುವ ಶಿಲೆಯಾಗಿಯಾದರೂ ನನ್ನನ್ನು ಹುಟ್ಟಿಸು ಎಂದು ಪ್ರಾರ್ಥಿಸುತ್ತಾನೆ. ಭಕ್ತರ ಮನೆಯಲ್ಲಿ ನಾಯಿಯಾಗಿಯಾದರೂ ಹುಟ್ಟಿಸು ಎಂದು ಕೇಳಿಕೊಳ್ಳುತ್ತಾನೆ. ಇಷ್ಟು ಸಾಕು ನನಗೆ ಮೋಕ್ಷದ ಚಿಂತೆಯೇಕೆ ಎಂದು ಕೇಳುತ್ತಾನೆ. ತನ್ನ ಇಷ್ಟಲಿಂಗವೇ ತನ್ನ ಪತಿಯೆಂದು, ತಾನು ಸತಿಯೆಂದು ಭಾವಿಸುವವರ ನಡುವೆ ನನ್ನನ್ನು ಇಡು ಎಂದು ಕೇಳುತ್ತಾನೆ. ನನ್ನನ್ನು ಬೈದವರೂ ದೀವಿಸಿದವರೂ ಒಂದೇ ಎನ್ನುವ ಭಾವವನ್ನು ನೀಡು ಎಂದು ಕೇಳುವುದು ಅತ್ಯಂತ ಸ್ವಾರಸ್ಯ. ವೀರಶೈವರಿಗೆ ನಿತ್ಯಪಠನೀಯವಾದ ಸ್ತೋತ್ರ ಇದು. ನಿರ್ಮಲನಾದ ಭಕ್ತನು ಏನು ಬಯಸಬೇಕು ಎನ್ನುವುದನ್ನು ಸೋಮನಾಥನು ಈ ಸ್ತೋತ್ರದ ಮೂಲಕ ತಿಳಿಸಿದ್ದಾನೆ.

ಇದರಲ್ಲಿ ಬರುವ "ಗುರುನಾಥ ಶ್ರೀ ಪಾಲಕುರಿಕಿ ಸೋಮೇಶ!" "ಪರಮ ಪರುಂಡು ಪಾಲಕುರಿಕಿ ನಿಲಯುಂಡು" ಎನ್ನುವ ಶಬ್ದಗಳ ಕಾರಣದಿಂದ ಇದನ್ನು ಸೋಮನಾಥನು ಅಲ್ಲದೆ ಬೇರೆ ಯಾರೋ ಅವರ ಶಿಷ್ಯರು ಸೋಮನಾಥನನ್ನು ಕುರಿತು ಬರೆದಿರಬಹುದೆಂದು ಕೆಲವರು ಊಹಿಸಿದ್ದಾರೆ. ಆದರೆ ಇದರಲ್ಲೇ ಬರುವ ಶ್ರೀಕಂಠ, ಶ್ರೀಕಾಶಿಕಾನಾಥ! ವಿಶ್ವನಾಥ! ಪರಮೇಶ! ಗೌರೀಶ! ಭರ್ಗ! ಇತ್ಯಾದಿ ಸಂಬೋಧನೆಗಳು ಇದು ಪಾಲಕುರಿಕಿಯಲ್ಲಿನ ಸೋಮೇಶ್ವರನನ್ನು ಕುರಿತು ಹೇಳಿದ ಸ್ತೋತ್ರ ಎಂದು ಸ್ಪಷ್ಟವಾಗಿ ನಿರೂಪಿಸುತ್ತವೆ.

ಚತುರ್ವೇದಸಾರ– ಇದು ಸೀಸಪದ್ಯಗಳ ತೆಲುಗು ಕೃತಿ. ಸಂಶೋಧಕರು ಗುರ್ತಿಸಿದ ಪದ್ಯಗಳ ಸಂಖ್ಯೆಯಲ್ಲಿ ಭೇದವಿದೆ. ಪದ್ಯಗಳ ಅಂತ್ಯದಲ್ಲಿ ಬಸವ ಸಂಬೋಧನೆ ಇರುತ್ತದೆ. ಪಂಡಿತಾರಾಧ್ಯ ಚರಿತ್ರೆಯ ಅವತಾರಿಕೆಯಲ್ಲಿ ಶಿವನು ಸೋಮನಾಥನನ್ನು ಕುರಿತು 'ಹಿಂದೆ ವರವೀರಬಭಕ್ತಿವೈದಿಕವಾಗಿ ನೀನು ಚರುರ್ವೇದಸಾರವನ್ನು ರಚಿಸಿದ್ದೀಯಾ. ಬಸವಣ್ಣನ ಮಹಿಮೆಯನ್ನು ಶುಂಭದ್ಭಕ್ತಿಯಿಂದ ಪ್ರಕಟಿಸಿದ್ದೀಯಾ" ಎಂದು ಈ ಕೃತಿಯನ್ನು ಕುರಿತು ಪ್ರಶಂಸೆ ಮಾಡಿದಂತೆ ಹೇಳಲಾಗಿದೆ. ಇದು ಶಿವಪಾರಮ್ಯವನ್ನು ಅಚ್ಚುಕಟ್ಟಾಗಿ ಪ್ರತಿಪಾದಿಸುವ ಸುಂದರ ರಚನೆ. ಬಸವಲಿಂಗ ಎನ್ನುವ ಮಕುಟವಿರುವ ಈ ಗ್ರಂಥಕ್ಕೆ 'ಬಸವಲಿಂಗ ಶತಕ'ವೆಂದು ಸಹ ಮತ್ತೊಂದು ಹೆಸರಿದೆ. ತೆಲುಗಿನ ಆದಿಕವಿ ನನ್ನಯಭಟ್ಟಾರಕನು ವೇದವ್ಯಾಸರ ಮಹಾಭಾರತವನ್ನು ಕುರಿತು ಹೇಳುತ್ತಾ "ಧರ್ಮತತ್ತ್ವಜ್ಞರು ಧರ್ಮಶಾಸ್ತ್ರವೆಂದೂ, ಆಧ್ಯಾತ್ಮವಿದರು ಅಧ್ಯಾತ್ಮವೆಂದೂ, ನೀತಿಶಾಸ್ತ್ರವಿದರು ನೀತಿಶಾಸ್ತ್ರವೆಂದೂ, ಕವಿವೃಷಭರು ಮಹಾಕಾವ್ಯವೆಂದೂ, ಲಾಕ್ಷಣಿಕರು ಸರ್ವಲಕ್ಷಣ ಸಂಗ್ರಹವೆಂದೂ, ಇತಿಹಾಸಕಾರರು ಇತಿಹಾಸವೆಂದೂ, ಪರಮಪೌರಾಣಿಕರು

ಬಹುಪುರಾಣಸಮುಚ್ಚಯವೆಂದೂ ಹೊಗಳುವಂತೆ ವೇದವ್ಯಾಸರು ಮಹಾಭಾರತವನ್ನು ರಚಿಸಿದ್ದಾರೆ" ಎಂದು ಹೇಳುತ್ತಾನೆ. ಅದರಂತೆ ಸೋಮನಾಥನು ಸಹ ಈ ಗ್ರಂಥವನ್ನು ಕುರಿತು "ವೈದಿಕರು ಶುದ್ಧವೈದಿಕವೆಂದೂ, ಶಾಸ್ತ್ರಜ್ಞರು ಧರ್ಮಶಾಸ್ತ್ರವೆಂದೂ, ತಾರ್ಕಿಕರು ಮಹಾತರ್ಕವೆಂದೂ, ಪೌರಾಣಿಕರು ಇದೇ ಪುರಾಣವೆಂದೂ, ಆಗಮವಿದರು ಇದು ದಿವ್ಯಾಗಮವೆಂದೂ, ತಂತ್ರಜ್ಞರು ವೀರತಂತ್ರವೆಂದೂ, ಭಕ್ತಸಮೂಹ ಭಕ್ತಿಯ ಮಾರ್ಗವೆಂದೂ, ಮುಮುಕ್ಷುಗಳು ಇದು ಮಹಾಕ್ತಿಯನ್ನು ನೀಡುವುದೆಂದೂ, ಕವಿಗಳು ಇದೇ ಕಾವ್ಯವೆಂದೂ, ನುಡಿಯುವ ರೀತಿಯಲ್ಲಿ ಸಜ್ಜನರಿಗೆಲ್ಲ ಸಂತೋಷವಾಗುವಂತೆ ಚತುರ್ವೇದ ಸಾರವನ್ನು ರಚಿಸುತ್ತೇನೆ" ಎಂದು ಹೇಳಿದ್ದಾನೆ. ಆಂಧ್ರದೇಶದಲ್ಲಿ ಎಲ್ಲರಿಗೂ ಪರಿಚಿತವಾದ ಎಲ್ಲರ ನಾಲಗೆಗಳಮೇಲೆ ನಲಿಯುವ "ಮಂದಾರ ಮಕರಂದ ಮಾಧುರ್ಯ ಮುನ ದೇಲು ಮಧುಪಂಬು ವೋವುನೇ ಮದನಮುಲಕು" ಎನ್ನುವ ಪೋತನಾಮಾತ್ಯನ ಭಾಗವತದ ಪ್ರಹ್ಲಾದ ಚರಿತ್ರೆಯ ಪದ್ಯಕ್ಕೆ ಮೂಲ ಸೋಮನಾಥನ ಈ ಗ್ರಂಥದ "ರಾಕಾಮಲಜ್ಯೋತ್ಸ್ನ ದ್ರಾವ ನಿಚ್ಚಲು ಗನ್ನ/ ನಾ ಚಕೋರಂಬುಲ ಕರುಚಿಯಗುನೆ" ಪದ್ಯ (ಪ.೧೫೫). "ಈ ಕೃತಿಯನ್ನು ರಚಿಸಿ ಈ ಲೋಕದಲ್ಲಿ ಈಶ್ವರಾಧಿಕ್ಯವನ್ನು ಪ್ರತಿಷ್ಠಿಸುತ್ತೇನೆ. ಜಂಗಮ ಪಾತ್ರಮಹಿಮೆಯನ್ನು ಸಂಪಾದಿಸುತ್ತೇನೆ. ಪ್ರಸಾದ ಸಂಸೇವನೆಯನ್ನು ಸ್ಥಿರಗೊಳಿಸುತ್ತೇನೆ. ಪಟುತರ ಭಕ್ತಿಮಹಿಮೆಯನ್ನು ಪ್ರತಿಪಾದಿಸುತ್ತೇನೆ" ಎಂದು ಚತುರ್ವೇದಸಾರದ ರಚನೋದ್ದೇಶವನ್ನು ಸೋಮನಾಥನೇ ಸ್ಪಷ್ಟಪಡಿಸಿದ್ದಾನೆ. ಪಂಡಿತಾರಾಧ್ಯ ಚರಿತ್ರೆ, ಸೋಮನಾಥ ಭಾಷ್ಯಗಳಲ್ಲಿ ಹೇಳಿರುವ ಉಕ್ತಿಗಳೂ, ಉದಾಹರಿಸಲಾದ ಶ್ರುತಿಸ್ಮೃತಿ ಪುರಾಣಾದಿಗಳೂ ಇದರಲ್ಲಿ ಸೀಸಪದ್ಯಗಳ ರೂಪದಲ್ಲಿ ಕಾಣುತ್ತವೆ.

ಚೆನ್ನಮಲ್ಲು ಸೀಸಪದ್ಯಗಳು– ಹೆಸರಿನಲ್ಲೇ ಇದ್ದಂತೆ ಇವು ತೆಲುಗು ಭಾಷೆಯಲ್ಲಿರುವ ಸೀಸಪದ್ಯಗಳು. ಒಟ್ಟು ೩೭ ಪದ್ಯಗಳಿವೆ. ೩೨ ಪದ್ಯಗಳು ಸೋಮನಾಥನು ರಚಿಸಿದವು. ನಂತರದ ಪದ್ಯಗಳು ಪ್ರಕ್ಷಿಪ್ತಪದ್ಯಗಳೆಂದು ಪಂಡಿತರು ಗುರ್ತಿಸಿದ್ದಾರೆ. ೩೨ ಪದ್ಯಗಳ ಆದಿಯಲ್ಲಿರುವ ಶಬ್ದಗಳನ್ನು ಬಳಸಿ ೩೩ನೆಯ ಪದ್ಯ ರಚಿಸಲಾಗಿದೆ. ಷಟ್ಸ್ಥಳಗಳನ್ನು ಕುರಿತು ಹೇಳುವ ಈ ಪದ್ಯಗಳಲ್ಲಿ ಯಾವಯಾವ ವಿಭಾಗದಲ್ಲಿ ಎಷ್ಟು ಪದ್ಯಗಳಿವೆ ಎಂದು ತಿಳಿಸುವುದು ೩೪ನೆಯ ಸೀಸಪದ್ಯ. ಇನ್ನು ೩೫ನೆಯ ಪದ್ಯದಲ್ಲಿ ಸಾಲಾಗಿ ಆರುಸ್ಥಳಗಳಲ್ಲಿ ಬರುವ ಪದ್ಯಗಳ ಸಂಖ್ಯೆಯನ್ನು ಮಾತ್ರಹೇಳಿ, ಭಕ್ತಾದಿ ಷಟ್ಸ್ಥಳ ಶೋಭಿಸುವಂತೆ ಚೆನ್ನಮಲ್ಲು ಸೀಸಗಳು ಬೆಳಗುತ್ತಿವೆ ಎಂದು ಹೇಳಿದೆ. ೩೬ನೆಯ ಪದ್ಯ ಸೋಮನಾಥನ ಕರ್ತೃತ್ವವನ್ನು ೩೭ನೆಯ ಪದ್ಯ ಫಲಶೃತಿಯನ್ನು ಹೇಳುತ್ತಿವೆ. ಈ ಪದ್ಯಗಳಲ್ಲಿನ 'ಚೆನಮಲು' 'ಚೆನ್ನಮಲು' 'ಚೆನಮಲ್ಲೇಶ್ವರು' ಇತ್ಯಾದಿ ಪದಪ್ರಯೋಗದಿಂದಲೂ

ಪದ್ಯಗಳ ಶೈಲಿಯ ಗಾಂಭೀರ್ಯತೆಯ ದೃಷ್ಟಿಯಿಂದಲೂ ನೋಡಿದರೆ ಇವು ಸೋಮನಾಥನ ಪದ್ಯಗಳು ಎನಿಸುವುದಿಲ್ಲ. ಸೋಮನಾಥನ ಮೇಲಿನ ಅಭಿಮಾನದಿಂದ ಯಾರೊ ನಂತರ ಕಾಲದಲ್ಲಿ ಇವುಗಳನ್ನು ಸೇರಿಸಿರಬೇಕು.

"ಗುರುಲಿಂಗ ಕೃಪೆಯಿಂದ ಜಂಗಮಪಾದಸೇವೆ, ಜಂಗಮಲಿಂಗ ಪ್ರಸನ್ನತೆಯಿಂದ ಪ್ರಸಾದಸುಖ, ಆ ಪ್ರಸಾದಬೋಧಸ್ಥೈರ್ಯದಿಂದ ಸರ್ವಾಂಗಪ್ರಕಾಶ ಭಕ್ತಿ, ಅದರ ಅನುಭವದಿಂದ ಜೀವನ್ಮುಕ್ತಿಯನ್ನು ಕಂಡಿದ್ದೇನೆ. ಇನ್ನು ನನಗೇನು ಕೊರತೆ? ನಿನ್ನಲ್ಲಿ ಆಶೆಪಡುವುದೇನಿದೆ? ಹಾಡಿ, ಆಡಿ, ದೈನ್ಯತೆ ಹೊಂದಿ ಭಜಿಸಿ, ಮೆಚ್ಚಿ ಹೊಗಳಿದರೆ ಇದಕ್ಕಿಂತ ಹೆಚ್ಚಾಗಿ ಹೊಂದುವ ಫಲವೇನಿದೆ?" ಎಂದು ಗಡಸುತನದಿಂದ ಕೇಳುತ್ತಾನೆ ಸೋಮನಾಥ. ಇಲ್ಲಿನ ವ್ಯಾಜನಿಂದಾತ್ಮಕವಾದ ಪದ್ಯಗಳು ಅತ್ಯಂತ ಸ್ವಾರಸ್ಯವಾಗಿವೆ. "ಅಖಿಲ ಪ್ರಮಥರಿಗೆ ನೀನು ರಾಯನಂತೆ, ಹಿಂದೆ ನೀನಿರುವ ಸ್ಥಳವನ್ನು ಅರಿತವನಾವನು? ನನ್ನನ್ನು ರಕ್ಷಿಸುವ ಭಕ್ತರಕ್ಷಕನೆಂದಲ್ಲದೆ ನಿನ್ನ ಘನತೆಯನ್ನು ಅರಿತವನಾವನು? ತಿಳಿಸು ಗುರುದೇವಾ ಎನ್ನಬೇಕಲ್ಲದೆ ನಿನ್ನ ಹೆಸರು ತಿಳಿದವನಾವನು? ಚರಲಿಂಗವೆಂದಲ್ಲದೆ ಇಂಥವನೆಂದು ನಿನ್ನನ್ನು ಅರಿತವನಾವನು? ಅವರ ನಗರಗಳಲ್ಲಿನ ಸೇವಕನಾದ ನಾನಿದ್ದೇನೆ ಆದಕಾರಣ ನಿನಗೆ ಆಸರೆ ದೊರೆಯಿತು. ಬೇರೆ ಯಾರೂ ಈರೀತಿ ತಿಳಿಯರು. ಹೀಗಿದ್ದರೂ ನನ್ನನ್ನು ದೊಡ್ಡವನನ್ನಾಗಿ ಏಕೆ ಮಾಡದಿರುವಿ?" (ಪ.೨) ಎಂದು ಕೇಳುತ್ತಾನೆ ಸೋಮನಾಥ.

"ನಿನ್ನನ್ನು ಕಾಲಿಂದ ಒದ್ದರೂ ಭರಿಸುತ್ತೀಯಿ. ನಾನು ಅಡಿಗಳಿಗೆರಗಿದರೂ ಮೇಲಕ್ಕೆ ಎತ್ತುವುದಿಲ್ಲ. ಈ ಪಕ್ಷಪಾತ ಸರಿಯೇ? ಕಲ್ಲುಗಳಿಂದ ಅರ್ಚಿಸಿದರೂ ಸ್ವೀಕರಿಸುವೆ. ನಾನು ಒಳ್ಳೆಯ ಹೂವುಗಳಿಂದ ಪೂಜಿಸಿದರೂ ಗ್ರಹಿಸುವುದಿಲ್ಲ ಇದು ಸರಿಯೇ? ಪ್ರಸಾದವನ್ನಾದರೂ ಕೋರಿ ಸ್ವೀಕರಿಸುವೆ. ನಾನು ಮುಟ್ಟದೆ ಅರ್ಪಿಸಿದರೂ ಸ್ವೀಕರಿಸುತ್ತಾ ಇಲ್ಲ. ಇಂತಹ ಕೀಳು ಭಾವವೇಕೆ? ಪರಿಹಾಸದ ಕಾವ್ಯಗಳನ್ನೂ ಮೆಚ್ಚಿಕೊಳ್ಳುವೆ. ನಾನು ಸಂಸ್ತುತಿ ಮಾಡಿದರೂ ಕೇಳೀಕೇಳದಿರುವೆ. ಈ ಅವಿವೇಕ ಒಪ್ಪುವುದೇ? ಅವರು ನಡೆದಂತೆ ನಾನು ನಡೆಯಬಹುದೇ? ನೀನಿಟ್ಟಂತೆ ಇರುತ್ತೇನೆ. ನನ್ನ ಗುಣವಿಶೇಷ ನಿನಗೆ ಲೆಕ್ಕದಲ್ಲಿದೆಯೇ" (ಪದ್ಯ, ೩)ಎಂದು ಕೇಳುತ್ತಾನೆ ಸೋಮನಾಥ.

ತೋರಿಕೆಯ ಭಕ್ತಿಯನ್ನು ಸೋಮನಾಥನು ಒಪ್ಪುವುದಿಲ್ಲ. ಕೈಯಾರೆ, ಮೈಯಾರೆ, ಕಣ್ಣಾರೆ ಬಾಯಾರೆ ಭಗವಂತನನ್ನು ಸೇವಿಸಿ, ಕಂಡು, ನುತಿಸಿ ಬಯಸಿ ಭಕ್ತಿಮಾಡಬೇಕು. ಇದನ್ನೇ "ನಿನ್ನ ಭಕ್ತರನ್ನು ಕಾಣುವಾಗ ಮೈಯೆಲ್ಲ ಕಣ್ಣಾಗಿರಬೇಕು. ಕೀರ್ತಿಸುವಾಗ ಮೈಯೆಲ್ಲ ನಾಲಿಗೆಯಾಗಿರಬೇಕು. ಪಾದಸೇವೆ ಮಾಡುವಾಗ ಮೈಯೆಲ್ಲ ಕೈಯಾಗಿರಬೇಕು.

ಅವರ ಮಾಹಾತ್ಮ್ಯಕೇಳುವಾಗ ಮೈಯೆಲ್ಲ ಕಿವಿಯಾಗಿರಬೇಕು. ಪ್ರಸಾದ ಸ್ವೀಕರಿಸುವಾಗ ಮೈಯೆಲ್ಲ ಬಾಯಾಗಿರಬೇಕು. ಅಂಥಹ ಭಕ್ತಶ್ರೇಷ್ಠರಲ್ಲಿ ನನ್ನನ್ನು ಸೇರಿಸಿ ರಕ್ಷಿಸು" (ಪ.೧೦) ಎನ್ನುವ ಮಾತಿನಲ್ಲಿ ಸೋಮನಾಥನು ಬೇಡುತ್ತಾನೆ. "ಕರ್ಮಯೋಗವನ್ನು ತೊರೆದು, ಜ್ಞಾನಯೋಗವನ್ನು ತೃಣೀಕರಿಸಿ, ಧ್ಯಾನಯೋಗವನ್ನು ಆಶ್ರಯಿಸಿ, ಭಕ್ತಿಯೋಗವನ್ನು ಅವಲಂಬಿಸಿ ಪರಮಶಿವಯೋಗ ಸುಖಸುಧಾಶರಧಿಯನ್ನು ತನ್ನನ್ನು ಜಗತ್ತನ್ನು ಮರೆತು ಲಿಂಗದಂತೆ ಚರಿಸುವ ಲಿಂಗಲಿಂಗೇಕ್ಯರಲ್ಲಿ ನನ್ನನ್ನು ಸೇರಿಸು" ಎಂದು ಬೇಡುತ್ತಾನೆ ಸೋಮನಾಥ. ಮೋಕ್ಷಸ್ಥಿತಿಯೇ ಇಲ್ಲಿ ಸೋಮನಾಥನು ಹೇಳಿರುವ ಲಿಂಗೇಕ್ಯ. ಲಿಂಗೈಕ್ಯ ಎನ್ನುವುದನ್ನುಇಂದು ಬೇರೆ ಅರ್ಥದಲ್ಲಿ ಪ್ರಯೊಗಿಸುವುದು ರೂಢಿಯಾಗಿದೆ.

ಷಟ್ಸ್ಥಳಗಳ ವಿವರಣೆ ಈ ಪದ್ಯಗಳಲ್ಲಿ ಚನ್ನಾಗಿ ಮೂಡಿಬಂದಿದೆ. ಮೋಕ್ಷಮಾರ್ಗದಲ್ಲಿ ಆರು ಮೆಟ್ಟಿಲುಗಳನ್ನು ಹತ್ತಿದ ಸೊಮನಾಥನ ಅನುಭವ ಈ ಪದ್ಯಗಳಲ್ಲಿ ಎದ್ದು ಕಾಣುತ್ತದೆ.

ವೃಷಾಧಿಪ ಶತಕ– ಇದು ತೆಲುಗು ರಚನೆ. ಉತ್ಪಲಮಾಲ, ಚಂಪಕಮಾಲ ಛಂದಸ್ಸಿನಲ್ಲಿ ಪದ್ಯಗಳಿವೆ. ಒಟ್ಟು ೧೦೮ ಪದ್ಯಗಳಿವೆ. ಕವಿತಾರಚನಾಭ್ಯಾಸಿಗಳಿಗೆ ಇದು ಅತ್ಯಂತ ಸೂಕ್ತವಾದ ಕೃತಿ. ಬಸವಮಹಿಮಾವರ್ಣನಾತ್ಮಕವಾದ ಶತಕ ಇದು. ಬಸವಣ್ಣನವರ ಮಹಿಮೆಗೆ ಸಂಬಂಧಿಸಿದ ಅನೇಕ ಕಥೆಗಳನ್ನು ಇಲ್ಲಿ ಸ್ಮರಿಸಲಾಗಿವೆ. ಪದ್ಯವೆಲ್ಲ ಬಸವ ಸಂಬೋಧನೆಯೇ ಇದ್ದರೂ ಪದ್ಯದ ಕಡೆಯಲ್ಲಿ ಒಂದಲ್ಲ ಎರಡಲ್ಲ ಮೂರುಬಾರಿ ಬಸವಾ ಬಸವಾ ಬಸವಾ ಎಂದರೂ ಸೋಮನಾಥನಿಗೆ ತಣಿವು ಇಲ್ಲ ಮತ್ತೆ ವೃಷಾಧಿಪಾಯೆಂದು ಸಂತೋಷಪಡುತ್ತಾನೆ. ೧೦೭ನೆಯ ಪದ್ಯದಲ್ಲಿ 'ಬಸವಡು ಪ್ರೀತಿ ಗೈಕೊನಿಯೆ ಭಕ್ತಿಮೆಯಿನ್ ರಚಿಯಿಂಚಿನಾಡನೇ/ ಬಸವಪುರಾಣಮಂಚು ಮುನು ಪ್ರಸ್ತುತಿಸೇಯುದುರು...' ಹಿಂದೆ ನಾನು ಭಕ್ತಿಯಿಂದ ರಚಿಸಿದೆನು. ಬಸವನು ಪ್ರೀತಿಯಿಂದ ಸ್ವೀಕರಿಸಿದನು. ಅದನ್ನು ಜನರು ಬಸವಪುರಾಣವೆಂದು ಪ್ರಸ್ತುತಿ ಮಾಡುತ್ತಾರೆ ಎಂದು ಹೇಳಿರುವುದರಿಂದ ಹಾಗೂ ಮಲ್ಲಿಕಾರ್ಜುನ ಪಂಡಿತರು ಕಣ್ಣು ಕಿತ್ತು ನೀಡಿ ಶಿವನಿಂದ ಕಣ್ಣು ಪಡೆದ ಕಥೆಯನ್ನೂ, ಬಸವಣ್ಣನರನ್ನು ಕುರಿತು ಪ್ರಸ್ತುತಿ ಮಾಡಿದ ಸಂಗತಿಯನ್ನು ಇಲ್ಲಿ ಸ್ಮರಿಸಿರುವುದರಿಂದ ಈ ಶತಕವನ್ನು ಸೋಮನಾಥನು ಬಸವಪುರಾಣ, ಪಂಡಿತಾರಾಧ್ಯಚರಿತ್ರೆಗಳನ್ನು ರಚಿಸಿದ ನಂತರಕಾಲದಲ್ಲಿಯೇ ರಚಿಸಿದನು ಎನ್ನುವುದು ಸ್ಪಷ್ಟ

ಸೋಮನಾಥನ ನಾನಾ ಭಾಷಾ ಪರಿಚಯವೂ ಇದರಲ್ಲಿ ಸ್ಪಷ್ಟವಾಗುತ್ತದೆ. ನಾಲ್ಕು ಪದ್ಯಗಳಲ್ಲಿ ಸಂಸ್ಕೃತ ಭಾಷೆ ಬಳಸಿದ್ದಾನೆ. ಸಂಸ್ಕೃತಭಾಷೆಯಲ್ಲಿ ನುತಿಸುತ್ತೇನೆ ಎನ್ನುವ

ಮಾತನ್ನು ಮಾತ್ರ ತೆಲುಗಿನಲ್ಲಿ ಹೇಳುತ್ತಾನೆ. 'ಪರಮನೆ ಯನ್ನೆ ಯಾಂಡವನೆ' ಎನ್ನುವ ಪದ್ಯ ತಮಿಳುವಾಕ್ಯಗಳಿಂದ ಕೂಡಿದೆ. ".....ಎಂದು ದ್ರಾವಿಡ ಭಾಷೆಯಲ್ಲಿ ನುತಿಸುತ್ತೇನೆ" ಎನ್ನುವ ಮಾತನ್ನು ತೆಲುಗಿನಲ್ಲಿ ಹೇಳುವುದರ ಮೂಲಕ ಪದ್ಯವನ್ನು ತೆಲುಗಿಗೆ ಮರಳಿಸುತ್ತಾನೆ. ಇಂಥದ್ದೇ 'ಹಸುಳೆಯ ರನ್ನ' ಇತ್ಯಾದಿಯಾದ ಕನ್ನಡ ಪದ್ಯ 'ಅನಯಮು ಜೇತುಲಂದು' ಎನ್ನುವ ಪದ್ಯ ತೆಲುಗು ಸಂಸ್ಕೃತಭಾಷೆಗಳ ಮಿಶ್ರವಾದ ಮಣಿಪ್ರವಾಳ ಶೈಲಿಗೆ ಸಂಬಂಧಿಸಿದ್ದು. ಇದೇ ಸಂದರ್ಭದಲ್ಲಿ 'ವಾಗ್ದೇಯ ಮಣಿಪ್ರವಾಳ', 'ಗೂಢ ಮಣಿಪ್ರವಾಳ' ಎನ್ನುವ ಭೇದಗಳನ್ನು ಸಹ ಸೋಮನಾಥನು ಹೇಳಿದ್ದಾನೆ. 'ದೇವ ಪರೀತುಹೇಚಿ' ಇತ್ಯಾದಿಯಾದ ಪದ್ಯ ಮರಾಠೀ ಭಾಷೆಗೆ ಸಂಬಂಧಿಸಿದ್ದು.

ತಿರುಪದಿ ನೆಮ್ಮನಂಬುನನು ನೇ ಹೃದಯೇಶ್ವರ ಕಿಂಪರಾಯ ತಾಂ
ಬರಿ ಕರಿತಂಬು ರಾಣೆ ನಿನು ಬಾಹಿರಿ ಬೋಲುಟ ಶಾಸಿತಾಹತಾ
ವರದ ನೆಗಿಲ್ಲೆ ಯಂಚು ನಿನು ಪ್ರಸ್ತುತಿ ಸೇಯುದು ಬೆಕ್ಕುಭಾವಲನ್
ವರದ ವಿವೇಕಶೀಲ ಬಸವಾ ಬಸವಾ ಬಸವಾ ವೃಷಾಧಿಪಾ

ಎಂದು ಸೋಮನಾಥನು ಬಹುಭಾಷಾತ್ಮಕವಾದ ಪದ್ಯದಿಂದಲೂ ಸ್ತುತಿ ಮಾಡಿದ್ದಾನೆ. ಪದ್ಯಗಳ ಧಾರೆ, ಶಯ್ಯಾ ಸೌಭಾಗ್ಯ, ಸುಲಲಿತವಾದ ಶೈಲಿ ಈ ಶತಕಕ್ಕೆ ಸಹಜಾಭರಣಗಳಾಗಿ ಶೋಭಿಸುತ್ತಿವೆ. ಪದ್ಯಗಳಲ್ಲಿನ ಅಂತ್ಯಾನುಪ್ರಾಸ ಶ್ರುತಿ ಸುಭಗತೆಯನ್ನು ಸೂಸುತ್ತಿದೆ.

ಸೊಮನಾಥ ಭಾಷ್ಯ- ಇದು ಸಂಸ್ಕೃತ ಗ್ರಂಥ. ಶೈವಮತೋತ್ಕರ್ಷವನ್ನು ನಿರೂಪಿಸುವಂಥದ್ದು. ಅನ್ಯವಾದ ಕೋಲಾಹಲ ಶತಕಕರ್ತೃ ಏಕಾಮ್ರನಾಥನು ಸೋಮನಾಥನನ್ನು ಸ್ಮರಿಸುತ್ತಾ ಬಸವರಾಜೀಯಾದಿ ಬಹುಕೃತಿಗಳನ್ನು ರಚಿಸಿದ್ದನ್ನು ಸ್ತುತಿಸಿರುವುದರಿಂದ, ಇದಕ್ಕೆ ಬಸವರಾಜೀಯ ಎನ್ನುವ ಹೇಸರು ಸಹ ಇದೆಯೆಂದು ತಿಳಿಯುತ್ತದೆ. ಇದಕ್ಕೆ ವೀರಮಾಹೇಶ್ವರ ಸಾರೋದ್ಧಾರ ಎನ್ನುವ ಹೆಸರು ಸಹ ಇದೆ. ಶೈವಾಗಮವಿದನಾದ ಮನೋಹರನು ಇದಕ್ಕೆ ಪ್ರಾಚೀನ ಶೈಲಿಯಲ್ಲಿ ಸರಳವಾದ ಟೀಕೆ ರಚಿಸಿದ್ದಾನೆ. ಇದರಲ್ಲಿ ೨೫ಪ್ರಕರಣಗಳು ಇವೆ. ಸಮಗ್ರಶೈವಸಂಪ್ರದಾಯದ ವಿವರಣೆ ಇದರಲ್ಲಿ ಇದೆ. ಇಲ್ಲಿನ ಅನೇಕ ಪ್ರಕರಣಗಳ ವಿಷಯ ಸೋಮನಾಥನ ಪಂಡಿತಾರಾಧ್ಯ ಚರಿತ್ರೆಯಲ್ಲಿ ಹೇಳಲಾಗಿದೆ. ಇದರಲ್ಲಿ ಹೇಳಿದ ವಿಭೂತಿ ಮಾಹಾತ್ಮ್ಯ, ರುದ್ರಾಲಕ್ಷ ಮಾಹಾತ್ಮ್ಯ, ಶಿವಲಿಂಗಧಾರಣ ಮಾಹಾತ್ಮ್ಯ, ಲಿಂಗಾರ್ಚನಾವಿಧಿ, ಲಿಂಗಾರ್ಚನಾ ಮಾಹಾತ್ಮ್ಯ, ದಕ್ಷಾಧ್ವರ ನಿರಸನ, ಶಿವಸ್ಯ ಸರ್ವದೇವತಾ ಜನಕತ್ವ ನಿರೂಪಣೆ, ಏಕಾತ್ಮವಾದ ಕರ್ಮವಾದಗಳ ನಿರಸನ ಇತ್ಯಾದಿ ಅನೇಕ ವಿಷಯ ಗಳು ಪಂಡಿತಾರಾಧ್ಯ ಚರಿತ್ರೆಯಲ್ಲಿಯೂ ಇವೆ. ಗಾಯತ್ರೀಮಂತ್ರವನ್ನು ಶಿವಪರವಾಗಿ ಇಲ್ಲಿ ನಿರೂಪಿಸಿದೆ. ವೈದಿಕಾಚಾರಗಳ ನಿರಸನೆಯಲ್ಲದೆ ಅದರ ಪ್ರಾಧಾನ್ಯ ಇಲ್ಲಿ ಹೇಳಲಾಗಿದೆ. ಶ್ರುತಿಸ್ಮೃತಿ ಪುರಾಣಗಳಲ್ಲಿನ

ಅನೇಕ ಶ್ಲೋಕಗಳು ಇದರಲ್ಲಿ ಉದ್ಧೃತವಾಗಿವೆ. ಹರದತ್ತಾಚಾರ್ಯರ ಚತುರ್ವೇದ ತಾತ್ಪರ್ಯಸಂಗ್ರಹದ ಅನೇಕ ಶ್ಲೋಕಗಳನ್ನು ಇದರಲ್ಲಿ ಕಾಣಬಹುದು. ಆಯಾವಿಷಯಗಳನ್ನು ಸಮರ್ಥವಾಗಿ ಸಮರ್ಥಿಸುವ ಸೋಮನಾಥನ ಪಾಂಡಿತ್ಯ ಇದರಲ್ಲಿ ಸ್ಪಷ್ಟವಾಗಿ ಪ್ರಕಟವಾಗುತ್ತದೆ.

ಅಷ್ಟೋತ್ತರ ಶತನಾಮಗದ್ಯ - ಇದರ ಆದಿಯಲ್ಲಿ ಒಂದು ಉತ್ಪಲಮಾಲ ಪದ್ಯ ಇದೆ. ಇದು ಸಂಸ್ಕೃತ ಆಗಬಹುದು ಕನ್ನಡ ಎಂದು ಸಹ ಭಾವಿಸಬಹುದು. ಪದ್ಯದ ಅಂತ್ಯದಲ್ಲಿ ಪಾಹಿಮಾಂ ಎಂದಿದೆ. ಪ್ರತಿಯೊಂದು ಪಾದದ ಅಂತ್ಯದಲ್ಲೂ ನಮಸ್ತೇ ಎಂದು ಇದೆ. ಇದರ ಗತಿ ಕನ್ನಡದ ಮಂದಾನಿಲ, ತೆಲುಗಿನ ಮಧುರಗತಿ ರಗಳೆಗಳಿಗೆ ಸರಿಹೋಗುವಂಥದ್ದು. ಸ್ತೋತ್ರದ ಕಡೆಯಲ್ಲಿ ಒಂದು ಕನ್ನಡ ಪದ್ಯ ಇದೆ. ಮೂರನೆಯ ಗಣದ ಅಂತ್ಯದಲ್ಲಿ ಅಂತ್ಯಾನುಪ್ರಾಸವಿದೆ. ಪ್ರಾಸನಿಯಮವಿದ್ದು ಕೆಲವು ಕಡೆ ವರ್ಗಾಕ್ಷರಗಳಲ್ಲಿ ಯಾವುದನ್ನಾದರೂ ಉಪಯೋಗಿಸುವ ಶಾಂತಪ್ರಾಸ ಉಪಯೋಗಿಸಲಾಗಿದೆ.

ಚೆನ್ನಬಸವ ರಗಳೆ– ಇದು ಕನ್ನಡದಲ್ಲಿರುವ ರಗಳೆ. ಮೂರು ಮಾತ್ರೆಗಳ ಎಂಟು ಗಣಗಳ ಒಟ್ಟು ಇಪ್ಪತ್ತನಾಲ್ಕು ಮಾತ್ರ ಇರುವ ನೂರ ಇಪ್ಪತ್ತು ಪಾದಗಳಿವೆ. ಕನ್ನಡದ ಉತ್ಸವ ರಗಳೆ, ತೆಲುಗಿನ ತುರಗವಲ್ಗನ ರಗಳೆಯಲ್ಲಿ ಈ ಪಾದಗಳಿವೆ. ಒಂದನೆಯ ಎರಡನೆಯ ಪಾದಗಳು ಮಾತ್ರ ಶ್ರೀಕಾರದಿಂದ ಪ್ರಾರಂಭವಾಗುತ್ತವೆ ಮಿಕ್ಕೆಲ್ಲ ಪಾದಗಳ ಮೊದಲಲ್ಲಿ ಬಸವ ಎಂದೂ ಕಡೆಯಲ್ಲಿ ಚೆನ್ನಬಸವಯೆಂದೂ ಇರುತ್ತದೆ. ಕುಮಾರಸ್ವಾಮಿಯ ಅವತಾರವೆಂದು ಹೇಳಲಾದ ಮತ್ತು ಬಸವೇಶ್ವರರ ಸೋದರಳಿಯನಾದ ಚೆಮ್ಮಬಸವಣ್ಣನನ್ನು ಸ್ತುತಿಸುವ ರಚನೆ ಇದು. ಮೊದಲಲ್ಲಿ ಒಂದು ಕಂದಪದ್ಯ, ಹಾಗೂ ಕಡೆಯಲ್ಲಿ ಎರಡು ಅಪೂರ್ಣ ಕಂದಪದ್ಯಗಳು ಇವೆ. ಪಿಡುಪರ್ತಿ ಸೋಮನನು ಹೇಳಿದ ಸೋಮನಾಥನ ರಚನೆಗಳಲ್ಲಿ ಇದರ ಹೆಸರು ಇಲ್ಲ.

ಬಸವ ಪಂಚರತ್ನ– ಇದು ತತ್ಸಮ ಸಮಾಸ ಭರಿತವಾದ ಮಾಲಿನಿ ವೃತ್ತ ರಚನೆ. ಬಸವಯ್ಯಾ ಎಂದು ಒಂದು ಕಡೆ ಬಂದಿದೆ. ಸಂಬೋಧನೆಗಳಿಗೆ ದೀರ್ಘ ಇದೆ. ಆದಕಾರಣ ಇದು ತೆಲುಗು ಆಗಬಹುದು ಕನ್ನಡವೂ ಆಗಬಹುದು. ಪೆದಾಂತದಲ್ಲಿ ಬರುವ ಸಂಬೋಧನೆಯ ದೀರ್ಘವನ್ನು ಹ್ರಸ್ವವಾಗಿ ಭಾವಿಸಿದರೂ ಪಾದಮಧ್ಯದಲ್ಲಿ ಇರುವ ದೀರ್ಘವನ್ನು ಹಾಗೆ ಊಹಿಸಲು ಸಾಧ್ಯವಿಲ್ಲ. ಕಡೆಯಲ್ಲಿ ಕೃತಿಕರ್ತೃವನ್ನು ಹೇಳುವ ಒಂದು ಸಂಸ್ಕೃತ ಶ್ಲೋಕ ಇದೆ.

ಇವಲ್ಲದೆ ಗುರುಭಕ್ತಿಮಹಿಮೆ, ಶಿವಪೂಜಾವಿಧಾನ, ಭಕ್ತಲಕ್ಷಣ, ಜಂಗಮಸೇವೆ, ಇಷ್ಟಲಿಂಗಾರ್ಪಣೆ, ಷಟ್ಸ್ಥಳವಿವರಣೆ ಮುಂತಾದ ಶೈವಧರ್ಮಗಳನ್ನು ವಿವರಿಸುವ

ಅನುಭವಸಾರ, ಗಂಗೋತ್ಪತ್ತಿ ರಗಳೆ, ಸದ್ಗುರು ರಗಳೆ, ಮಲ್ಲಮದೇವಿ ಪುರಾಣ, ಭಕ್ತಸ್ತವ, ಕನ್ನಡದಲ್ಲಿ ಸದ್ಗುರುರಗಳೆ, ಸಂಸ್ಕೃತ ಬಸವೋದಾಹರಣೆ, ತೆಲುಗಿನಲ್ಲಿ ಬಸವೋದಾಹರಣೆ, ರುದ್ರಭಾಷ್ಯ, ಬಸವಲಿಂಗ ನಾಮಾವಳಿ (ಕನ್ನಡ), ವಸಂತತಿಲಕ ವೃತ್ತದಲ್ಲಿ ವೃಷಭಾಷ್ಟಕ (ಸಂಸ್ಕೃತ), ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಗಳನ್ನು ಎಂಟು ಎಂಟು ಅನುಷ್ಟುಪ್ ಶ್ಲೋಕಗಳಲ್ಲಿ ಸ್ತುತಿಸುವ ತ್ರಿವಿಧ ಲಿಂಗಾಷ್ಟಕ (ಸಂಸ್ಕೃತ), ತೆಲುಗಿನಲ್ಲಿ ಮಲ್ಲಿಕಾರ್ಜುನ ಪಂಡಿತಾರಾಧ್ಯೋದಾಹರಣೆ, ಕನ್ನಡದಲ್ಲಿ ಷಟ್ಸ್ಥಳದ ರಗಳೆಗಳು ಇವೆ.

ಸಹಸ್ರಗಣಮಾಲಿಕಾಸ್ತೋತ್ರ, ರುದ್ರಗಣ ಸಂಕೀರ್ತನೆ, ಯೋಗಾಚಾರ್ಯ ಗಣಸಂಕೀರ್ತನೆ, ದಶಗಣಸಂಕೀರ್ತನೆ, ತ್ರಯೋದಶಗಣ ಸಂಕೀರ್ತನೆ, ಷೋಡಶಗಣ ಸಂಕೀರ್ತನೆ ಇವೆಲ್ಲ ಪಂಡತಾರಾಧ್ಯ ಚರಿತ್ರೆಯಲ್ಲಿ ಕಾಣುವ ಸ್ತೋತ್ರಗಳು.

ವೈದಿಕ ಸಂಪ್ರದಾಯದಲ್ಲಿ ಸಾಧಕರ ಸಾಧನೆಗೆ, ವೇದ ಉಪನಿಷದಾದಿಗಳನ್ನು ಮೊದಲುಗೊಂಡು ಸ್ತೋತ್ರಸಾಹಿತ್ಯದ ವರೆಗೆ ಹೇಗೆ ಅನುಕೂಲ ಸಾಧನ ಸಾಮಗ್ರಿ ಇದೆಯೋ ಅದರಂತೆ ವೀರಶೈವ ಸಂಪ್ರದಾಯಾನುಸಾರಿಗಳಿಗೂ ಪ್ರಾಂತೀಯ ಭಾಷೆಯಲ್ಲಿ ಸಾಮಾನ್ಯರಿಗೂ ಸಾಧನೆಗೆ ಅನುಕೂಲವಾಗುವ ರೀತಿಯಲ್ಲಿ ಸಾಹಿತ್ಯವನ್ನು ಸೃಷ್ಟಿಸಿ ನಿಡುವಲ್ಲಿ ಪಾಲ್ಕುಂಕಿ ಸೋಮನಾಥನು ಕೃತಕೃತ್ಯನಾಗಿದ್ದಾನೆ. ಅದಕ್ಕಾಗಿಯೇ ತನ್ನ ಇಡೀಜೀವನವನ್ನು ಮುಡುಪಾಗಿಸಿದ ಧನ್ಯಜೀವ ಸೋಮನಾಥನು. ತನಗೆ ಗೊತ್ತಿರುವ ಭಾಷೆಗಳಲ್ಲೆಲ್ಲ ಇಂತಹ ಸಾಹಿತ್ಯವನ್ನು ಸೃಷ್ಟಿಸಿದ ಮಹಾಸಾಹಸಿ, ಯಾರಿಗೂ ಹೆದರದ ಹಿಂಜರಿಯದ ಧೈರ್ಯಶಾಲಿ ಯಾರೊಬ್ಬರ ಸಹಾಯವನ್ನೂ ಬಯಸದ ಏಕಾಂಗ ವೀರ ಸೋಮನಾಥ ಸಾಹಿತ್ಯಕೃಷೀವಲನಾದ ಸೊಮನಾಥನ ಎಲ್ಲ ಮುಖಗಳನ್ನೂ ಪರಿಚಯಿಸಬಲ್ಲ ಮಹತ್ತರ ರಚನೆ ಅವನ ಪಂಡಿತಾರಾಧ್ಯ ಚರಿತ್ರೆ ಇದನ್ನು ಓದುವುದರಿಂದ ಅಸದೃಶ ಸಾಹಿತ್ಯ ಸನಾಥ ಸೋಮನಾಥನ ವಿರಾಡ್ರೂಪ ಓದುಗರ ಮನೋನಯನಕ್ಕೆ ಸಾಕ್ಷಾತ್ಕರಿಸಿದರೆ ನನ್ನ ಈ ಪ್ರಯತ್ನ ಸಫಲವಾದಂತೆ. ಹಾಗೆ ಆಗಲಿ ಎಂದು ಹಾರೈಸೋಣ.

ಗ್ರಂಥ ಋಣ

೧. ಪಂಡಿತಾರಾಧ್ಯಚರಿತ್ರ : ಉಪೋದ್ಘಾತ. ಡಾ. ಚಿಲುಕೂರು ನಾರಾಯಣರಾವು. ತೆಲುಗು ವಿಶ್ವವಿದ್ಯಾಲಯಂ, ಹೈದರಾಬಾದು. ೧೯೯೦

೨. ಬಸವಪುರಾಣಮು: ಪರಿಷ್ಕರ್ತ, ವೇಟೂರಿ ಪ್ರಭಾಕರಶಾಸ್ತ್ರಿ, ಶ್ರೀವೇಟೂರಿ ಪ್ರಭಾಕರಶಾಸ್ತ್ರಿ ವಾಜ್ಞಯಪೀಠಂ, ತಿರುಮಲ ತಿರುಪತಿ ದೇವಸ್ಥಾನಮುಲು. ತಿರುಪತಿ. ೨೦೧೩

೩. ಚತುರ್ವೇದ ಸಾರಮು: ಪರಿಷ್ಕರಣೆ, ಶ್ರೀ ಬಂಡಾರು ತಿಮ್ಮಯ್ಯ, ೧೯೬೨. (ಅಂತರ್ಜಾಲದ ಮೂಲಕ ಪರಿಶೀಲನೆ.)

೪. ಬಸವಪುರಾಣಮು : ಪರಿಷ್ಕರಣೆ: ಬಂಡಾರು ತಿಮ್ಮಯ್ಯ, (ಅಂತರ್ಜಾಲದಿಂದ)

೫. ಬಸವಪುರಾಣಮು : ಪರಿಷ್ಕರಣೆ: ಗೂಡ ವೇಂಕಟ ಸುಬ್ರಮಣ್ಯಂ, ಆಂಧ್ರಪ್ರದೇಶ್ ಸಾಹಿತ್ಯ ಅಕಾಡಮೀ, ಹೈದರಾಬಾದು. ೧೯೬೯ (ಅಂತರ್ಜಾಲದಿಂದ).

೬. ಪಾಲಕುರಿಕಿ ಸೊಮನಾಥ ಕವಿ ಗ್ರಂಥಾವಳಿ ಪ್ರಥಮ ಸಂಪುಟ. ಲಘುಕೃತುಲು - ವೃಷಾಧಿಪ ಶತಕಮು: ಸಂ: ಧೂಪಂ ಬಸವ ನಾಗಯ್ಯ. ಓಂ ನಮಶ್ಶಿವಾಯ ಸಾಹಿತೀ ಸಾಂಸ್ಕೃತಿಕ ಪರಿಷತ್ತು. ಸಿಕಂದ್ರಾಬಾದು. ೧೯೯೮.

೭. ಪಂಡಿತಾರಾಧ್ಯಚರಿತ್ರೆ :ಅಕ್ಕಿರಾಜು ರಮಾಪತಿ ರಾವು. ಸುಪಥ ಪ್ರಚುರಣಲು ೨೦೦೪.

೮. ಚೆನ್ನಮಲ್ಲು ಸೀಸಮುಲು: ವಾವಿಳ್ಳ ರಾಮಸ್ವಾಮಿಶಾಸ್ತ್ರುಲು ಅಂಡ್ ಸನ್ಸ್ ಚೆನ್ನಪುರಿ ೧೯೨೬. (ಅಂತರ್ಜಾಲದಿಂದ)

೯. ಪಾಲಕುರಿಕಿ ಸೋಮನಾಥಕವಿ: ಶ್ರೀಬಂಡಾರು ತಮ್ಮಯ್ಯ ಶಿವಧರ್ಮಗ್ರಂಥಮಾಲ ಸಿಕಂದ್ರಾಬಾದು. ೧೯೪೮. (ಅಂತರ್ಜಾಲದಿಂದ)

೧೦. ಉದಾಹರಣ ವಾಙ್ಮಯಮು: ನಿಡದವೋಲು ವೇಂಕಟರಾವು. ಪ್ರಾಚ್ಯ ಪರಿಶೋಧನ ಸಂಸ್ಥ, ಮದರಾಸು ವಿಶ್ವವಿದ್ಯಾಲಯಮು. ಮದರಾಸು. ೧೯೫೦. (ಅಂತರ್ಜಾಲದಿಂದ).

೧೧. ಕರ್ಣಾಟಕಸಂಗೀತವಾಹಿನಿ: ರಾ.ಸತ್ಯನಾರಾಯಣ, ಕನ್ನಡ ಪುಸ್ತಕ ಪ್ರಾಧಿಕಾರ, ೨೦೦೧,

೧೨. ಸಂಶೋಧನ ಸಂಭಾವನೆ: ಎಸ್. ಕಾರ್ತೀಕ, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ, ೨೦೧೬.

□□

ಸಂಗೀತ ಪರಂಪರೆಯ ವಿದ್ವತ್ ಕೃತಿ : 'ಉಲಿವ ನಾದದ ಚರಣ'

ಡಾ. ಶಿವರಾಜ ಬ್ಯಾಡರಹಳ್ಳಿ

✣

ಡಾ. ಜಯದೇವಿ ಜಂಗಮಶೆಟ್ಟಿ ರಚಿಸಿರುವ 'ಉಲಿವ ನಾದದ ಚರಣ' ಕೃತಿಯು ಸಂಗೀತ ಪ್ರಧಾನವಾದ ಹಲವು ಮಗ್ಗಲುಗಳನ್ನು ಆಳವಾಗಿ ಚರ್ಚಿಸಿರುವ ಲೇಖನಗಳ ಸಂಕಲನ. ರಸಿಕ, ಸಹೃದಯ, ಕೇಳುಗ, ಪ್ರೇಕ್ಷಕ, ಸಮಯ, ಪ್ರತಿಭೆ ವ್ಯುತ್ಪತ್ತಿ ಇವುಗಳ ಎಲ್ಲಾ ಜವಾಬ್ದಾರಿಯನ್ನು ಮತ್ತು ಸಂಗೀತವನ್ನು ಆಸ್ವಾದಿಸುವ, ಆಲೋಚನೆ, ಜ್ಞಾನ ವಿದ್ವತ್ ಮೇಳೈಸಿದ ಸಂಗೀತ ಪರಂಪರೆಯ ವಿದ್ವತ್ ಕೃತಿಯಾಗಿದೆ. ಈ ಕೃತಿಯ ಲೇಖಕರೇ ಸ್ವತಃಶಾಸ್ತ್ರೀ ಯ ಸಂಗೀತ ಗಾಯಕರಾಗಿರುವಾಗ ಸಂಗೀತ ಶಾಸ್ತ್ರದ ಬಗ್ಗೆ ನಿಖರವಾಗಿ ಮಾತನಾಡುವ ಮತ್ತು ಬರೆಯುವ ಅನುಭವ, ಅಧ್ಯಯನ ಎರಡೂ ಅವರಿಗೆ ದಕ್ಕಿರುವುದರಿಂದ ಲೇಖನಗಳಿಗೆ ಲೀಲಾಜಾಲದ ವೇಗವು ಸಿಕ್ಕಿ ಸ್ಪಷ್ಟವಾದ ಗೊತ್ತುಗುರಿಗಳು ಓದುಗನಿಗೆ ಲಭ್ಯವಾಗುತ್ತವೆ. ಭರತನ ನಾಟ್ಯಶಾಸ್ತ್ರ, ಭಾರತೀಯ ಕಾವ್ಯ ಮೀಮಾಂಸೆ, ಲಾಕ್ಷಣಿಕ ಗ್ರಂಥಗಳನ್ನು ಉಲ್ಲೇಖಿಸಿರುವುದರಿಂದ ಪ್ರತೀ ಲೇಖನಕ್ಕೂ ಒಂದು ತಾತ್ವಿಕ ಚೌಕಟ್ಟು ಎದ್ದು ಕಾಣುತ್ತದೆ. ಇಲ್ಲಿಯ ಲೇಖನಗಳನ್ನು ಹಿಡಿಯಾಗಿ ಬರೆಯದೇ ಇದ್ದರೂ ಬೇರೆ ಬೇರೆ ಸಂದರ್ಭಗಳಲ್ಲಿ ಬರೆದರಾದರೂ ಎಲ್ಲೂ ವಿಶ್ಲೇಷಣೆ, ಚರ್ಚೆಯಲ್ಲಿ ಅಸ್ಪಷ್ಟತೆ ಕಾಣುವುದಿಲ್ಲ.ಅದೇ ಈ ಕೃತಿಯ ವೈಶಿಷ್ಟ್ಯ.

ಸಾಹಿತ್ಯ ಸಂಗೀತದ ಸಾಹಚರ್ಯೆಯನ್ನು ಆಸ್ವಾದಿಸುವ ಕೇಳುಗನ ಸಮಯ, ರಸಿಕತನ, ತಾದಾತ್ಮ್ಯವನ್ನು ಬಹಳ ಸೂಕ್ಷ್ಮವಾಗಿ ಲೇಖಕಿ ಚರ್ಚೆಗೆ ಒಳಪಡಿಸಿದ್ದಾರೆ. ಕಾವ್ಯ ಮೀಮಾಂಸಕಾರರು ಹೇಳಿರುವ ಥಿಯರಿಗಳನ್ನು ಸಂಗೀತ ಮತ್ತು ಸಾಹಿತ್ಯ ಪಠ್ಯದೊಂದಿಗೆ ಅನುಸಂಧಾನ ಮಾಡುತ್ತಾ ಒಂದು ತಾತ್ವಿಕ ಚರ್ಚೆಯನ್ನು ವಿಸ್ತರಿಸುವಲ್ಲಿ ಇಲ್ಲಿಯ ಲೇಖನಗಳು ಸುಳಿವು ನೀಡುತ್ತವೆ. ಭಾರತೀಯ ಸಂಗೀತ ಪರಂಪರೆಯಲ್ಲಿ

ಹಿಂದೂ ಸ್ತಾನಿ ಸಂಗೀತದ ಮಹತ್ವವನ್ನು ಕಟ್ಟಿಕೊಟ್ಟಿರುವ ಲಾಕ್ಷಣಿಕರ ಪ್ರತಿಭೆಯನ್ನು ಅನಾವರಣಗೊಳಿಸಿ ಹಲವು ಆಯಾಮದೊಂದಿಗೆ ವಿಶ್ಲೇಷಣೆಗೆ ಒಳಪಡಿಸಿದ್ದಾರೆ.ಶಾಸ್ತ್ರೀಯ ಸಂಗೀತ ಗಾಯನದಲ್ಲಿ ಕೇಳುಗನ ಮನಸ್ಥಿತಿ ಆತನ ವಯಸ್ಸು,ಅದರ ಬಗ್ಗೆ ಆತನಿಗಿರುವ ಕಾಳಜಿಯೂ ಮುಖ್ಯವಾಗಿ ಕೇಳುಗನಲ್ಲಿ ಪರಿಣಾಮ ಬೀರುತ್ತದೆ. ಇಲ್ಲದಿದ್ದರೆ.ಹಿಂದೂಸ್ತಾನಿ ಗಾಯನವು ಎಲ್ಲಾ ವಯೋಮಾನದ ಮನಸ್ಸುಗಳಿಗೆ ಏಕೆ ಮನಸ್ಸಿನಾಳಕ್ಕೆ ಇಳಿಯುವುದಿಲ್ಲ ಎಂಬುದಕ್ಕೆ ಕರಾರುವಕ್ಕಾದ ತಿಳುವಳಿಕೆಯನ್ನು ನೀಡಿದ್ದಾರೆ.

ಹಾಗಾಗಿಯೇ ಶಾಸ್ತ್ರೀಯ ಸಂಗೀತ ಕಾರ್ಯಕ್ರಮದಲ್ಲಿ ಒಂದೇ ವಯಸ್ಸಿನ ಮನಸ್ಸುಗಳು ಇರುವುದನ್ನು ನಾವು ಇಂದಿಗೂ ನೋಡುತ್ತಿದ್ದೇವೆ., ಎಲ್ಲಾ ವಯೋಮಾನದವರಿಗೆ ಸಿನಿಮಾ ಇಷ್ಟವಾದಂತೆ ಹಿಂದುಸ್ತಾನಿ ಸಂಗೀತ, ಅಬ್ಬರದ ಪಾಪ್ ಸಂಗೀತ ಹೆಚ್ಚು ಆಕರ್ಷಣೆಯಾದರೆ ಇನ್ನು ಕೆಲವರಿಗೆ ಇಷ್ಟವಾಗುವುದಿಲ್ಲ. ಆದರೆ ಶಾಸ್ತ್ರೀಯ ಸಂಗೀತದ ಕಡೆ ಯುವಕರು ಕೇಳುಗರಾಗಿ ಬರುವುದು ಕಡಿಮೆಯೇ. ಸಂಗೀತ ಕಛೇರಿಗಳಲ್ಲಿ ಭಾಗಿಯಾಗುವವರು ಯಾರು, ಯಾವ ವಯಸ್ಸಿನವರು ಮತ್ತು ಅವರ ಜವಾಬ್ದಾರಿ ಏನು ಎನ್ನುವುದು ಮುಖ್ಯ. ಯಾವುದೇ ಒಬ್ಬ ಸಂಗೀತ ಬಲ್ಲ ಹಾಡುಗಾರ ತನ್ನ ಪ್ರತಿಭೆಯನ್ನು ತೋರುವ ಶಿಸ್ತಿನ ಮೇಲೆ ತನ್ನ ಗಾನ ಮಾಧುರ್ಯವನ್ನು ಅನುಭವಿಸಿ ಸಾಹಿತ್ಯವನ್ನು ಧ್ಯಾನಿಸಿ ಜೀವ ತುಂಬುವ ಅರ್ಪಣಾ ಮನೋಭಾವ ಗಾಯಕನಿಗೆ ಇರಬೇಕಾಗುತ್ತದೆ. ಎಂಬುದನ್ನು ಭಾರತೀಯ ಅಲಂಕಾರಿಕರು ಹೇಳುವ ವ್ಯಾಖ್ಯಾನಗಳನ್ನು ಕೊಂಡಿಯಾಗಿ ಜೋಡಿಸಿರುವುದರಿಂದ ಲೇಖನಗಳಿಗೆ ಒಂದು ಸಂಶೋಧಿತ ಛಾಯೆ ಬಂದಿದೆ. ಸಂಗೀತ ಎನ್ನುವುದು ಗುರುಮುಖೇನ ಕಲಿಯುವುದಾ? ಸ್ವಪ್ರಯತ್ನದಿಂದ ಕಲಿಯುವುದಾ ? ಇವುಗಳ ಜಿಜ್ಞಾಸೆಯನ್ನು ವ್ಯುತ್ಪತ್ತಿ ಪ್ರಮಾಣದಲ್ಲಿ ತೂಗುವ ಲೇಖಕರ ಚಿಂತನೆ ಗುರುತರವಾಗಿದೆ.

ಸಾಹಿತ್ಯ ಪಠ್ಯಗಳನ್ನು ಓದುವ, ಹಾಡುವ ಪರಂಪರೆಗೆ ದೀರ್ಘವಾದ ಇತಿಹಾಸವೇ ಇದೆ. ಹಾಗೆಯೇ ಹಿಂದೂಸ್ತಾನಿ ಸಂಗೀತವೂ ತುಂಬಾ ಪುರಾತನವಾದ ಹಲವು ರಾಗಗಳ, ಸಂಗೀತ ಶಾಸ್ತ್ರ ಮೂಲಕ ಜೀವತುಂಬಿರುವುದನ್ನು ವಿಶ್ಲೇಷಿಸಿದ್ದಾರೆ. ಸಂಗೀತವೂ ಸೃಜನಶೀಲವಾಗಿ ಹೊರ ಹೊಮ್ಮುವ ಸಾಧನವಾಗಿದೆ ಎಂಬುದಕ್ಕೆ ಲೇಖಕಿ ಹಲವು ಉಲ್ಲೇಖಗಳನ್ನು ನೀಡಿದ್ದಾರೆ.

ಭಾರತೀಯ ಸಂಗೀತದಿಂದ ಬೇರ್ಪಟ್ಟ ಹಿಂದೂಸ್ತಾನಿ ಸಂಗೀತವು ಶಾಸ್ತ್ರವಾಗಿಯೇ ಉಳಿದಿರುವುದಕ್ಕೆ ಕೊಡುವ ಕಾರಣ ರಾಗಗಳ ಮಟ್ಟು, ಪ್ರಕಾರ. ಹಿಂದೂಸ್ತಾನಿ, ಕರ್ನಾಟಕ ಸಂಗೀತದ ಬಗ್ಗೆ ಟೀಕೆ ಇವೆ ಎನ್ನುವುದಕ್ಕಿಂತಲೂ ಪುನರಾವರ್ತಿತ, ಆಲಾಪನೆಯ

ಆರಾಧನೆ ಅವುಗಳ ಲಾಕ್ಷಣಿಕತೆ ಜನ ಸಾಮಾನ್ಯರಿಗೆ ಇಂದಿಗೂ ಅರ್ಥವಾಗಿಲ್ಲ.ಆದರೆ ರಸಾನುಭೂತಿಯನ್ನು ಆಸ್ವಾದಿಸುವಲ್ಲಿ ಜನರ ಮನಸ್ಸು ಎಂದೂ ಹಿಂದೆ ಸರಿಯುವುದಿಲ್ಲ.ಎಂಬುದು ಸರಿಯಾದ ತಿಳುವಳಿಕೆ. ಹಾಗಾಗಿಯೇ ಸಂಗೀತವೂ ಒಂದು ಎಚ್ಚರದ ಪ್ರಜ್ಞೆಯಾಗಿ ಕೇಳಿಸುತ್ತದೆ.

ಘರಾಣ ಪರಂಪರೆಯ ನಿಜವಾದ ಹಕಿಕತ್‌ನ್ನು ಪಟ್ಟಿಯಾಗಿಯೇ ಇಟ್ಟು ಅವರುಗಳ ಸಾಧನೆಯನ್ನು ಉಲ್ಲೇಖಿಸುವುದನ್ನು ಮರೆತಿಲ್ಲ.ಹಾಗಾಗಿ ಲೇಖಕಿಯ ಹೇಳಿಕೆ ಚಿಂತನೆಯಲ್ಲದೆ ಪಾರಂಪರಿಕ ಪ್ರಜ್ಞೆಯೊಂದಿಗೆ ಇಂದಿನ ಪ್ರಯೋಗ ಶೀಲ ಸಂಗೀತ ಮುಖಾಮುಖಿಯನ್ನು ಅನುಸಂಧಾನ ಮಾಡುವ ಲೇಖಕಿಯ ಚಿಂತನೆ ಬಹು ಮೆಚ್ಚುಗೆಯಾದುದು.

ಸಂಗೀತಕ್ಕೆ ಸೌಂದರ್ಯದ ಚೌಕಟ್ಟು ಇಟ್ಟು ಕಲೆಯನ್ನು ಆಸ್ವಾದಿಸುವ ವರ್ಣನೆ ಭಿನ್ನ ಭಿನ್ನ ವಯೋಮಾನಕ್ಕೆ ಅದರ ಚಲುವು ಸೌಂದರ್ಯ ಅಂತರಂಗಕ್ಕೆ ಇಳಿಯುತ್ತದೆ. ಇದರಿಂದ ಒಂದೇ ರೀತಿಯ ಆನಂದಾನುಭೂತಿ ಉಂಟು ಮಾಡುವ ಆ ಸಮಯಗಳು ಬೇರೆಯಾಗಿಯೇ ಇರುತ್ತವೆ. ಇದನ್ನು ಭಾರತೀಯ ಮತ್ತು ಪಾಶ್ಚಾತ್ಯ ಮೀಮಾಂಸಕರು ಹೇಳಿರುವ ವ್ಯಾಖ್ಯಾನಗಳು, ಸಿದ್ಧಾಂತಗಳನ್ನು ಕ್ರೋಡೀಕರಿಸುವ ತೌಲನಿಕತೆಯಿಂದಾಗಿ ತನ್ನ ನಿರ್ಧಾರಕ್ಕಿಂತ ವಿಶಾಲ ವ್ಯಾಪ್ತಿಯ ವಿಷಯ ಪ್ರಧಾನತೆಗೆ ಒತ್ತುಕೊಡುತ್ತಾರೆ. ಇದರಿಂಗಾಗಿ ರಸ ಸಿದ್ಧಾಂತದ ಥಿಯರಿಗಳು, ಆನಂದವರ್ಧನ ಧ್ವನ್ಯಾಲೋಕದ ಸೂತ್ರಗಳನ್ನು ಹೇಳುವ ಅಂಶಗಳ ಮೌಲಿಕತೆಯನ್ನು ಎತ್ತಿಹಿಡಿದಿದ್ದಾರೆ.

ಶಾಸ್ತ್ರೀಯ ಸಂಗೀತ ಅಂದಿನಿಂದ ಇಂದಿನವರೆಗೆ ಎಲ್ಲರಿಗೂ, ಎಲ್ಲ ವಯೋಮಾನದವರಿಗೂ ತಲುಪುತ್ತಿದೆಯಾ ಎಂಬ ಜಿಜ್ಞಾಸೆ ಕಾಡುತ್ತಿದೆ. ಅದಕ್ಕೆ ಗಾಯನದ ರಾಗಗಳು ಉಂಟುಮಾಡುವ ರಸಾನುಭವ ಮುಖ್ಯಎಂಬುದನ್ನು ಒತ್ತಿಹೇಳಿದ್ದಾರೆ. ಕೇಳುಗನಲ್ಲಿ ಆ ಕ್ಷಣಕ್ಕೆ ರಸೋತ್ಪತ್ತಿ ಕೇಳುಗನಲ್ಲಿ ಬೆಳೆಯದಿದ್ದರೆ ಸಂಗೀತ ಮನಸಿನಾಳಕ್ಕೆ ಇಳಿಯುವುದಿಲ್ಲ.ರಸಭಾವಗಳನ್ನು ತನ್ನ ಒಳಗೆ ಸಹಜಭಾವದಿಂದ ಅನುಭವಿಸದಿದ್ದರೆ ಯಾವುದೇ ಸಂಗೀತದ ನಾದವು ಕಿವಿಯ ಮೇಲಷ್ಟೇ ಬೀಳುತಿರುತ್ತದೆ.

ಅದು ಖ್ಯಾಲ್ ಗಾಯನವಾಗಲಿ ಅಥವಾ ಇನ್ಯಾವುದೇ ಆದರೂ ನೋಡುಗನಲ್ಲಿಯೂ ಕೇಳುವ ಅದನ್ನು ಅನುಭವಿಸಿ ಆಸ್ವಾದಿಸುವ ಗುಣ ಇರಬೇಕಾಗುತ್ತದೆ ಎನ್ನುವುದಕ್ಕೆ ಹಲವು ಉದಾಹರಣೆಗಳನ್ನು ಕೊಡುತ್ತಾ 'ಶಾಸ್ತ್ರೀಯ ಸಂಗೀತ : ರಸಗ್ರಹಣ ಸಮಸ್ಯೆ ಲೇಖನದಲ್ಲಿ ಬೇರೆ ಬೇರೆ ದೃಷ್ಟಿಯಿಂದ ಚರ್ಚಿಸಿದ್ದಾರೆ. ಇನ್ನೂ ಮುಂದೆ ಹೋಗಿ ಕನ್ನಡ ಪಠ್ಯಗಳನ್ನು ಬೋಧನೆ ಮಾಡುವ ಅಧ್ಯಾಪಕರು ಹಳಗನ್ನಡ ಮತ್ತು

ಹೊಸಗನ್ನಡ ಪಠ್ಯವನ್ನು ಬೋಧಿಸಲು ಇರುವ ಹೋಲಿಕೆಕೊಟ್ಟು ಕೂಡ ಸಂಗೀತದ ಭಾವನಾತ್ಮಕ ಚಹರೆಯನ್ನು ವಿಸ್ತೃತವಾಗಿ ಚರ್ಚಿಸಿರುವುದು ನಮ್ಮೊಳಗೆ ಒಂದು ಹೊಸ ತಿಳುವಳಿಕೆಯನ್ನು ನೀಡುತ್ತದೆ.

ಗಾಯನ ಕ್ಷೇತ್ರದಲ್ಲಿ ನಿರಂತರವಾಗಿ ಕೆಲಸ ಮಾಡುತ್ತಿರುವವರಿಗೆ ಇದರ ಅನುಭವ ವಿಚಾರ ಸ್ಪಷ್ಟವಾಗಿ ತಿಳಿದಿದ್ದರೆ ಪ್ರೇಕ್ಷಕರನ್ನು ಸುಖಾಸುಮ್ಮನೆ ದೂರುವುದು ಕಡಿಮೆಯಾಗುತ್ತದೆ. ಇದು ಮೇಲ್ನೋಟಕ್ಕೆ ಸಂಗೀತದ ಸೌಂದರ್ಯವೆನಿಸಿದರೂ ಇದೊಂದು ಗಾಯಕ ಮತ್ತು ಪ್ರೇಕ್ಷಕರ ಮನಸ್ಸಿನ ಅನುಸಂಧಾನವೆಂದೇ ಭಾವಿಸಬೇಕಾಗುತ್ತದೆ. ಕೆಲವು ಸಾರಿ ಸಾಹಿತ್ಯ ಹಿಂದೆ ಸರಿದು ಸಂಗೀತವೇ ವಿಜೃಂಭಿಸುವ ತಾಂತ್ರಿಕತೆಯೂ ಕೇಳುಗನಲ್ಲಿ ನಿರಾಸೆ ಮೂಡಿಸುವುದುಂಟು. ಹಾಗಾಗಿ ಸಂಗೀತ ಬಲ್ಲವರೆಲ್ಲ ಸೂಕ್ಷ್ಮ ಸಂವೇದನೆ ಉಳ್ಳವರಾಗಿರುತ್ತಾರೆಂದು ಭಾವಿಸುವುದು ಕಷ್ಟವೇ.

ಹಾಡುವ ವೇಗ,ಪ್ರೇಕ್ಷಕರ ಉತ್ಸಾಹದ ಚಪ್ಪಾಳೆಯು ಗಾಯನ ಮತ್ತು ಸಂಗೀತದಲ್ಲೊ ಅಬ್ಬರತೆ ನುಸುಳಿದರೂ ಅದು ಪ್ರೇಕ್ಷಕನಲ್ಲಿ ರಸಭಂಗವಾದರೂ ಅದಕ್ಕೆ ಯಾರು ಹೊಣೆ ಎಂಬುದನ್ನು ಯೋಚಿಸಬೇಕು. ಆದರೆ ಇತ್ತೀಚಿಗೆ ಸಂಗೀತದ ಯಾವುದೇ ಪ್ರಕಾರವೂ ಮಾರುಕಟ್ಟೆಯನ್ನು ಮೀರಿ ಜನಮುಖಿಯಾಗುವತ್ತ ಹೊಸ ಹೆಜ್ಜೆ ಇಡುತ್ತದೆ ಎಂದು ಭಾವಿಸುವುದು ಕಷ್ಟ. ರಿಯಾಲಿಟಿ ಶೋಗಳು ನಮ್ಮ ಅಭಿರುಚಿಯನ್ನೇ ಯಾಮಾರಿಸುವ ವರ್ತನೆಗೆ ಕೈಹಾಕಿರುವುದರಿಂದ ಅಭಿರುಚಿಯು ಮನಸ್ಸಿನ ಗೊಂದಲಕ್ಕೆ ಕಾರಣ ಎಂದು ಹೇಳದಿದ್ದರೆ ಅನ್ಯಾಯವಾದೀತು.

ಎಳೆಯಮಕ್ಕಳ ಬಾಯಲ್ಲಿ ವಯಸ್ಸು ಮೀರಿದ ಆಡಿಸುವ ಮಾತು, ಕಿವಿಗಡಚಿಕ್ಕುವ ಸಂಗೀತದ ಅಬ್ಬರತೆಯೂ ಕಣ್ಣಮುಂದಿದೆ.ಹೀಗಿರುವಾಗ ಲೇಖಕಿ ಸಾವಧಾನವಾಗಿ ತನ್ಮಯತೆಯಿಂದ ಸಾಮಾಜಿಕ ಮಾಧ್ಯಮಗಳು ಮತ್ತು ಅದರ ಸುತ್ತ ನಡೆಯುವ ಸಾಂಸ್ಕೃತಿಕ ಕಿತ್ತಾಟಗಳ ಕಡೆಗೂ ತನ್ನ ಚಿಂತನಾಲಹರಿಯನ್ನು ಹರಿಸಿರುವುದು ಗಮನಾರ್ಹ ಅಧ್ಯಯನವಾಗಿ ಕಾಣುತ್ತದೆ. ಹಿಂದೆ ಹಳ್ಳಿಗಳಲ್ಲಿ ಕುಮಾರವ್ಯಾಸ ಭಾರತ, ಜೈಮಿನಿ ಭಾರತವನ್ನು ವಾಚಿಸಿ ಪಡೆಯುತ್ತಿದ್ದ ರಸಾನುಭೂತಿಯನ್ನು ಇಂದು ಟಿ.ವಿಗಳು ಕಿತ್ತುಕೊಂಡಿವೆ ಹಾಗಾಗಿಯೇ ನಾನು ಅಭಿರುಚಿಯನ್ನೇ ಬುಡಮೇಲು ಮಾಡುವ ಇಂದಿನ ಸಂಗೀತದ (ಟಿವಿಲೋಕ)ಸಂತೆಯೊಳಗೆ ಯಾವುದನ್ನು ಎದೆಯೊಳಗೆ ಇಳಿಸಿಕೊಳ್ಳಲಿ ಎನ್ನುವುದು ಪ್ರಶ್ನೆಯಾಗಿಯೇ ಉಳಿಯುತ್ತದೆ.

ಸಂಗೀತದ ರಾಗ ವೈವಿಧ್ಯತೆಯನ್ನುಮತ್ತು ಅದರ ಪ್ರಾಮುಖ್ಯತೆಯನ್ನು ಆರೋಹ ಮತ್ತು ಅವರೋಹದಲ್ಲಿ ಭಾವ, ಭಕ್ತಿ, ತಾರಕ, ಮಂದ್ರ, ಲಕ್ಷಣಗಳನ್ನು ಉಲ್ಲೇಖಿಸಿ,

ಸ್ವರವಿಸ್ತಾರವನ್ನು ವಿಂಗಡಿಸಿ ಅದರ ವಿಭಾಗವನ್ನು ರಾಗದ ಸ್ವರೂಪವನ್ನು ಚರ್ಚಿಸಿದ್ದಾರೆ. ಹಿರಿಯ ಸಂಗೀತಗಾರರು ಕಾಲಕಾಲಕ್ಕೆ ಹೊಂದಿಕೊಂಡು ಸಂಗೀತದಲ್ಲಿ ಹೊಸ ವಿನ್ಯಾಸ ಮಾಡಿಕೊಂಡ ಶ್ರೇಷ್ಠ ಸಾಧಕರ ಪಟ್ಟಿಯನ್ನೇ ಮುಂದಿಟ್ಟಿದ್ದಾರೆ. ಆದ್ದರಿಂದ ಇಲ್ಲಿಯ ಪ್ರತಿಯೊಂದು ಲೇಖನಗಳು ಓದುಗನಲ್ಲಿ ಸಂಗೀತ ಕ್ಷೇತ್ರದ ಬಗ್ಗೆ ಒಂದು ಹೊಸ ತಿಳುವಳಿಕೆಯನ್ನು ಕೊಡುವಲ್ಲಿ ಈ ಕೃತಿಯು ಓದುಗರ ಎದೆಯಾಳಕ್ಕೆ ಇಳಿಯುತ್ತದೆ.

ಸಾಹಿತ್ಯ ಸಂಗೀತ ಅನುಬಂಧದ ಚರಿತ್ರೆ ಹಾಗೂ ಪ್ರಕೃತಿಯ ಜೊತೆಯಲ್ಲಿಯೇ ಬಂದ ಮಾಧುರ್ಯವನ್ನು ಅದಕ್ಕೆ ಜನಪದರು ಕಂಡುಕೊಂಡ ಅನುಕರಣೆಯ ಮಟ್ಟು, ಜನಮಾನಸವನ್ನು ಸೂರೆಗೊಂಡ ರಾಮಾಯಣ, ಮಹಾಭಾರತ ಮಹಾಕಾವ್ಯಗಳು ಸಾಹಿತ್ಯ ಅಭಿರುಚಿಯನ್ನು ಬೆಳೆಸಿದ ಪರಿ, ಪಾರಂಪರಿಕ ಪಠ್ಯಗಳು, ಹೀಗೆ ನೃತ್ಯ, ಮುಂದುವರಿದು ಸಿನಿಮಾ ಸಂಗೀತ, ಶ್ರೇಷ್ಠ ಕಾವ್ಯಗಳನ್ನು ಗಮಕಿಗಳು ಪ್ರಸ್ತುತ ಪಡಿಸಿ ಅನುಭಾವಿಸಿದ ರೀತಿಯನ್ನು ಸೋದಾಹರಣವಾಗಿ ಚರ್ಚೆಗೆ ಒಳಪಡಿಸಿ ವಚನ, ಭಾವಗೀತೆಯ ಸಂಗೀತ ಜನರನ್ನು ಸೆಳೆದ ವಿಚಾರವನ್ನು ವಿಸ್ತಾರವಾಗಿ ಚಿಂತಿಸಿದ್ದಾರೆ. ನವೋದಯ ಕಾವ್ಯ ಸಂಗೀತ ಮತ್ತು ಭಾವಗೀತೆಗೆ ಮೇಳೈಸಿದ ಉದಾಹರಣೆಯನ್ನು ದಾಖಲಿಸಿದ್ದಾರೆ. ಪು.ತಿ.ನ ಅಂತಹ ಹಲವರು ತಾವು ಬರೆಯುವ ಕವಿತೆಗಳಿಗೆ ಸಂಗೀತದ ಸ್ಪರ್ಶ ಮತ್ತು ಅದರ ಮಾಧುರ್ಯವನ್ನು ಅರಿತೇ ಬರೆಯುತ್ತಿದ್ದುದು ಗಮನಿಸಬೇಕು.

ಸಂಗೀತದ ವಸ್ತು ವಿಷಯಗಳನ್ನು ಪ್ರಧಾನವಾಗಿ ಇಟ್ಟುಕೊಂಡು ಸಂಶೋಧನೆ ನಡೆಸುವುದು ಅದಕ್ಕೆ ಎದುರಾಗುವ ತೊಡಕುಗಳು, ಸವಾಲುಗಳನ್ನು ಪಟ್ಟಿಮಾಡುವ ಇವರು ಆಕರಗಳು ಅಲಭ್ಯವಾಗಿರುವುದರಿಂದ ಅದಕ್ಕೆ ಪರಿಹಾರವನ್ನು ಸೂಚಿಸುತ್ತಾರೆ. ಇತ್ತೀಚಿಗೆ ಬೆಳೆಯುತ್ತಿರುವ ಸಂಗೀತ ಪ್ರಧಾನ ವಿಶ್ವವಿದ್ಯಾಲಯಗಳು ಈ ಕೊರತೆಯನ್ನು ನೀಗಿಸಬೇಕಿದೆ. ನಮ್ಮಲ್ಲಿ ಸಂಗೀತ ಹಾಡುವಹಾಗೆ ಅದರ ಬಗ್ಗೆ ಬರೆಯುವವರು ವಿರಳವಾಗುತ್ತಿದ್ದಾರೆ. ದಾಖಲೀಕರಣ, ಅದು ಸಂಶೋಧನಾರ್ಥಿಗಳಿಗೆ ಸುಲಭವಾಗಿ ಸಿಗುವ ಮಾರ್ಪಾಡು ಆಗಬೇಕಾಗಿದೆ.

ಹೈದರಾಬಾದ್ ಕರ್ನಾಟಕದ ಸಂಗೀತ,ಸಾಹಿತ್ಯ ಚರಿತ್ರೆಯೊಳಗೆ ವಚನ, ಕೀರ್ತನೆಗಳು, ಆದಿಲ್‌ಶಾಹಿ ಆಡಳಿತ, ಆಗಿನ ಭಾಷೆಯು ಒಗ್ಗೂಡಿಸಿದ ಕ್ರಮವನ್ನು ವಿಶ್ಲೇಸಿರುವ ರೀತಿ ಗಮನಾರ್ಹವಾದುದಾಗಿದೆ.

ಸಂಗೀತ ಶಿಕ್ಷಣದಿಂದ ವಿದ್ಯಾರ್ಥಿಗಳ ವ್ಯಕ್ತಿತ್ವ ರೂಪಿಸುವಲ್ಲಿ ಸಂಗೀತದ ಪಾತ್ರವನ್ನು ಮನವರಿಕೆ ಮಾಡಿಕೊಡುವಲ್ಲಿ ಕೆಲವು ಅಂಶಗಳನ್ನು ಸೂಚಿಸುತ್ತಾರೆ. ಸರ್ಕಾರಗಳಿಗೆ ಶಾಲೆಗಳಿಗೆ ಮೂಲ ಸೌಕರ್ಯವನ್ನು ಒದಗಿಸಿ ಕೊಡುವಲ್ಲಿ ಇನ್ನು ಸಫಲವಾಗಿಲ್ಲದೆ

ಇರುವಾಗ ಇಂಥಹ ಯೋಜನೆಗಳು ಇನ್ನು ಮುಂದಾದರೂ ಆದರೆ ವಿದ್ಯಾರ್ಥಿಗಳು ಸಂಗೀತ, ಲಲಿತ ಕಲೆಗಳಿಂದ ಮತ್ತಷ್ಟು ಜ್ಞಾನಾರ್ಜನೆಯನ್ನು ತೊಡಗಿಸಿಕೊಳ್ಳುವಲ್ಲಿ ಸಂಗೀತ ಪಾಠಗಳು ಅಗತ್ಯವಾಗುತ್ತವೆ.

ಗುರುಕುಲ ಪದ್ದತಿ ಮತ್ತು ಆಧುನಿಕ ಸಂಗೀತ ಶಿಕ್ಷಣ, ಭಕ್ತಿ ಸಂಗೀತ : ಹಿಂದುಸ್ತಾನಿ ಗಾಯಕರ ಕೊಡುಗೆ, ಸಂಗೀತ ಕಲಿಕೆ: ತಾಲೀಮಿನ ಸ್ವರೂಪ ಮತ್ತು ಮಹತ್ವ ಈ ಲೇಖನಗಳೂ ಕೂಡ ಮೌಲಿಕವಾಗಿದ್ದು ಈಗಾಗಲೇ ಬೇರೆ ಬೇರೆ ಸಂಚಿಕೆಯಲ್ಲಿ ಪ್ರಕಟವಾಗಿವೆ. ಒಟ್ಟಾರೆ ಇಲ್ಲಿಯ ಎಲ್ಲ ಲೇಖನಗಳು ಸಂಶೋಧನೆ ಮಾಡುವ ಆಸಕ್ತರಿಗೆ ಒಂದು ಮೌಲಿಕ ಕೃತಿಯಾಗುತ್ತದೆ.

□□

ಉರಿಲಿಂಗ ಪೆದ್ದಯ್ಯನವರ ಕಥೆ' ಕಾವ್ಯ ಮತ್ತು ಕರ್ತೃ ವಿಚಾರಗಳು

ಡಾ. ಪ್ರಸನ್ನ ನಂಜಾಪುರ

ಉರಿಲಿಂಗ ಪೆದ್ದಯ್ಯ ೧೨ನೇ ಶತಮಾನದ ಶರಣ ಚಳವಳಿಯ ಸಂದರ್ಭದ ಒಬ್ಬ ಪ್ರಮುಖ ಶರಣ ಹಾಗೂ ವಚನಕಾರ. ಈತನ ಕಾಲ ಕ್ರಿ.ಶ. ಸು. ೧೧೮೦ ಎಂಬುದು ಕವಿಚರಿತೆಯ ಉಲ್ಲೇಖ. ದಲಿತ ಸಮುದಾಯಕ್ಕೆ ಸೇರಿದ ಈ ಶರಣ ಕಟ್ಟಿಗೆ ಮಾರುವ ಕಾಯಕ ಮಾಡಿಕೊಂಡಿದ್ದು ನಂತರದಲ್ಲಿ ಕಂದಾರದಲ್ಲಿರುವ ನಲ್ಲೂರಿನ ಮಠಕ್ಕೆ ಹನ್ನೆರಡು ವರ್ಷ ಕಟ್ಟಿಗೆಯನ್ನು ಹಾಕಿ ಆ ಮಠದ ಪೀಠಾಧಿಪತಿಯಾಗಿದ್ದ ಉರಿಲಿಂಗ ದೇವನಿಂದ ಲಿಂಗದೀಕ್ಷೆ ಪಡೆದು ಉರಿಲಿಂಗದೇವರ ಶಿಷ್ಯನಾದನು. ಕಾಲಾಂತರದಲ್ಲಿ ಅದೇ ಮಠಕ್ಕೆ ಉತ್ತರಾಧಿಕಾರಿಯಾಗಿ ನೇಮಕಗೊಂಡು ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಚಲನಕ್ಕೆ ಕಾರಣನಾದನು. ಈತನು ಆಂಧ್ರಪ್ರದೇಶದಿಂದ ಮಹಾರಾಷ್ಟ್ರದ ನಾಂದೇಡ ಜಿಲ್ಲೆಯ ಕಂದಾರ ಎಂಬ ಗ್ರಾಮಕ್ಕೆ ಬಂದು ನೆಲಸಿ ಅಲ್ಲಿಂದ ಕರ್ನಾಟಕದ ಕಲ್ಯಾಣಕ್ಕೆ ಬಂದಿರಬೇಕೆಂಬುದು ಬಹುತೇಕ ವಿದ್ವಾಂಸರ ಅಭಿಪ್ರಾಯವಾಗಿದೆ. ಎಚ್.ಪಿ. ಮಲ್ಲೇದೇವರು ಅವರು "ಆತನು ನಾಂದೇಡ್ ಜಿಲ್ಲೆಯಲ್ಲಿರುವ ಕಂದಹಾರ್ (ಕಂದಾರ)ಪುರದಲ್ಲಿ ವಾಸಿಸುತ್ತಿದ್ದನೆಂದು ಕೆಲವರ ಅಭಿಪ್ರಾಯ. ಆದರೆ ಬಿಜಾಪುರ ಜಿಲ್ಲೆಯ ನಂದವಾಡಗಿಯಲ್ಲಿದ್ದನೆಂದು ಸಂಶೋಧನೆಯಿಂದ ತಿಳಿದುಬರುವುದು."[೧] ವೆಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ. ವೀರಶೈವ ಸಾಹಿತ್ಯ ಚರಿತ್ರೆಯಲ್ಲಿ ಡಾ.ಎಸ್. ವಿದ್ಯಾಶಂಕರ್ ಅವರು ತ.ಸು. ಶಾಮರಾಯರ ಅಭಿಪ್ರಾಯವನ್ನು ಉಲ್ಲೇಖಿಸುತ್ತ "ಉರಿಲಿಂಗದೇವ ಈಗಿನ ಮಹಾರಾಷ್ಟ್ರದ (ಕಂದಾರವು ಹೈದರಾಬಾದು ಸಂಸ್ಥಾನದ ನಾಂದೇಡ್ ಜಿಲ್ಲೆಗೆ ಸೇರಿದ್ದೆಂಬ ಒಂದು ಅಭಿಪ್ರಾಯವೂ ಇದೆ.) ಕಂದಾರವು ಮಹಾರಾಷ್ಟ್ರದಲ್ಲಿದೆ "ಘೇ ಜಾ ದಗಡಿ ಜಾ" ಮರಾಠಿ ಪದ ಆದ್ದರಿಂದ ಉರಿಲಿಂಗದೇವನು

ತೆಲುಗು ದೇಶದಲ್ಲಿ ಹುಟ್ಟಿ ಇಲ್ಲಿ ನೆಲಸಿರಬಹುದೆ? ಅಥವಾ ಮರಾಠಾ ಪ್ರಾಂತದಲ್ಲಿ ವಾಸ ಮಾಡುತ್ತಿದ್ದ ತೆಲುಗು ವಂಶಕ್ಕೆ ಸೇರಿರಬಹುದೆ? ಎಂಬ ತಮ್ಮ ಸಂದೇಹವನ್ನು ತ.ಸು. ಶಾಮರಾಯರು ವ್ಯಕ್ತಪಡಿಸಿರುವರು"[೧] ಎಂಬುದಾಗಿ ಹೇಳಿದ್ದಾರೆ. "ಉರಿಲಿಂಗಪೆದ್ದಿಯು ಮೂಲತಃ ಆಂಧ್ರ ಪ್ರದೇಶದವನಾಗಿದ್ದು ಪೆದ್ದಿ ಎಂಬ ಹೆಸರಿನಿಂದ ಪರಿಚಿತನಾಗಿದ್ದ ಅವನ ಹಿರಿಯರು ಮಹಾರಾಷ್ಟ್ರದ ನಾಂದೇಡ ಜಿಲ್ಲೆಯ ಕಂದಹಾರ ಎಂಬ ಗ್ರಾಮದಲ್ಲಿ ನೆಲೆಸಿದ್ದರು."[೨] ಎಂಬುದಾಗಿ ಚಂದ್ರಪ್ಪ ಹೆಬ್ಬಾಳಕರ್ ಅವರ 'ಉರಿಲಿಂಗಪೆದ್ದಿ ಪರಂಪರೆ ಗ್ರಂಥದಲ್ಲಿ ಉಲ್ಲೇಖಿಸಲಾಗಿದೆ.

ಈ ಮೇಲಿನ ಎಲ್ಲಾ ವಿದ್ವಾಂಸರ ಅಭಿಪ್ರಾಯಗಳನ್ನು ಗಮನಿಸಿದಾಗ ಉರಿಲಿಂಗಪೆದ್ದಯ್ಯನಿಗೆ ಸಂಬಂಧಿಸಿದಂತೆ ಮೂರು ಭಾಷಿಕ ಮತ್ತು ಪ್ರಾದೇಶಿಕ ನೆಲೆಗಳ ಆಯಾಮಗಳಿರುವುದು ತಿಳಿದುಬರುತ್ತದೆ. ಪ್ರಸ್ತುತ 'ಉರಿಲಿಂಗಪೆದ್ದಯ್ಯನ ಕಥೆ' ಎಂಬ ಕಾವ್ಯದಲ್ಲಿ ಉರಿಲಿಂಗ ಪೆದ್ದಯ್ಯ ಮತ್ತು ಉರಿಲಿಂಗ ದೇವನಿದ್ದ ಸ್ಥಳವನ್ನು ಲಾಳದೇಶ ಎಂದು ಹೇಳಿದೆ. ವಿಜಯ ಕುಮಾರಿ ಎಸ್. ಕರಿಕಲ್ ಅವರು ಇದನ್ನು ಕಾವ್ಯದ ಸಾಂಪ್ರದಾಯಿಕ ವರ್ಣನೆ[೩] ಎನ್ನುತ್ತಾರೆ. ಆದರೆ ಲಾಳದೇಶ ಎನ್ನುವುದು ತೆಲುಗು ಭಾಷಿಕ ಪ್ರದೇಶವನ್ನು ಸೂಚಿಸುತ್ತಿರಬಹುದು ಎನಿಸುತ್ತದೆ. (ಲಾಳಲಿಪಿ ಎಂಬುದಕ್ಕೆ ಕಸಾಪ ನಿಘಂಟಿನಲ್ಲಿ ತೆಲುಗು ಲಿಪಿ ಎಂಬ ಅರ್ಥವನ್ನು ಕೊಡಲಾಗಿದೆ.) ಅಲ್ಲದೇ ಮ.ನ. ಜವರಯ್ಯ ಅವರು ತಮ್ಮ 'ದಲಿತ ವರ್ಗದ ಶರಣರು ಒಂದು ಅಧ್ಯಯನ' ಎಂಬ ಕೃತಿಯ ಟಿಪ್ಪಣಿಯೊಂದರಲ್ಲಿ "ಪೆದ್ದನ್ನ ಅಥವಾ ಪೆದ್ದಯ್ಯ ಎಂಬ ಹೆಸರಿನ ತೆಲುಗು? ಮಾತೃ ಭಾಷೆಯವನಿರಬಹುದಾದ ಈ ಶರಣ"[೪] ಎಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ. ಇವುಗಳನ್ನೆಲ್ಲಾ ನೋಡಿದಾಗ ಉರಿಲಿಂಗಪೆದ್ದಯ್ಯನ ಮೂಲ ತೆಲುಗು ಭಾಷಿಕ ಪ್ರದೇಶವಾಗಿರಬೇಕು ಎನಿಸುತ್ತದೆ. ಜೊತೆಗೆ ಅಂಬಲಿಗೆ ಚೆನ್ನಮಲ್ಲನ 'ದೀಪದ ಕಲಿಯರ ಕಾವ್ಯ'ಕ್ಕೆ ಸಂಬಂಧಿಸಿದ ಒಂದು ಹಸ್ತಪ್ರತಿಯು ಮಹಾರಾಷ್ಟ್ರದ ನಾಂದೇಡ ಜಿಲ್ಲೆಯ ಹಾಣಿಗಾಂವದಲ್ಲಿ ದೊರಕಿರುವ ಮಾಹಿತಿ ಇದೆ.[೫] ಪ್ರಸ್ತುತ ಉರಿಲಿಂಗಪೆದ್ದಯ್ಯನ ಕಥೆ ಎಂಬ ಕಾವ್ಯವು ದೀಪದ ಕಲಿಯರ ಕಾವ್ಯದಲ್ಲಿ ಬರುವ ಉರಿಲಿಂಗಪೆದ್ದಯ್ಯನ ಕಥೆಯನ್ನು ಅತ್ಯಂತ ನಿಕಟವಾಗಿ ಅನುಕರಿಸಿರುವುದರಿಂದ ಈ ಮಾಹಿತಿ ಅತ್ಯಂತ ಮಹತ್ವದ್ದು ಎನಿಸುತ್ತದೆ. ಅಂದರೇ ವಿದ್ವಾಂಸರ ಅಭಿಪ್ರಾಯದಂತೆ ಪೆದ್ದಯ್ಯ ನಾಂದೇಡ ಜಿಲ್ಲೆಯಲ್ಲಿ ನೆಲೆಸಿದ್ದಿರಬಹುದು. ಆನಂತರದಲ್ಲಿ ಕರ್ನಾಟಕದ ಕಲ್ಯಾಣದ ಸಂಪರ್ಕಕ್ಕೆ ಬಂದಿರಬೇಕು ಎನಿಸುತ್ತದೆ. ಇನ್ನು ಈ ಕಾವ್ಯದಲ್ಲಿ ಉಲ್ಲೇಖವಿರುವ ಕಣಿಗಳ್ ರಾಜ ಎಂಬುವವನು ಯಾರು ಎಂಬುದು ಸ್ಪಷ್ಟವಾಗಿಲ್ಲ. ವಿಜಯ ಕುಮಾರಿ ಎಸ್. ಕರಿಕಲ್ ಅವರು ಗುಲಬರ್ಗಾ ಜಿಲ್ಲೆಯ ಆಸುಪಾಸಿನವರಾಗಿರಬಹುದೆಂದು

ಊಹಿಸಬಹುದು ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ಬಗ್ಗೆ ಇನ್ನಷ್ಟು ಸಂಶೋಧನೆ ನಡೆಯಬೇಕಾದ ಅಗತ್ಯವಿದೆ.

ಉರಿಲಿಂಗಪೆದ್ದಯ್ಯನ ಕಾಯಕಕ್ಕೆ ಸಂಬಂಧಿಸಿದಂತೆ ಪ್ರೌಢರಾಯನ ಕಾವ್ಯ ಹಾಗೂ ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರದಲ್ಲಿ ಪೆದ್ದಣ್ಣ ಪೂರ್ವದಲ್ಲಿ ಕಳ್ಳನಾಗಿದ್ದ ಎಂದಿದೆ. ಆದರೆ ಚೆನ್ನಮಲ್ಲೇಶ ಕವಿಯ 'ದೀಪದ ಕಲಿಯರ ಕಾವ್ಯ'ದಲ್ಲಿ ಹಾಗೂ 'ಉರಿಲಿಂಗಪೆದ್ದಯ್ಯನ ಕಥೆ' ಎಂಬ ಈ ಕಾವ್ಯದಲ್ಲಿ ಕಳ್ಳತನದ ಯಾವ ವಿಚಾರಗಳೂ ಬರುವುದಿಲ್ಲ. ಬಡವನಾಗಿದ್ದ ಹಾಗೂ ಮಠಕ್ಕೆ ಕಟ್ಟಿಗೆಯನ್ನು ತಂದು ಹಾಕುತ್ತಿದ್ದ ವಿವರಗಳು ಮಾತ್ರ ಬಂದಿರುವುದು ಗಮನಾರ್ಹವಾಗಿದೆ. ಪ್ರಸ್ತುತ ದೊರಕಿರುವ ಉರಿಲಿಂಗಪೆದ್ದಯ್ಯನ ವಚನಗಳನ್ನು ಈ ಹಿನ್ನೆಲೆಯಲ್ಲಿ ಪರಿಶೀಲಿಸಿದರೆ ಅಲ್ಲಿ ತನ್ನ ಕಾಯಕದ ಬಗ್ಗೆ ಏನೂ ಹೇಳಿಕೊಂಡಿಲ್ಲ ಆದರೆ ಶಿವಭಕ್ತಿಯ ಮಹಿಮೆಯನ್ನು ಕುರಿತಂತೆ ಒಂದು ವಚನದಲ್ಲಿ "ಕಾಷ್ಟದೊಳಗಣ ಅಗ್ನಿಯಿಪ್ಪಂತಿಪ್ಪ" ಎಂಬ ಉಪಮೆಯನ್ನು ಬಳಸಿದ್ದಾನೆ. ಬಹುತೇಕ ತಳವರ್ಗದ ಶರಣರ ವಚನಗಳು ಅವರ ಕಾಯಕಕ್ಕೆ ಸಂಬಂಧಿಸಿದ ನೆಲೆಯಿಂದಲೇ ರಚನೆಯಾಗಿರುವುದನ್ನು ಕಾಣುತ್ತೇವೆ. ಆದರೆ ಉರಿಲಿಂಗಪೆದ್ದಯ್ಯನ ವಚನಗಳಲ್ಲಿ ಕಳ್ಳತನದ ವಿಚಾರಗಳಾಗಲೀ, ಕಟ್ಟಿಗೆಯನ್ನು ಮಾರುತ್ತಿದ್ದ ವಿಚಾರಗಳಾಗಲೀ ಕಂಡುಬರುವುದಿಲ್ಲ. ಆದರೆ ಈ ಉಪಮೆಯು ಅವನು ಕಟ್ಟಿಗೆಯನ್ನು ಮಾರುತ್ತಿದ್ದ ಎಂಬುದಕ್ಕೆ ಪೂರಕವಾಗಿ ಕಂಡುಬರುತ್ತದೆ. ಉರಿಲಿಂಗಪೆದ್ದಿ ಎಂಬ ಹೆಸರೂ ಕೂಡ ಗುರುವಿನಿಂದ ಬಂದಿರುವುದಾಗಿದೆ. ಇವನ ಪೂರ್ವ ಹೆಸರು ಪೆದ್ದಯ್ಯ ಎಂಬುದಾಗಿದ್ದು ಗುರುವಿನಿಂದ ಲಿಂಗದೀಕ್ಷೆಯನ್ನು, ಪಡೆದ ಮೇಲೆ ಉರಿಲಿಂಗಪೆದ್ದಯ್ಯ ಎಂಬ ಹೆಸರು ಬಂದಿದೆ. ಈ ವಿಚಾರ ಪ್ರೌಢರಾಯನ ಕಾವ್ಯ ಹಾಗೂ ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ ಕಾವ್ಯಗಳಲ್ಲಿ ನಿರೂಪಿತವಾಗಿದೆ.

> "ಸೃಷ್ಟಿಗಚ್ಚರಿಯ ತೋರಿಸಿ ಮೆರೆದ ಗುರುಭಕ್ತಿ
> ನಿಷ್ಟನೀನಹುದಹುದು ಮುನ್ನಿತ್ತ ಕಲ್ಲು ತಾ
> ನಿಷ್ಟಲಿಂಗವೆಯಾಗಿ ತೊಳಗುತಿಹುದೆಂದು ಮಿಗೆ ಉಪದೇಶಗಳ ಮಾಡುತ
> ಅಷ್ಟವೈಭವದಿ ಸ್ವಾಚಾರ್ಯಸಿಂಹಾಸನಕೆ
> ಶ್ರೇಷ್ಟನಿವನುರಿಲಿಂಗ ಪೆದ್ದಯ್ಯನೆಂದೆನುತ
> ಭೀಷ್ಟೆಯಿಂ ಪೆಸರಿಡಲು ಭಕ್ತಿಯಂ ನಡೆಸಿಷ್ಟಲಿಂಗದೊಳು ಬೆರೆದರರಸ"[೭]

(ಪ್ರೌಢರಾಯನ ಕಾವ್ಯ)

ಈ ರೀತಿಯಾಗಿ ದಲಿತನೊಬ್ಬನು ವೀರಶೈವ ಮಠದ ಉತ್ತರಾಧಿಕಾರಿಯಾಗಿ ಪೀಠಾಧಿಪತಿಯಾಗಿ ಅಸ್ತಿತ್ವಕ್ಕೆ ಬಂದದ್ದು ಭಾರತದ ಸಾಂಸ್ಕೃತಿಕ ಇತಿಹಾಸದಲ್ಲಿ ಒಂದು

ಮಹತ್ವದ ಕ್ರಾಂತಿಕಾರಿಯ ವಿಚಾರವಾಗಿದೆ. ಈ ಉರಿಲಿಂಗ ಪೆದ್ದಯ್ಯನ ಮಠಗಳ ಪರಂಪರೆಯು ಇಂದು ಕರ್ನಾಟಕದಾದ್ಯಂತ ಕಂಡುಬಂದು ಲಕ್ಷಾಂತರ ಅನುಯಾಯಿಗಳನ್ನು ಹೊಂದಿವೆ. ಇದುವರೆಗೂ ತಿಳಿದುಬಂದಿರುವಂತೆ ಕರ್ನಾಟಕದಲ್ಲಿ ಸುಮಾರು ೪೦ಕ್ಕೂ ಹೆಚ್ಚು ಮಠಗಳಿದ್ದು ಉತ್ತರ ಕರ್ನಾಟಕದಿಂದ ಹಿಡಿದು ಗುಲ್ಬರ್ಗಾ, ಬೀದರ್, ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ ಜಿಲ್ಲೆಗಳನ್ನು ಒಳಗೊಂಡಂತೆ ದಕ್ಷಿಣ ಕರ್ನಾಟಕದವರೆಗೂ ವ್ಯಾಪಿಸಿಕೊಂಡಿವೆ.

ಉರಿಲಿಂಗ ಪೆದ್ದಯ್ಯನು ಸಾಮಾಜಿಕ ಸಾಂಪ್ರದಾಯಿಕ ಚೌಕಟ್ಟುಗಳನ್ನು ಮೀರಿ ಪೀಠಾಧಿಪತಿಯಾಗಿ, ಶರಣನಾಗಿ, ವಚನಕಾರನಾಗಿ ಅನೇಕ ವಚನಗಳನ್ನು ರಚಿಸಿರುವುದು ಕಂಡುಬರುತ್ತದೆ. 'ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ' ಎಂಬ ಅಂಕಿತದಲ್ಲಿ ಇದೂವರೆಗೂ ದೊರಕಿರುವ ವಚನಗಳ ಸಂಖ್ಯೆಯನ್ನು ಗಮನಿಸಿದರೆ ಫ.ಗು. ಹಳಕಟ್ಟಿಯವರು ೧೯೪ ವಚನಗಳನ್ನು, ಎಚ್.ಪಿ. ಮಲ್ಲೇದೇವರು ೧೯೪ಳ ವಚನಗಳನ್ನು ಸಂಪಾದಿಸಿ ಪ್ರಕಟಿಸಿದ್ದರೆ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಪ್ರಕಟಿಸಿರುವ ಸಂಕೀರ್ಣ ವಚನ ಸಂಪುಟ–೧ ರಲ್ಲಿ ಪೆದ್ದಯ್ಯನ ೩೬೬ ವಚನಗಳು ಕಂಡುಬರುತ್ತವೆ. ಜೊತೆಗೆ ಕರ್ನಾಟಕ ಕವಿಚರಿತೆಯಲ್ಲಿ ಉರಿಲಿಂಗಯ್ಯನು 'ಲಿಂಗ ಮಹತ್ವ ಸಂಗ್ರಹ ಎಂಬ ಗ್ರಂಥವನ್ನು ಬರೆದಿರುವಂತೆ ತೋರುತ್ತದೆ ಎಂಬ ಉಲ್ಲೇಖವಿದೆ. ಪೆದ್ದಯ್ಯನ ಪುಣ್ಯಸ್ತ್ರೀಯಾದ ಕಾಳವ್ವೆ ಕೂಡ ಪ್ರಮುಖ ವಚನಕಾರ್ತಿಯಾಗಿ ಕಂಡುಬಂದು 'ಉರಿಲಿಂಗಪೆದ್ದಿಗಳರಸ' ಎಂಬ ಅಂಕಿತದಲ್ಲಿ ವಚನಗಳನ್ನು ರಚಿಸಿದ್ದಾಳೆ. ಉರಿಲಿಂಗ ಪೆದ್ದಯ್ಯನ ವಚನಗಳನ್ನು ಗಮನಿಸಿದರೆ ಲಿಂಗಮಹತ್ವದ ಜೊತೆಗೆ, ಸಾಮಾಜಿಕ ವಿಡಂಬನೆ, ಏಕದೇವೋಪಾಸನೆ, ಗುರುವಿನ ಮಹತ್ವ, ಆಡಂಬರ ಭಕ್ತಿಯ ವಿಡಂಬನೆ, ಪುರಾಣದ ಪ್ರತಿಮೆಗಳು, ಶಾಸ್ತ್ರಗಳ ಉಲ್ಲೇಖಗಳು, ಸಮಕಾಲೀನ ವಚನಕಾರರ ಉಲ್ಲೇಖಗಳು ಕಂಡುಬರುತ್ತವೆ. ಭಾಷೆಯು ಪ್ರೌಢಿಮೆಯಿಂದ ಕೂಡಿದ್ದು ಉರಿಲಿಂಗಪೆದ್ದಯ್ಯ ತಾನು ಗಳಿಸಿಕೊಂಡಿದ್ದ ಶಾಸ್ತ್ರ, ಪುರಾಣಗಳಿಗೆ ಸಂಬಂಧಿಸಿದ ವಿದ್ವತ್ತನ್ನು ಕಾಣಬಹುದು. ಈ ವಚನಗಳು ಸಮಕಾಲೀನ ಸಾಮಾಜಿಕ, ಧಾರ್ಮಿಕ ವ್ಯವಸ್ಥೆಯನ್ನು ಕುರಿತು ಮಾತಾಡುತ್ತವೆ.

ಕಾವ್ಯ ವಿಚಾರ : ಉರಿಲಿಂಗ ಪೆದ್ದಯ್ಯನ ಜೀವನ ಚರಿತ್ರೆಯನ್ನು ಕುರಿತಂತೆ ಸದ್ಯಕ್ಕೆ ದೊರಕಿರುವ 'ಉರಿಲಿಂಗ ಪೆದ್ದಯ್ಯನ ಕಥೆ' ಎಂಬ ಪೂರ್ಣ ಪ್ರಮಾಣದ ಕಾವ್ಯವನ್ನು ಬಿಟ್ಟರೇ ಕೆಲವು ವೀರಶೈವ ಕಾವ್ಯಗಳಲ್ಲಿ ಪ್ರಾಸಂಗಿಕವಾಗಿ ಮತ್ತು ಭಾಗಶಃವಾಗಿ ಪೆದ್ದಯ್ಯನ ಜೀವನ ವಿವರಗಳು ದೊರಕುತ್ತವೆ. ಅದೃಶ್ಯಕವಿಯ ಪ್ರೌಢರಾಯನ ಕಾವ್ಯ, ಬಸವಕವಿಯ ಮಹಾಲಿಂಗಲೀಲೆ, ಚೆನ್ನಮಲ್ಲೇಶನ ದೀಪದ ಕಲಿಯರ ಕಾವ್ಯ, ಅಮರಗಣಾಂಗಳ ಚರಿತ್ರೆ, ನೀಲಕಂಠಾಚಾರ್ಯನ ಆರಾಧ್ಯ ಚರಿತ್ರೆಗಳಲ್ಲಿ ಪೆದ್ದಯ್ಯನ

ವಿಚಾರಗಳು ಬಂದಿವೆ. ಆದರೆ ಉರಿಲಿಂಗಪೆದ್ದಯ್ಯನನ್ನು ಪ್ರಧಾನವಾಗಿಟ್ಟುಕೊಂಡು ರಚನೆಯಾಗಿರುವ ಕಾವ್ಯವೇ 'ಉರಿಲಿಂಗಪೆದ್ದಯ್ಯನ ಕಥೆ' ಕಾವ್ಯವಾಗಿದೆ. ಇದು ಭಾಮಿನಿ ಷಟ್ಪದಿಯಲ್ಲಿ ರಚನೆಯಾಗಿದ್ದು ಮೂರು ಅಧ್ಯಾಯಗಳು ೧೭೫ ಪದ್ಯಗಳಿಂದ ಕೂಡಿದ ಚಿಕ್ಕ ಕಾವ್ಯ. ಇದರ ಬಗೆಗೆ ಅಲ್ಪಸ್ವಲ್ಪ ಅಕ್ಷರಗಳ ವ್ಯತ್ಯಾಸದೊಡನೆ ಇರುವ ಎರಡು ಸಂಪಾದಿತ ಕೃತಿಗಳು ಲಭ್ಯವಾಗಿವೆ. ೨೦೧೩ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ ಪ್ರಕಟಿಸಿರುವ ವಿಜಯ ಕುಮಾರಿ. ಎಸ್. ಕರಿಕಲ್ ಅವರು ಸಂಪಾದಿತ 'ಅಜ್ಞಾತ ಕವಿ ರಚಿತ ಉರಿಲಿಂಗಪೆದ್ದಯ್ಯನ ಕಥೆ' ಹಾಗೂ ೨೦೧೪ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರ ಪ್ರಕಟಿಸಿರುವ ಚಿತ್ತಯ್ಯ ಪೂಜಾರ್ ಅವರು ಸಂಪಾದಿತ 'ಉರಿಲಿಂಗ ಪೆದ್ದಯ್ಯನ ಕಥೆ', ಅಲ್ಲದೇ ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಉರಿಲಿಂಗಪೆದ್ದಿಯನ್ನು ಕುರಿತಂತೆ ರಚನೆಯಾಗಿರುವ ಎರಡು ನಾಟಕ ಕೃತಿಗಳು ಕಂಡುಬರುತ್ತವೆ. ಒಂದು ಮಹಾದೇವ ಬಣಕಾರ ಅವರ 'ಉರಿಲಿಂಗಪೆದ್ದಿ' ನಾಟಕ ಮತ್ತೊಂದು ವಿಜಯಶ್ರೀ ಸಬರದ ಅವರ 'ಉರಿಲಿಂಗ' ನಾಟಕ ಇವು ಈ ಪೂರ್ವಕಾವ್ಯಗಳಲ್ಲಿ ಪ್ರಚಲಿತವಿರುವ ಉರಿಲಿಂಗಪೆದ್ದಯ್ಯನ ಜೀವನ ವೃತ್ತಾಂತವನ್ನು ಆಧಾರವಾಗಿಟ್ಟುಕೊಂಡು ಸಮಕಾಲೀನ ಸಾಮಾಜಿಕ ಬದುಕನ್ನು ಚಿತ್ರಿಸಿರುವ ಸೃಜನಶೀಲ ಕೃತಿಗಳಾಗಿವೆ.

ಸಾರಾಂಶ : ಒಮ್ಮೆ ಉರಿಲಿಂಗದೇವರು ಮಠದಲ್ಲಿ ದಾಸೋಹ ಮಾಡಲು ಸೌದೆಗಳು ಇಲ್ಲದೆ ಪೇಟೆಗೆ ಬರುತ್ತಾನೆ. ಅಲ್ಲಿ ಪೆದ್ದಯ್ಯನು ಸೌದೆ ಹೊತ್ತು ಬರುತ್ತಿರಲು ಅವನನ್ನು ಕಂಡು ಸೌದೆಯ ಸಲುವಾಗಿ ಮಠಕ್ಕೆ ಕರೆತರುತ್ತಾನೆ. ಮಠದಲ್ಲಿ ನಡೆಯುವ ಲಿಂಗಪೂಜೆಯನ್ನು ಕಂಡು ಪೆದ್ದಯ್ಯನಿಗೆ ತಾನು ಲಿಂಗದೀಕ್ಷೆಯನ್ನು ಪಡೆಯಬೇಕೆಂಬ ಹಂಬಲವಾಗುತ್ತದೆ. ಉರಿಲಿಂಗ ದೇವನು ಸೌದೆಯನ್ನು ಪಡೆದು ಹಣವನ್ನು ಕೊಡಲು ಹೋದಾಗ ಪೆದ್ದಯ್ಯ ಹಣವನ್ನು ನಿರಾಕರಿಸಿ ತನಗೆ ಲಿಂಗದೀಕ್ಷೆಯನ್ನು ಕೊಡುವಂತೆ ಕೇಳುತ್ತಾನೆ. ಉರಿಲಿಂಗದೇವನು ಪೆದ್ದಯ್ಯ ಶ್ವಪಚನೆಂಬುದನ್ನು ತಿಳಿದು ಲಿಂಗದೀಕ್ಷೆಯನ್ನು ನಿರಾಕರಿಸುತ್ತಾನೆ. ಆದರೆ ನಿತ್ಯವೂ ಸೌದೆಯನ್ನು ತಂದುಕೊಡುವ ಪೆದ್ದಯ್ಯ ಹಣದ ಬದಲಿಗೆ ಲಿಂಗದೀಕ್ಷೆಯನ್ನೆ ಕೇಳುತ್ತಾನೆ. ಇದು ದಿನವೂ ನಡೆಯುತ್ತಿರಲು ಪೆದ್ದಯ್ಯನು ಹಣವಿಲ್ಲದೆ ಸೌದೆ ಹಾಕುತ್ತಿರುವುದನ್ನು ಕಂಡ ಹೆಂಡತಿಯು ನೆರೆಮನೆಯವರು ಸೌದೆ ಮಾರಿ ಬಂದ ಹಣದಿಂದ ಆಭರಣವನ್ನು ತೊಟ್ಟು ಸುಖವಾಗಿದ್ದಾನೆ. ನೀವು ಹಣವನ್ನಾದರೂ ತನ್ನಿ ಅಥವಾ ಲಿಂಗವನ್ನಾದರೂ ತನ್ನಿ ಎಂದು ಹಠ ಹಿಡಿಯುತ್ತಾಳೆ. ಒಂದು ದಿನ ಉರಿಲಿಂಗ ದೇವನು ಶೌಚಕ್ಕೆ ಹೋಗುವ ಸಮಯದಲ್ಲಿ ಪೆದ್ದಯ್ಯನು ಅವನನ್ನ ತಡೆದು ತನಗೆ ಲಿಂಗದೀಕ್ಷೆಯನ್ನು ನೀಡಬೇಕೆಂದು ಪಟ್ಟುಹಿಡಿಯುತ್ತಾನೆ. ಆಗ

ಉರಿಲಿಂಗ ದೇವನು ತಾನು ಬೇಗನೆ ಶೌಚಕ್ಕೆ ಹೋಗುವ ಸಲುವಾಗಿ ಹಿಡಿಗಲ್ಲೊಂದನ್ನು ಎತ್ತಿ ಪೆದ್ದಯ್ಯನ ಬಳಿಗೆ ಎಸೆದು ಮೂರ್ಖ ನನ್ನನ್ನು ತಡೆಯಬೇಡ ಹೋಗು ಎಂದು ನುಡಿಯುತ್ತಾನೆ. ಪೆದ್ದಯ್ಯನು ಆ ಹಿಡಿಗಲ್ಲನ್ನೆ ಲಿಂಗವೆಂದು ಭಾವಿಸಿ ಅತ್ಯಂತ ಸಂತೋಷದಿಂದ ಮನೆಗೆ ತರುತ್ತಾನೆ. ಅದನ್ನು ನೋಡಿದ ಹೆಂಡತಿ ಅದು ಲಿಂಗವಲ್ಲ ಕಲ್ಲು ಎನ್ನುತ್ತಾಳೆ. ಆಗ ಪೆದ್ದಯ್ಯನು ಅದನ್ನು ಲಿಂಗವೆಂದು ನಿರೂಪಿಸಲು ಗೊಲ್ಲಾಳನು ಕುರಿಹಿಕ್ಕೆಯನ್ನು ಲಿಂಗವೆಂದು ಪೂಜಿಸಿದ ಬಗೆಯ ಉಪಕಥೆಯೊಂದನ್ನು ಹೇಳುತ್ತಾನೆ. ಗುರುವು ಕಲ್ಲೆಸೆದಾಗ ಪೆದ್ದಯ್ಯ ಅದನ್ನು ಪೂಜಿಸುವ ಮಂತ್ರವನ್ನು ಕೇಳಿದಾಗ ಉರಿಲಿಂಗದೇವ ಕೋಪದಿಂದ ಕೋಣನೆ ಆವುಜಾವು ಎಂದು ಹೇಳಿದ ಮಾತನ್ನೆ ಮಂತ್ರವೆಂದು ಭಾವಿಸಿ ನಿತ್ಯವೂ ಲಿಂಗಾರ್ಚನೆಯನ್ನು ಮಾಡುತ್ತಾನೆ.

ಹೀಗಿರಲು ಒಂದು ದಿನ ಆ ಪಟ್ಟಣದಲ್ಲಿ ರಾಜನು ನೀರಿನ ಬಾವಿಯೊಂದನ್ನು ತೆಗೆಯಿಸುವ ಸಂದರ್ಭ ಬೃಹತ್ ಕಲ್ಲುಬಂಡೆಯೊಂದು ಅಡ್ಡಬರಲು ಅದನ್ನು ಎಷ್ಟೆ ಪ್ರಯತ್ನಿಸಿದರೂ ಒಡೆಯಲಾಗಲಿಲ್ಲ. ಆಗ ರಾಜನು ಉರಿಲಿಂಗದೇವನಿಗೆ ತಮ್ಮ ಶಿವಮಹಿಮೆಯಿಂದ ಹೊಡೆಯಲು ಕೇಳುತ್ತಾನೆ. ಉರಿಲಿಂಗದೇವನು ತನ್ನ ಏಳುನೂರು ಮಂದಿ ಶಿಷ್ಯಂದಿರಿಗೆ ಹೇಳಲು ಅವರು ನಮ್ಮಿಂದ ಸಾಧ್ಯವಿಲ್ಲ ಎಂದು ಪಲಾಯನ ಮಾಡುತ್ತಾರೆ. ಆಗ ಉರಿಲಿಂಗದೇವನಿಂದ ವಿಷಯ ತಿಳಿದ ಪೆದ್ದಯ್ಯ ಆವುಜಾವು ಮಹಿಷನೆಂದು ಭಜಿಸುತ್ತ ತನ್ನ ಶಿವಭಕ್ತಿಯ ಮೂಲಕ ಆ ಕೆಲಸವನ್ನು ಸಾಧಿಸುತ್ತಾನೆ. ಪೆದ್ದಯ್ಯ ಮತ್ತು ಅವನ ಹೆಂಡತಿ ಬಂಡೆ ಇದ್ದ ಕೆರೆಯ ಬಳಿಗೆ ಬಂದು ಲಿಂಗವನ್ನು ಇಟ್ಟು ಮಂತ್ರವನ್ನು ಪಠಿಸಿದಾಗ ಬಂಡೆ ಚೂರಾಗುತ್ತದೆ. ಪೆದ್ದಯ್ಯನ ದೃಢಭಕ್ತಿಯನ್ನು ಕಂಡ ಉರಿಲಿಂಗದೇವನು ಪೆದ್ದಯ್ಯನ ಮನೆಯಲ್ಲಿ ಊಟ ಮಾಡುತ್ತಾನೆ. ಇದನ್ನು ಕಂಡು ಪೆದ್ದಯ್ಯನ ಹೆಂಡತಿ ಕಳವಳಗೊಂಡಾಗ ಉರಿಲಿಂಗದೇವನು ಚೋಳಕ್ಕನ ಕಥೆಯನ್ನು ಹೇಳಿ ಅವಳ ಕಳವಳವನ್ನು ದೂರಮಾಡುತ್ತಾನೆ. ತಮ್ಮ ಗುರುವು ಶ್ವಪಚ ಪೆದ್ದಯ್ಯನ ಮನೆಯಲ್ಲಿ ಊಟ ಮಾಡಿದುದನ್ನು ಕಂಡ ಶಿಷ್ಯರು ಗುರುವನ್ನು ನಿಂದಿಸುತ್ತಾರೆ. ಆಗ ಉರಿಲಿಂಗದೇವನು ಗುರು-ಶಿಷ್ಯ ಸಂಬಂಧದ ಗುರುಭಕ್ತನ ಕಥೆಯನ್ನು ಹೇಳುತ್ತಾನೆ. ಆದರೂ ಗುರುವನ್ನು ನೀನು ಮಠದ ಪಾವಿತ್ರ್ಯ ಹಾಳುಮಾಡಿದೆ ಎಂದು ರಾಜನಿಗೆ ದೂರು ಕೊಡುತ್ತಾರೆ. ಇದರಿಂದ ಗುರುವು ತನ್ನ ಪೀಠಾಧಿಪತಿ ಪಟ್ಟವನ್ನು ಬಿಡಬೇಕಾದ ಸಂದರ್ಭ ಬಂದೊದಗಿ ತನ್ನ ಉತ್ತರಾಧಿಕಾರಿಯನ್ನು ಆಯ್ಕೆ ಮಾಡುವುದಕ್ಕಾಗಿ ಶಿಷ್ಯರಿಗೆ ಒಂದು ಪರೀಕ್ಷೆಯನ್ನು ಒಡ್ಡುತ್ತಾನೆ. ಒಂದು ಕೊಂಡದಲ್ಲಿ ಬೆಂಕಿ ಕೆಂಡವನ್ನು ತುಂಬಿಸಿ ಆ ಬೆಂಕಿಯ ನಡುವೆ ಮಂತ್ರಪಠಿಸಿದವರಿಗೆ ಪಟ್ಟಕಟ್ಟುವುದಕ್ಕಾಗಿ ಪ್ರಕಟಿಸುತ್ತಾನೆ. ಇದನ್ನು ಕೇಳಿದ ಶಿಷ್ಯರು ಹೆದರಿ ಓಡಿಹೋಗುತ್ತಾನೆ. ಆದರೆ ಪೆದ್ದಯ್ಯ ಆ ಅಗ್ನಿಕೊಂಡಕ್ಕೆ

ಇಳಿದು ಮಂತ್ರವನ್ನು ಪಠಿಸುತ್ತಾನೆ. ಆಗ ಶಿವನು ಪ್ರತ್ಯಕ್ಷವಾಗಿ ಸಂತೋಷಗೊಂಡು ಪೆದ್ದಯ್ಯನನ್ನು ಕೈಲಾಸಕ್ಕೆ ಕರೆದುಕೊಂಡು ಹೋಗುತ್ತಾನೆ.

ಈ ಕಥೆಯನ್ನು 'ಉರಿಲಿಂಗಪೆದ್ದಯ್ಯನ ಕಥೆ' ಕಾವ್ಯದಲ್ಲಿ ಬಸವಣ್ಣನು ತನ್ನ ಅಳಿಯ ಚನ್ನಬಸವಣ್ಣನಿಗೆ ಹೇಳಿರುವಂತೆ ನಿರೂಪಿತಗೊಂಡಿದೆ. ಕಾವ್ಯದ ಆರಂಭದಲ್ಲಿ ಬಸವಣ್ಣ-ಚನ್ನಬಸವಣ್ಣನ ವಿಷಯ ಬಂದಿದ್ದರೇ ಕಾವ್ಯದ ಕೊನೆಯಲ್ಲಿ ದೀಪದ ಕಲಿ ತನ್ನ ಹೆಂಡತಿಗೆ ಹೇಳಿರುವಂತೆ ಕಂಡುಬಂದಿದೆ.

ಕರಿವದನಗಣನಾಥನಂಘ್ರಿಯ
ಪರಮ ಭಕ್ತಿಯೊಳ್ಸತತ ಭಜಿಸಿಯೆ
ಶರಣ ಸತ್ಕೃತಿ ಪೇಳ್ವ ಮತಿಯನು ಪಡೆದು ಮುದದಿಂದ
ಸರಸಿಜೋದ್ಭವನರಸಿ ಶಾರದೆ
ಗೆರಗಿ ಯುಕುತಿಯ ಪಡದು ಪೇಳುವೆ
ಕರುಣವಾರುಧಿ ಬಸವರಾಜನು ತನ್ನ ಅಳಿಯನಿಗೆ ॥ (ಸಂ-೧, ಪ-೪)

ಕಲ್ಲಲೊಗೆಯಲು ಕೋಪದಿಂಗುರು
ಮಲ್ಲಿಕಾರ್ಜುನನೆಂದು ಭಾವಿಸಿ
ಸಲ್ಲಲಿತದಿಂ ಶಿವನು ತನ್ನಯ್ಯ ಸಮ್ಮುಖಪರಿಸಿದನೂ
ನಲ್ಲಳಿಗೆ ಬೋಧಿಸಿದ ದೀಪದ
ಕಲಿಯು ಯಿಷ್ಟಾಂತರಂಗಳ
ಪುಲ್ಲ ಶರದಿಪು ಸುತನೆ ಚನ್ನಣ್ಣಾಗೆಂದ ಬಸವೇಶ ॥ (ಸಂ-೩, ಪ-೨೯)

ಈ ಪದ್ಯ ಭಾಗಗಳನ್ನು ಗಮನಿಸಿದರೇ ಬಸವಣ್ಣ ತನ್ನ ಅಳಿಯನಾದ ಚನ್ನಬಸವಣ್ಣನಿಗೆ ಹೇಳಿರುವುದು ಸ್ಪಷ್ಟವಾಗುತ್ತದೆ. ಜೊತೆಗೆ ಈ ಕಾವ್ಯಕ್ಕೊಂದು ಆಕರವಿರುವಂತೆ ತೋರುತ್ತದೆ. ಉರಿಲಿಂಗಪೆದ್ದಯ್ಯನ ಕಥೆಯನ್ನು ನಿರೂಪಿಸ ಹೊರಟ ಈ ಕಾವ್ಯವು ಬಸವಣ್ಣನಿಂದ ಆ ಕಥೆಯನ್ನು ಹೇಳಿಸುವುದೇನೋ ಸರಿ ಆದರೆ ದೀಪದ ಕಲಿಯ ಪ್ರಸ್ತಾಪ ಏಕೆ ಬಂದಿದೆ ಎಂಬುದನ್ನು ನೋಡಿದಾಗ ಈ 'ಉರಿಲಿಂಗಪೆದ್ದಯ್ಯನ ಕಥೆ' ಎಂಬ ಕಾವ್ಯವು ಚನ್ನಮಲ್ಲೇಶ ಕವಿಯ ದೀಪದ ಕಲಿಯರ ಕಾವ್ಯದ ಎರಡನೇ ಸಂಧಿಯಲ್ಲಿ ಬರುವ ಉರಿಲಿಂಗ ಪೆದ್ದಯ್ಯನಿಗೆ ಸಂಬಂಧಿಸಿದ ಉಪಕಥೆಯನ್ನು ಆಧರಿಸಿದೆ ಮತ್ತು ಅತ್ಯಂತ ನಿಕಟವಾಗಿ ಅನುಸರಿಸಿರುವುದು ಎದ್ದು ಕಾಣುತ್ತದೆ. ದೀಪದ ಕಲಿಯರ ಕಾವ್ಯದಲ್ಲಿ ೯ ಸಂಧಿಗಳೂ, ೧೦೪೬ ಸಾಂಗತ್ಯ ಪದ್ಯಗಳಿದ್ದು ೨ನೇ ಸಂಧಿಯ ಪದ್ಯ ೪೯ ರಿಂದ ೧೫೫ರ ವರೆಗೆ ಉರಿಲಿಂಗ ಪೆದ್ದಯ್ಯನ ಕಥೆಯು ನಿರೂಪಿತಗೊಂಡಿದೆ.

ಈ ಕಾವ್ಯದಲ್ಲಿ ಬಸವಣ್ಣನು ಚೆನ್ನಬಸವಣ್ಣನಿಗೆ ದೀಪದ ಕಲಿಯ ಕಥೆಯನ್ನು ಹೇಳುತ್ತಾನೆ. ಆ ಕಥೆಯೊಳಗೆ ದೀಪದ ಕಲಿಯು ತನ್ನ ಹೆಂಡತಿಗೆ ಉರಿಲಿಂಗಪೆದ್ದಯ್ಯನ ಉಪಕಥೆಯನ್ನು ಹೇಳಿರುವಂತೆ ಇದೆ. ಪ್ರಸ್ತುತ ಉರಿಲಿಂಗಪೆದ್ದಯ್ಯನ ಕಥೆ ಕಾವ್ಯದಲ್ಲಿ ಪೆದ್ದಯ್ಯನನ್ನೆ ಪ್ರಧಾನವಾಗಿಟ್ಟುಕೊಂಡು ಭಾಮಿನಿ ಷಟ್ಪದಿಯಲ್ಲಿ ಕಥೆಯನ್ನು ಹೇಳಿದೆ. ಈ ಎರಡೂ ಕಾವ್ಯಗಳಲ್ಲೂ ಉರಿಲಿಂಗ ಪೆದ್ದಯ್ಯನಿಗೆ ಸಂಬಂಧಿಸಿದ ಗುರುಭಕ್ತಿ, ಶಿವಭಕ್ತಿ, ಕಾಯಕ, ಸಾಮಾಜಿಕ ಸ್ಥಿತಿಗತಿಗಳ ವಿಚಾರಗಳು ಒಂದೇ ರೀತಿಯಾಗಿ ಕಂಡುಬರುತ್ತವೆ. ಸಣ್ಣಪುಟ್ಟ ವ್ಯತ್ಯಾಸಗಳೊಂದಿಗೆ ಸಾಂಗತ್ಯ ಕಾವ್ಯವನ್ನು ಷಟ್ಪದಿ ಕಾವ್ಯವನ್ನಾಗಿ ರೂಪಾಂತರಿಸಿರುವಂತೆ ಕಾಣುತ್ತದೆ. ಆದರೂ ಕೆಲವೊಂದು ಸಂದರ್ಭಗಳನ್ನು ಕವಿಯು ಪ್ರೌಢರಾಯನ ಕಾವ್ಯದಿಂದ ತೆಗೆದುಕೊಂಡಿರುವುದನ್ನು ಸಂಪಾದಕರಾದ ವಿಜಯಕುಮಾರಿ ಎಸ್ ಕರಿಕಲ್ ಅವರು ಗುರುತಿಸಿದ್ದಾರೆ.[೮] ಗುರುವು ಶೌಚಕ್ಕೆ ಹೋಗುವ ಪ್ರಸಂಗವನ್ನು ಪ್ರೌಢರಾಯನ ಕಾವ್ಯದಿಂದ ತೆಗೆದುಕೊಂಡಿದ್ದರೇ ದೀಪದ ಕಲಿಯರ ಕಾವ್ಯದಲ್ಲಿ ಬರುವ 'ಉರಿಗಣ್ಣನೆ ಆವುಜ' ಎಂಬ ಮಂತ್ರ ಬದಲಿಗೆ 'ಕೋಣನೆ ಆವುಜಾವು' ಎಂಬ ಪ್ರಸ್ತಾಪವಿದೆ. ಪ್ರೌಢರಾಯನ ಕಾವ್ಯದಲ್ಲಿ 'ಫೆ ದಗಡಿ ಜಾ' ಎಂದಿದೆ. ದೀಪದ ಕಲಿಯರ ಕಾವ್ಯದಲ್ಲಿ ಪೆದ್ದಯ್ಯನು ಗುರುವು ಮನೆಗೆ ಹೋಗುವ ದಾರಿಯಲ್ಲಿ ಕಾಯ್ದುಕೊಂಡಿದ್ದು ತನಗೆ ಲಿಂಗವನ್ನು ಕೊಡುವಂತೆ ಕೇಳುವುದನ್ನು ನಿರೂಪಿಸಲಾಗಿದೆ. ಹಾಗೂ ದೀಪದ ಕಲಿಯರ ಕಾವ್ಯದ ಉರಿಲಿಂಗ ಪೆದ್ದಯ್ಯನ ಕಥೆಯಲ್ಲಿ ಬರುವ ಗೊಲ್ಲಾಳ, ಚೋಳಕ್ಕ, ಗುರುಭಕ್ತನ ಉಪಕಥೆಗಳು ಇಲ್ಲೂ ಬಂದಿವೆ. ಜೊತೆಗೆ ತಿರುವಣ್ಣಾಮಲೈ ಎಂಬ ಗ್ರಾಮದ ಮಠಪತಿ ಶಂಕರದೇವನ ಕಥೆಯು ಇದರಲ್ಲಿ ಉಲ್ಲೇಖವಾಗಿದೆ. ಇದು ದೀಪದ ಕಲಿಯರ ಕಾವ್ಯದಲ್ಲಿ ಕಂಡುಬರುವುದಿಲ್ಲ.

'ಉರಿಲಿಂಗ ಪೆದ್ದಯ್ಯನ ಕಥೆ' ಎಂಬ ಈ ಕಾವ್ಯದ ಸ್ವರೂಪವನ್ನು ಗಮನಿಸಿದರೆ ಗುರು–ಶಿಷ್ಯ ಪರಂಪರೆಯ ಮಹತ್ವವನ್ನು ಜೊತೆಗೆ ಶಿವಭಕ್ತಿಯ ಮಹಿಮೆಯನ್ನು ಸಾರುವಂತಹ ಕಾವ್ಯವಾಗಿದೆ. ಶಿವಭಕ್ತಿಯನ್ನು ಸಾಧಿಸಿಕೊಳ್ಳಲು ಗುರುಭಕ್ತಿಯು ಮಾರ್ಗವಾಗಬಲ್ಲದು ಎಂಬುದನ್ನು ನಿರೂಪಿಸಿದೆ. ಇದಕ್ಕಿಂತಲೂ ಮುಖ್ಯವಾಗಿ ಈ ಕಥೆಯನ್ನು ಸಾಮಾಜಿಕ ಸಂದರ್ಭದಲ್ಲಿಟ್ಟು ನೋಡಿದರೆ ಆರಂಭಕ್ಕೆ ಶ್ವಪಚನೊಬ್ಬನಿಗೆ (ಶ್ರೀ ಎಲ್.ಕೆ. ಕೊರಳ್ಳಿ ಅವರ ಲೀಲಾತರಂಗದಲ್ಲಿ ಉರಿಲಿಂಗ ಪೆದ್ದಿಯನ್ನು ಹೊಲೆಯನೆಂದು ಸೂಚಿಸಿದ್ದಾರೆ.)[೯] ಲಿಂಗದೀಕ್ಷೆಯನ್ನು ಕೊಡಲು ನಿರಾಕರಿಸುವ ಗುರು ಒಂದು ಕಡೆಯಾದರೇ ಆ ತಿರಸ್ಕಾರವನ್ನೇ ಪುರಸ್ಕಾರ ಎಂದು ಭಾವಿಸುವ ಶಿಷ್ಯನು ಶಿವಭಕ್ತಿಯಲ್ಲಿ ಗುರುವನ್ನು ಮೀರಿಸುವ ಮತ್ತು ಮಠಕ್ಕೆ ಅವನ ಉತ್ತರಾಧಿಕಾರಿಯಾಗಿ ಬೆಳೆಯುವುದು ಅದ್ಭುತವಾಗಿದೆ. ವ್ಯಕ್ತಿಯ ಸಾಮಾಜಿಕ ಸ್ತರವನ್ನು ಮೀರಿ ಶಿವಭಕ್ತಿಯ

ಮೂಲಕ ಸಾಮಾಜಿಕ ಉನ್ನತಿಯನ್ನು ಸಾಧಿಸಿಕೊಂಡಿರುವುದು ಕಂಡುಬರುತ್ತದೆ. ಗೃಹಸ್ಥನೂ, ಶ್ವಪಚನೂ ಆಗಿದ್ದ ಪೆದ್ದಯ್ಯ ಆ ಸಾಮಾಜಿಕ ಚೌಕಟ್ಟುಗಳನ್ನು ಮೀರಿ ವೀರಶೈವ ಮಠಕ್ಕೆ ಮೊದಲ ದಲಿತ ಮಠಾಧಿಪತಿಯಾಗಿ ನೇಮಕವಾಗಿರುವುದು ಭಾರತದ ಶ್ರೇಣೀಕೃತ ಸಾಮಾಜಿಕ ಸಂದರ್ಭದಲ್ಲಿ ಒಂದು ಕ್ರಾಂತಿಕಾರಿ ವಿಷಯವೇ ಆಗಿದೆ. ಇದನ್ನು ಶಿವಭಕ್ತಿಯ ಮೂಲಕ ಸಾಧಿಸಿಕೊಳ್ಳಲಾಗಿದೆ.

ಈ ಕಾವ್ಯದಲ್ಲಿ ಪೆದ್ದಯ್ಯನಿಗೆ ಎದುರಾಗಿರುವ ಎರಡು ಪರೀಕ್ಷಾರ್ಥ ಸಂದರ್ಭಗಳನ್ನು ಗಮನಿಸಿದರೆ ಅಂದಿನ ಸಾಮಾಜಿಕ ಸ್ವರೂಪಗಳನ್ನು ಸಾಂಕೇತಿಕವಾಗಿ ಹೇಳುತ್ತಿರುವಂತೆ ಭಾಸವಾಗುತ್ತದೆ. ರಾಜನೊಬ್ಬನು ನೀರಿಗಾಗಿ ಬಾವಿಯನ್ನು ಅಥವಾ ಕೆರೆಯನ್ನು ನಿರ್ಮಿಸುವ ಸಂದರ್ಭ ಅಡ್ಡವಾಗಿ ಎದುರಾಗುವ ಕಲ್ಲು ಬಂಡೆಯನ್ನು ಪೆದ್ದಯ್ಯ ತನ್ನ ಶಿವಭಕ್ತಿಯ ಮಹಿಮೆಯಿಂದ ಹೊಡೆದು ಹಾಕುತ್ತಾನೆ. ಇಲ್ಲಿ ಕಲ್ಲು ಬಂಡೆಯು ಅಂದಿನ ಅಚಲ ಸಾಂಪ್ರದಾಯಿಕ ಸಾಮಾಜಿಕ ಚೌಕಟ್ಟಿನ ಸಂಕೇತವಾಗಿ ಕಂಡುಬಂದಿದೆ. ಇದು ದಲಿತ ಸಮುದಾಯದ ವ್ಯಕ್ತಿಯೊಬ್ಬ ಗುರುವಿನ ಸ್ಥಾನಕ್ಕೇರುವಲ್ಲಿ ಎದುರಾಗಿರುವ ಸಾಮಾಜಿಕ ಅಡ್ಡಿಗಳನ್ನು ತನ್ನ ಶಿವಭಕ್ತಿಯ ಮೂಲಕವೇ ನಿವಾರಿಸಿಕೊಂಡಿರುವಂತೆ ತೋರುತ್ತದೆ. ಇಲ್ಲಿ ಸಾಂಪ್ರದಾಯಿಕ ಸಮಾಜ ಬಂಡೆಯಂತೆ ಗಟ್ಟಿಯಾಗಿದ್ದ ಸಂದರ್ಭದಲ್ಲಿ ಅದನ್ನು ಹೊಡೆದು ನೀರಿನಂತೆ ಚಲನಶೀಲತೆಯನ್ನು ಸಾಧಿಸಿಕೊಂಡಿರುವುದನ್ನು ಕಾಣಬಹುದು. ಬೆಂಕಿ ಕೊಂಡದ ಪ್ರಸಂಗವೂ ಇದನ್ನೇ ಧ್ವನಿಸುತ್ತದೆ.

ಕರ್ತೃ ವಿಚಾರ : ಉರಿಲಿಂಗ ಪೆದ್ದಯ್ಯನ ಕಥೆ ಕಾವ್ಯದಲ್ಲಿ ಎಲ್ಲಿಯೂ ಕರ್ತೃವಿನ ಬಗೆಗೆ ಮಾಹಿತಿ ಇಲ್ಲ. ಇದರ ಸಂಪಾದಕರೂ ಕೂಡ ಈ ಕಾವ್ಯವನ್ನು ಅಜ್ಞಾತ ಕವಿ ರಚಿತ ಎಂದೇ ಹೇಳಿದ್ದಾರೆ. ಆದರೆ ಕಾಲವನ್ನು ಗುರುತಿಸುವ ಪ್ರಯತ್ನಗಳು ನಡೆದಿವೆ. ಉರಿಲಿಂಗ ಪೆದ್ದಯ್ಯನ ಕಥೆಯ ಮೇಲೆ ಅಂಬಲಿಗೆ ಚೆನ್ನಮಲ್ಲನ ದೀಪದ ಕಲಿಯರ ಕಾವ್ಯದ ಪ್ರಭಾವ ಇರುವುದರಿಂದ ಚೆನ್ನಮಲ್ಲನ ಕಾಲ ಕವಿಚರಿತೆಯಲ್ಲಿರುವಂತೆ ಸು. ೧೭೦೦ ಆಗಿದ್ದು ಉರಿಲಿಂಗ ಪೆದ್ದಯ್ಯನ ಕಾಲವನ್ನು ೧೮ನೇ ಶತಮಾನ ಎಂದು ಊಹಿಸಿದ್ದಾರೆ. ಚಿತ್ತಯ್ಯ ಪೂಜಾರ್ ಅವರು ಚಾಮರಸನ ಪ್ರಭಾವ ಇರುವುದರಿಂದ ೧೫ನೇ ಶತಮಾನದ ನಂತರದ ಹಾಗೂ ಚನ್ನಮಲ್ಲ ಕವಿಯ ಪ್ರಭಾವ ಇರುವುದರಿಂದ ೧೭ನೇ ಶತಮಾನದ ನಂತರದ ೧೮ನೇ ಶತಮಾನವಿರಬೇಕೆಂದು ಅಂದಾಜಿಸಬಹುದಾಗಿದೆ ಎಂದು ಹೇಳಿದ್ದಾರೆ.[೧೦] ಕರ್ತೃವಿನ ಬಗೆಗೆ ಕೆಲವು ಚರ್ಚೆಗಳನ್ನು ಇಲ್ಲಿ ಮುಂದುವರೆಸಬಹುದು ಎನಿಸುತ್ತದೆ.

ವಿಜಯ ಕುಮಾರಿ ಎಸ್. ಕರಿಕಲ್ ಅವರು ಮೈಸೂರು ವಿಶ್ವವಿದ್ಯಾನಿಲಯದ ಹಸ್ತಪ್ರತಿ ಸೂಚಿಯಲ್ಲಿರುವ ಬಸವರಾಜ? ಎಂಬ ಹೆಸರನ್ನು ಕುರಿತು ಹೇಳುತ್ತ "ಬಸವರಾಜ

ಎನ್ನುವ ಹೆಸರು ಕವಿಯನ್ನು ಸೂಚಿಸುತ್ತಿರಬಹುದೆ? ಭಕ್ತಿಭಂಡಾರಿ ಬಸವಣ್ಣನ ಹೆಸರಿನೊಂದಿಗೆ ತನ್ನ ಹೆಸರನ್ನು ಅಭೇದಗೊಳಿಸಿ ಕವಿ ಇಲ್ಲಿ ಹೇಳಿಕೊಂಡಿರಬಹುದೆ? ಎಂಬ ಅನುಮಾನ ಬರುತ್ತದೆ. ಆದರೆ ಆ ಅನುಮಾನ ಪರಿಹರಿಸಲು ಅಗತ್ಯವಾದ ಸೂಚನೆಗಳಿಲ್ಲವಾದ್ದರಿಂದ ಕವಿ ಯಾರು ಎನ್ನುವ ಪ್ರಶ್ನೆ ಹಾಗೆ ಉಳಿದಿದೆ."[೧೧] ಎಂದು ಅಭಿಪ್ರಾಯಪಟ್ಟಿದ್ದಾರೆ. ಡಾ.ಎಸ್. ವಿದ್ಯಾಶಂಕರ್ ಅವರ ವೀರಶೈವ ಸಾಹಿತ್ಯ ಚರಿತ್ರೆಯಲ್ಲಿ ಬಸವರಾಜನ ಉರಿಲಿಂಗಪೆದ್ದಯ್ಯನ ಕಥೆ ಎಂದು ಹೇಳಲಾಗಿದೆ.[೨] ಆದರೆ ಈ ಕಾವ್ಯವನ್ನು ಬಸವಣ್ಣನು ಚೆನ್ನಬಸವಣ್ಣನಿಗೆ ಹೇಳಿರುವಂತೆ ನಿರೂಪಿಸಿರುವ ತಂತ್ರವಿರುವುದರಿಂದ ಬಸವರಾಜ? ಎಂಬ ಹೆಸರಿನ ಬಗೆಗೆ ಈ ಗೊಂದಲ ಉಂಟಾಗಿದೆ ಎನಿಸುತ್ತದೆ. ಇದನ್ನು ಪರಿಹರಿಸಿಕೊಳ್ಳಲು ದೀಪದ ಕಲಿಯರ ಕಾವ್ಯವನ್ನು ಗಮನಿಸಬಹುದು. ಅದರಲ್ಲಿಯೂ ಇದೇ ನಿರೂಪಣ ತಂತ್ರವಿದೆ.

ಸೋದರಳಿಯನಿಗೆ ಪೇಳ್ದನು ಬಸವಣ್ಣ
ಆದಿ ಪ್ರಮಥಗಣ ಶಿವನ
ಪಾದ ದೀಪದ ಕಲಿ ಪೂಜಿಸಿ ಗುಡಿಸಹ
ಪೋದುದು ಕೇಳು ಮೇಲ್ಗಥೆಯ (ಸಂ-೧, ಪುಟ-೪)

ಶಿವಭಕ್ತಿಯ ಮಹಿಮೆಯ ಕಥೆಯನ್ನು ನಿರೂಪಿಸುವ ಕೆಲವು ವೀರಶೈವ ಕಾವ್ಯಗಳಲ್ಲಿ ಬಸವಣ್ಣನೇ ಆ ಕಥೆಯನ್ನು ಶರಣ ಬಂಧುಗಳಿಗೆ ಹೇಳಿರುವಂತೆ ಕಥನ ತಂತ್ರಗಳನ್ನು ಬಳಸಲಾಗಿದೆ. ಪರ್ವತದೇವನ 'ನನ್ನಯ್ಯ ಚಾರಿತ್ರ' ಕಾವ್ಯದಲ್ಲೂ ಇದೇ ತಂತ್ರವಿರುವುದು ಕಂಡುಬರುತ್ತದೆ. ಹಾಗಾಗಿ ಇಲ್ಲಿ ಕಾವ್ಯದ ನಿರೂಪಕನಾಗಿ ಬಸವಣ್ಣ ಅಥವಾ ಬಸವರಾಜ ಎಂಬ ಹೆಸರು ಕಂಡುಬಂದಿದೆಯೇ ಹೊರತು ಕಾವ್ಯವನ್ನು ರಚಿಸಿರುವ ಕವಿಯ ಹೆಸರಲ್ಲ ಎಂಬುದು ಸ್ಪಷ್ಟವಾಗುತ್ತದೆ. ಪ್ರಸ್ತುತ ಕೃತಿಯು ಅಂಬಲಿಗೆ ಚೆನ್ನಮಲ್ಲೇಶನ ದೀಪದ ಕಲಿಯರ ಕಾವ್ಯವನ್ನು ಅತ್ಯಂತ ನಿಕಟವಾಗಿ ಅನುರಿಸಿರುವುದರಿಂದ ಅದರ ಮೂಲಕವೇ ಈ ಚರ್ಚೆಯನ್ನು ಮುಂದುವರೆಸಬಹುದಾಗಿದೆ.

ಅಂಬಲಿಗೆ ಚೆನ್ನಮಲ್ಲೇಶನು ದೀಪದ ಕಲಿಯರ ಕಾವ್ಯದಲ್ಲಿ 'ಶ್ರೀ ಗಿರಿ ಚೆನ್ನಮಲ್ಲೇಶ' ಎಂಬುದಾಗಿ ತನ್ನಿಷ್ಟ ದೈವವನ್ನು ಸ್ತುತಿಸಿದ್ದಾನೆ.

ಗಿರಿಜೆಯ ಕುಮಾರ ಕರಿಮುಖ ಗಂಗೆಯ
ತರಳನೆ ಕಲಿ ವೀರಭದ್ರ
ವರಮತಿಕೊಡಿಸು ಶ್ರೀಗಿರಿ ಚನ್ನಮಲ್ಲೇಶ
ಪರಮಾಮೃತದ ರಸಗರೆದು (ಸಂ-೧, ಪ-೩)

ಜೊತೆಗೆ ಕಾವ್ಯದ ಅನೇಕ ಕಡೆಗಳಲ್ಲಿ ಈ ಹೆಸರು ಮತ್ತೆ ಮತ್ತೆ ಬಂದಿದೆ. ಶ್ರೀಶೈಲ ಮುದಿ ಮಲ್ಲೇಶ್ವರ (ಸಂ-೨, ಪ-೭೩), ಚನ್ನಮಲ್ಲೇಶ (ಸಂ-೨, ಪ.-೭೬) ಚನ್ನಮಲ್ಲಿಕಾರ್ಜುನ (ಸಂ-೨, ಪ-೭೬), ಚನ್ನಮಲ್ಲಿಕಾರ್ಜುನ (ಸ-೨, ಪ-೧೩೭) ಗಳಂತಹ ಉಲ್ಲೇಖಗಳು ಕಂಡುಬರುತ್ತವೆ. ಇದೇ ರೀತಿಯ ಶಬ್ದಗಳು ಉರಿಲಿಂಗ ಪೆದ್ದಯ್ಯನ ಕಥೆಯಲ್ಲೂ ಕಾಣಬಹುದಾಗಿದೆ.

ಪೊನ್ನ ಕಾಣುತ ವೃದ್ಧ ಮೂರ್ತಿಗೆ
ಚನ್ನಮಲ್ಲೇಶ್ವರನೆ ಬಂದೊಲ್
ತನ್ನ ಮನದಲ್ಲಿ ಹಿಗ್ಗಿ ಕುಣಿದವನು ನಡೆದ ಹರುಷದಲಿ (ಸಂ-೧, ಪ-೫೦)

ಮಲ್ಲೇಶ, ಶ್ರೀಗಿರಿ ಮಲ್ಲಿಕಾರ್ಜುನ (ಸಂ-೧, ಪ-೫೩), ಶ್ರೀಗುರು ಮಲ್ಲಿಕಾರ್ಜುನ (ಸಂ-೧ ಪ-೫೯), ಗುರು ಮಲ್ಲಿಕಾರ್ಜುನ (ಸಂ-೩ ಪ-೨೬) ಗಳಂತಹ ಉಲ್ಲೇಖಗಳು ಇವೆ. ಅಲ್ಲದೆ ಈ ಕಾವ್ಯದ ಆರಂಭದಲ್ಲಿ ಇಷ್ಟದೈವದ ಸ್ತುತಿಯಲ್ಲಿ 'ಮಲ್ಲಿಕಾರ್ಜುನ' ಎಂಬ ಹೆಸರಿದೆ.

ದೀಪದ ಕಲಿಯರ ಕಾವ್ಯದಲ್ಲಿ ಇದು ಇಷ್ಟದೈವದ ಹೆಸರಾಗಿ ಬಂದಿದ್ದರೇ, ಉರಿಲಿಂಗಪೆದ್ದಯ್ಯನ ಕಥೆಯಲ್ಲಿ ಅದರ ಅನುಕರಣೆಯಾಗಿದೆ. ಆದರೂ ಈ ಎರಡೂ ಕಾವ್ಯಗಳ ನಡುವೆ ನಿಕಟವಾದ ಸಂಬಂಧವಿರುವಂತೆಯೇ ಕರ್ತೃ ಬಗೆಗ ಸಂಬಂಧವಿರಬಹುದೆ? ಎನಿಸುತ್ತದೆ. ಏಕೆಂದರೇ ಉರಿಲಿಂಗಪೆದ್ದಯ್ಯ ನೆಲೆಸಿದ್ದನೆಂ ಹೇಳಲಾಗುವ ಮಹಾರಾಷ್ಟ್ರದ ನಾಂದೇಡ ಜಿಲ್ಲೆಗೆ ಸೇರಿದ ಹಾಣೆಗಾಂವದಲ್ಲಿ ದೀಪ ಕಲಿಯರ ಕಾವ್ಯದ ಹಸ್ತಪ್ರತಿಯೊಂದು ದೊರಕಿದೆ. ಆದರೆ ಕರ್ತೃತ್ವದಲ್ಲಿ ಅಭೇದ ಸಾಧಿಸಲು ಸ್ಪಷ್ಟವಾದ ಸಾಮಗ್ರಿಗಳು ಸದ್ಯಕ್ಕೆ ಲಭ್ಯವಿಲ್ಲ. ಉರಿಲಿಂಗ ಪೆದ್ದಯ್ಯನ ಕಥೆಯನ್ನು ಬರೆದ ಕವಿಯ ಇಷ್ಟದೈವದ ಹೆಸರು ಮಲ್ಲಿಕಾರ್ಜುನ ಆಗಿದ್ದು, ಚೆನ್ನಮಲ್ಲೇಶ ಕವಿಯ ಇಷ್ಟದೈವ ಚನ್ನಮಲ್ಲೇಶ ಎಂಬುದಾಗಿದೆ. ಮಲ್ಲಿಕಾರ್ಜುನ, ಚೆನ್ನಮಲ್ಲೇಶ ಎಂಬುದು ಈ ಎರಡೂ ಕಾವ್ಯಗಳಲ್ಲೂ ಕಂಡುಬಂದಿದೆ. ಇದರಿಂದ ಈ ಕೃತಿಗಳ ಕರ್ತೃ ಒಬ್ಬನೆ ಇರಬಹುದೆ? ಎಂಬ ಸಂದೇಹ ಬಂದರೂ ಮೊದಲು ಸಾಂಗತ್ಯದಲ್ಲಿ ಬರೆದ ತನ್ನದೇ ಕಾವ್ಯವನ್ನು ಮತ್ತೊಮ್ಮೆ ಷಟ್ಪದಿಯಲ್ಲಿ ಬರೆಯಲು ಕಾರಣಗಳು ಇದ್ದಿರಲಾರವು ಹೀಗಾಗಿ ಈ ಕಾವ್ಯಗಳ ಕರ್ತೃ ಬೇರೆ ಬೇರೆಯೇ ಆಗಿದ್ದಾರೆ. ದೀಪದ ಕಲಿಯರ ಕಾವ್ಯದ ಪ್ರಸಂಗವನ್ನು ಅನುಕರಣೆ ಮಾಡಿರುವ ಕವಿ ತನ್ನ ಬಗೆಗೆ ಹೇಳಿಕೊಳ್ಳದೆಯೂ ಇರಬಹುದು ಎನಿಸುತ್ತದೆ.

ಪೂರ್ವಕವಿಗಳ ಸ್ಮರಣೆಯಲ್ಲಿಯೂ ಕೂಡ ಸ್ಪಷ್ಟವಾದ ಉಲ್ಲೇಖವಿಲ್ಲ ಶಿವ ಕವಿಗಳಿಗೆ ವಂದಿಸಿ ಎಂದಷ್ಟೇ ಹೇಳಲಾಗಿದೆ. ಆದರೆ ದೀಪದ ಕಲಿಯರ ಕಾವ್ಯದಲ್ಲಿ

ಅಂಬಲಿಗೆ ಚನ್ನಮಲ್ಲೇಶ ಕವಿಯು ಕೆರೆಯ ಪದ್ಮರಸ, ಮಯೂರ, ಮಲುಹಣ, ಹರಿಹರ, ರಾಘವಾಂಕ, ಚಾಮರಸ, ಉದ್ಭಟ, ಪಾಲ್ಕುರಿಕೆ ಸೋಮನಾಥರನ್ನು (ಸಂ-೧, ಪುಟ-೮) ಸ್ಮರಿಸಿದ್ದಾನೆ. ಈ ಕಾವ್ಯದ ಎರಡನೆ ಸಂಧಿಯಲ್ಲಿ ಬರುವ ಉರಿಲಿಂಗ ಪೆದ್ದಯ್ಯನ ಕಥೆಯನ್ನು ಮಾತ್ರ ತೆಗೆದುಕೊಂಡಿರುವುದರಿಂದ ಅಲ್ಲಿ ಬಂದಿರುವ ವಿಚಾರಗಳಷ್ಟೇ ಇಲ್ಲಿ ಕಂಡುಬಂದಿದೆ. ಆದರೆ ಪೂರ್ವಕವಿಗಳ ಬಗೆಗೆ ಆಗಲೀ, ಸಮಕಾಲೀನ ಕವಿಗಳ ಬಗೆಗೆ ಆಗಲೀ ಯಾವುದೇ ರೀತಿಯ ಮಾಹಿತಿ ಇಲ್ಲ. ಆದರೆ ಕವಿಯು ಪ್ರೌಢರಾಯನ ಕಾವ್ಯದಲ್ಲಿ ಬಂದಿರುವ ಶೌಚದ ಪ್ರಸಂಗವನ್ನು ಇಲ್ಲಿ ತಂದಿರುವುದರಿಂದ ದೀಪದ ಕಲಿಯರ ಕಾವ್ಯದ ಜೊತೆಗೆ ಪ್ರೌಢರಾಯನ ಕಾವ್ಯವನ್ನು ನೋಡಿದ್ದ ಎಂಬುದು ತಿಳಿಯುತ್ತದೆ. ಮತ್ತು ದೀಪದ ಕಲಿಯರ ಕಾವ್ಯದಲ್ಲಿ ಬರುವ ಉರಿಗಣ್ಣನೆ ಆವುಜ ಎಂಬುದನ್ನು ಕೋಣನೆ ಆವುಆವು ಎಂದು ಬದಲಾಯಿಸಿಕೊಂಡಿರುವುದು ಕಂಡುಬಂದಿದೆ. ಇದು ಯಾವುದೋ ಮತ್ತೊಂದು ಕಾವ್ಯದಲ್ಲಿ ಇದ್ದಿರಬಹುದು ಅಥವಾ ಬಂಡೆ ಹೊಡೆಯುವ ಸನ್ನಿವೇಶಕ್ಕೆ ತಕ್ಕಂತೆ ನಾಟಕೀಯವಾಗಿ ಮಾರ್ಪಡಿಸಿಕೊಂಡಿರಬಹುದು ಎನಿಸುತ್ತದೆ.

ಈ ಎಲ್ಲಾ ಚರ್ಚೆಗಳ ನಂತರವೂ ಯಾವುದೇ ಸ್ಪಷ್ಟವಾದ ನಿರ್ಧಾರಕ್ಕೆ ಬರಲು ಸಾಧ್ಯವಿಲ್ಲ. ಹಾಗಾಗಿ ಉರಿಲಿಂಗಪೆದ್ದಯ್ಯನ ಕಥೆ ಎಂಬ ಈ ಕಾವ್ಯದ ಕರ್ತೃವು ಅಂಬಲಿಗೆ ಚೆನ್ನಮಲ್ಲೇಶನ ಸಮಕಾಲೀನ ಅಥವಾ ಆನಂತರದವನಿರಬೇಕು ಎನಿಸುತ್ತದೆ. ಸ್ಪಷ್ಟವಾದ ಆಕರಗಳು ಸಿಗುವ ತನಕ ಅಜ್ಞಾತ ಕವಿ ಎಂದು ಹೇಳುವುದು ಅನಿವಾರ್ಯ. ಇದರ ಬಗ್ಗೆ ಇನ್ನಷ್ಟು ಸಂಶೋಧನೆಗಳು ನಡೆಯುವ ಅಗತ್ಯವಿದೆ.

ಅಡಿಟಿಪ್ಪಣಿಗಳು

೧) ಎಚ್.ಪಿ. ಮಲ್ಲೇದೇವರು – ಉರಿಲಿಂಗ ಪೆದ್ದಿಗಳ ವಚನಗಳು ಪುಟ-೨.
೨) ಡಾ.ಎಸ್. ವಿದ್ಯಾಶಂಕರ್ – ವೀರಶೈವ ಸಾಹಿತ್ಯ ಚರಿತ್ರೆ – ಸಂ-೧, ಪುಟ-೫೦೪.
೩) ಚಂದ್ರಪ್ಪ ಹೆಬ್ಬಾಳಕರ್ – ಉರಿಲಿಂಗಪೆದ್ದಿ ಪರಂಪರೆ, ಪುಟ-೪.
೪) ವಿಜಯ ಕುಮಾರಿ ಎಸ್.ಕರಿಕಲ್ – ಉರಿಲಿಂಗ ಪೆದ್ದಯ್ಯನ ಕಥೆ – ಪುಟ-೧೩.
೫) ಮ.ನ. ಜವರಯ್ಯ – ದಲಿತ ವರ್ಗದ ಶರಣರು ಒಂದು ಅಧ್ಯಯನ, ಪುಟ-೩೫.
೬) ಡಾ. ಮಾಯಾದೇವಿ ಮಾಲಿಪಾಟೀಲ – ಅಂಬಲಿಗೆ ಚೆನ್ನಮಲ್ಲ ಕವಿ, ಪುಟ-೩೫.
೭) ವಿಜಯ ಕುಮಾರಿ ಎಸ್. ಕರಿಕಲ್-ಉರಿಲಿಂಗ ಪೆದ್ದಯ್ಯನ ಕಥೆ, ಪುಟ-೧೦೬
೮) ವಿಜಯ ಕುಮಾರಿ ಎಸ್. ಕರಿಕಲ್ (ಸಂ) ಉರಿಲಿಂಗ ಪೆದ್ದಯ್ಯನ ಕಥೆ, ಪುಟ-೩೨.
೯) ಎಲ್.ಕೆ. ಕೊರಳ್ಳಿ ಅವರ ಲೀಲಾತರಂಗ (೧೯೮೨) – ಪುಟ-೧೧೮.

೧೦) ಚಿತ್ತಯ್ಯ ಪೂಜಾರ್ (ಸಂ)–ಉರಿಲಿಂಗ ಪೆದ್ದಯ್ಯನವರ ಕಥೆ–ಪುಟ–೩೭.
೧೧) ವಿಜಯ ಕುಮಾರಿ ಎಸ್. ಕರಿಕಲ್ (ಸಂ) – ಉರಿಲಿಂಗ ಪೆದ್ದಯ್ಯನ ಕಥೆ, ಪುಟ–೧೨.
೧೨) ಡಾ.ಎಸ್. ವಿದ್ಯಾಶಂಕರ–ವೀರಶೈವ ಸಾಹಿತ್ಯ ಚರಿತ್ರೆ ಸಂ–೧, ಪುಟ–೫೦೫.

ಪರಾಮರ್ಶನ ಗ್ರಂಥಗಳು

೧. ಡಾ. ಸಿದ್ಧಯ್ಯ ಪುರಾಣಿಕ – ಶರಣ ಚರಿತಾಮೃತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೨. ಡಾ. ಸಾವುಕಾರ, ಎಸ್. ಕಾಂಬಳೆ – ಲಿಂಗಾಯಿತ ಅಸ್ಪೃಶ್ಯರು ಒಂದು ಅಧ್ಯಯನ ಶ್ರೀ ಮುರುಘರಾಜೇಂದ್ರ ಗ್ರಂಥಮಾಲೆ, ಚಿತ್ರದುರ್ಗ,

೩. ಎಂ.ಎಂ. ಕಲಬುರ್ಗಿ – ಸಂಕೀರ್ಣ ವಚನ ಸಂಪುಟ–೧, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೪. ಡಾ.ಎಸ್. ವಿದ್ಯಾಶಂಕರ (ಸಂ) – ಚೆನ್ನಮಲ್ಲೇಶ ಕವಿಯ ದೀಪದ ಕಲಿಯರ ಕಾವ್ಯ ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು.

೫. ಡಾ.ಎಸ್. ವಿದ್ಯಾಶಂಕರ – ವಚನಾನುಶೀಲನ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.

೬. ಡಾ.ಎನ್.ಜಿ. ಮಹಾದೇವಪ್ಪ – ಉರಿಲಿಂಗಪೆದ್ದಿಯ ಆಯ್ದ ವಚನಗಳ ವ್ಯಾಖ್ಯಾನ ಜಗದ್ಗುರು ಶ್ರೀಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು.

೭. ಡಾ.ಆರ್. ಲಕ್ಷ್ಮೀನಾರಾಯಣ – ಉರಿಲಿಂಗಪೆದ್ದಿ, ಶ್ರೀಬಸವ ಅಧ್ಯಯನ ಪೀಠ, ಮೈಸೂರು, ವಿ.ವಿ.

□□

ವ್ಯಾಸ ಭಾರತ ಮತ್ತು ಕುಮಾರವ್ಯಾಸ ಭಾರತಗಳಲ್ಲಿ 'ದ್ಯೂತ ಪ್ರಸಂಗ' ಒಂದು ವಿಮರ್ಶಾತ್ಮಕ ಅಧ್ಯಯನ

ಡಾ. ಕೆ.ವಿ. ಶ್ರೀನಿವಾಸಮೂರ್ತಿ

❖

ಮಹಾಕವಿ ವ್ಯಾಸರ ಮೇರುಕೃತಿ 'ಮಹಾಭಾರತ' ಕೌರವ ಪಾಂಡವರ ಘರ್ಷಣೆಯನ್ನು ಚಿತ್ರಿಸುತ್ತ ಚತುರ್ವಿಧ ಪುರುಷಾರ್ಥಗಳ ಇತಿಮಿತಿಯನ್ನು ಪರಿಚಯಿಸುವ ಮತ್ತು ಲೌಕಕದಲ್ಲಿ ಬದುಕಿನ ವೈಚಿತ್ರ್ಯವನ್ನು ಧ್ವನಿಸುತ್ತ, ಎಲ್ಲರ ಬದುಕಿಗೂ ಮಾರ್ಗದರ್ಶಿ ಮಾಡಬಲ್ಲ ಸತ್ವವುಳ್ಳ ಕೃತಿಯಿದು. ಮಾನವನು ಬದುಕಿನಲ್ಲಿ ಧರ್ಮಾಧೀನನಾಗಿ ಜೀವನವನ್ನು ನಡೆಸಬೇಕು. ಅದನ್ನು ಮೀರಿದಲ್ಲಿ ನೋವು, ನಿರಾಶೆ ಮತ್ತು ದುಃಖ ಇವುಗಳ ಜಂಜಾಟದಲ್ಲಿ ತೊಳಲುವುದು ನಿಶ್ಚಿತವೆಂಬ ಸಾರ್ವಕಾಲಿಕ ಸತ್ಯವನ್ನು ಪ್ರತಿಪಾದಿಸುವ ಮಹಾಕಾವ್ಯವಾಗಿದೆ.

ಮಹರ್ಷಿವ್ಯಾಸರು ಭಾರತದ ಕಥೆಯನ್ನು ನಿರೂಪಿಸುವಾಗ, ತಾವೂ ಆ ಕಥೆಯ ಪಾತ್ರವಾಗಿದ್ದು, ನಿರ್ಲಿಪ್ತ ಮತ್ತು ನಿಷ್ಪಕ್ಷಪಾತದಿಂದ, ಓದುಗರ ಸಂಶಯವನ್ನು ಪರಿಹರಿಸುತ್ತಾ ಮಾನವ ಜೀವನದ ರಹಸ್ಯವನ್ನು ಬಿಚ್ಚಿಟ್ಟಿರುವುದನ್ನು ಕಾಣಬಹದು. ಮೇರು ಪ್ರತಿಭೆಯ ವ್ಯಾಸರು, ಸಂಕೀರ್ಣತೆಯಿಂದ ಕೂಡಿರುವ ಕೌರವ ಪಾಂಡವರ ಕಥೆಯನ್ನು ಸಂಸ್ಕೃತದಲ್ಲಿ ರಚಿಸಿ ಜನಮಾನಸದಲ್ಲಿ ಚಿರಂಜೀವಿಯಾಗಿ ಉಳಿದುಕೊಂಡಿದ್ದಾರೆ. ಈ ವ್ಯಾಸರ ಭಾರತವನ್ನು ಮೂಲವಾಗಿರಿಸಿಕೊಂಡು, ಭಾರತೀಯ ಭಾಷೆಗಳಲ್ಲಿ ಕವಿಗಳು ಕೃತಿರಚನೆ ಮಾಡಿದ್ದಾರೆ. ಕನ್ನಡದಲ್ಲಿ ಪಂಪ ಕುಮಾರವ್ಯಾಸರು ಭಾರತದ ಕಥೆಯನ್ನು ಮೂಲವಾಗಿರಿಸಿಕೊಂಡು ಸ್ವತಂತ್ರ ಕಾವ್ಯಗಳೆನಿಸುವ ರೀತಿಯಲ್ಲಿ, ತಂತಮ್ಮ ಉದ್ದೇಶಾನುಸಾರಿಯಗಿ ಕೃತಿರಚನೆ ಮಾಡಿದ್ದಾರೆ. ಹಲವು ವಿಶಿಷ್ಟ ಕಾರಣಗಳಿಗಾಗಿ ವ್ಯಾಸಭಾರತ ಕುಮಾರವ್ಯಾಸ ಭಾರತಗಳು ಕನ್ನಡದಲ್ಲಿ ಪ್ರಸಿದ್ಧಿಯನ್ನು ಪಡೆದಿವೆ. ಕುಮಾರವ್ಯಾಸನೆಂಬ ಹೆಸರೇ ಸೂಚಿಸುವಂತೆ ಕವಿಯು ವ್ಯಾಸಭಾರತಕ್ಕೆ ನಿಷ್ಠನಾಗಿದ್ದಾನೆ.

ಭಾರತದ ಕಥೆಗೆ ಅಪಚಾರವಾಗದಂತೆ ಈ ಕವಿಯು ತನ್ನ ಮಹಾಕಾವ್ಯವನ್ನು ರಚಿಸಿದ್ದಾನೆ. ವ್ಯಾಸ ಭಾರತಕ್ಕೆ ಈ ಕವಿಯು ನಿಷ್ಠನಾಗಿದ್ದರೂ, ಅದರ ತದ್ವತ್ತಾಗದೇ ಅದು ಸ್ವತಂತ್ರ ಕಾವ್ಯವೆಂದು ಪರಿಗಣಿತವಾಗಿದೆ.

ವಿಶೇಷ ಸಂಗತಿಯೆಂದರೆ ಕುಮಾರವ್ಯಾಸನು, ಸಹೃದಯನಾಗಿ, ವಿಮರ್ಶಕನಾಗಿ ಮತ್ತು ಕವಿಯಾಗಿ ತನ್ನ ಭಾರತವನ್ನು ರಚಿಸಿದ್ದಾನೆ. ಪ್ರಸ್ತುತದಲ್ಲಿ ಮಹಾಭಾರತದ ಸಭಾಪರ್ವದಲ್ಲಿ ಕೇಂದ್ರಸ್ಥಾನದಲ್ಲಿರುವ ದ್ಯೂತಪ್ರಸಂಗವು ಕುಮಾರವ್ಯಾಸನಲ್ಲಿ ಹೇಗೆ ಮೂಡಿ ಬಂದಿದೆ? ಎಂಬುದನ್ನು ತುಲನಾತ್ಮಕವಾಗಿ ವಿಶ್ಲೇಷಿಸುವ ಉದ್ದೇಶವಿದೆ. ಇದರಿಂದ ಕನ್ನಡ ಭಾರತವು ವ್ಯಾಸಭಾರತದ ತದ್ವತ್ ಅನುವಾದವೆ? ಈ ಕವಿಯು ಕಾವ್ಯದಲ್ಲಿ ಸನ್ನಿವೇಶವನ್ನು ಸ್ವಾರಸ್ಯಪೂರ್ಣಚಿತ್ರಿಸಲು ಹೊಸಸಂಗತಿಗಳನ್ನು ಸೇರಿಸಿರುವುದುಂಟೆ? ಮೂಲದ ಕಥೆಯಲ್ಲಿ ತನಗೇ ವಿಶಿಷ್ಟವಾದ ಬದಲಾವಣೆ ಮಾಡಿಕೊಂಡಿರುವುದುಂಟೆ? ಇದರಿಂದ ಮೂಲದ ಕಥೆಗೆ ಅಪಚಾರವಾಗಿದೆಯೆ? ಎಂಬ ಪ್ರಶ್ನೆಗಳಿಗೆ ಈ ಅಧ್ಯಯನದಿಂದ ಸಮರ್ಪಕವಾದ ಉತ್ತರವನ್ನು ಪಡೆಯಬಹುದಾಗಿದೆ.

'ದ್ಯೂತ ಪ್ರಸಂಗವು' ವ್ಯಾಸಭಾರತದ ಸಭಾಪರ್ವದಲ್ಲಿ ೪೭ರಿಂದ ೭೭ನೆಯ ಅಧ್ಯಾಯದವರೆಗೂ ಅಂದರೆ ೩೦ ಅಧ್ಯಾಯಗಳಲ್ಲೂ; ಕುಮಾರವ್ಯಾಸ ಭಾರತದ ಸಭಾ ಪರ್ವದಲ್ಲಿ ೧೧-೧೬ನೇ ಸಂದಿಗಳವರೆಗೂ ಒಟ್ಟು ೪೫೬ ಷಟ್ಪದಿಗಳಲ್ಲಿ ನಿರೂಪಣೆಗೊಂಡಿವೆ.

ಅಧ್ಯಯನದ ಸೌಲಭ್ಯಕ್ಕಾಗಿ ದ್ಯೂತ ಪ್ರಸಂಗವನ್ನು ನಾಲ್ಕುಭಾಗಗಳಾಗಿ ವಿಭಜಿಸಬಹುದು :

೧. ರಾಜಸೂಯಯಾಗವನ್ನು ಮುಗಿಸಿಕೊಂಡು ಕೌರವನು ಹಸ್ತಿನಾವತಿಗೆ ಹಿಂದಿರುಗಿದ ಸಂದರ್ಭ

೨. ಕೌರವ ಶಕುನಿಯರು ದ್ಯೂತವಾಡಲು ಧೃತರಾಷ್ಟ್ರನಿಂದ ಒಪ್ಪಿಗೆ ಪಡೆದ ಸನ್ನಿವೇಶ

೩. ಧೃತರಾಷ್ಟ್ರನು ಧರ್ಮರಾಯನನ್ನು ದ್ಯೂತವಾಡಲು ಆಹ್ವಾನಿಸಿದ್ದು ಮತ್ತು ಧರ್ಮರಾಯನು ಹಸ್ತಿನಾಪುರವನ್ನು ಪ್ರವೇಶಿಸಿದ ಸಂದರ್ಭ.

೪. ಶಕುನಿ ಮತ್ತು ಧರ್ಮರಾಯರ ನಡುವಣ ಸಂವಾದ ಮತ್ತು ದ್ಯೂತ ಮತ್ತದರ ಪರಿಣಾಮ ಇವುಗಳನ್ನು ಒಂದೊಂದಾಗಿ ಪರಿಶೀಲಿಸಬಹುದು.

ರಾಜಸೂಯಯಾಗಕ್ಕೆ ಬಂದಿದ್ದ ರಾಜರೆಲ್ಲ ತಮ್ಮ ತಮ್ಮ ರಾಜ್ಯಗಳಿಗೆ ಹಿಂದಿರುಗಿದ ಮೇಲೂ, ಕೌರವನು ಮತ್ತಷ್ಟು ದಿನಗಳ ಕಾಲ ಇಂದ್ರಪ್ರಸ್ಥದಲ್ಲೇ ಉಳಿದುಕೊಂಡಿದ್ದನು.

ಅವನು ಧರ್ಮಜನ ಅತುಲೈಶ್ವರ್ಯಗಳನ್ನೂ, ಮಯನಿರ್ಮಿತ ಸಭಾಭವನದ ಸೌಂದರ್ಯವನ್ನು ಕಂಡು ಬೆರಗಾಗಿದ್ದನು. ಯಾಗವು ಸಂಪನ್ನವಾದ ಬಗೆಗೆ, ಇತರರಾಜರು ಸಮರ್ಪಿಸುತ್ತಿದ್ದ ಕಾಣಿಕೆಗಳ ವೈವಿಧ್ಯಗಳಿಗೆ ಮತ್ತು ಧರ್ಮರಾಯನ ರಾಜ್ಯ ವಿಸ್ತಾರಕ್ಕೆ ಮಾರು ಹೋಗಿದ್ದನು. ತನ್ನಿಂದ ಇಂಥ ಸಾಧನೆ ಅಸಾಧ್ಯವೆಂಬ ಅತೃಪ್ತಿಯ ಭಾವದಿಂದ ಖಿನ್ನನಾಗಿದ್ದ ಅವನು ಮಯನಿರ್ಮಿತಸಭೆಯ ರಚನಾ ಕೌಶಲ್ಯಕ್ಕೆ ಮಾರುಹೋದನು. ಅವುಗಳನ್ನು ವೀಕ್ಷಿಸುತ್ತಾ ಬರುವಾಗ ನೀರಿಲ್ಲದ ತಾಣದಲ್ಲಿ ನೀರಿದೆಯೆಂಬ ಭ್ರಮೆಯಿಂದ, ಧೋತ್ರವನ್ನು ಮೇಲೆತ್ತಿಕಟ್ಟಿ ಹೆಜ್ಜೆಯಿಟ್ಟಾಗ ಅದು ನೀರಾಗಿರದೆ ನೆಲವಾಗಿತ್ತು. ಶಿಲ್ಪಿಯ ಚಾತುರ್ಯದೆದುರು ತನ್ನ ಅಜ್ಞಾನವನ್ನು ನೆನೆದು ಸಂಕಟಪಟ್ಟನು. ಇದೇ ಮನಃಸ್ಥಿತಿಯಲ್ಲಿ ಮುಂದೆ ಸಾಗಿದ ಕೌರವನಿಗೆ ತಟಾಕದ ದೃಶ್ಯ ಕಾಣಿಸಿತು. ಹಿಂದಿನ ಅನುಭವದಿಂದ ಎಚ್ಚೆತ್ತಿದ್ದ ಅವನು ಧೋತ್ರವನ್ನು ಮೇಲೆತ್ತಿಕಟ್ಟದೆ, ಅದು ರತ್ನಖಚಿತವಾದ ನೆಲೆಗಟ್ಟೆಂದು ಭಾವಿಸಿ ಅದರಲ್ಲಿ ಕಾಲಿಟ್ಟನು. ಅದು ನಿಜವಾಗಿಯೂ ನೀರಾಗಿದ್ದುದರಿಂದ ಅದರಲ್ಲಿ ಬಿದ್ದು ಅವನ ವಸ್ತ್ರಗಳೆಲ್ಲ ತೊಯ್ದು ಹೋದವು. ಅವನ ದುರವಸ್ಥೆಯನ್ನು ಕಂಡ ನಾಲ್ವರು ಪಾಂಡವರು ಮತ್ತು ಸೇವಕರು ನಕ್ಕರು. ಧರ್ಮರಾಯನು ಕೂಡಲೇ ಅವನಿಗೆ ನವಾಂಬರವನ್ನು ಕೊಡಿಸಿದನು. ಕೌರವನಿಗೆ ಭೀಮನ ಅಪಹಾಸ್ಯವನ್ನು ಸಹಿಸಲಾಗಲಿಲ್ಲ. ಆದ್ದರಿಂದ ಅಲ್ಲಿಂದ ಹೊರಟುಹೋಗಲು ನಿಶ್ಚಯಿಸಿ, ಸಮೀಪದಲ್ಲಿದ್ದ ಬಾಗಿಲಿನಲ್ಲಿ ನುಗ್ಗಿದನು. ಅದು ಬಾಗಿಲಾಗಿರದೆ ರತ್ನಖಚಿತವಾದ ಗೋಡೆಯಾಗಿತ್ತು. ಡಿಕ್ಕಿಹೊಡೆದ ಅವನ ನೆತ್ತಿಯಲ್ಲಿ ಬುಗುಟು ಬಂದಿತು. ಮುಂದೊಂದು ಬಾಗಿಲಿತ್ತು. ಅವನು ಅದನ್ನು ಗೋಡೆಯೆಂದು ಭಾವಿಸಿ ತಡವರಿಸಿದನು. ಆದರದು ನಿಜವಾದ ಬಾಗಿಲಾಗಿತ್ತು. ಮೊದಲಿಗೆ ಧರ್ಮರಾಯನ ಯಾಗವೈಭವಾದಿಗಳು ಕೌರವನ ಹೃದಯವನ್ನು ಭಾರವಾಗಿಸಿದ್ದವು. ಈಗ ಸಭಾಭವನದಲ್ಲಾದ ಭಂಗಗಳಿಂದ ಅವನಲ್ಲಿ ಅಸೂಯೆಯೂ ಮೂಡಿಬಂದಿತು. ವ್ಯಾಸರು ಸ್ಪಷ್ಟವಾಗಿ 'ಧರ್ಮರಾಯನ ಅಭ್ಯುದಯ ಮತ್ತು ಸಭಾಮಂದಿರದಲ್ಲಿ ತನಗಾದ ಅವಮಾನವನ್ನು ನೆನೆನೆನೆದು ಕೌರವನ ಮನಸ್ಸು ಪಾಪಭೂಯಿಷ್ಠವಾಯಿತು ಎಂದಿದ್ದಾರೆ. ಕೌರವನು ಈ ಸ್ಥಿತಿಯಲ್ಲೇ ಶಕುನಿಯೊಂದಿಗೆ ಹಸ್ತಿನಾಪುರಕ್ಕೆ ಹೊರಟನು.

ಶಕುನಿಯೊಂದಿಗೆ ಪ್ರಯಾಣಬೆಳಸಿದ ಕೌರವನು ರಥದಲ್ಲಿದ್ದರೂ ಅಂಗಾಂಗಳು ಬೆಂಕಿಯಿಂದ ಸುಡುತ್ತಿದ್ದರೆ ಎಷ್ಟು ಸಂಕಟವಾಗಬಹುದೋ ಅದಕ್ಕಿಂತ ಹೆಚ್ಚಿನ ಸಂಕಟವನ್ನು ಅನುಭವಿಸುತ್ತಿದ್ದನು. ಅವನೊಂದಿಗಿದ್ದ ಶಕುನಿಯು ಮಾತಾಡಿಸಿದರೂ ಪ್ರತಿಕ್ರಿಯೆ ತೋರುವಷ್ಟು ಅನ್ಯಮನಸ್ಕನಾಗಿದ್ದನು. ಶಕುನಿಯು ಪ್ರಯತ್ನ ಪೂರ್ವಕವಾಗಿ ಅವನ ಗಮನವನ್ನು ಸೆಳೆದ ಮೇಲೆ, ಪಾಂಡವರಲ್ಲಿ ಅಧಿಕವಾದ ಮಾತ್ಸರ್ಯವುಂಟಾಗಿರುವುದನ್ನು ತಿಳಿಸುತ್ತಾ, ತಾನಿನ್ನು ಬದುಕಿರಲಾರೆನೆನ್ನುತ್ತಾನೆ. ಕೌರವನ ಮಾತುಗಳಿಂದ ಧೃತರಾಷ್ಟ್ರನ

ಮಕ್ಕಳು ದಿನೇ ದಿನೇ ದುರ್ಬಲರಾಗುತ್ತಿದ್ದಾರೆ, ಪಾಂಡುವಿನ ಮಕ್ಕಳು ಪ್ರಬಲರಾಗುತ್ತಿದ್ದಾರೆಂಬುದು ಅವನ ಚಿಂತೆಯೆಂದು ಶಕುನಿಗೆ ಅರ್ಥವಾಯಿತು. ಅವನು ಕೌರವನಿಗೆ ಮಾತ್ಸರ್ಯ ಒಳ್ಳೆಯದಲ್ಲ ಎಂದು ಹೇಳಿದನು. ಪಾಂಡವರು ಅದೃಷ್ಟದಿಂದ ಶ್ರೀಮಂತರಾಗಿದ್ದಾರೆ; ಸುಖಿಗಳಾಗಿದ್ದಾರೆ. ನೀನು ಚಿಕ್ಕಂದಿನಲ್ಲೇ ಅವರನ್ನು ನಾಶಮಾಡಲೆತ್ನಿಸಿದರೂ ಅದು ಸಾಧ್ಯವಾಗಲಿಲ್ಲ. ಅವರು ಅದೃಷ್ಟವಶಾತ್ ಅವುಗಳಿಂದ ಪಾರಾಗಿ ದ್ರೌಪದಿಯನ್ನು ವಿವಾಹವಾದರು. ದ್ರುಪದ ಮತ್ತವನ ಸುತರು ಅವರಿಗೆ ಮಿತ್ರರಾದರು. ಕೃಷ್ಣನು ಪಾಂಡವರಿಗೆ ಮಿತ್ರನಾಗಿದ್ದಾನೆ. ಖಾಂಡವದಹನ ಸಂದರ್ಭದಲ್ಲಿ ಅಗ್ನಿಗೆ ಮತ್ತು ಮಯನಿಗೆ ಸಹಾಯಮಾಡಿ ಧನುರ್ಬಾಣಗಳನ್ನೂ, ಸಭಾಭವನವನ್ನೂ ತಮ್ಮದನ್ನಾಗಿ ಮಾಡಿಕೊಂಡು, ಹಕ್ಕಿನಿಂದ ಪಡೆದಿರುವ ರಾಜ್ಯವನ್ನು ವಿಸ್ತರಿಸಿದ್ದಾರೆ. ಇದರಿಂದ ನಿನ್ನ ಪರಿತಾಪಕ್ಕೇನು ಕಾರಣವೆಂದು ಪ್ರಶ್ನಿಸುವನು. ಮತ್ತೊಬ್ಬರ ಸಂತೋಷ ವೈಭವಗಳನ್ನು ಕಂಡು ಅಸೂಯೆತರುವುದು ತರವಲ್ಲ ಎಂದು ವಿವೇಕವನ್ನೂ ನುಡಿದಿದ್ದಾನೆ. ಲೌಕಿಕದ ವಸ್ತುಗಳು ಅದೃಷ್ಟದಿಂದ ಲಭ್ಯವಾದರೆ, ವಿಧಿಯ ಬೆಂಬಲವೂ ದೊರೆತರೆ ಮನುಷ್ಯ ಪ್ರಯತ್ನಕ್ಕೆ ಸಫಲತೆ ದೊರಕಬಹುದು. ಇದನ್ನರಿತು ಬಾಳಿದರೆ ಜೀವನವು ದುಃಖಕರವೆನಿಸುವುದಿಲ್ಲ ಎಂಬುದನ್ನು ಶಕುನಿಯು ಧ್ವನಿಸಿದ್ದಾನೆ.

ತನ್ನ ಮಾತುಗಳಿಂದ ಮನಮುದುರಿದ ಕೌರವನನ್ನು ಕಂಡ ಶಕುನಿಯು, ಕೌರವನಿಗೂ ಗೆಳೆಯರಿರುವರೆನ್ನುತ್ತಾ ಅವರೆಲ್ಲರನ್ನೂ ಸೇರಿಸಿಕೊಂಡು, ಧರ್ಮರಾಯನಂತೆ ಅವನೂ ದಿಗ್ವಿಜಯ ಮಾಡುವಂತೆ ಸಲಹೆ ಮಾಡುವನು. ಕೌರವನು ಆಶಾವಾದಿಯಾಗಿ ಹಿಂದು ಮುಂದುಗಳನ್ನು ಯೋಚಿಸದೆ, ಪಾಂಡವರನ್ನೇ ಸೋಲಿಸಿಬಿಟ್ಟರೆ ತನಗಿಂತ ಅಧಿಕರಾರೂ ಈ ಜಗತ್ತಿನಲ್ಲಿರಲು ಸಾಧ್ಯವಿಲ್ಲವೆನ್ನುತ್ತಾನೆ. ಶಕುನಿಯು ಪಾಂಡವರು ಬಲಿಷ್ಠರು, ಯುದ್ಧದಲ್ಲಿ ಕೃಷ್ಣಾರ್ಜುನರನ್ನೂ, ಭೀಮಯುಧಿಷ್ಠಿರರನ್ನೂ, ನಕುಲಸಹದೇವರನ್ನೂ, ದ್ರುಪದ ಮತ್ತವನ ಅನುಜರನ್ನು ಸೋಲಿಸುವ ಸಾಧ್ಯತೆಯೇ ಇಲ್ಲ, ಎಂದೊಡನೆಯೆ ಅವನ ಮುಖ ನಿಸ್ತೇಜವಾಯಿತು. ಅದನ್ನು ಕಂಡ ಶಕುನಿಯು ದ್ಯೂತದ ಮೂಲಕ ಧರ್ಮರಾಯನನ್ನು ಸೋಲಿಸಿ, ರಾಜ್ಯ ಸಂಪತ್ತೆಲ್ಲವೂ ಕೌರವನ ಪಾಲಾಗುವಂತೆ ಮಾಡುವುದಾಗಿಯೂ ತಿಳಿಸಿದನು. ಕೌರವನು ಈ ವಿಷಯವನ್ನು ಧೃತರಾಷ್ಟ್ರನಿಗೆ ತಿಳಿಸಿ, ದ್ಯೂತವಾಡಲು ಅನುಮತಿಯನ್ನು ಪಡೆಯುವಂತೆ ಶಕುನಿಯು ಹೇಳಲು, ಅವನು ತಂದೆಯೊಂದಿಗೆ ತಾನು ಯುಕ್ತಿಯುಕ್ತವಾಗಿ ಮಾತಾಡಲು ಸಾಧ್ಯವಿಲ್ಲವೆಂದೂ, ಶಕುನಿಯೇ ಆಕಾರ್ಯವನ್ನು ಮಾಡಬೇಕೆಂದೂ ಹೇಳುತ್ತಾನೆ. ಹೀಗೆ ಇಂದ್ರಪ್ರಸ್ಥದಿಂದ ಹಸ್ತಿನಾಪುರದವರೆಗಿನ ಪ್ರಯಾಣದ ಕಾಲದಲ್ಲಿ ಶಕುನಿ ಕೌರವರು ದ್ಯೂತದ ಮೂಲಕ ಪಾಂಡವರನ್ನು ಸೋಲಿಸುವ ನಿರ್ಧಾರವನ್ನು ರೂಪಿಸಿಕೊಂಡರು.

ಕೌರವನ ಈರ್ಷೆಯ ಸ್ವರೂಪವನ್ನು ವ್ಯಾಸರು ಅತ್ಯಂತ ಪರಿಣಾಮಕಾರಿಯಾಗಿ ಅಭಿವ್ಯಕ್ತಿಸಿದ್ದಾರೆ. ಈರ್ಷಾ ಮೂಲವಾದ ಸಂಕಟದಿಂದ ಮಯನಿರ್ಮಿತಸಭೆಯ ಚಾತುರ್ಯಕ್ಕೆ ಮರುಳಾಗಿ ಹಾಸ್ಯಾಸ್ಪದನೆಂಬುದನ್ನೂ, ಎಲ್ಲವೂ ಕೂಡಿಕೊಂಡು ಕೌರವನು ಮನಃಶಾಂತಿಯನ್ನು ಕಳೆದುಕೊಂಡನೆಂಬುದನ್ನೂ ಮನಸ್ಸಿಗೆ ನಾಟುವಂತೆ ಚಿತ್ರಿಸಿದ್ದಾರೆ. ವ್ಯಾಸರು ಕೌರವನು ಧರ್ಮರಾಯನ ಸಭಾಮಂಟಪದಲ್ಲಿ ತನ್ನ ಅವಿವೇಕದಿಂದ ಹಾಸ್ಯಾಸ್ಪದನಾಗಿ ಖಿನ್ನನಾದುದಕ್ಕೆ ಕಾರಣವಾದ ಸಂಗತಿಗಳನ್ನು ಆರಂಭದಲ್ಲಿಯೇ ತಿಳಿಸಿಬಿಟ್ಟಿದ್ದಾರೆ. ಎಂದರೆ 'ವಿಭಾವ'ವನ್ನು ಮೊದಲೇ ಸೂಚಿಸಿ, ನಂತರ ಅನುಭಾವವನ್ನು ಅಭಿವ್ಯಕ್ತಿಸಿದ್ದಾರೆ. ಹೀಗೆ ಮಾಡಿದ್ದರಿಂದ ಕೌರವನು ಅನುಭವಿಸಿದ ಭಂಗಗಳನ್ನು ಮತ್ತೆ ಧೃತರಾಷ್ಟ್ರನ ಮುಂದೂ ಹೇಳುವನಾದ್ದರಿಂದ ಸಂಗತಿಯ ಪುನರಾವರ್ತನೆಯಾದಂತಾಗಿದೆ. ವ್ಯಾಸರ ನಿರೂಪಣಾ ತಂತ್ರದಿಂದಾಗಿ ಕಥಾಕ್ರಿಯೆಗೆ ವೇಗ ಪ್ರಾಪ್ತವಾಗುತ್ತದೆ.

೧. ಇದೇ ಸಂಧರ್ಭವನ್ನು ಕುಮಾರವ್ಯಾಸನು ಭಾರತದ ಕಥೆಗೆ ಲೋಪಬಾರದಂತೆ ನಿರೂಪಿಸಿದ್ದಾನೆ. ನಿರೂಪಣೆಯಲ್ಲಿ ಹಲವು ಸಂಗತಿಗಳು ಬದಲಾವಣೆ ಹೊಂದಿರುವುದರಿಂದ, ವ್ಯಾಸರ ಕಥೆಯಲ್ಲಿ ಕಾಣದ ಕೆಲಸಂಗತಿಗಳು ಇಲ್ಲಿ ಕಾಣುತ್ತವೆ.

ರಾಜಸೂಯಯಾಗಾನಂತರದಲ್ಲಿ, ಕೌರವ ಮತ್ತವನ ಅನುಜರು ಇನ್ನೂ ಕೆಲದಿನಗಳಕಾಲ ಇಂದ್ರಪ್ರಸ್ಥದಲ್ಲೇ ಇದ್ದರು. ಧರ್ಮರಾಯನು ವ್ಯಾಸರನ್ನು ಕಳುಹಿಸಿಕೊಟ್ಟನಂತರದಲ್ಲಿ, ಕೌರವನನ್ನೂ ಅವನ ಅನುಜರನ್ನೂ ಸಭೆಗೆ ಕರೆಸಿದನು. ಮಯನಿರ್ಮಿತ ಸಭೆಯ ಕಣ್ಮಾಯಗಳು ಕೌರವನ ಕಂಗಳನ್ನು ವಂಚಿಸಿದ್ದರಿಂದ 'ಪರಿಭವಕೆ ಗುರಿಯಾಗಿ ಹಾಸ್ಯದ ಹರಹಿನಲಿ ಹಳುವಾಗಿ' ಧರ್ಮರಾಯನಿಂದ ಬೀಳ್ಕೊಂಡು ಹಸ್ತಿನಾಪುರಿಗೆ ಹೊರಟನು. ಹಲವು ರಾಜರೊಂದಿಗೆ ಪ್ರಯಾಣಮಾಡಿ ಹಸ್ತಿನಾಪುರವನ್ನು ಸೇರುವ ವೇಳೆಗೆ ಕೌರವನ 'ಅಂತರಂಗ ಚಾವಡಿಯು ಕತ್ತಲಿನಿಂದ ಕೂಡಿತ್ತು; ರೋಷಾಗ್ನಿಯಿಂದ ಅವನ ಮೋರೆ ಕಪ್ಪಿಟ್ಟಿತ್ತು. ಅವನು ನಡುವಿರುಳಿನಲ್ಲಿ ಪುರಪ್ರವೇಶ ಮಾಡಿದನು. ಇದರಿಂದ ಕೌರವನಿಗೆ ಯಾರಿಗೂ ಮುಖತೋರಿಸಬಾರದೆಂಬ ಮನಃಸ್ಥಿತಿಯಿತ್ತೆಂಬುದು ವೇದ್ಯವಾಗುತ್ತದೆ. ಕುಮಾರವ್ಯಾಸನು 'ವಿಭಾವ'ವನ್ನು ಕಾಣಿಸದೆ, ಕೇವಲ ಅನುಭಾವಗಳನ್ನು ಕಾಣಿಸುವುದರಿಂದ, ಸಹೃದಯರಲ್ಲಿ ಕುತೂಹಲ ಮೂಡಿಸಿದ್ದಾನೆ. ವ್ಯಾಸರ ನಿರೂಪಣೆಗಿಂತ, ಬೇರೆಯಾದ ನಿರೂಪಣೆಯ ತಂತ್ರವಿದೆನ್ನಬಹುದು.

ಕೌರವನು ಅರಮನೆಯನ್ನು ಹೊಗುವಾಗ ಕಳವಳದ ಭಾರವನ್ನು ಹೊತ್ತಿದ್ದನು. ಮೇಲುಮುಸುಕು ಹಾಕಿದ್ದ ಅವನ ಮುಖ ಕಪ್ಪಿಟ್ಟಿತ್ತು. ಮಾತ್ಸರ್ಯದಿಂದ ಕೂಡಿದ ಅವನ ಮನಸ್ಸು ಚಂಚಲವಾಗಿತ್ತು. ಸಂಪ್ರದಾಯದಂತೆ ಇದಿರುಗೊಳ್ಳಲು ಆರತಿಗಳೊಂದಿಗೆ

ಬಂದವರನ್ನೆಲ್ಲ ದೂರದಲ್ಲೇ ನಿಲ್ಲಿಸಿದನು. ಯಾರನ್ನೂ ಹತ್ತಿರಕ್ಕೆ ಬಿಟ್ಟುಕೊಳ್ಳದೆ ಮಾನಭಂಗದ ಕಾರಣದಿಂದಾಗಿ ಪದೇ ಪದೇ ನಿಟ್ಟುಸಿರು ಬಿಡುತ್ತಿದ್ದನು. ಅವನ ತಾಳ್ಮೆ ಹಿಂಡಿಹಿಪ್ಪೆಯಾಗಿತ್ತು. ಹತ್ತಿರಕ್ಕೆ ಬಂದ ಭಾನುಮತಿಯನ್ನು ಮಾತನಾಡಿಸದೆ ರಾತ್ರಿಯನ್ನು ಕಳೆದನು. ಪ್ರಾತಃ ಕಾಲದ ದೈನಂದಿನ ನಡವಳಿಕೆಗಳನ್ನು ನಿಲ್ಲಿಸಿ, ಪ್ರಾತಃಕರ್ಮಗಳನ್ನು ನಿರ್ವಹಿಸದೆ ಕ್ರೋಧಭಾವದಲ್ಲಿ ಏನನ್ನೊ ಚಿಂತಿಸುತ್ತಿದ್ದನು.

ಕೌರವನ ತನುಮನಗಳನ್ನು ಮಾತ್ಸರ್ಯ ಆವರಿಸಿತ್ತು. ಹಿರಿಯರಾದಿಯಾಗಿ ಮಂತ್ರಿಗಳು, ದಂಡನಾಯಕರು ಅವನ ದರ್ಶನಕ್ಕಾಗಿ ಬಾಗಿಲಲ್ಲಿ ಕಾಯಬೇಕಾಯಿತು. ಏಕಾಂತದಲ್ಲಿ "ದುರ್ಮನದ ಕೇಣಿಯನು ಕೈಗೊಂಡನೊಬ್ಬನೆ ರಾಯ" ಎಂದಿದ್ದಾನೆ ಕವಿ. ಕೌರವನದು ಕೆಟ್ಟಮನಸ್ಸು, ಅಲ್ಲಿ ಬೆಳೆದ ಬೆಳೆಯನ್ನೆಲ್ಲ ಒಬ್ಬನೇ ಗುತ್ತಿಗೆ ಪಡೆದವನಂತೆ ಕೌರವನಿದ್ದನೆಂಬುದನ್ನು ಈ ರೂಪಕ ಧ್ವನಿಸುತ್ತದೆ. ಈ ಕೆಟ್ಟ ಮನಸ್ಸಿನ ಕಾರಣವನ್ನು ಕುಮಾರವ್ಯಾಸ ತಿಳಿಸಿಲ್ಲ. ಇದರಿಂದ ಸಹೃದಯನ ಕುತೂಹಲವು ಇಮ್ಮಡಿಸುತ್ತದೆ. ಇದು ಕವಿಯ ನಿರೂಪಣಾತಂತ್ರವಾಗಿದೆ.

ಕೌರವನೇ ಕಾಣದಿದ್ದುದರಿಂದ ರಾಜ್ಯದ ಸ್ಥಿತಿ ಅರಾಜಕವಾಯಿತು. ಪ್ರಜೆಗಳಲ್ಲಿ ಕೌರವನ ಬಗೆಗೆ ಹಲವು ಊಹೆಗಳು ಹುಟ್ಟಿಕೊಂಡುವು. ಅದು ಹೀಗಿದೆ :

ಸ್ತ್ರೈಣಚೇಷ್ಟಿತನೆಂದು ಕೆಲಬರು। ಕಾಣೆವರಸನನೆಂದು ಕೆಲರ
ಕ್ಷೀಣರೋಗಿತನೆಂದು ಕೆಲಬರು ವಿಷಪ್ರಯೋಗದಲಿ
ಪ್ರಾಣಶೋಷಿತನೆಂದು ಕೆಲಬರು । ಜಾಣನೂಹೆಯ ಜನದ ನೆನಹಿನ
ಸಾಣೆಯಲಿ ಸವೆಯಿತ್ತು ಕೌರವ ನೃಪನ ನಿರ್ದೇಶ

ಕೌರವನು ಕಾಣದಿದ್ದುದರಿಂದ ಪ್ರಜೆಗಳ ಜಾಣತನದ ಊಹೆಯು ನೆನಪಿನ ಸಾಣೆಯಲ್ಲಿ ಹರಿತವಾಯಿತು. ಇದು ಅದ್ಭುತವಾದ ಅಭಿವ್ಯಕ್ತಿಯಾಗಿದೆ. ಅಧಿಕಾರಿಗಳು, ದಂಡನಾಯಕರಿಗೂ ಸಹ ರಾಜ್ಯ ಅರಾಜಕವಾಯ್ತೆಂದು ಚಿಂತೆಯಾಯಿತು. ಈ ಸಂಗತಿಯು ಶಕುನಿಗೆ ತಿಳಿದು, ಅನುಮತಿ ಪಡೆದು ಕೌರವನ ಅರಮನೆಯನ್ನು ಪ್ರವೇಶಿಸಿದನು. ಕೌರವನು ಏಕಾಂಗಿಯಾಗಿದ್ದುದನ್ನು ಕಂಡು :

ನ(ಅ)ಕ್ಕಜದ ರುಜೆಯೇನು ಮಾನಸವೋ ಶರೀರಜವೊ ।
ಮುಕ್ಕುಳಿಸಿಕೊಂಡಿರದಿರಾರಿಗೆ । ಸಿಕ್ಕಿದೆಯೋ ಸೀಮಂತಿನಿಯರಿಗೆ

ಮಕ್ಕಳಾಟಿಕೆ ಬೇಡ ನುಡಿ ಧೃತರಾಷ್ಟ್ರನಾಣೆ... ಎಂದು ಸಲಿಗೆಯಿಂದ ಮಾತನಾಡಿಸಿದನು.

ಶಕುನಿಯ ಪರಿಹಾಸ್ಯ ಕೌರವನಿಗೆ ಬೇಕಿರಲಿಲ್ಲ. ಅವನು ಗಂಭೀರವಾಗಿ, ಇಷ್ಟು ದಿನ ನನ್ನೊಂದಿಗಿದ್ದೀರಿ. ನಾನೇನು ಸ್ತ್ರೀಲಂಪಟನೆ? ನನಗಾವ ನೋವೂ ಇಲ್ಲ. ನೀವಿಲ್ಲಿಂದ ಹೊರಡಿ ಎನ್ನುತ್ತಾನೆ. ಮತ್ತೆ ಶಕುನಿಯು ಮಾತನಾಡಿಸಲು ಕೌರವನು ಎನ್ನಂತರಂಗದ ಅಗ್ನಿಯನ್ನೇಕೆ ಕೆಣಕುವಿರಿ? ಎನ್ನುತ್ತಾನೆ. ಈ ಮಾತಿನಿಂದಲೇ ಅವನ ಅಂತರಂಗದಲ್ಲಿ ಕುದಿಯಿರುವುದು ಸ್ಪಷ್ಟವಾಗುತ್ತದೆ. ಶಕುನಿಯು ಕಾರಣವನ್ನು ಕೇಳಿದಾಗ ಕೌರವನು :

"ಯಮಸೂನು ವೈಭವ ವಹ್ನಿದಗ್ಧಮ। ನೋನುಭಾವವನೇಕೆ ನುಡಿಸುವಿರಿ" ಎನ್ನುತ್ತಾನೆ. ಈಗ ಸಹೃದಯನಿಗೆ 'ಯಮಸೂನುವಿನ ವೈಭವವೇ' ವಿಭಾವವೆಂಬುದು ಹೊಳೆಯುತ್ತದೆ. ಶಕುನಿಗೆ ಕೌರವನ ಮಾತು ಅರ್ಥವಾಗಲಿಲ್ಲ. ಅವನು ಕುತೂಹಲದಿಂದ :

ಹೇಳು ಹೇಳೇನೇನು ಪಾಂಡು ನೃಪಾಲಪುತ್ರರ ವಿಭವವಹ್ನಿ
ಜ್ವಾಲೆಯಲಿ ಮನಬೆಂದುದೇ ಹರಹರ ವಿಚಿತ್ರವಲಾ
ಪಾಲಕನು ಧರ್ಮಜನು ಸಲೆ। ಕಟ್ಟಾಳುಗಳು ಭೀಮಾರ್ಜುನರು ಬೆ
ಳ್ಳಾಳ ಹಬ್ಬುಗೆಯಲ್ಲೈ ಪಾಂಡವರ ಸಿರಿ------ಎನ್ನುತ್ತಾನೆ.

ಶಕುನಿಗೆ ಕೌರವನ ಮನೋವ್ಯಾಪಾರದ ಅರಿವಾಗಿದೆ. ಅವನ 'ವಿಚಿತ್ರವಲ' ಎಂಬ ಮಾತು ,ದಡ್ಡರೂ ಇಂಥ ಯೋಚನೆ ಮಾಡಲಾರರೆಂಬ ವ್ಯಾಪಕವಾದ ಅರ್ಥವನ್ನು ಕೊಡುತ್ತದೆ. ಆದ್ದರಿಂದಲೇ ಧರ್ಮರಾಯನು ಚಕ್ರವರ್ತಿ, ಭೀಮಾರ್ಜುನರು ಕಟ್ಟಾಳುಗಳು, ಪಾಂಡವರ ಸಂಪತ್ತು ಹಬ್ಬುವ ಬಳ್ಳಿಯಂತೆ ಎಂದು ಹೇಳಿದ್ದಾನೆ. ಇದಲ್ಲದೆ ಪಾಂಡವರನ್ನು ನೇರವಾಗಿ ಸೋಲಿಸಲು ಸಾಧ್ಯವೇ ಇಲ್ಲವೆಂಬ ಸೂಚನೆಯನ್ನೂ ಕೊಡುತ್ತಿದ್ದಾನೆ. ಪಾಂಡವರು ಹಕ್ಕಿನ ರಾಜ್ಯವನ್ನು ಆಳುತ್ತಿದ್ದಾರೆ. ನಿನ್ನ ಚಂಚಲವಾದ ಮನದ ಕೊಡಲಿ ಬುದ್ಧಿಯ ಅರಿವು ಅವರಿಗೆ ಹೇಗೆ ತಾನೆ ತಿಳಿದೀತು ಎನ್ನುತ್ತಾನೆ. ಶಕುನಿಯು ಎಚ್ಚರಿಕೆಯಿಂದ ಸತ್ಯವಾದ ಸಂಗತಿಯನ್ನೇ ಹೇಳುತ್ತಿದ್ದಾನೆ.

ಶಕುನಿಯ ಮಾತಿನ ಧಾಟಿಯಿಂದ ಕೌರವನ ಮನವು ನಿರಾಶೆಗೊಂಡಿತು. ಅವನು:
ಈಸು ನುಡಿವರೆ ಮಾವಯೆನುತ । ಮಹೀಶ ಕಂಬನಿದುಂಬಿ ನೆನಹಿನ
ಬೀಸರಕೆ ಬಿಸುಸುಯ್ದು ದೊಪ್ಪನೆ ಕೆಡೆದನವನಿಯಲಿ

ಕೌರವನು ಅಭಿಮಾನಧನನೆಂಬುದನ್ನು ಒಪ್ಪುವುದಾದರೆ, ಅವನ ತೀವ್ರವಾದ ಸಂಕಟದಲ್ಲಿ ಸಹೃದಯನೂ ಭಾಗಿಯಾಗಿ ಮರುಗುವಂತಾಗುತ್ತದೆ. ಅವನ ದುಃಖವನ್ನರಿತ ಶಕುನಿಯು 'ಬಾಕಂದ' ಎಂದು ಅಪ್ಪಿಕೊಂಡು "ಕಿತ್ತುಬಿಸುಡುವೆನಹಿತರನು ನಿನಗಿತ್ತೆನಿಂದ್ರಪ್ರಸ್ಥವನು" ಎಂದು ಆಶ್ವಾಸನೆಯನ್ನು ನೀಡುತ್ತಾನೆ. ತಾನು ಹೀಗೆ ಮಾಡುವುದರಿಂದ ಗಾಂಧಾರಿಗೆ ಸಂತಸವಾಗುತ್ತದೆಂಬುದು ಶಕುನಿಯ ನಂಬಿಕೆಯಾಗಿದೆ.

ಶಕುನಿಯ ಈ ಮಾತನ್ನು ಕೌರವನಿಗೂ ನಂಬಲು ಸಾಧ್ಯವಾಗಿಲ್ಲ. ಆದ್ದರಿಂದ ಅವನು ಶಕುನಿಗೆ ಭೀಮಾರ್ಜುನರು ಬಲಶಾಲಿಗಳು ಮತ್ತು ಅವರ ಜೀವದ ಗೆಳೆಯ ಕೃಷ್ಣ ಹೀಗಿರುವಾಗ ಪಾಂಡವರನ್ನು ಜಯಿಸಲು ಸಾಧ್ಯವೆ? ಎಂದು ಪ್ರಶ್ನಿಸುತ್ತಾನೆ. (ವ್ಯಾಸಭಾರತದಲ್ಲಿ ಪಾಂಡವರನ್ನು ಗೆಲ್ಲುವ ಉತ್ಸಾಹ ತೋರಿದ ಕೌರವನಿಗೆ ಶಕುನಿಯು ಈ ಮಾತುಗಳನ್ನು ಹೇಳುತ್ತಾನೆ.) ತನಗೆ ಸಾವುದಲ್ಲದೆ ಅನ್ಯಮಾರ್ಗವಿಲ್ಲ; ತನ್ನ ಬದುಕನ್ನು ದೇವಲೋಕದಲ್ಲಿ ಅರಸಿಕೊಳ್ಳಿ ಎಂದು ಶಕುನಿಗೆ ಕೌರವನು ಹೇಳುತ್ತಾನೆ.

ಶಕುನಿಯು ಕೌರವನಿಗೆ, ಧರ್ಮರಾಯನು ದ್ಯೂತಲೋಲುಪ. ಆದರೆ ಅವನಿಗೆ ಆಟವಾಡಲು ಬಾರದು, ಗೆಲ್ಲುವತಂತ್ರವೂ ತಿಳಿಯದು. ಪಾಂಡವರನ್ನು ಯುದ್ಧದಲ್ಲಿ ಜಯಿಸುವುದು ಅಸಾಧ್ಯ. ಆದರೆ ದ್ಯೂತದ ತಂತ್ರದಿಂದ ಪಾಂಡವರನ್ನು ಗೆಲ್ಲಬಹುದು ಎಂದೊಡನೆಯೇ ಕೌರವನು ಆಶಾವಾದಿಯಾದನು. ಶಕುನಿಯು ದ್ಯೂತದಲ್ಲಿ ತಾನು ನಿಪುಣನೆಂದೂ, ಧೃತರಾಷ್ಟ್ರನು ಅನುಮತಿಸಿದರೆ ಪಾಂಡವರ ರಾಜ್ಯಕೋಶಗಳನ್ನು ಗೆದ್ದುಕೊಡುವುದಾಗಿ ತಿಳಿಸುತ್ತಾನೆ. ಕೌರವನು ಅಪಖ್ಯಾತಿಗೆ ಅಂಜಬಾರದೆಂದೂ, ಯಾರ ಕರುಣೆಯಲ್ಲಿಯೂ ಇರಬೇಕಾಗಿಲ್ಲವೆಂದೂ ಹೆಳುತ್ತಾನಲ್ಲದೆ, ಅಪಸ್ವರವೆತ್ತುವ ಭೀಷ್ಮದ್ರೋಣ ವಿದುರ ಮುಂತಾದವರ ಮಾತುಗಳನ್ನು ಕೇಳಬಾರದೆಂದೂ ಸಲಹೆ ಮಾಡುವನು. ಕೌರವನಿಗೆ ಹೇಗೋ ಒಟ್ಟಿನಲ್ಲಿ ಪಾಂಡವರನ್ನು ಗೆಲ್ಲುವುದು ಮುಖ್ಯವಾಗಿತ್ತು. ಧೃತರಾಷ್ಟ್ರನೊಂದಿಗೆ ಮಾತಾಡಿ ಪಾಂಡವರನ್ನು ಹಸ್ತಿನಾವತಿಗೆ ಕರೆಸುವಂತೆ ಮಾಡಬೇಕೆಂದು ಕೌರವನಿಗೆ ಶಕುನಿಯು ಹೇಳಿದಾಗ, ಅವನು ತಾನು ಈ ವಿಚಾರವನ್ನು ಯುಕ್ತಿಯುಕ್ತವಾಗಿ ತಿಳಿಸಲು ಶಕ್ತನಲ್ಲವೆಂದುತ್ತರಿಸಿ, ಆ ಕಾರ್ಯವನ್ನು ಶಕುನಿಯೇ ಮಾಡಬೇಕೆಂದು ತಿಳಿಸುತ್ತಾನೆ. (ಕುಮಾರವ್ಯಾಸ ಭಾರತದಲ್ಲಿ ದ್ಯೂತದ ಮೂಲಕ ಪಾಂಡವರನ್ನು ಸೋಲಿಸುವ ಹಂಚಿಕೆಯು ಹಸ್ತಿನಾಪುರದಲ್ಲೇ ರೂಪುಗೊಂಡಿತೆಂಬಂತೆ ಚಿತ್ರಣವಿದೆ. ಕವಿಯು ಈ ಸನ್ನಿವೇಶವನ್ನು ಕಥೆಯ ಒಂದು ಮಗ್ಗುಲೆಂಬಂತೆ ಚಿತ್ರಿಸಿರುವುದರಿಂದ, ವ್ಯಾಸಭಾರತಕ್ಕಿಂತ ಭಿನ್ನವಾಗಿದೆ.)

ವ್ಯಾಸಭಾರತದಲ್ಲಿ ಹಸ್ತಿನಾವತಿಗೆ ಪ್ರಯಾಣ ಮಾಡುವಾಗ, ಶಕುನಿ ಕೌರವರ ಸಂವಾದ ನಡೆದು, ದ್ಯೂತದ ಯೋಜನೆ ಮೂಡಿ ಬಂದಿದೆ. ಕುಮಾರವ್ಯಾಸಭಾರತದಲ್ಲಿ ಕೆಲವು ದಿನಗಳ ನಂತರ ಹಸ್ತಿನಾವತಿಯಲ್ಲೇ ಶಕುನಿ ಕೌರವರ ನಡುವಣ ಸಂವಾದದಿಂದ ದ್ಯೂತದ ಯೋಜನೆ ಮೂಡಿ ಬಂದಿದೆ. ಇದು ಸಹೃದಯರ ಗಮನಕ್ಕೆ ಬರುವುದೇ ಇಲ್ಲ? ಸನ್ನಿವೇಶಕ್ಕನುಗುಣವಾದ ವರ್ಣನೆಗಳ ಮೂಲಕ, ಕುಮಾರವ್ಯಾಸನು 'ವಿಭಾವವನ್ನೇ' ಮರೆಮಾಡಿ, ಅನುಭಾವಗಳನ್ನೇ ಮುಂದಿಟ್ಟು ಸಹೃದಯರ ಕುತೂಹಲವನ್ನು ಪೋಷಿಸಿದ್ದಾನೆ. ದೃಶ್ಯವತ್ ಚಿತ್ರಣವು ಕುಮಾರವ್ಯಾಸ ಭಾರತದ ಮಹಾನ್ ವೈಶಿಷ್ಟ್ಯ.

ಕೌರವನ ಮಾತ್ಸರ್ಯದ ಉನ್ನತಿ ಮತ್ತದರ ಪರಿಣಾಮಗಳ ಚಿತ್ರ ಕುಮಾರವ್ಯಾಸನಲ್ಲಿದೆ. ಹಸ್ತಿನಾವತಿಯಲ್ಲಿ ಅರಾಜಕತೆ, ದುರ್ಯೋಧನನ ದಿನಚರಿಯ ನಿಲುಗಡೆ ಇವುಗಳನ್ನು ಮನಗಾಣಿಸುವ ವರ್ಣನೆಗಳು ಕುಮಾರವ್ಯಾಸನಲ್ಲಿದೆ. ವ್ಯಾಸರಲ್ಲಿ ಇದಾವುದೂ ಇಲ್ಲ. ಇದು ಸಹೃದಯರನ್ನು ಹಿಡಿದಿಟ್ಟುಕೊಳ್ಳುವ ಕುಮಾರವ್ಯಾಸನ ತಂತ್ರವೆಂದೇ ಹೇಳಬೇಕಾಗುತ್ತದೆ.

ನಾಟಕೀಯತೆಯು ಕುಮಾರವ್ಯಾಸ ಭಾರತದ ಜೀವಾಳವಾಗಿದ್ದು, ಸೂಕ್ತವಾದ ವರ್ಣನೆಗಳು ಮತ್ತು ಚಿತ್ರವತ್ತಾದ ರೂಪಕ ಪ್ರಯೋಗಗಳು ಸಹೃದಯನ ತಲ್ಲೀನತೆಗೆ ಸಹಕರಿಸಿವೆ ಅಸ್ಥಿಪಂಜರವು ವ್ಯಾಸಭಾರತದ ಕಥೆಯಾದರೆ, ಕವಿ ಪ್ರತಿಭೆಯು ಅದನ್ನು ನವೋನವವಾಗಿ ಅಭಿವ್ಯಕ್ತಿಸಿರುವ ರೀತಿಯಿಂದಾಗಿ ಕೃತಿಯು ಸ್ವತಂತ್ರವೆಂಬಂತಾಗಿದೆ.-

೨. ಕೌರವ ಶಕುನಿಯರು ದ್ಯೂತವಾಡಲು ಧೃತರಾಷ್ಟ್ರನಿಂದ ಒಪ್ಪಿಗೆ ಪಡೆದ ಸಂದರ್ಭ.

ಇಂದ್ರಪ್ರಸ್ಥದಿಂದ ಬರುವಾಗಲೇ ಕೌರವ ಶಕುನಿಯರು ತೀರ್ಮಾನಿಸಿದ್ದಂತೆ, ಧೃತರಾಷ್ಟ್ರನ ಬಿಡುವಿನ ಸಮಯದಲ್ಲಿ ಕಾಣಲು ಹೋಗುತ್ತಾರೆ. ಶಕುನಿಯು ಕೌರವನು ನಿಸ್ತೇಜನಾಗಿರುವನೆಂದೂ, ಕೃಶನಾಗಿರುವನೆಂದೂ, ಮುಖ ವಿವರ್ಣವಾಗಿದೆಯೆಂದೂ, ಮುಖವು ಬಿಳುಚಿಕೊಂಡಿದೆಯೆಂದೂ, ಅವನು ದೀನನಾಗಿ ಚಿಂತಾಮಗ್ನನಾಗಿರುವ ನೆಂಬುದನ್ನು ಧೃತರಾಷ್ಟ್ರನಿಗೆ ತಿಳಿಸಿ "ಈ ನಿನ್ನ ಹಿರಿಯ ಮಗನ ಚಿಂತೆಗೆ ಕಾರಣವೇನೆಂದರಿಯುವುದು ಕರ್ತವ್ಯವಲ್ಲವೇ" ಎನ್ನುತ್ತಾನೆ. ಚಿಂತಾಕ್ರಾಂತನಾದ ಧೃತರಾಷ್ಟ್ರನು ಶಕುನಿಯಿಂದ ತನಗೆ ತಿಳಿದದ್ದನ್ನು ಕೌರವನಿಗೆ ತಿಳಿಸಿ, ಬೇಕಾದ್ದೆಲ್ಲ ಇರುವಾಗ ದರಿದ್ರನು ಚಿಂತಿಸುವಂತೆ ಚಿಂತಿಸಲು ಕಾರಣವೇನು? ಎಂದು ಕೇಳುತ್ತಾನೆ. ಅದಕ್ಕೆ ಕೌರವನು ಸಂತೃಪ್ತಿಯೆಂಬುದು ಸಂಪತ್ತು ಹಾಗೂ ಆತ್ಮಾಭಿಮಾನಗಳನ್ನು ನಾಶಗೊಳಿಸುತ್ತವೆ ಎನ್ನುತ್ತಾ, ಧರ್ಮರಾಯನಲ್ಲಿ ಅಪರಿಮಿತವಾದ ಐಶ್ವರ್ಯವಿದ್ದು ಅದು ತನಗಿಲ್ಲವಲ್ಲ ಎಂದು ಚಿಂತಿಸಿ ಕೃಶನಾಗಿರುವುದಾಗಿ ತಿಳಿಸುತ್ತಾನೆ. ಧರ್ಮರಾಯನ ಯಾಗದ ಸಂಪತ್ತನ್ನೂ ರಾಜರಿಂದ ಅವನಿಗೆ ಸಲ್ಲುತ್ತಿದ್ದ ಅಸಂಖ್ಯ ಕಾಣಿಕೆಗಳನ್ನೂ, ಭೋಜನಶಾಲೆಯ ವಿಶೇಷತೆಗಳನ್ನೂ ವರ್ಣಿಸುತ್ತಾ, ಧರ್ಮಜನು ಹಲವರಿಗೆ ಆಶ್ರಯ ನೀಡಿರುವ ಸಂಗತಿಯನ್ನು ವಿವರಿಸುತ್ತಾನೆ. ಧರ್ಮರಾಯನ ಸಂಪತ್ತು ಅಷ್ಟದಿಕ್ಪಾಲಕರಲ್ಲೂ ಇರುವುದಿಲ್ಲವೆನ್ನುವನು.

ಶಕುನಿಯು ನಡುವೆ ಮಾತನಾಡಿ, ಪಾಂಡವರ ಅತುಲೈಶ್ವರ್ಯಗಳನ್ನು ಹೇಗೆ ಪಡೆಯಬಹುದೆಂಬುದನ್ನು ತಿಳಿಸುತ್ತಾನೆ. ತಾನು ಪಗಡೆಯಾಟದಲ್ಲಿ ನಿಸ್ಸೀಮನೆಂದೂ, ತನಗಿರುವ ಪರಿಶ್ರಮ ಧರ್ಮರಾಯನಿಗಿಲ್ಲವೆಂದೂ. ಧೃತರಾಷ್ಟ್ರನು ಧರ್ಮರಾಯನನ್ನು

ಹಸ್ತಿನಾವತಿಗೆ ಕರೆಸಿದರೆ, ಪಾಂಡವರ ಸರ್ವಸ್ವವನ್ನು ಗೆದ್ದು ಕೊಡುವುದಾಗಿಯೂ ತಿಳಿಸುತ್ತಾನೆ. ಪಾಂಡವರೊಂದಿಗೆ ದ್ಯೂತವಾಡಲು ಅನುಮತಿಸಬೇಕೆಂದು ಹೇಳಿದಾಗ ಧೃತರಾಷ್ಟ್ರನು ಶಕುನಿಯ ಸಲಹೆಯನ್ನು ಮೊದಲಿಗೆ ಒಪ್ಪುವುದಿಲ್ಲ. ಜ್ಞಾನಿಯಾದ ಅವನಿಗೆ ಈರ್ಷೆ ಕೆಟ್ಟದ್ದೆಂಬುದು ತಿಳಿದಿತ್ತು. ಪಾಂಡವರ ಮೇಲೆ ಅವನಿಗೆ ಅಭಿಮಾನವೂ ಇದ್ದುದರಿಂದ ಇದಕ್ಕೆ ಒಪ್ಪಲಿಲ್ಲ. ಧೃತರಾಷ್ಟ್ರನು ದ್ಯೂತವು ಸರ್ವವಿನಾಶಕ್ಕೆ ಕಾರಣವಾಗುವುದೆನ್ನುತ್ತಾ, ಕೌರವರು ಈಗ ಇರುವುದರಲ್ಲಿ ಸಂತೃಪ್ತರಾಗಿರಬೇಕೆಂದು ಹೇಳುತ್ತಾನೆ. ಕೌರವನ ಹಠವು ಮಿತಿಮೀರಿದಾಗ, ಧೃತರಾಷ್ಟ್ರನು ಜ್ಞಾನಿಯಾದ ವಿದುರನೊಂದಿಗೆ ಸಮಾಲೋಚಿಸಿ ಅಭಿಪ್ರಾಯವನ್ನು ತಿಳಿಸುವುದಾಗಿ ಹೇಳುತ್ತಾನೆ. ಇದರಿಂದ ಕಳವಳಗೊಂಡ ಕೌರವನು, ವಿದುರನು ಇದಕ್ಕೆ ಸಮ್ಮತಿಸುವುದಿಲ್ಲ. ಅವನ ಸಲಹೆಯಂತೆ ನೀನು ಪಗಡೆಯಾಟಕ್ಕೆ ಅನುಮತಿಸದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುವುದು ನಿಶ್ಚಯವೆನ್ನುತ್ತಾನೆ. ತಾನು ಸತ್ತ ಮೇಲೆ ವಿದುರನೊಂದಿಗೆ ತಂದೆಯು ಸುಖವಾಗಿರಬಹುದು ಎನ್ನುತ್ತಾನೆ.

ಧೃತರಾಷ್ಟ್ರನಿಗೆ ಪುತ್ರನ ಇಚ್ಛೆಗೆ ವಿರುದ್ಧವಾಗಿ ವರ್ತಿಸುವ ಮತ್ತು ಧರ್ಮ ಸಮ್ಮತವಾಗಿ ನಡೆಯುವ ಸಾಮರ್ಥ್ಯವಿರಲಿಲ್ಲ. ಈ ಕಾರಣದಿಂದ ವಿದುರನ ಸಲಹೆಯನ್ನು ಪಡೆಯದೆ, ಕೌರವನ ಇಚ್ಛೆಯಂತೆ ಧರ್ಮರಾಯನನ್ನು ದ್ಯೂತಕ್ಕೆ ಆಹ್ವಾನಿಸಲು ನಿಶ್ಚಯಿಸುತ್ತಾನೆ. ಕೂಡಲೇ ಅತಿಸುಂದರವಾದ ಸಭಾಮಂದಿರವನ್ನು ಕಟ್ಟುವಂತೆ ಶಿಲ್ಪಿಗಳಿಗೆ ಅಪ್ಪಣೆಮಾಡಿದನು. ವಿದುರನನ್ನು ಕರೆಸಿ, ದ್ಯೂತವಾಡಲು ಪಾಂಡವರನ್ನು ಹಸ್ತಿನಾವತಿಗೆ ಆಹ್ವಾನಿಸಲು ಅಪ್ಪಣೆ ಮಾಡಿದನು.

ವಿದುರನು ದ್ಯೂತದಿಂದ ಕೌರವ ಪಾಂಡವರಲ್ಲಿ ವೈರವುಂಟಾಗಿ ಸರ್ವನಾಶವಾಗುವುದೆಂದು ತಿಳಿಸಿ, ಕೌರವನನ್ನು ತ್ಯಜಿಸಿಬಿಡುವಂತೆ ಸಲಹೆಮಾಡುತ್ತಾನೆ. ಪಾಂಡವರನ್ನು ಪ್ರೀತಿಯಿಂದ ಕಾಣುವುದರಿಂದ ಸುಖ ನೆಮ್ಮದಿಗಳು ಪ್ರಾಪ್ತವಾಗುವುದಾಗಿ ತಿಳಿಸಿ, ದ್ಯೂತವನ್ನು ತಡೆಯುವುದು ಮುಖ್ಯ ಕರ್ತವ್ಯ ಎಂದು ಪರಿಪರಿಯಾಗಿ ಧೃತರಾಷ್ಟ್ರನಿಗೆ ವಿವೇಕವನ್ನು ಹೇಳುತ್ತಾನೆ. ಪುತ್ರವ್ಯಾಮೋಹದಿಂದ ವಿವೇಕವೂ ಕುರುಡಾಗಿದ್ದ ಧೃತರಾಷ್ಟ್ರನು, ವಿದುರನ ಮಾತುಗಳನ್ನು ಕಡೆಗಣಿಸಿ 'ದೈವವೇ ಈ ಪ್ರಕರಣಗಳನ್ನು ಉಂಟುಮಾಡಿದೆಯೆಂಬುದು ತನ್ನ ಅಭಿಪ್ರಾಯವಾಗಿದೆ' ಎಂದು ಹೇಳಿ ಪಾಂಡವರನ್ನು ಆಹ್ವಾನಿಸಲು ಇಂದ್ರಪ್ರಸ್ಥಕ್ಕೆ ತೆರಳುವಂತೆ ಆಜ್ಞಾಪಿಸುತ್ತಾನೆ. ವಿದುರನನ್ನು ಇಂದ್ರಪ್ರಸ್ಥಕ್ಕೆ ಕಳುಹಿಸಿದ ಮೇಲೆ ಧೃತರಾಷ್ಟ್ರನಿಗೆ ಕಳವಳ ತಡಯುದಾಯಿತು. ದ್ಯೂತದ ದುಷ್ಪರಿಣಾಮಗಳು ವಿದುರನ ಮಾತಿನಂತೆಯೇ ಇರುತ್ತವೆಯೆಂಬುದು ಅವನಿಗೆ ಖಚಿತವಾಗಿತ್ತು. ಕೌರವನನ್ನು ದ್ಯೂತಪ್ರಯತ್ನದಿಂದ ವಿಮುಖನಾಗಿಸಲು, ತನ್ನ ಬಳಿಗೆ

ಕರೆಸುತ್ತಾನೆ. ಅವನಿಗೆ ವಿದುರನ ಜ್ಞಾನ ಮತ್ತು ದೂರದೃಷ್ಟಿ ವಿಶೇಷಗಳನ್ನು ತಿಳಿಸಿ, ಕುರುವಂಶದ ಸಲಹೆಗಾರನಾದ ವಿದುರನ ಸಲಹೆಯಂತೆ ದ್ಯೂತದಿಂದ ಮನಸ್ಸನ್ನು ಬೇರೆಡೆಗೆ ತಿರುಗಿಸುವಂತೆ ವಿವೇಕ ಹೇಳುತ್ತಾನೆ. ಮುಂದುವರಿದು ಧೃತರಾಷ್ಟ್ರನು 'ದ್ಯೂತದಿಂದ ರಾಜರಲ್ಲಿ ವೈಮನಸ್ಯ ಉತ್ಪನ್ನವಾಗುತ್ತದೆ. ವೈಮನಸ್ಯದಿಂದ ರಾಜ್ಯವಿನಾಶವೊದಗುತ್ತದೆ. ಆದ್ದರಿಂದ ಪಾಂಡವರೊಡನೆ ದ್ಯೂತವಾಡಬೇಕೆಂಬ ನಿನ್ನ ಇಚ್ಛೆಯನ್ನು ಪರಿತ್ಯಜಿಸು' ಎಂದು ಹೇಳುತ್ತಾನೆ. ಈಗ ನಿನಗೆ ಎಲ್ಲವೂ ಇವೆ. ಹೀಗಿರುವಾಗ ಯಾವ ವಿಷಯ ನಿನ್ನನ್ನು ನಿಸ್ತೇಜನನ್ನಾಗಿ ಮಾಡಿವೆ? ಎನ್ನುತ್ತಾನೆ.

ಕೌರವನು ತಂದೆಗೆ ವಿಸ್ತಾರವಾಗಿ, ರಾಜಸೂಯಯಾಗದ ವೈಭವವನ್ನು, ಸಂಪತ್ಸಮೃದ್ಧಿಯನ್ನೂ ಧರ್ಮರಾಯನಿಗೆ ಬಂದ ಅಪಾರವಾದ ಉಡುಗೊರೆಗಳ ವಿಶೇಷಗಳನ್ನೂ ವಿಸ್ತಾರವಾಗಿ ವರ್ಣಿಸುತ್ತಾನೆ. ಮಯ ನಿರ್ಮಿತ ಸಭೆಯಲ್ಲಿ ತನಗಾದ ಮಾನಹಾನಿಯನ್ನೂ, ಪಾಂಡವರು ಆಗ ಹೇಗೆ ನಡೆದುಕೊಂಡರೆಂಬುದನ್ನೂ ವಿಶದವಾಗಿ ತಿಳಿಸುತ್ತಾನೆ. ಈ ಮೇಲಿನ ಕಾರಣಗಳಿಂದಾಗಿ ತನ್ನ ಹೃದಯವು ಬೆಂದು ಹೋಗುತ್ತದೆ ಎನ್ನುತ್ತಾನೆ. ಪಾರ್ಥನಿಗೆ ಕೃಷ್ಣನು ಆತ್ಮಪ್ರಾಯನಾಗಿದ್ದಾನೆ ಎಂದು ಹೇಳಿದನಲ್ಲದೆ, ರಾಜಸೂಯಯಾಗದಲ್ಲಿ ತಾನು ಕಂಡದ್ದನ್ನೆಲ್ಲಾ ಧೃತರಾಷ್ಟ್ರನಿಗೆ ತಿಳಿಸುತ್ತಾನೆ. ಇವೆಲ್ಲವನ್ನೂ ಕೇಳಿದಮೇಲೆ, ಧೃತರಾಷ್ಟ್ರನು ಯಾರ ಸುಖಕ್ಕೂ ಕಾರಣವಾಗಬಹುದಾದ ನೀತಿಯನ್ನು ಹೇಳುತ್ತಾನೆ. 'ಪಾಂಡುವಿನ ಮಕ್ಕಳು ನಿನಗೆ ಭುಜಪ್ರಾಯರಾಗಿದ್ದಾರೆ. ನಿನ್ನ ಭುಜಗಳನ್ನು ಕತ್ತರಿಸಿಕೊಳ್ಳಬೇಡ. ಸೋದರರ ಬಳಿಯಿರುವ ಐಶ್ವರ್ಯಕ್ಕಾಗಿ ಪರಸ್ಪರ ಕಲಹವನ್ನು ಆರಂಭಿಸಬೇಡ. ಅವರಿಗಿರುವಷ್ಟು ನಿನಗೂ ಇದೆ. ಈ ವಿಷಯವನ್ನು ಸರಿಯಾಗಿ ಪರ್ಯಾಲೋಚಿಸು, ಶಾಂತನಾಗಿರು'

ಕೌರವನಾದರೋ ಪಾಂಡವರನ್ನು ದ್ವೇಷಿಸಲು ತನ್ನದೇ ಆದ ಅಸಮಗ್ರ ಆಲೋಚನೆಯ ಚರ್ಚೆಯನ್ನು ಧೃತರಾಷ್ಟ್ರನ ಮುಂದಿರಿಸುತ್ತಾನೆ. ಧೃತರಾಷ್ಟ್ರನ ಕೋರಿಕೆಯನ್ನು ತಿರಸ್ಕರಿಸುತ್ತಾನೆ. ಧೃತರಾಷ್ಟ್ರನಿಗೆ ಕೌರವನ ವಾದವು. ಅಗ್ರಾಹ್ಯವಾಯಿತು. ಅವನು ಮಗನಿಗೆ "ನಿನ್ನ ಕಾರ್ಯಕ್ಕೆ ಮುಂದೆ ನೀನೇ ಪಶ್ಚಾತ್ತಾಪ ಪಡಬೇಕಾಗುವುದು. ಏಕೆಂದರೆ ಅಧರ್ಮೋಕ್ತಿಗಳೂ ಮತ್ತು ಅಧರ್ಮಕಾರ್ಯಗಳೂ ಖಂಡಿತವಾಗಿ ಮುಂದೆ ಶ್ರೇಯಸ್ಸನ್ನುಂಟು ಮಾಡಲಾರವು. ವಿದ್ವಾಂಸನಾದ ವಿದುರನಿಗೆ ಈ ವಿಷಯಗಳೆಲ್ಲ ಬಹಳ ಹಿಂದೆಯೇ ತಿಳಿದಿದ್ದವು. ಮಹಾಭಯಂಕರವಾದ ಕ್ಷತ್ರಿಯ ಜೀವಘಾತಿಯಾದ ಕಾಲವು ದೈವೇಚ್ಛೆಯಂತೆ ಸಮೀಪವಾಗುತ್ತದೆ; ಇದು ಅನಿವಾರ್ಯ' ಎಂದು ನಿಟ್ಟುಸಿರುಡುತ್ತಾನೆ.

ವ್ಯಾಸಭಾರತದಲ್ಲಿ ಶಕುನಿ ಕೌರವ, ಧೃತರಾಷ್ಟ್ರ ಮತ್ತು ವಿದುರರ ಚರ್ಚೆಯು ದೀರ್ಘವಾಗಿದೆ. ನೀತಿನಿರೂಪಣೆಯು ವಿಸ್ತಾರವಾಗಿದೆ. ಕೌರವನ ಅಸೂಯಾ ಪರ ಮನೋಧರ್ಮವು ಹೇಗೆ ದ್ಯೂತವಾಡಲು ತಂದೆಯನ್ನೊಪ್ಪಿಸಿತು ಎಂಬುದನ್ನು ವ್ಯಾಸರು ಮನದಟ್ಟಾಗುವಂತೆ ನಿರೂಪಿಸಿದ್ದಾರೆ. ಧೃತರಾಷ್ಟ್ರನ ತೊಳಲಾಟದ ಚಿತ್ರಣವೂ ದೀರ್ಘವಾಗಿದೆ. ಕೌರವನ ವಾದವೂ ಅಷ್ಟೇ ದೀರ್ಘವಾಗಿದೆ. ಇದು ವ್ಯಾಸರ ದೃಷ್ಟಿಯಿಂದ ಅನಿವಾರ್ಯವಾಗಿದೆ. ನಿರ್ಲಿಪ್ತ ಮನೋಭಾವದ ವ್ಯಾಸರು ತಮ್ಮ ಪಾತ್ರಗಳು ಸಂವಾದಿಸಿದಂತೆ ನಿರೂಪಣೆ ಮಾಡಿದ್ದಾರೆ. ಪಾತ್ರಗಳಾಡುವ ಮಾತು ವ್ಯಾಸರ ಆಲೋಚನೆಯ ಅನಾವಾರಣ ಮಾಡುವಂತಿವೆ. ಹೀಗಾಗಿ ವ್ಯಾಸರ ಸುಂದರವಾದ ಅಭಿವ್ಯಕ್ತಿಯು ಸಹಜ ಸುಂದರವಾಗಿದ್ದು ಆಸ್ವಾದ್ಯವಾಗುತ್ತದೆ.

೨(ಬಿ)

ಹಸ್ತಿನಾವತಿಯಲ್ಲಿ ಮೊದಲೇ ನಿರ್ಧರಿಸಿದ್ದಂತೆ ಶಕುನಿಯು ಧೃತರಾಷ್ಟ್ರನ ಅರಮನೆಗೆ ಹೋಗುತ್ತಾನೆ. ಏಕಾಂತಭವನದಲ್ಲಿ ಅವನನ್ನು ಸಂಧಿಸಿ, ಕೌರವನ ಸಂಕಟ ಮತ್ತವನ ಮನೋ ವ್ಯಥೆಗಳನ್ನು ತಿಳಿಸುತ್ತಾನೆ. ಒಡನೆಯೇ ಅವನು ಕೌರವನಿಗಾವುದು ದುಃಖ? ಕಾರಣವೇನು? ಯಾರಿಂದ ಅವನಿಗೆ ದುಃಖ? ಏನನ್ನೂ ಮುಚ್ಚಿಡದೆ ಹೇಳು ಎಂದೊಡನೆಯೆ ಶಕುನಿಯು ನಿನ್ನ ಮಗನನ್ನು ಕರೆಸಿ ಕೇಳು ಎನ್ನುತ್ತಾನೆ. ಧೃತರಾಷ್ಟ್ರನೇ ಅವನನ್ನು ಕರೆಸಿದನು. ಈ ಮೂವರೂ "ಕಟ್ಟೇಕಾಂತದಲಿ ಕುಳ್ಳಿರ್ದು ವಿಚಾರಿಸಿದರು. ನಿಜಾನ್ವಯದ ಮೂಲನಾಶನವ." ರಾಜ್ಯದ ಹಿತಕ್ಕಾಗಿ ಏಕಾಂತದಲ್ಲಿ ಮಂತ್ರಾಲೋಚನೆ ನಡೆಸುವುದು ಸಹಜವಾದದ್ದು, ಇಲ್ಲಾದರೋ ತಮ್ಮ ವಂಶನಾಶನವನ್ನು ಕುರಿತು ಚಿಂತಿಸಿದರಂತೆ!

ಧೃತರಾಷ್ಟ್ರನು ಕೌರವನಿಗೆ ರಾಜ ವಿಹಿತವಾದ ಚಟುವಟಿಕೆಗಳನ್ನು ನಿಲ್ಲಿಸಲು ಕಾರಣವೇನು? ಬಂಧು ಭಾಂಧವರನ್ನು ಅರಮನೆಗೆ ಸೇರಿಸುತ್ತಿಲ್ಲವೇಕೆ? 'ಈ ಹಗಲು ನಿನಗೇಕಾಯ್ತು ಕತ್ತಲೆ" ಎಂದು ಕೇಳುತ್ತಾನೆ. ಇಲ್ಲಿ ಹಗಲು ಸುಖದ ಸಂಕೇತ; ಕತ್ತಲು ದುಃಖದ ಸಂಕೇತವಾಗಿದೆ. ತಂದೆಯ ಪ್ರಶ್ನೆಗೆ ಕೌರವನು ನೇರವಾಗಿ ಉತ್ತರಿಸಲಾರನಾದ್ದರಿಂದ, ಪರೋಕ್ಷವಾಗಿ ಅವನನ್ನು ಕುರಿತು 'ನೀವು ಧರ್ಮದ ಕೂಳಿಯಲ್ಲಿ ಸಿಕ್ಕವರು. ನಾವೇನಾದರೂ ಹೇಳಿದರೆ ದುಷ್ಟ, ಕಷ್ಟ ಮತ್ತು ಅಸೂಯಾಪರವೆನ್ನುತ್ತೀರಿ. ನನ್ನ ಜೀವನವೆಲ್ಲ "ಸಾಲಭಂಜಿಕೆಯಾಯ್ತು" (ನನ್ನ ಜೀವನ ಅಲಂಕಾರಕ್ಕಾಯ್ತು) ನನ್ನ ಬಯಕೆಯನ್ನೇಕೆ ಅಸೂಯಾಪರ ಕೇಳುವಿರಿ ಎಂದು ಕಂಬನಿದುಂಬುತ್ತಾನೆ. ತನ್ನ ಮಾತನ್ನು ಮುಂದುವರಿಸಿ, ನೀವು ಮುನಿಗಳು, ನಾವು

ರಾಜಸದ ಮದದಲ್ಲಿ ಲೋಕದ ನಡವಳಿಕೆಯನ್ನು ಅನುಸರಿಸುವವರು. ನಮ್ಮ ಇಚ್ಛೆಯನ್ನು ನಡೆಸುವರಾರು? ಎಂದು ತನ್ನ ದುಷ್ಕೃತವನ್ನು ನಿಂದಿಸುತ್ತಾನೆ. ಕೌರವನ ಈ ಪೀಠಿಕೆಯಿಂದ, ತಂದೆ ಅನುಮತಿಸುವನೋ ಇಲ್ಲವೋ ಎಂಬ ಸಂಶಯದೊಂದಿಗೆ, ವಿಷಯವನ್ನು ತಿಳಿಸಲು ಸಂಕೋಚವೂ ಅಡ್ಡ ಬರುತ್ತದೆ ಎಂಬುದು ಹೊಳೆಯುತ್ತದೆ.

ಧೃತರಾಷ್ಟ್ರನು ಕೌರವನನ್ನು ಕುರಿತು, ನಿನ್ನ ಯಾವ ನಿರ್ಧಾರಕ್ಕೆ ಹಿಂಜರಿಕೆಯಾಗಿದೆ? ನಿನ್ನ ಸಂತೋಷದ ಇಳಿಹೊತ್ತಿಗೆ ಕಾರಣವೇನು? ಎಂದು ಕಳವಳಿದಿಂದೊಡಗೂಡಿದ ಕುತೂಹಲದಿಂದ ಪ್ರಶ್ನಿಸುತ್ತಾನೆ. ಆಗ ಕೌರವನು ರಾಜಸೂಯಯಾಗದ ಮಯನಿರ್ಮಿತ ಸಭೆಯಲ್ಲಿ ತನಗಾದ ಅಪಮಾನದ ಘಟನೆಗಳನ್ನು ವಿವರಿಸುವ ಮುನ್ನ 'ಪಾಂಡವರ ಸಾಮರ್ಥ್ಯ ಪಣವನ್ನು' ಕೃಷ್ಣನ ಮಿತ್ರತ್ವವನ್ನು ಏನೆಂದು ಹೇಳಲಿ? ನಾನು ಮಯ ನಿರ್ಮಿತ ಸಭೆಯಲ್ಲಿ ನಪುಂಸಕನಾದ ಪರಿಯನ್ನು ಹೇಗೆ ತಾನೆ ಹೇಳಲಿ? ಲಜ್ಜಾ ಮಾನಿನಿಗೆ ತನ್ನೊಕ್ಕತನವಿಂದಿಳಿದು ಹೋಯ್ತು ಎನ್ನುವನು. ಕೌರವನ ಅಭಿವ್ಯಕ್ತಿಯಲ್ಲಿ ಅವನ ಸಂಕಟವೇ ಹೆಪ್ಪುಗಟ್ಟಿದೆ. ಅವನೇ ಮಾತನ್ನು ಮುಂದುವರಿಸಿ,

ನೆಗೆದ ಬುಗುಟಿದೆ ಹಣೆಯಲವರೋ। ಲಗದ ಸಭೆಯಲಿ ನೆನೆದ ಸೀರೆಯ
ತೆಗೆಸಿಕೊಟ್ಟರು ತಮ್ಮ ಮಡಿವರ್ಗದ ನವಾಂಬರವ
ಬೆಗಡುಗೊಳಿಸಿದರೆನ್ನನವರೋ। ಲಗದ ಸೂಳೆಯರವರ ಸೂಳಿನ
ನಗೆಯ ನೆನೆ ನೆನೆದೆನ್ನಮನ ಜರ್ಝರಿತವಾಯ್ತೆಂದು' ಹೇಳುತ್ತಾನೆ.

[ವ್ಯಾಸ ಭಾರತದಲ್ಲಿ ಹಸ್ತಿನಾಪುರಕ್ಕೆ ಬರುವಾಗ ಕೌರವನು ಶಕುನಿಯೊಂದಿಗೆ ಹೇಳಿದ ಸಂಗತಿಯನ್ನೆಲ್ಲ, ಕುಮಾರವ್ಯಾಸ ಭಾರತದಲ್ಲಿ ತಂದೆಯೆದುರಿಗೆ ಹೇಳುತ್ತಿದ್ದಾನೆ. ಮೊದಲಿಗೆ ಸೂಚನೆಯಾಗಿ ಬರುವ ಸಂಗತಿಯು ಇಲ್ಲಿ ವಿಸ್ತಾರವಾದ ನಿರೂಪಣೆಯನ್ನು ಪಡೆದಿದೆ]

ಕೌರವನು ತನ್ನ ಹಣೆಗೆ ಪೆಟ್ಟುಬೀಳಲು ಕಾರಣವಾದ ಮಯನಿರ್ಮಿತ ಸಭೆಯ ಶಿಲ್ಪ ಚಮತ್ಕಾರಗಳನ್ನು ಸಹೃದಯರ ಕಣ್ಣಿನಮುಂದೆ ನಿಲ್ಲುವಂತೆ ನಿರೂಪಿಸಿದ್ದಾನೆ. "ನಾನು ಪ್ರವೇಶಿಸಿದೆಡೆಯಲ್ಲಿ ಸಾಲುಸಾಲಾಗಿ ಹೊಳೆಯುವ ರತ್ನಗಳ ಕಾಂತಿಯು ನನ್ನ ಕಣ್ಣುಗಳನ್ನು ಸೋಲಿಸಿದುವು. ಮುಂದೆ ಸಾಗಿದಂತೆಲ್ಲ ಉಭಯ ಪಾರ್ಶ್ವಗಳಲ್ಲಿ ಹುದುಗಿಸಿದ್ದ ರತ್ನಗಳ ಕಾಂತಿಯಿಂದ ನನ್ನ ಕಣ್ಣುಗಳು ಕೋರೈಸುತ್ತಿದ್ದುವು. ಅಲ್ಲಿ ಉಕ್ಕುತ್ತಿದ್ದ ಪರಿಶುದ್ಧವಾದ ಕಿರಣಗಳಲ್ಲಿ ನನ್ನ ಮನಸ್ಸು ಹೊಲಬುದಪ್ಪಿತು. ನನ್ನ ವಿವೇಕವನ್ನು ಬಹು ವಿಧದ ರತ್ನದಕಾಂತಿಗಳು ಒಡಿದು ಕೆಡಹಿದುವು. ಮುಂದೊಂದು ಠಾವಿನಲ್ಲಿ ವಿಮಳ ಸ್ಫಟಿಕ ಭೂಮಿಯಿತ್ತು. ಅದನ್ನು ಕೊಳವೆಂದು ಭಾವಿಸಿದ ನಾನು ನಿಂತು ಧೋತ್ರವನ್ನು

ಸರಿಪಡಿಸಿಕೊಂಡೆ. ಅದನ್ನು ಕಂಡ ದ್ರೌಪದೀ ಸಮೇತವಾದ ಸಖೀವೃಂದವು ಚಪ್ಪಾಳೆ ತಟ್ಟಿ ಘೊಳ್ ಎಂದು ನಕ್ಕುದು. ನಾನು ನಾಚಿಕೆಯಿಂದ ತಲೆತಗ್ಗಿಸಿದೆ. ಊಹೆಯಿಂದ ತಡವರಿಸುತ್ತಾ 'ಅಡಿಗಳನ್ನು ಮುಂದಿಟ್ಟು ಕಾಂತಿಯ ಜಾಡನ್ನು ತಿಳಿಯದ ಬೀದಿಯಲ್ಲಿ ಸರೋವರವನ್ನು ಕಂಡೆ. ಹಿಂದಿನಂತಾಗುವುದು ಬೇಡವೆಂದು, ಅದು ಸ್ಫಟಿಕದ ನೆಲವೆಂದೇ ಬಗೆದು ನಡೆಯಲು ಅದು ನಿಜವಾಗಿ ನೀರಾಗಿದ್ದಿತು. ಹೀಗಾಗಿ ನಾನು ಹೊಕ್ಕುಳಿನವರೆಗೂ ನೆನೆದು ಮುದ್ದೆಯಾದೆ. ಮತ್ತೆ ಯುಧಿಷ್ಠಿರನ ಮತ್ತಕಾಶಿನಿಯರುಗೊಳ್ಳೆಂದು ನಕ್ಕರು. ದಡಕ್ಕೆ ಬಂದು ಧರ್ಮರಾಯನುಡುತ್ತಿದ್ದ ದಿವ್ಯಾಂಬರವನ್ನು ಧರಿಸಿದೆ. ನನ್ನ ಅಭಿಮಾನ ಸಮುದ್ರವು ಬತ್ತಿಹೋಯಿತು. ಒಂದೆಡೆ ಬಾಗಿಲು ನನ್ನನ್ನು ನಂಬಿಸಿತು. ಅದು ಗೋಡೆಯಲ್ಲಿ ಪ್ರತಿಬಿಂಬಿಸುತ್ತಿದ್ದುದನ್ನು ತಿಳಿಯದೆ ಬಾಗಿಲ ಚೌಕಟ್ಟಿನೊಳಗೆ ನುಗ್ಗಿದೆ. ಮತ್ತೆ ನನ್ನನ್ನು ನೋಡಿ ನಗುವ ಸ್ತ್ರೀಯರನ್ನೂ, ಭೀಮಾರ್ಜುನರ ಆಡಂಬರವನ್ನೂ ಕಂಡು ಇನ್ನೂ ಜೀವವನ್ನು ಹಿಡಿದುಕೊಂಡಿದ್ದೇನೆ. ನನ್ನ ಹಣೆಗೆ ನೋವಾಯಿತೇ? ಇಲ್ಲ; ಅವರ ನಗುವಿನಿಂದ ಅತಿಯಾಗಿ ನೊಂದೆ. ಮುಂದೆ ಕೋಣೆಯ ಬಾಗಿಲನ್ನು ಕಂಡು ಹಿಂದಾದ ಭಂಗವೇ ಸಾಕೆಂದು, ಪರಿಣತಿಯಿಂದ ಒಂದು ಕಡೆಯಲ್ಲಿ ಬಾಗಿಲನ್ನು ಹುಡುಕಲು ಗೋಡೆಯನ್ನು ತಡವರಿಸಿದೆ. ನಗುವಿಗೆ ನಗು ತಲೆಹಿಡುಕಿಯಾಯ್ತು. ಕಪ್ಪಿಟ್ಟ ವಿವೇಕಕ್ಕೆ ಹೊಗೆಯ ಗೆಳೆತನವಾಯ್ತು; ಅಲ್ಲಿ ನಾನು ಹಾಸ್ಯಾಸ್ಪದ ವಸ್ತುವಾದೆ. ಜನರು ನೋಟಕರಾದರು. ನಗುವವರನ್ನು ಯುಧಿಷ್ಠಿರನು ಗದರಿಸಿದನೇನು ? ನಿಮ್ಮ ಮಗನು ಆ ನಗೆಯನ್ನು ಮರೆದನೇನು ? ಇದು ನಿಮ್ಮ ಮಗನ ದುರವಸ್ಥೆಯ ಚಿತ್ರ, ತಿಳಿದುಕೊಳ್ಳಿ ಎನ್ನುತ್ತಾನೆ. ನನ್ನಾಟವಿಷ್ಟಾಯಿತು. 'ಪಾಂಡುಪುತ್ರರ ಬೊಡ್ಡಿ' ನಗುವಿನಲ್ಲಿ ಹೊರಳಾಡಿದಳು. ಭೀಮಾರ್ಜುನರು ಗರ್ವದಿಂದ ಬೀಗಿದರು. ಅವರು ನನಗಿಂತ ಖಡಾಖಂಡಿತರಾದವರು. ನಾನಾದರೋ ಬರೀ ರೋಷದಗೊಡ್ಡು ಅಷ್ಟೇ. ಅಪಮಾನಕ್ಕೆ ಬಡ್ಡಿ ಸಮೇತ ಅಸಲನ್ನು ಹಿಂದಿರುಗಿಸಿಕೊಡುವ ವಿಶ್ವಾಸದಿಂದಲೇ ನಾನು ಬದುಕಿದ್ದೇನೆ ಎನ್ನುತ್ತಾನೆ. ಕೌರವನ ದೃಢ ನಿರ್ಧಾರವನ್ನು ಧ್ವನಿಸುತ್ತಿರುವ ಪದ್ಯವಿದು;

ಸಿಂಗಿಯನು ಬಿತ್ತಿದೆನು ಪಾಂಡವ। ರಂಗದಲಿತತ್ಫಲದ ಬೆಳಸಿನ
ಸಿಂಗಿಯಲ್ಲಿ ತಾ ಸಾವೆನಲ್ಲದೊಡಗ್ನಿ ಕುಂಡದಲಿ
ಭಂಗಿಸುವೆನಾ ಫಲದೊಳೆನ್ನನು । ನುಂಗಬೇಹುದು ವಹ್ನಿ ಮೇಣೀ
ಗಂಗೆಯೊಡಲಲಿ ಬಿದ್ದೊಡಲ ನೀಗುವೆನು..

ಇಲ್ಲಿ ಕೌರವನಿಗೆ ತಾನು ಪಾಂಡವರ ಅಂತರಂಗದಲ್ಲಿ ಚಿಮ್ಮುತ್ತಿರುವುದು ಭಯಂಕರವಾದ ವಿಷದ ಬೀಜವೆಂಬ ಅರಿವಿದೆ. ಅದರಿಂದ ಬರುವ ಬೆಳೆಯೂ ವಿಷವೇ ಆಗಿರುವುದರಿಂದ, ಸಾಯುವುದು ಇಲ್ಲವೇ ಚಿತೆಗೆ ಹಾರುವುದು ಇಲ್ಲವೇ

ಮಡುವಿನಲ್ಲಿ ಧುಮುಕುವುದು ಇದೇ ಪರಿಣಾಮವೆನ್ನುತ್ತಾನೆ. ಕೌರವನು ಮುಂದುವರಿದು 'ಧೃತರಾಷ್ಟ್ರನು ಧರ್ಮಜನೊಂದಿಗೆ ರಾಜನಾಗಿರಲಿ. ನನ್ನ ತಾಯಿ ದುಶ್ಯಾಸನನ ಪಟ್ಟಾಭಿಷೇಕದಲ್ಲಿ ಸಂತಸಪಡಲಿ. ನನಗೆ ಹೇಗೂ ಇಂದ್ರಲೋಕದಾಲಯದಲ್ಲಿ ರಾಯಪಟ್ಟವೊದಗುವುದೆಂದು ಪುರೋಹಿತರು ಹೇಳಿದ್ದಾರೆ. ಅವರ ಮಾತು ಅರ್ಥವಿಲ್ಲದ್ದಲ್ಲ' ಎನ್ನುತ್ತಾನೆ.

ಧೃತರಾಷ್ಟ್ರನಿಗೆ ಕೌರವನ ಬಯಕೆ ಹಾಗೂ ಬೆದರಿಕೆಗಳು ಸ್ವಲ್ಪಮಟ್ಟಿಗೆ ಅರ್ಥವಾಗಿವೆ. ಅವನು 'ಚಾಡಿಯು ಯಾರ ಮನಸ್ಸನ್ನು ಕೆರಳಿಸಲಾರದೆಂದು' ಕೊರಗಿದ್ದಾನೆ. ಅವನು ಮಗನಿಗೆ ರಾಜರ್ಷಿಯಾದ ಧರ್ಮರಾಯನ ಮೇಲೆ ಕೋಪ ತರವಲ್ಲ ಎನ್ನುವನು. 'ಸ್ತ್ರೀಯರಲ್ಲೆಲ್ಲಾ ಗಾಂಧಾರಿ ಮಹಾಪತಿವ್ರತೆ. ಬಿತ್ತಿರುವ ಬೀಜದಲ್ಲಿ ಯಾವ ನ್ಯೂನತೆಯೂ ಇಲ್ಲ. ಕೌರವನ ಈ ನಡವಳಿಕೆ ಕೃತಕವಾದದ್ದೋ ಸಹಜವಾದದ್ದೋ" ಎಂದು ನಿಟ್ಟುಸಿರು ಬಿಡುತ್ತಾನೆ. ಕೌರವನು ಪಾಂಡುವಿಗೂ ಧೃತರಾಷ್ಟ್ರನಿಗೂ ಭೇದ ಕಲ್ಪಿಸುವುದು ಸರಿಯೆಂದು ತೋರುವುದಿಲ್ಲ. 'ಪಾಂಡವರು ಅವರ ಹಕ್ಕಿನ ರಾಜ್ಯಾಧಿಕಾರದಲ್ಲಿ ಬದುಕಿದ್ದಾರೆ. ನಿನ್ನ ನಡವಳಿಕೆ ಸರಿಯಿಲ್ಲ' ಎಂದು ಹೇಳುತ್ತಾನೆ. ತಂದೆಯ ಮಾತು ಮಗನಿಗೆ ಅಪಥ್ಯವಾಯಿತು. ಅವನು 'ಮಹಾಭಿಮಾನದ ಕುಹಕಿಯು ನಾಶವಾಗಲಿ. ನೀವೊಪ್ಪುವ ರಾಜಕುಮಾರರನ್ನೂ ಪಾಂಡವರನ್ನೂ ಸೇರಿ ಬದುಕಿಕೊಳ್ಳಿ' ಎನ್ನುತ್ತಾನೆ. ಗಾಂಧಾರಿಯನ್ನು ಕುರಿತು 'ಧೃತರಾಷ್ಟ್ರನಿಗೆ ಯುಧಿಷ್ಠಿರನೇ ಮಗ. ಭೀಮಾರ್ಜುನರೂ ಮಕ್ಕಳೇ. ಇನ್ನು ಪಾಂಡವರ ಸಂತತಿಯು ರಾಜ್ಯದ ಹಕ್ಕುದಾರರಾಗಿ ಬದುಕಲಿ. ನಮಗಾರೂ ರಕ್ಷಕರಿಲ್ಲ' ಎನ್ನುತ್ತಾನೆ. ಪುತ್ರನ ಮಾತುಗಳನ್ನು ಕೇಳಿ ಗಾಂಧಾರಿಯು ಕಣ್ಣೀರಿನಲ್ಲಿ ಮುಳುಗಿದರೆ, 'ಧೃತರಾಷ್ಟ್ರನೆದೆ ಜರ್ಝರಿತವಾದದು ಮಗನ ಮಾತಿನ ಮುಸಲ ಹತಿಗಳಲಿ' ಧರ್ಮರಾಯನು ಸದಾಚಾರಿ ನಾವು ಧರ್ಮಹಾನಿ ಮಾಡುವವರು ಎನ್ನುತ್ತ ಕೌರವನು ಅಲ್ಲಿಂದ ಎದ್ದು ಹೊರಡುತ್ತಾನೆ. ಧೃಷ್ಟರಾಷ್ಟ್ರನಿಗೆ ಉಭಯಸಂಕಟ. ಒಂದೆಡೆ ಧರ್ಮ ಪ್ರೀತಿ ಮತ್ತೊಂದೆಡೆ ಪುತ್ರಪ್ರೀತಿ – ಇವುಗಳ ನಡುವೆ ಸಿಕ್ಕು ತೊಳಲಾಡುತ್ತ ಗಾಂಧಾರಿಗೆ;

"ಎಲಗೆ ಕರೆಯಾ ಪಾಪಿ ಕೌರವ। ಕುಲಕುಠಾರನ ನಿನ್ನ ಮಗನೊಡ

ನಳಿವನೈಸಲೆ ಪಾಂಡುಪುತ್ರರ ವೈರ ಬಂಧದಲಿ" ಎನ್ನುತ್ತಾನೆ. ಧೃತರಾಷ್ಟ್ರನಿಗೆ ಕೌರವನಿಂದಲೇ ಕುರುವಂಶ ವಿನಾಶವೆಂಬುದು ಗೊತ್ತಿದೆ. ಆದ್ದರಿಂದಲೇ ಅವನ ಧ್ವನಿಯಲ್ಲಿ ಅಸಹಾಯಕತೆಯಿದೆ, ಮನದಲ್ಲಿ ಸಂಕಟವಿದೆ ಮತ್ತು ಕೌರವನ ಮೇಲೆ ಅತಿಯಾದ ಕ್ರೋಧವೂ ಇದೆ. ಶಕುನಿಯು ಹೋಗುತ್ತಿದ್ದ ಕೌರವನನ್ನು ಮತ್ತೆ ಕರೆತರುವ ವೇಳೆಗೆ ಧೃತರಾಷ್ಟ್ರನು ದುರ್ಬಲ ಮನನಾಗಿದ್ದನು. ತನ್ನಲ್ಲಿಗೆ ಬಂದ ಕೌರವನಿಗೆ, ಪಾಂಡವರ

ರಾಜ್ಯಾಪಹಾರ ಮಾಡುವುದರ ಬಗೆಗೆ ನಿನ್ನ ವಿಚಾರವೇನು? ನಿನ್ನ ಆಲೋಚನೆ ಏನೆನ್ನುತ್ತದೆ? ಚತುರೋಪಾಯಗಳಲ್ಲಿ ಯಾವುದನ್ನು ಪಾಂಡುವರ ಮೇಲೆ ಪ್ರಯೋಗಿಸಲು ನಿರ್ಧರಿಸಿದ್ದೀರಿ? ಎಂದು ಪ್ರಶ್ನಿಸುತ್ತಾನೆ. ಧೃತರಾಷ್ಟ್ರನಿಗೆ ಕೌರವನು ಈ ಮೊದಲು ಪಾಂಡವರ ವಿನಾಶಕ್ಕೆ ಮಾಡಿದ್ದ ಪ್ರಯತ್ನಗಳು ಮತ್ತು ಅದು ವಿಫಲವಾದುದ್ದರ ಅರಿವಿದೆ. ಆದ್ದರಿಂದಲೆ ಅವನು 'ಇಷ್ಟೆಲ್ಲ ನೀವು ಪ್ರಯತ್ನಮಾಡಿದರೂ ಪಾಂಡವರು ಕ್ಷೇಮವಾಗಿಯೇ ಇದ್ದಾರೆ. ಇದಕ್ಕೇನು ಪರಿಹಾರ? ಎಂದು ಕೇಳಿದೊಡನೆಯೆ ಶಕುನಿಯು ನೀವು ಮನಸ್ಸು ಮಾಡಿದರೆ, ನಾವು ಪಾಂಡವರನ್ನು ದ್ಯೂತದಲ್ಲಿ ಸೋಲಿಸಿಕೊಡುತ್ತೇವೆ. ಅವರನ್ನು ಪ್ರೀತಿಯಿಂದ ಇಲ್ಲಿಗೆ ಕರೆಸಿ. ಧರ್ಮರಾಯನಿಗೆ ಪಗಡೆಯಾಡಲು ಬಾರದು, ಆದ್ದರಿಂದ ಸುಲಭವಾಗಿ ಗೆಲ್ಲಬಹುದು ಎನೆನ್ನುತ್ತಾನೆ? ಶಕುನಿಯ ಸಲಹೆ ಧೃತರಾಷ್ಟ್ರನಿಗೆ ಸಮ್ಮತವಾಗಿಲ್ಲ . ಆದರೂ ಅವನು 'ಶಕುನಿಯ ಮಾತಿನಲ್ಲಿ ತಪ್ಪೇನೂ ಇಲ್ಲ. ನಮ್ಮ ಹಿತೈಷಿಯಾದ ವಿದುರನನ್ನು ಕೇಳಿ, ಅವನ ವಿವೇಕಕ್ಕೆ ಇದು ಸಮ್ಮತವಾದರೆ ಪಾಂಡವರನ್ನು ಆಹ್ವಾನಿಸಲು ಅವನಿಗೆ ಅಪ್ಪಣೆಮಾಡುವುದಾಗಿ ಹೇಳುತ್ತಾನೆ. ಕೌರವನಿಗೆ ವಿದುರನು ದ್ಯೂತಕ್ಕೆ ಸಮ್ಮತಿಸಲಾರನೆಂಬುದು ಗೊತ್ತಿತ್ತು. ಆ ಕೂಡಲೇ ಅವನು ತಂದೆಗೆ 'ದುಷ್ಟರಿಗೆ ತೇಜಸ್ಸು, ಕೆಪ್ಪರಿಗೆ ಬೀಜಮಂತ್ರೋಪದೇಶ ಮತ್ತು ನಾಲಿಗೆಯಿಲ್ಲದವನಿಗೆ ರೂಪವಿಲಾಸಗಳ ವರ್ಣನೆಗಳನ್ನು ಹೇಳಿದ ಹಾಗೆ, ಈ ಸಂಗತಿಯನ್ನು ವಿದುರನಿಗೆ ಹೇಳಿದರೆ ಕೆಲಸ ಕೆಡದೇ ಎಂದು ಪ್ರಶ್ನಿಸುತ್ತಾನೆ. ಧೃತರಾಷ್ಟ್ರನು ವಿದುರನ ಸದ್ಗುಣಗಳನ್ನು ಪ್ರಶಂಸಿಸುತ್ತಾ, ತನಗಿರುವ ಅಚಲವಾದ ನಂಬಿಕೆಯನ್ನು ಪ್ರಕಟಪಡಿಸುತ್ತಾನೆ. ಕೌರವನು ಕೊನೆಗೆ ನಮ್ಮ ಮೇಲಿನ ಕರುಣೆಯಿಂದ ಪಾಂಡವರನ್ನಿಲ್ಲಿಗೆ ಕರೆಸಿಕೊಟ್ಟರೆ ಸಾಕು ಎನ್ನುತ್ತಾ ತನ್ನ ಮತ್ತೊಂದು ಆಸೆಯನ್ನೂ ತಂದೆಯ ಮುಂದಿಡುವನು. 'ಪಾಂಚಾಲಿಯನ್ನು ಸಭಾಮಧ್ಯದಲ್ಲಿ ನೂಕಿ, ಅವಳ ಮುಂದಲೆ ಎಡಿದು ದಾಸಿಯರೊಡನೆ ಕುಳ್ಳಿರಿಸಿದ ದಿನ ನನ್ನ ದುಃಖ ದೂರವಾಗುತ್ತದೆ. ನಾನು ಕೃತಕೃತ್ಯನಾಗುತ್ತೇನೆ' ಈ ಬಯಕೆಯನ್ನು ಕೇಳಿಯೂ ಧೃತರಾಷ್ಟ್ರನು ಮೌನವಾಗಿದ್ದುದು ಆಶ್ಚರ್ಯಕರ ಸಂಗತಿ.

ಕೌರವನನ್ನು ಕಳುಹಿಸಿದ ಮೇಲೆ ಧೃತರಾಷ್ಟ್ರನು ಗಾಢವಾದ ಚಿಂತೆಯಲ್ಲಿ ಮುಳುಗಿದನು. "ಈ ಮಗನು ಈಗಿನ ರುಚಿಗೆ ಮನಮಾಡಿ ಮೇಲಿಂದ ಬೀಳುವ ಒದೆಯನ್ನು ತಿಳಿಯಲಾರ. ಇದಕ್ಕೆ ತಾನೇನು ಮಾಡಲು ಸಾಧ್ಯವೆಂದು ಗಾಂಧಾರಿಯನ್ನು ಕೇಳುತ್ತಾನೆ.' (ವ್ಯಾಸರಲಿಲ್ಲ) "ಪಾಂಡವರಿಗೆ ಕೃತ್ರಿಮವು ತಿಳಿಯದು. ಕೌರವನ ಪ್ರಯತ್ನವೇನೆಂಬುದು ನಿನಗೆ ತಿಳಿದಿದೆ. ಈಗ ನಾನು ಪಾಂಡವರನ್ನು ಕರೆಸಿದರೆ, ಬೇಟೆಗಾರರ ಆಕರ್ಷಕ ನಾದವನ್ನು ಕೇಳಿ ನಿಲ್ಲದೆ ಓಡಿಬರುವ ಜಿಂಕೆಯಂತೆ ಇಲ್ಲಿಗೆ ಓಡಿ ಬರುತ್ತಾರೆ. ಈ ಲೋಕ ಕೌರವನ ಕೃತ್ರಿಮವನ್ನರಿಯದು. ಇವನಿಂದ ನಮಗೆ

ಅಪಕೀರ್ತಿಯುಂಟಾಗುತ್ತದೆ" ಎಂದು ಸಂಕಟಪಡುತ್ತಾನೆ. ಮಾತನ್ನು ಮುಂದುವರಿಸಿ, 'ಇವರ ಮಾತನ್ನು ಕೇಳದಿದ್ದರೆ ಕೋಪಗೊಂಡು ಈ ನೂರ್ವರೂ ನನ್ನನ್ನು ತೊರೆಯುವರು. 'ಇವರ ಮಾತನ್ನು ಕೇಳಿ. ಪಾಂಡವರು ಕೈಗೆ ಸಿಕ್ಕುವಂತೆ ಮಾಡಿದರೆ, ನೂರ್ವರನ್ನೂ ತುಂಡು ತುಂಡು ಮಾಡಿ ಎಸೆಯುತ್ತಾರೆ. ಇದು ನಿಜವಾದ ಸಂಗತಿ. ಜೀವವಿರುವವರೆಗೂ ಪತ್ರ ಮೋಹವು ನನ್ನನ್ನು ಬಿಡುವುದಿಲ್ಲ" ಎಂದು ಮರಗುತ್ತಾನೆ.

ಧೃತರಾಷ್ಟ್ರನ ಚಿಂತೆಗೆ ಕಾರಣವನ್ನರಿತ ಗಾಂಧಾರಿಯು ಬಲು ಸರಳವಾದ ಮಾರ್ಗವನ್ನು ಸೂಚಿಸಿದ್ದಾಳೆ. 'ಅರಸ ನಿನ್ನ ಮಕ್ಕಳು ನೂರ್ವರನ್ನು ಹಿಡಿ ಪಾಂಡವರನ್ನು ನೂಕು; ನಿನ್ನ ತನುಜರು. ನೂರ್ವರನ್ನು ನೂಕು ಪಾಂಡವರನ್ನು ಹಿಡಿ' ಹತ್ತಿರ ವಿರಿಸಿಕೋ ಎನ್ನುತ್ತಾಳೆ. ಧೃತರಾಷ್ಟ್ರನು ದ್ಯೂತಕ್ಕೆ ಪಾಂಡವರನ್ನು ಆಹ್ವಾನಿಸಲು ನಿರ್ಧರಿಸಿ, ಸಭಾಭವನವನ್ನು ನಿರ್ಮಾಣ ಮಾಡುವಂತೆ ಶಿಲ್ಪಿಗಳಿಗೆ ಅಪ್ಪಣೆಮಾಡಿದ್ದಲ್ಲದೆ, ಅವಕ್ಕೆ ಅಗತ್ಯವಾದ ಸಾಮಗ್ರಿಗಳನ್ನು ವಾಸ್ತುನಿಪುಣರಿಗೆ ಒಪ್ಪಿಸಿದನು. ಸುಧರ್ಮೆಯ ಚೆಲುವಿನ ಸಭಾಗೃಹವು ಸಿದ್ಧವಾಯಿತು. ಧೃತರಾಷ್ಟ್ರನು ವಿದುರನನ್ನು ಕರೆಸಿ, ನೂತನ ಸಭಾಗೃಹದ ಬಗೆಗೆ ಅವನ ಅಭಿಪ್ರಾಯವನ್ನು ಕೇಳುತ್ತಾ, 'ಈ ಸಭಾಗೃಹದಲ್ಲಿ ಪಾಂಡವರು ಸುಖದ್ಯೂತದಲ್ಲಿ ರಮಿಸಲಿ' ಹೋಗಿ ಅವರನ್ನು ಕರೆದುಕೊಂಡು ಬಾ ಎಂದು ಅಪ್ಪಣೆಮಾಡುತ್ತಾನೆ. ಧೃತರಾಷ್ಟ್ರನ ಮಾತು ಕವಿಗೆ ಬೀಳುತ್ತಿದ್ದಂತೆಯೇ ವಿದುರನು (ಸ್ವಗತದಲ್ಲಿ)

ಮಾತು ಹೊಲಸಿನ ಗಂಧವಾಗಿದೆ। ಭೀತಿರಸದಲಿ ಮನಮುಳುಗಿತೀ
ಪ್ರೀತಿಮಾರಿಯ ಮುಸುಕನುಗಿವುದನಾರು ಕಲಿಸಿದರು
ಕೈತವದ ಗಣಿ ನಿನ್ನಮಗ ನೀ। ಸೋತಲಾ ಶಿವಶಿವ ಸುಖಾಂಗದ್ಯೂತವೆ ಹಾಯೆ
ನುತ ತಲೆದೂಗಿದನು ವಿದುರ

ಅದ್ಭುತವಾದ ಅಭಿವ್ಯಕ್ತಿ. ಮಾತು ಹೊಲಸಿನ ಗಂಧವಾಗಿದೆ! ಮಾರಿಯು ಪ್ರೀತಿಯ ಮುಖವಾಡವನ್ನು ಹಾಕಿದೆ. ಆದರೆ ಈಗ ಅದನ್ನು ತೆಗೆಯಲು ಹೇಳಿಕೊಟ್ಟವ್ದಾರು? ಕೌರವನೇ ಈ ಕಾರ್ಯವನ್ನು ಮಾಡಿರಬೇಕೆಂದು ವಿದುರನ ಊಹೆ. 'ನೀನೋತಲಾ' (ಧೃತರಾಷ್ಟ್ರನಿಗೆ) ಎಂದು ಚಿಂತಿಸುತ್ತಾನೆ. 'ನಿರ್ನಾಮರಾರೋ ಬಿತ್ತಿದರು. ಕುರುಭೂಮಿಯಲಿ ವಿಷ ಬೀಜವನು' ಎಂದು ಬಿಸುಸುಯ್ಯುತ್ತಾನೆ. ಧೃತರಾಷ್ಟ್ರನ ತೀರ್ಮಾನವನ್ನು ವಿದುರನು ಪ್ರಶ್ನಿಸುವಂತಿರಲಿಲ್ಲ. ಆದರೂ ಧೃತರಾಷ್ಟ್ರನಿಗೆ ದ್ಯೂತವೆಂಬುದು ಮರ್ಮವನಿರಿವ ಈಟಿ. ಇದಕ್ಕೆ ಪರಿಹಾರವುಂಟೆ? ಕೊನೆಗಿದು ಬೇಡದ ಕರ್ಮವಾಗುತ್ತದೆ. "ಕುರುವರ್ಗದಲಿ ವಿನಾಶವ ಬೀಜವದು ನಿಮಗಿದಿರೊಳೆ ಸೊಗಸಾದುದೆ? ಕೈಗೊಂಡೆವಾವ್' ಎನ್ನುತ್ತಾನೆ.

ವಿದುರನ ದ್ವಂದ್ವ ಧೃತರಾಷ್ಟ್ರನಿಗೆ ಅರ್ಥವಾಗಿದೆ. ಅವನು ವಿದುರನಿಗೆ ಇತರರು ಹೇಳಿದ್ದನ್ನು ಕೇಳಬೇಡ. ಪಾಂಡವರನ್ನು ಕರೆದುತಾ. ನಾನು ಪಾಂಡವರನ್ನು ಉಪಚರಿಸುವ ರೀತಿಯನ್ನು ನೋಡು ಎನ್ನುವನು. ವಿದುರನು ಅಲ್ಲಿಂದ ಹೊರಟು ಹಿರಯರಲ್ಲಿಗೆ ಬಂದು ದ್ಯೂತದ ಸಂಗತಿಯನ್ನು ತಿಳಿಸುತ್ತಾನೆ. ಹಿರಿಯರಾದರೋ ಅಪಮೃತ್ಯುವೇನೆಂದರಿಯದೆ, ಉತ್ಸಾಹ ಶಕ್ತಿಯಲ್ಲಿ ಮನ ಹೊರಳಿವೆ? ಕೌರವವಂಶದ ಬಳ್ಳಿ ಕತ್ತರಿಸಿ ಹೋಯಿತೆ? ಧೃತರಾಷ್ಟ್ರನೇ ನಡುವೆ ನುಗ್ಗಿ ಇರಿದನೆ? ಬೇಸರಪಡದೆ ಹೋಗಿ ಪಾಂಡವರನ್ನು ಕರೆದುಕೊಂಡು ಬಾ ಎಂದು ಬಿಡುವರು. (ಈ ಸಂಗತಿ ವ್ಯಾಸಭಾರತದಲ್ಲಿಲ್ಲ)ವಿದುರನು ತನಗೆ ಇಷ್ಟವಿಲ್ಲದಿದ್ದರೂ, ಪಾಂಡವರನ್ನು ಆಹ್ವಾನಿಸಲು ಇಂದ್ರಪ್ರಸ್ಥಕ್ಕೆ ಹೊರಟನು.

ಸ್ವತಂತ್ರ ಪ್ರತಿಭೆಯ ಕುಮಾರವ್ಯಾಸನು ಕಥೆಯನ್ನು ಸ್ವಾರಸ್ಯಪೂರ್ಣವಾಗಿ ಹೇಳಲು ತನ್ನದೇ ಆದ ತಂತ್ರವನ್ನು ಅನುಸರಿಸಿದ್ದಾನೆ. ತಾನು ಹೇಳುವ ಕಥೆ ಸಹೃದಯರನ್ನು ಮೈಮರೆಸಬೇಕು ಎಂಬುದು ಅವನ ಬಯಕೆಯಾಗಿದೆ. ಈ ಕಾರಣದಿಂದಲೇ 'ವಿಭವ'ವನ್ನು ಮರೆಮಾಡಿ ಅನುಭಾವ ವಿಜೃಂಭಿಸುವಂತೆ ಮಾಡುತ್ತಾನೆ. ಇದರಿಂದ ಸಹೃದಯರ ಕುತೂಹಲ ಅಧಿಕವಾಗುತ್ತದೆ. ಕೌರವನು ಹಸ್ತಿನಾಪುರಕ್ಕೆ ಬಂದ ಸಂದರ್ಭ ಚಿತ್ರಣದಿಂದ ಇದು ಸ್ಪಷ್ಟವಾಗುತ್ತದೆ. (ಈ ರೀತಿಯ ಚಿತ್ರಣ ವ್ಯಾಸರಲ್ಲಿ ಕಾಣದು) ಕುಮಾರ ವ್ಯಾಸನ ಈ ಸಣ್ಣ ಬದಲಾವಣೆಯಿಂದಾಗಿ ಕೌರವನ ಮಾನಹಾನಿ, ಮತ್ತದರಿಂದುಂಟಾದ ಸಂಕಟದ ಪರಮಾವಧಿಯನ್ನು ಚಿತ್ರಿಸಲು ಅವಕಾಶವಾಗಿದೆ. ಕೌರವನ ದಿನನಿತ್ಯದ ಚಟುವಟಿಕೆಗಳಲ್ಲಾದ ಬದಲಾವಣೆಯನ್ನು ಕುಮಾರವ್ಯಾಸನು ಕಾಣಿಸಿದ್ದಾನೆ.

ವ್ಯಾಸಭಾರತದ ಚಿತ್ರಣದಲ್ಲಿ ನಾಟಕೀಯ ಸಂವಾದಕ್ಕೆ ಹೆಚ್ಚಿನ ಅವಕಾಶವಿಲ್ಲ. ವ್ಯಾಸರೇ ನೇರವಾಗಿ ಕಥೆಯನ್ನು ಹೇಳಿಬಿಡುತ್ತಾರೆ. ಕುಮಾರವ್ಯಾಸನ ಚಿತ್ರಣದಲ್ಲಿ ಕಾಣುವ ನಾಟಕೀಯ ಸಂವಾದವೇ ಅವನ ಮಹಾಕಾವ್ಯದ ಬಂಡವಾಳವೆಂದು ಹೇಳಬೇಕು. ಕವಿಯು ಆಯಾ ಪಾತ್ರಗಳಲ್ಲಿ ಪರಕಾಯೋಪವೇಶ ಮಾಡಿರುವವನಂತೆ ಸಹೃದಯನಾಗಿ, ವಿಮರ್ಶಕನಾಗಿ ಕಾರ್ಯನಿರ್ವಹಿಸಿರುವುದನ್ನು ಕಾಣಬಹುದು. ಈ ಕಾರಣದಿಂದಾಗಿ ಪಾತ್ರಗಳಾಡುವ ಮಾತು ಮತ್ತದರ ನಡವಳಿಕೆಗಳು ಸಹೃದಯನಿಗೆ ಅತಿಸಹಜವೆಂಬಂತೆ ತೋರುತ್ತದೆ. ಆಯಾ ಪಾತ್ರಗಳ ಸಂವಾದದಲ್ಲಿ ಸಹೃದಯನು ಮೈಮರೆತು ತನ್ನನ್ನೇ ಕಾಣಲು ಸಾಧ್ಯವಾಗುತ್ತದೆ. ಇದಕ್ಕೆ ನಿದರ್ಶನವಾಗಿ ಕೌರವನು ಮಯನಿರ್ಮಿತ ಸಭೆಯಲ್ಲಿ ಅನುಭವಿಸಿದ ಭಂಗದ ಘಟನೆಗಳ ನಿರೂಪಣೆಯನ್ನು ಹೆಸರಿಸಬಹುದು. ಇದು ಅತ್ಯಂತ ಸಹಜವಾಗಿ ಮೂಡಿ ಬಂದಿದ್ದು, ತಕ್ಕಾಲದಲ್ಲಿ ಕೌರವನು ಸಹೃದಯರ

ಸಹಾನುಭೂತಿಯನ್ನು ಗಳಿಸುತ್ತಾನೆ. ಇಂಥ ನಿದರ್ಶನಗಳು ಕುಮಾರವ್ಯಾಸ ಭಾರತದಲ್ಲಿ ಯಥೇಚ್ಛವಾಗಿವೆ.

ಮಹಾಭಾರತದ ದ್ಯೂತ ಪೂರ್ವದಲ್ಲಿ ಗಾಂಧಾರಿಯ ಪ್ರವೇಶ ಕಾಣುವುದಿಲ್ಲ. ಕುಮಾರವ್ಯಾಸ ಭಾರತದಲ್ಲಿ ದ್ಯೂತದ ಸಂವಾದದ ಸಂದರ್ಭದಲ್ಲೇ ಗಾಂಧಾರಿಯ ಪ್ರವೇಶವಾಗಿದೆ. ಇಲ್ಲಿ ಕೌರವನು ತನ್ನ ಅದ್ಭುತ ನಟನೆಯಿಂದ ಗಾಂಧಾರಿಯನ್ನು ತನ್ನೆಡೆಗೆ ಸೆಳೆದುಕೊಳ್ಳುವುದರಲ್ಲಿ ಸಫಲನಾಗಿದ್ದಾನೆ. ಧೃತರಾಷ್ಟ್ರನು ಉಭಯ ಸಂಕಟದಲ್ಲಿ ಸಿಲುಕಿದಾಗ ಗಾಂಧಾರಿಯ ಸಲಹೆಯನ್ನು ಕೇಳುತ್ತಾನೆ. ಕುಮಾರವ್ಯಾಸನ ಈ ಕಲ್ಪನೆಯಿಂದ ಮೂಲಕ್ಕೆ ಯಾವ ಕೊರತೆಯ ಲೇಪವೂ ಆಗುವುದಿಲ್ಲ. ಇದರ ಬದಲಿಗೆ ಮಗನ ನಡವಳಿಕೆ ತಂದೆ ತಾಯಿಗಳ ಮೇಲೆ ಎಂಥ ಘೋರ ಪರಿಣಾಮವನ್ನು ಬೀರಬಹುದೆಂಬುದನ್ನು ಧ್ವನಿಸಲು ಸಹಾಯಕವಾಗಿದೆ.

ವ್ಯಾಸ ಭಾರತದಲ್ಲಿ ವಿದುರನು ಪಾಂಡವರನ್ನು ಹಸ್ತಿನಾವತಿಗೆ ಆಹ್ವಾನಿಸುವುದಕ್ಕೆ ಹೊರಡುವ ಮೊದಲು ಅವನು ಭೀಷ್ಮರನ್ನು ಕಾಣಲು ಹೋದನೆಂದೇ ಹೇಳುತ್ತದೆ. ಅದರ ವಿವರಗಳು ಅಲ್ಲಿ ಕಾಣುವುದೇ ಇಲ್ಲ. ಕುಮಾರ ವ್ಯಾಸನಲ್ಲಿ ವಿದುರನು ಭೀಷ್ಮರನು ಸಂಧಿಸಿ ವಿಷಯವನ್ನು ತಿಳಿಸಿದನೆಂದಿದೆ. ವಿದುರನ ಮಾತುಗಳನ್ನು ಕೇಳಿಯೂ ನಿರಾಶಾವಾದಿಗಳಾದ ಹಿರಿಯರು ಪಾಂಡವರನ್ನು ಆಹ್ವಾನಿಸುವಂತೆ ಅವನಿಗೆ ಹೇಳುತ್ತಾರೆ. ಇದರಿಂದ ಅವರ ಮಾತಿಗೆ ಧೃತರಾಷ್ಟ್ರನು ಬೆಲೆ ಕೊಟ್ಟಿರಲಿಲ್ಲವೆಂಬುದೇ ಸೂಚಿತವಾಗುತ್ತದೆ.

ವ್ಯಾಸ ಭಾರತದಲ್ಲಿ ಧೃತರಾಷ್ಟ್ರನು ಸುಖದ್ಯೂತವಾಡಲು ಪಾಂಡವರನ್ನು ಆಹ್ವಾನಿಸುವಂತೆ ಅಪ್ಪಣೆಮಾಡಿ ಕಳುಹಿಸಿದ ಮೇಲೆ, ವಿದುರನಾಡಿದ ಮಾತುಗಳು ನಡದೇ ತೀರುತ್ತವೆಯೆಂಬ ಕಳವಳದಿಂದ ಕೌರವನನ್ನು ಮತ್ತೆ ಕರೆಸಿ, ವಿವೇಕ ಹೇಳಿ ಸರಿದಾರಿಗೆ ತರಲು ಪ್ರಯತ್ನಿಸುತ್ತಾನೆ. ಕೌರವನಾದರೋ ಪಾಂಡವರ ಸಮಸ್ತ ವೈಭವಗಳನ್ನು ಧೃತರಾಷ್ಟ್ರನಿಗೆ ಮನದಟ್ಟಾಗುವಂತೆ ವಿಸ್ತರಿಸಿ ಹೇಳಿದ್ದಾನೆ. ಕುಮಾರವ್ಯಾಸನು ಈ ಸಂಗತಿಯನ್ನು ಬಿಟ್ಟೇ ಬಿಟ್ಟಿದ್ದಾನೆ.

೩. ಧೃತರಾಷ್ಟ್ರನು ಧರ್ಮರಾಯನನ್ನು ದ್ಯೂತಕ್ಕೆ ಆಹ್ವಾನಿಸಿದ್ದು ಮತ್ತು ಧರ್ಮರಾಯನು ಹಸ್ತಿನಾಪುರವನ್ನು ಪ್ರವೇಶಿಸಿದ್ದು :-

ವಿದುರನು ಇಷ್ಟವಿಲ್ಲದಿದ್ದರೂ ರಥದಲ್ಲಿ ಇಂದ್ರಪ್ರಸ್ಥಕ್ಕೆ ಧರ್ಮರಾಯನನ್ನು ಆಹ್ವಾನಿಸಲು ಬಂದನು. ಪಾಂಡವರು ಅವನನ್ನು ಸ್ವಾಗತಿಸಿ ಸತ್ಕರಿಸಿದರು. ಧರ್ಮರಾಯನು ಹಸ್ತಿನಾವತಿಯ ಬಂಧುಗಳ ಕುಶಲೋಪರಿಯನ್ನು ವಿಚಾರಿಸುವಾಗ ವಿದುರನ ಮುಖವು ಮೌನವಾಗಿರುವುದನ್ನು ಕಂಡನು. ಎಲ್ಲರೂ ಕ್ಷೇಮವೇ ಎಂದು

ಪ್ರಶ್ನಿಸಿದಾಗ, ವಿದುರನು ಎಲ್ಲರೂ ಕ್ಷೇಮವೆಂದು ತಿಳಿಸಿದನು. 'ಧೃತರಾಷ್ಟ್ರನು ಯಾವಾಗಲೂ ತನ್ನ ಅಭಿವೃದ್ಧಿಯಲ್ಲಿಯೇ ಹೆಚ್ಚಿನ ಆಸಕ್ತಿಯನ್ನು ಹೊಂದಿರುತ್ತಾನೆ' ಎನ್ನುವನು. ಕೌರವನನ್ನು ಕುರಿತು ಹೇಳುತ್ತಾ ಅವನು ನಿನ್ನ ಕುಶಲವನ್ನು ಕೇಳಿದ್ದಾನೆ. ನಿನ್ನ ಸಂಪತ್ತಿನ ಅಭಿವೃದ್ಧಿಯ ವಿಚಾರವಾಗಿ ಮೊದಲು ಪ್ರಸ್ತಾಪಿಸುವಂತೆ ತಿಳಿಸಿದ್ದಾನೆ' ಎನ್ನುವನು. ಇಲ್ಲಿ ವಿದುರನ ಮಾತುಗಳು ಧ್ವನಿಪೂರ್ಣವಾಗಿವೆ.

ವಿದುರನು ಧೃತರಾಷ್ಟ್ರನ ಆಹ್ವಾನವನ್ನು ತಿಳಿಸಿ, ಧರ್ಮರಾಯನು ತನ್ನನುಜರೊಂದಿಗೆ ಬಂದು ಹಸ್ತಿನಾವತಿಯಲ್ಲಿ ಸುಖದ್ಯೂತವಾಡಬೇಕು ಎಂದು ತಿಳಿಸುವನಲ್ಲದೆ, ಅಲ್ಲಿಗೆ ಆಹ್ವಾನಿತರಾಗಿ ಬಹುಮಂದಿರಾಜರು ಬರುತ್ತಿರುವ ಸಂಗತಿಯನ್ನೂ ತಿಳಿಸುತ್ತಾನೆ. ದ್ಯೂತದ ಪ್ರಸ್ತಾಪ ಮಾಡಿದೊಡನೆಯೇ ಯುಧಿಷ್ಠಿರನು "ಪಗಡೆಯಾಟವು ಕಲಹದಲ್ಲೇ ಪರ್ಯವಸಾನವಾಗುಬಹುದು. ಇದನ್ನು ತಿಳಿದ ಯಾರು ತಾನೆ ಆಡಲು ಒಪ್ಪುವರು?' ಎನ್ನುತ್ತಾನೆ. ಈ ಬಗ್ಗೆ ವಿದುರನ ಅಭಿಪ್ರಾಯವನ್ನು ಕೇಳಲು, ಅವನು "ದ್ಯೂತದ ಪರಿಣಾಮವನ್ನು ನಾನು ಹೇಳಿದ ಮೇಲೂ ನಿಮ್ಮನ್ನುಆಹ್ವಾನಿಸಲು ಕಳಿಸಿದ್ದಾನೆ" ಎನ್ನುತ್ತಾನೆ. ಕೊನೆಗೆ 'ಇವೆಲ್ಲವನ್ನೂ ಪರಿಶೀಲಿಸಿ ಯಾವುದು ಶ್ರೇಯಸ್ಕರವೋ ಅದನ್ನು ಮಾಡು" "ನೀನು ಬಹುಶ್ರುತನಾದುದರಿಂದ ಹೆಚ್ಚು ಹೇಳಬೇಕಾದ ಅಗತ್ಯವಿಲ್ಲ" ಎನ್ನುತ್ತಾನೆ. ವಿಚಾರ ಮಾಡಿದರೆ ವಿದುರನ ಮಾತುಗಳು ಧರ್ಮರಾಯನಿಗೆ ದ್ಯೂತವಾಡಬೇಡವೆಂಬ ಸೂಚನೆಯನ್ನೇ ಕೊಡುತ್ತಿವೆ.

ಧರ್ಮರಾಯನು ವಿದುರನಿಂದ ಹಸ್ತಿನಾಪುರಕ್ಕೆ ಆಗಮಿಸುವ ಜೂಜುಗಾರರ ವಿವರವನ್ನು ನಡೆದ ನಂತರ ಅವನನ್ನು ಕುರಿತು. 'ವಿದುರ ಹಾಗಾದರೆ ಮಹಾಭಯಂಕರರಾದ, ಮೋಸಗಾರರಾದ ಜೂಜುಗಾರರೇ ಅಲ್ಲಿದ್ದಾರೆಂದು ಸ್ಪಷ್ಟವಾಯಿತು' ಎನ್ನುತ್ತಾನೆ. ದ್ಯೂತಕ್ಕೆ ಹೋದರೆ ಕೇಡು ಸಂಭವಿಸಬಹುದೆಂಬ ಅರಿವು ಧರ್ಮರಾಯನಿಗಿತ್ತು. ಆದರೂ ಧೃತರಾಷ್ಟ್ರನ ಆಹ್ವಾನವನ್ನು ಮನ್ನಿಸಬೇಕೆಂದು ನಿರ್ಧಾರ ಮಾಡಿದನು. 'ಬ್ರಹ್ಮ ಸ್ಪಷ್ಟವಾದ ಈ ಪ್ರಪಂಚವೆಲ್ಲವೂ ವಿಧಿ ನಿಯಮದಂತೆಯೇ ಸಾಗುತ್ತಿದೆ. ನಾವೆಲ್ಲರೂ ವಿಧಿಗೆ ಅಧೀನರು. ಈ ವಿಷಯದಲ್ಲಿ ಯಾರೂ ಸ್ವತಂತ್ರರಲ್ಲ' ಎನ್ನುತ್ತಾನೆ.

ಧರ್ಮರಾಯನಿಗೆ ಧೃತರಾಷ್ಟ್ರನು ತನ್ನ ಮಕ್ಕಳ ಹಿತಾಕಾಂಕ್ಷೆಯಿಂದಲೇ ದ್ಯೂತಕ್ಕೆ ಆಹ್ವಾನಿಸಿದ್ದಾನೆಂಬ ಅರಿವಿದೆ. ಆದರೆ ಹೋಗಬೇಕೋ ಹೋಗಬಾರದೋ ಎಂಬುದನ್ನು ನಿರ್ಧರಿಸಲು ಶಕ್ತನಾಗದೆ ವಿದುರನಿಗೆ 'ನೀನೇ ನನ್ನ ಸ್ವಾಮಿ. ನೀನು ಹೇಳಿದಂತೆಯೇ ಮಾಡುವೆನು' ಎನ್ನುತ್ತಾನೆ. ಅನಂತರದಲ್ಲಿ 'ನನಗೆ ದ್ಯೂತದಲ್ಲಿ ಆಸಕ್ತಿಯಿಲ್ಲ. ಸಭಾ ಮಂದಿರದಲ್ಲಿ ಶಕುನಿ ನನ್ನನ್ನು ಆಡಲು ಆಹ್ವಾನಿಸಿದರೆ ಸಾಧ್ಯವಿಲ್ಲವೆನ್ನಲಾರೆ' ಎಂದು

ಹೇಳುತ್ತಾನೆ. ಅನಂತರದಲ್ಲಿ ಸೇವಕರನ್ನು ಕರೆದು ಪ್ರಯಾಣಕ್ಕೆ ಸಿದ್ಧತೆಗಳನ್ನು ಮಾಡುವಂತೆ ಅಪ್ಪಣೆ ಮಾಡುತ್ತಾನೆ. ನಿರ್ಧರಿಸಿದ ದಿನದಂದು ದ್ರೌಪದಿಯೇ ಮೊದಲಾದವರೊಂದಿಗೆ ಹಸ್ತಿನಾವತಿಗೆ ಪ್ರಯಾಣಿಸಲು ಸಿದ್ಧನಾದನು. ಆ ಸಂದರ್ಭದಲ್ಲಿ ಧರ್ಮರಾಯನು ನಿಟ್ಟುಸಿರುಬಿಡುತ್ತಾ' "ಅದ್ಭುತವಾದ ಪ್ರಕಾಶವುಳ್ಳ ವಸ್ತುವೊಂದು ನಮ್ಮೆದುರಾದರೆ ಕಣ್ಣುಗಳನ್ನು ಮಂಜುಗೊಳಿಸುವಂತೆ, ಅಪಾರಶಕ್ತಿಯಿರುವ ದೈವವು ಅಥವಾ ವಿಧಿಯು ನಮ್ಮ ಪ್ರಜ್ಞೆಯನ್ನು ಅಪಹರಿಸಿಬಿಡುತ್ತದೆ. ಮಾನವನು ಹಗ್ಗದಿಂದ ಕಟ್ಟಿ ಸೆಳೆಯಲ್ಪಟ್ಟವನಂತೆ ವಿಧಿಗೆ ವಶನಾಗುವನು" ಎನ್ನುತ್ತಾನೆ. ಬಹು ಅರ್ಥಗರ್ಭಿತವಾದ ಮಾತುಗಳಿವು. ಪುರುಷ ಪ್ರಯತ್ನವನ್ನು ಅಥವಾ ಪೌರುಷವನ್ನು ವಿಧಿಯೊಂದೇ ತಡೆಯಬಲ್ಲದು ಎಂಬುದು ಇಲ್ಲಿಯ ಧ್ವನಿಯಾಗಿದೆ. ಇದೇ ಮಾತು ಕೌರವನಿಗೂ ಅನ್ವಯಿಸುವಷ್ಟು ಶಕ್ತಿಯುತವಾಗಿದೆ. ವ್ಯಾಸರ ಪ್ರತಿಭಾ ಚಕ್ಷು ವಿಶೇಷವಿದು. ವ್ಯಾಸರು "ರಾಜ್ಯಶ್ರೀಯಿಂದ ದೇದೀಪ್ಯ ಮಾನನಾಗಿ, ಬ್ರಾಹ್ಮಣ ಪುರಸ್ಸರನಾಗಿ ಧೃತರಾಷ್ಟ್ರನಿಂದ ಆಹ್ವಾನಿಸಲ್ಪಟ್ಟ ಯುಧಿಷ್ಠಿರನು ಹಸ್ತಿನಾವತಿಗೆ ಹೊರಟನು. ಇದು ವಿಧಿ ಪ್ರಚೋದನೆಯೇ ಹೊರತು ಬೇರೇನೂ ಅಲ್ಲ' ಎಂದಿದ್ದಾರೆ.

ಹಸ್ತಿನಾವತಿಯನ್ನು ಸೇರಿದ ಧರ್ಮರಾಯನು, ದ್ರೌಪದಿ ಮತ್ತು ಅನುಜರೊಂದಿಗೆ ಬಂಧು ಬಾಂಧವರನ್ನು ಕಂಡು ಸತ್ಕರಿಸಿದನು. ಧೃತರಾಷ್ಟ್ರನು ಪಾಂಡವರನಾಲಿಂಗಿಸಿಕೊಂಡು ಹರ್ಷದೋರಿದನು. ಪಾಂಡವರು ಗಾಂಧಾರಿಯನ್ನು ಕಂಡು ಆಶೀರ್ವಾದವನ್ನು ಪಡೆದರು. ದ್ರೌಪದಿ ಸಹ ರಾಜ ಮಹಿಳೆಯರನ್ನು ಆದರಿಸಿ ಸತ್ಕರಿಸಿದಳು. ಗುರುಹಿರಿಯದ ದರ್ಶನವಾದ ಮೇಲೆ, ಧೃತರಾಷ್ಟ್ರನ ಅಪ್ಪಣೆಯನ್ನು ಪಡೆದು, ತಮಗಾಗಿ ಸಿದ್ಧವಾಗಿದ್ದ ಭವನಕ್ಕೆ ಅನುಜರೊಂದಿಗೆ ತೆರಳಿದನು. ತಮ್ಮ ದೈನಂದಿನ ಕರ್ತವ್ಯಗಳನ್ನು ಮುಗಿಸಿದ ಪಾಂಡವರು ಹಿತಮಿತ ಭೋಜನ ಮಾಡಿ ನಿದ್ರಿಸಿದರು.

ವ್ಯಾಸಭಾರತದಲ್ಲಿ ವಿದುರನು ಯುಧಿಷ್ಠಿರನನ್ನು ದ್ಯೂತಕ್ಕೆ ಆಹ್ವಾನಿಸುವ ಸಂದರ್ಭದ ಚಿತ್ರಣವು ಸಂಕ್ಷಿಪ್ತವಾಗಿದೆ. ದ್ಯೂತವನ್ನು ವಿರೋಧಿಸುವ ವಿದುರನ ತೊಳಲಾಟ ಸೂಚ್ಯವಾಗಿ ಪ್ರಕಟವಾಗಿದೆ. ಪಾಂಡವರು ದ್ಯೂತವಾಡುವುದು ಬೇಡವೆಂಬುದು ಅವನ ಆಶಯವಾಗಿದ್ದರೂ, ಧರ್ಮರಾಯನು ದ್ಯೂತಕ್ಕೆ ಹಸ್ತಿನಾವತಿಗೆ ಹೊರಡುತ್ತಾನೆ. ಇದು ಮಾನವ ಜೀವನದಲ್ಲಿ ವಿಧಿಯ ಪ್ರಾಬಲ್ಯವನ್ನು ಧ್ವನಿಸುತ್ತದೆ. ವಿದುರನು ಪುರುಷ ಪ್ರಯತ್ನದ ಸಂಕೇತವಾದರೆ, ಧರ್ಮರಾಯನು ವಿಧಿಯ ಪ್ರಾಬಲ್ಯದ ಸಂಕೇತವಾಗಿದ್ದಾನೆ.

(----------ಮುಂದುವರಿಯುತ್ತದೆ)

ಲೇಖಕರ ವಿಳಾಸಗಳು

1. **ಡಾ. ಸುಜಾತ ಲಕ್ಷ್ಮೀಪುರ,** ನಂ. 558, (ಹೊಸ ನಂಬರ್–23) 4ನೇ ಮೇನ್, ಝಾನ್ಸಿ ರಾಣಿ ಲಕ್ಷ್ಮಿ ಬಾಯಿ ರಸ್ತೆ, ಭವಾನಿ ನಗರ, ಭವಾನಿ ದೇವಸ್ಥಾನದ ಹತ್ತಿರ, ಬೆಂಗಳೂರು ದಕ್ಷಿಣ, ಬೆಂಗಳೂರು–560019. ಮೊ. 9844869180
2. **ಡಾ ॥ಕೆ. ಆರ್. ಗಣೇಶ,** ನಂ, 20/1 4ನೇ ಅಡ್ಡರಸ್ತೆ. ಮಾಗಡಿರಸ್ತೆ. ಬೆಂಗಳೂರು–560023. ಮೊ: 9845824453
3. **ಡಾ. ಡಿ.ಕೆ. ಚಿತ್ತಯ್ಯಪೂಜಾರ್,** ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು–560056 ಮೊ–9845637247
4. **ಪುರುಷೋತ್ತಮ ಬಿಳಿಮಲೆ,** 6098/8, ಸೆಕ್ಟರ್ ಡಿ, ಪಾಕೆಟ್ 6, ಸಂತುಷ್ಟಿ ಅಪಾರ್ಟ್‌ಮೆಂಟ್‌ಗಳು, ವಸಂತ್ ಕುಂಜ್, ನ್ಯೂ ದೆಹಲಿ–110070. ಮೊ–9811733378.
5. **ಎಸ್. ಕಾರ್ತಿಕ್,** # 413, ಕರ್ನಾಟಕ 'ಡಿ' ಗ್ರೂಪ್ ಎಂಪ್ಲಾಯಿಸ್ ಲೇಔಟ್, 1 ನೆಯ ಬ್ಲಾಕ್, 6 ನೆಯ ಮುಖ್ಯರಸ್ತೆ, ಲಿಂಗಧೀರನಹಳ್ಳಿ (ಹೇರೋಹಳ್ಳಿ) ಅಂದ್ರಹಳ್ಳಿ ಮುಖ್ಯರಸ್ತೆ, ಬೆಂಗಳೂರು–560091 ಮೊ– 9448324122
6. **ಪ್ರೊ. ಎಸ್. ಬಸವರಾಜು,** ಫ್ಲಾಟ್ ನಂ. 301, 'ಬಿ' ಬ್ಲಾಕ್, ಅಭಿ ಸಾಯಿ ಸಂತೃ ಸರ್.ಎಂ. ವಿಶೇಶ್ವರಯ್ಯ ಲೇಔಟ್, 8ನೇ ಬ್ಲಾಕ್, ಬೆಂಗಳೂರು–5600 ಮೊ– 9980405469
7. **ಪ್ರೊ. ಬಿಳಿಗಿರಿವಾಸನ್,** # 78, 'ಶ್ರೀ ಶ್ವೇತಾದ್ರಿ' ನ್ಯಾನಪ್ಪನ ಹಳ್ಳಿ, ಬೇಗೂರು ಹೋಬಳಿ ಬೆಂಗಳೂರು–560068. ಮೊ– 9036612484
8. **ಡಾ. ಜೆ. ಸದಾನಂದಶಾಸ್ತ್ರಿ,** 6–4–129/1, ಮಾರುತಿ ನಗರ, ಅನಂತಪುರ–515004 ಆಂಧ್ರಪ್ರದೇಶ. ಮೊ– 9844662429
9. **ಡಾ. ಶಿವರಾಜ ಬಿ.ಇ,** ಸಹಪ್ರಾಧ್ಯಾಪಕರು, ಕನ್ನಡ ವಿಭಾಗ, ದಿ ಆಕ್ಸ್‌ಫರ್ಡ್ ಕಾಲೇಜ್ ಆಫ್ ಬ್ಯುಸಿನೆಸ್ ಮ್ಯಾನೇಜ್ ಮೆಂಟ್, 4ನೇವಲಯ, ಎಚ್.ಎಸ್. ಆರ್. ಬಡಾವಣೆ, ಬೆಂಗಳೂರು–560102. ಮೊ – 9663650287
10. **ಡಾ. ಪ್ರಸನ್ನ ನಂಜಾಪುರ,** ಕನ್ನಡ ಉಪನ್ಯಾಸಕರು, ರಾಮನಗರ ಸ್ನಾತಕೋತ್ತರ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ. ಮೊ – 8050986844
11. **ಡಾ. ಕೆ.ವಿ. ಶ್ರೀನಿವಾಸ ಮೂರ್ತಿ,** ಬಿ.310, ಸಾಯಿಶ್ರೀ, ಬಿ ಬ್ಲಾಕ್, ವಿಸ್ತ ಬ್ರೊಕೇಡ್, 2ನೇ ಅಂತಸ್ತು, ಗಟ್ಟಿಗೆರೆ, ಆರ್.ಆರ್. ನಗರ, ಬೆಂಗಳೂರು–560098. ಮೊ– 9880714593

□□

ಬಿ.ಎಂ.ಶ್ರೀ. ಪ್ರತಿಷ್ಠಾನ

'ಕನ್ನಡದ ಕಣ್ವ' ಆಚಾರ್ಯ ಬಿ.ಎಂ.ಶ್ರೀಕಂಠಯ್ಯನವರು ಹೊಸಗನ್ನಡದ ಯುಗಪುರುಷರು. ಇಂತ ಆಚಾರ್ಯಪುರುಷರ ಹೆಸರಿನ ಈ ಸಂಸ್ಥೆ ಸೃಜನ ಮತ್ತು ಸಂಶೋಧನ ಎರಡೂ ಸಾಹಿತ್ಯ ಕ್ಷೇತ್ರಗಳ ದುಡಿಯುತ್ತಿದೆ. ಒಂದು, ಪ್ರಾಚೀನ ಸಾಹಿತ್ಯದ ಪರಿಷ್ಕರಣ; ಇನ್ನೊಂದು, ಆಧುನಿಕ ಸಾಹಿತ್ಯ ಪುರಸ್ಕರಣ. ಈ ಸಂಸ್ಥೆಯನ್ನು ೧೯೭೯ರಲ್ಲಿ ಪ್ರೊ. ಎಂ.ವಿ. ಸೀತಾರಾಮಯ್ಯನವರು ಸ್ಥಾಪಿಸಿದ್ದು, ಇ ಯಶಸ್ವೀ ನಲವತ್ತೆರಡು ವರ್ಷಗಳನ್ನು ಪೂರೈಸಿದೆ. ೨೦೦೪ರಲ್ಲಿ ರಜತೋತ್ಸವವನ್ನು ಆಚರಿಸಿದೆ.

ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿರುವ ಈ ಸಂಸ್ಥೆಯು ಕರ್ನಾಟಕದಲ್ಲಿ ಸಂಶೋಧನೆ ಮತ್ತು ಪಾಂಡಿ ಸಂವರ್ಧನೆಗಳಿಗೆ ಮೀಸಲಾದ ಪ್ರತಿಷ್ಠಿತ ಸಂಶೋಧನಾ ಕೇಂದ್ರವಾಗಿದೆ. ಈವರೆಗೆ ೨೦೦ಕ್ಕೂ ಹೆ ಗ್ರಂಥಗಳನ್ನು ಹೊರತಂದಿದೆ. ಸಂಶೋಧನ ಕಾರ್ಯಕ್ಕೆ ಅನುಕೂಲವಾಗುವಂತೆ ಹದಿನೈದು ಸಾವಿರಕ್ ಅಧಿಕ ಅಮೂಲ್ಯ ಗ್ರಂಥಗಳ ಆಕರ ಗ್ರಂಥಾಲಯವನ್ನೂ ಸುಮಾರು ಒಂದು ಸಾವಿರಕ್ಕೂ ಅಧಿ ಪ್ರಾಚೀನ ಓಲೆಗರಿ ಗ್ರಂಥಗಳ ಹಸ್ತಪ್ರತಿ ಭಂಡಾರವನ್ನೂ ಹೊಂದಿರುವ ಪ್ರತಿಷ್ಠಾನವು ಸದಸ್ಯರ ಉದಾರ ದಾನಿಗಳು ಮತ್ತು ಅಭಿಮಾನಿಗಳಿಂದ ಬೆಳೆಯುತ್ತಿದೆ.

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದಿರುವ ಸ್ನಾತಕೋತ್ತರ ಸಂಶೋಧ ಕೇಂದ್ರವಾಗಿರುವ ಪ್ರತಿಷ್ಠಾನದಲ್ಲಿ ಗಣ್ಯ ವಿದ್ವಾಂಸರ ಮಾರ್ಗದರ್ಶನದಲ್ಲಿ ಅನೇಕರು ಪಿಎಚ್.ಡಿ. ಪದ ಮತ್ತು ಎಂ.ಫಿಲ್. ಪದವಿ ಪಡೆದಿರುತ್ತಾರೆ. ನುರಿತ ಮಾರ್ಗದರ್ಶಕರ ಸಹಕಾರದಿಂದ ಈ ಅಧ್ಯಯ ಕೇಂದ್ರವನ್ನು ನಡೆಸಲಾಗುತ್ತಿದೆ.

ರಾಷ್ಟ್ರೀಯ ಹಸ್ತಪ್ರತಿ ಮಿಷನ್‌ನ ಮಾನ್ಯತೆಯ ಕೇಂದ್ರ

ರಾಷ್ಟ್ರೀಯ ಹಸ್ತಪ್ರತಿ ಮಿಷನ್‌ನಿಂದ ಮಾನ್ಯತೆ ಪಡೆದಿರುವ ಪ್ರತಿಷ್ಠಾನವು ರಾಷ್ಟ್ರದ ಪ್ರತಿಷ್ಠಿತ ಹಸ್ತಪ್ರ ಅಧ್ಯಯನ ಕೇಂದ್ರವಾಗಿದ್ದು ಅಮೂಲ್ಯ ಓಲೆಗರಿ ಗ್ರಂಥಗಳು, ಕಾಗದಪತ್ರಗಳು, ನಮ್ಮ ತಲೆಮಾರಿ ಸಾಹಿತಿ-ಗಣ್ಯರ ಪತ್ರಗಳು ಮತ್ತು ಹಸ್ತಪ್ರತಿಗಳನ್ನು ಸಂರಕ್ಷಿಸುತ್ತ ನಾಡಿನ ಆಸ್ತಿಯನ್ನು ಉಳಿಸಲ ಶ್ರಮಿಸುತ್ತಿರುವ ಸೇವಾಸಂಸ್ಥೆಯಾಗಿದೆ.

ಬಿ.ಎಂ.ಶ್ರೀ. ಕಲಾಭವನ

ಮೂರು ಮಹಡಿಗಳ ಭವ್ಯ ಬಿ.ಎಂ.ಶ್ರೀ. ಕಲಾಭವನವನ್ನು ಸಂಸದರ ನಿಧಿ ಮತ್ತು ದಾನಿಗಳ ನೆರವಿನಿಂ ನಿರ್ಮಿಸಲಾಗಿದೆ. ಭವನವು ಎಂ.ವಿ.ಸೀ. ಸಭಾಂಗಣ, ಗ್ರಂಥಾಲಯ, ಹಸ್ತಪ್ರತಿ ಸಂಗ್ರಹಾಲಯ ಉಪನ್ಯಾಸ ಕೊಠಡಿಗಳನ್ನು ಒಳಗೊಂಡಿದೆ.

ಚಟುವಟಿಕೆಗಳು

'ಕರ್ನಾಟಕ ಲೋಚನ' ವಿದ್ವತ್ ಪತ್ರಿಕೆ ಹಾಗೂ 'ಹೊಂಗನಸು' ವಾರ್ತಾಪತ್ರದ ಪ್ರಕಟಣೆ, ಸಹೃದಯ ಗೋಷ್ಠಿಯ ಆಯೋಜನೆ, ಹಸ್ತಪ್ರತಿ ಶಾಸ್ತ್ರ ಮತ್ತು ಹಸ್ತಪ್ರತಿ ಅಧ್ಯಯನ ತರಗತಿಗಳು, ಹಸ್ತಪ್ರ ಸಮಾವೇಶ, 'ಸಿರಿಕಂಟ' ವಿದ್ಯಾರ್ಥಿಗೋಷ್ಠಿ, ಅಕ್ಕರಗೊಟ್ಟಿ, ಹಳಗನ್ನಡ ಕಾವ್ಯಾಭ್ಯಾಸ ಶಿಬಿ ಮೊದಲಾದುವು ಪ್ರತಿಷ್ಠಾನದ ಮುಖ್ಯ ಚಟುವಟಿಕೆಗಳಾಗಿವೆ.

ಬಿ.ಎಂ.ಶ್ರೀ. ಪ್ರತಿಷ್ಠಾನ
ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ. ಕಲಾಭವನ (ರಿ)
ನರಸಿಂಹರಾಜ ಕಾಲೋನಿ, ಬೆಂಗಳೂರು-೫೬೦೦೧೯